ಬುದ್ಧೋಜಿ

ರಾ. ಶ್ರೀ.



ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009

Scanned by CamScanner

© ಸರ್ವಸ್ವಾಮ್ಯ ಲೇಖಕರದು

*

ಮೊದಲನೆಯ ಮುದ್ರಣ: ಏಪ್ರಿಲ್ 1979

*

ಬೆಲೆ ರೂ. 5.00

K8246
RAS

387731

*

ಪ್ರಕಾಶಕರು : ಪಿ. ಎನ್. ಕಾಮತ್, ಐಬಿಎಚ್ ಪ್ರಕಾಶನ, ಐದನೆಯ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು 560 009. ಮುದ್ರಕರು : ಎಚ್. ಎಸ್. ಎನ್. ರಾವ್, ಐಬಿಎಚ್ ಪ್ರಕಾಶನ ಪ್ರಿಂಟರಿ, ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು 560 054

ಅನುಭಾವೀ ತಸ್ಕರ
ಪೂಜಾರಪ್ಪನವರ ಶಿಷ್ಯ
ಜಗ್ಗೋಜಿಯ
ಶಿಸ್ತು, ಸಂಯಮ ಸಿದ್ಧಿಗಳನ್ನು
ಮೆಚ್ಚಿಕೊಂಡ
ಚಿ | ರಾ | ರಾಮುವಿಗೆ –

UOMLAP

Scanned by CamScanner

ಪವಿತ್ರ
ರುದ್ರಾಧ್ಯಾಯದಲ್ಲಿ
"ತಸ್ಕರಾಣಾಂ ಪತಯೇ ನಮೋ ನಮೋ"
ಎಂದು ಪ್ರಾರ್ಥನೆಯನ್ನು ಮಾಡಲಾಗಿದೆ.
ಆಗ
ಜಗ್ಗೋಜಿ
ಈಗ
ಬುದ್ಧೋಜಿ
ಪೂಜಾರಪ್ಪನ ಶಿಷ್ಯರಾಗಿ ಈ
ಪ್ರಾರ್ಥನೆಯನ್ನು ಜಪಿಸುತ್ತಾರೆ.

ಕಾಫಿ ಕುಡಿದು ಬರ್ತ್ತೀನಿ

ದೇವರು ಯಾವಾಗ ಏನನ್ನು ಯಾತಕ್ಕೆ ಮಾಡುತ್ತಾನೆಂಬುದು ಯಾರಿಗೆ ಗೊತ್ತು ? ಅದನ್ನು ಕೆದಕಲು ಮನುಷ್ಯರಾದ ನಮಗೆ ಯೋಗ್ಯತೆ ಇಲ್ಲ

ಪೇಪರ್ ಓದುತ್ತಾ ಇದ್ದ ರಾಮೋಜಿ, ರಾಜೀವಪುರದ ಯಾವುದೋ ಸುದ್ದಿಯನ್ನು ಓದಿ ಸೆಟೆದು ಕೂತುಕೊಂಡ. ತತ್‌ಕ್ಷಣ ಎದ್ದ. ಬಟ್ಟೆ ಹಾಕಿಕೊಂಡ. ಮನೆ ಬಿಟ್ಟು ಹೊರಟು ರಸ್ತೆಗೆ ಬಂದ. ಟ್ಯಾಕ್ಸಿಸ್ಟ್ಯಾಂಡ್ ಕಡೆಗೆ ನಡೆದ. ಅಷ್ಟರಲ್ಲೇ ಖಾಲಿ ಟ್ಯಾಕ್ಸಿಯೊಂದು ರಸ್ತೆಯಲ್ಲಿ ಬಂತು. "ಟ್ಯಾಕ್ಸಿ... ಟ್ಯಾಕ್ಸಿ" ಅಂತ ಕೂಗಿದ. ಟ್ಯಾಕ್ಸಿ ಹತ್ತಿರಕ್ಕೆ ಬಂದು ನಿಂತಿತು. ಡ್ರೈವರ್ ಇಳಿದುಬಂದು ಬಾಗಿಲು ತೆಗೆದು ರಾಮೋಜಿಯನ್ನು ಮರ್ಯಾದೆಯಿಂದ ಒಳಗೆ ಕೂರಿಸಿದ.

"ಹೊಟೇಲ್ ಮಹೇಂದ್ರ ವಿಲಾಸ್" ಎಂದ ರಾಮೋಜಿ.

ಹೊಟೇಲ್ ಮಹೇಂದ್ರ ವಿಲಾಸದ ಎದುರಿಗೆ ಟ್ಯಾಕ್ಸಿ ನಿಂತಿತು. ಇಳಿದು, ಐದು ರೂಪಾಯಿ ನೋಟನ್ನು ಟ್ಯಾಕ್ಸಿಯವನಿಗೆ ಕೊಟ್ಟು ಚಿಲ್ಲರೆಗೆ ಕಾಯದೆ, ರಾಮೋಜಿ ಆ ಭವ್ಯ ಹೊಟೇಲೊಳಕ್ಕೆ ನಡೆದ. ಅಲ್ಲಿ ಹೊರ ಅಂಗಳದಲ್ಲೇ ಮಧ್ಯ ವಯಸ್ಸಿನ, ಖಾದಿ ಸೀರೆಯುಟ್ಟಿದ್ದ ಮಹಿಳೆಯೊಬ್ಬಳನ್ನು ಕಂಡ. ದೇಶಾವರದ ನಗೆ ಹೂಡಿ,

"ನಮಸ್ತೆ ಮಾಲತೀಜೀ. ಯಾವಾಗ ಬಂದಿರಿ ನಮ್ಮೂರಿಗೆ ? ಎಷ್ಟು ದಿನಗಳಾಯ್ತು. ಬರ್ತೀರಿ ಅನ್ನುವ ಸುದ್ದಿ ತಿಳಿಸಬಾರದಾಗಿತ್ತೇ ಮೊದಲೇ ಅಳಿಲಸೇವೆ ಮಾಡ್ತಾ ಇದ್ದೆನಲ್ಲಾ" ಎಂದು ಎರಡೂ ಕೈಗಳನ್ನು ಎತ್ತಿ ಮುಗಿದ.

"ನಿನ್ನೆ ರಾತ್ರಿ ಜರೂರಾಗಿ ಬಂದೆ. ಬುದ್ಧೋಜಿಗೆ ತಂತಿ ಕಳಿಸಿದ್ದೆ. ಅವ

Scanned by CamScanner

ಎಲ್ಲಾ ಏರ್ಪಾಡುಗಳನ್ನೂ ಮಾಡಿದ್ದಾನೆ. ಅದಕ್ಕೇ ನಿಮಗೆ ತೊಂದರೆ ಕೊಡಲಿಲ್ಲ" ಎಂದಳು ಆಕೆ.

"ಎಷ್ಟು ದಿವಸ ಇರ್ತೀರಿ ? ಸಂಜೆ ಭೋಜನಕೂಟವನ್ನು ಏರ್ಪಡಿಸಿ ಊರ ಗಣ್ಯರ ಪರಿಚಯವನ್ನು ನಿಮಗೆ ಮಾಡಿಸಬೇಕು ಎಂಬ ಆಸೆ. ಅವಕಾಶ ಇದೆಯೇ ?" ಎಂದು ರಾಮೋಜಿ ಕೇಳಿದ.

"ರಾತ್ರಿ ಊರಿಗೆ ಹಿಂದಿರುಗಲೇಬೇಕು. ಕೇಂದ್ರ ಬ್ಯಾಂಕಿನ ಅಧ್ಯಕ್ಷರು ಮನೆಗೆ ಬರುತ್ತಾರೆ. ಭೋಜನಕೂಟಕ್ಕೆ ಬರಲು ಇವತ್ತು ಸಾಧ್ಯವಿಲ್ಲ. ಮುಂದಿನಸರ್ತಿ ಬಂದಾಗ ಅವಕಾಶ ಮಾಡಿಕೊಳ್ಳುತ್ತೀನಿ. ಈಗ ಸಚಿವ ಶಾಸ್ತ್ರಿಯವರ ಮನೆಗೆ ಹೋಗುತ್ತಿದ್ದೀನಿ. ಆರಾಮಾಗಿದ್ದರೆ ನೀವೂ ಬನ್ನಿ, ಮಾತಾಡಲು ಅವಕಾಶ ಸಿಗುತ್ತೆ" ಎಂದಳಾಕೆ.

"ಇಲ್ಲಿ ಹಳೆಯ ಗೆಳೆಯರನ್ನು ಕಾಣಬೇಕು. ಅವರನ್ನು ಕಂಡು ನಂತರ ಕಾಫಿ ಕುಡಿದು ಬರ್ತೀನಿ. ನಿಮಗೆ ಗೊತ್ತಲ್ಲಾ ಇಲ್ಲಿ ಸಿಗುವಂತಹ ಕಾಫಿ ಇನ್ನೆಲ್ಲೂ ಸಿಗದು. ಒಂದು ತಾಸಿನ ನಂತರ ಎಲ್ಲಿಗೆ ಬಂದು ನಿಮ್ಮನ್ನು ಕಾಣಲಿ" ಎಂದ ರಾಮೋಜಿ.

"ಸಚಿವ ಶಾಸ್ತ್ರಿಯವರನ್ನು ಕಂಡ ಮೇಲೆ, ಖಾದಿ ಭಂಡಾರಕ್ಕೆ ಹೋಗಬೇಕು. ಅಲ್ಲಿಂದ ಪಿ. ಡಿ. ಸಿ. ಸಿ. ಅವರನ್ನೂ ಕಾಣಬೇಕು. ಇದಕ್ಕೆಲ್ಲಾ ಎಷ್ಟು ಹೊತ್ತಾಗುತ್ತೋ ಹ್ಯಾಗೆ ಹೇಳಲಿ" ಎಂದಳು ಆಕೆ.

"ಹಾಗಾದರೆ ಮುಂದಿನ ಸರ್ತಿ ನೀವು ಬಂದಾಗಲೇ ಮಾತನಾಡಲು ಅವಕಾಶ ಅನ್ನಿ, ಮಾಲತೀಜೀ" ಎಂದು ರಾಮೋಜಿ ನಕ್ಕ.

ಅವನ ನಗುವಿಗೆ ಮಾರ್ದನಿ ಇತ್ತು. ಮಾಲತೀಜೀ ಹೊಟೇಲಿಂದ ಹೊರಗಾದಳು.

"ಬೆಳಗಾಗುತ್ತಲೂ ಇವಳ ಮುಖ ನೋಡಿದೆ. ನರಿಮುಖ ಕಂಡ ಹಾಗೆ ಆಯಿತು. ಶುಭ ಸೂಚನೆಯೊ ಏನೋ ?" ಎಂದು ತುಸು ಖುಷಿಯಿಂದ ರಾಮೋಜಿ ಕಾಫಿ ಕುಡಿಯಲು ಒಳ ಕೊಠಡಿಗೆ ಹೋದ.

ಮಾಣಿ ತಂದುಕೊಟ್ಟ ಕಾಫಿಯನ್ನು ಗುಟುಕುಗುಟುಕಾಗಿ ಚಪ್ಪರಿಸುತ್ತಾ "ಯಜಮಾನ್ರು ಇದಾರೇನು, ಮಾಣಿ" ಎಂದು ಕೇಳಿದ.

"ಹ್ಞೂ" ಅಂದ ಮಾಣಿ.

ಕಾಫಿ ಮುಗಿಸಿ ಒಳಾಂಗಣದತ್ತ ಹೋದ ರಾಮೋಜಿ.

* * *

ಹಾಸಿಗೆಯಿಂದ ಎದ್ದು ಸದ್ದು ಗದ್ದಲ ಮಾಡದೆ ಬಿಡ್ಡಣ್ಣ ಬಟ್ಟೆ ಹಾಕಿಕೊಳ್ಳಲು ತೊಡಗಿದ. ಇನ್ನೂ ಮಲಗಿದ್ದ ನಂಜಿ ಹೊರಳಿದಳು. ತುಸು ಎಚ್ಚರವಾಗಿರಬೇಕು. ಹಾಸಿಗೆಯ ಆ ಅರ್ಧ ಖಾಲಿ ಕಂಡಿತು. ಕಣ್ಣು ಬಿಟ್ಟು ನೋಡಿದಳು.

"ಮೂರು ತಿಂಗಳಿಂದ ನಿನ್ನ ಮುಖ ಕಂಡಿಲ್ಲ, ಸಂಜೆ ಬಂದಿ...ಈಗ ಯಾಕೆ ಅಷ್ಟು ಬೇಗ ಎದ್ದುಬಿಟ್ಟೆ" ಎನ್ನುತ್ತಾ ಬಿಡ್ಡಣ್ಣನನ್ನು ಬೊಗಸೆಕಣ್ಣುಗಳಿಂದ ನೋಡಿದಳು.

"ಕತ್ತಲು ಕತ್ತಲಾಗೇನೇ ಹೋಗಿ ಕಾಫಿ ಕುಡಿದುಬಿಟ್ಟು ಬರ್ತೀನಿ. ನೀ ಮಲಗಿರು. ಬೇಕಾದಾಗ ಎದ್ದರಾಯಿತು. ಬೇಗ ಬಂದುಬಿಡ್ತೀನಿ ಬರೋತನಕ ಇಲ್ಲೇ ಇರು" ಎಂದು ಹೇಳಿ ಬಿಡ್ಡಣ್ಣ ಹೊರಬಿದ್ದ.

ಮಜೇಂದ್ರ ವಿಲಾಸದ ಪಕ್ಕದಲ್ಲಿ ಒಂದು ಸಂದಿ ಇದೆಯಲ್ಲಾ. ಆ ಸಂದಿಯಲ್ಲಿ ನಡೆದುಹೋದ. ಮಜೇಂದ್ರ ವಿಲಾಸದ ಹಿಂಭಾಗದಲ್ಲೇ ಇದ್ದ ಸಣ್ಣ ಕಾಕಾ ಹೊಟೇಲಿಗೆ ಬಿಡ್ಡಣ್ಣ ಹೋದ. ಇವನನ್ನು ಕಂಡ ಅಹ್ಮದ್ ಕಾಕಾ,

"ಯಾವಾಗ ಬಂದೆ ಬಿಡ್ಡಣ್ಣ, ಚೆನ್ನಾಗಿದೀಯಾ" ಎಂದು ಆದರದಿಂದ ಕುಶಲ ಪ್ರಶ್ನೆಗಳನ್ನು ಕೇಳುತ್ತಾ ತನ್ನ ಬಳಿಯಲ್ಲೇ ಬಂದು ಕೂತುಕೊಳ್ಳುವಂತೆ ಸಂಜ್ಞೆಮಾಡಿ ಕರೆದ. ಬಿಡ್ಡಣ್ಣ ಹೋಗಿ ಅಹ್ಮದನ ಹತ್ತಿರ ಕೂತುಕೊಂಡು, ಮಾಣಿ ತಂದುಕೊಟ್ಟ ಕಾಫಿಯನ್ನು ಕುಡಿಯಹತ್ತಿದ.

ಎರಡು ಗುಟುಕು ಕಾಫಿ ಕುಡಿದಿರಬಹುದು, ಬೀಡಿ ತೆಗೆದು ಅಹ್ಮದ್ ಕಾಕಾಗೆ ಒಂದನ್ನು ಕೊಟ್ಟು, ಇನ್ನೊಂದನ್ನು ತಾನು ಕಚ್ಚಿಕೊಂಡ. ಕಡ್ಡಿ ಗೀಚಿ ಅಹ್ಮದ್ ಕಾಕಾ ಬೀಡಿಗಳನ್ನು ಹಚ್ಚುತ್ತಾ,

"ಯಜಮಾನರು ನಿನ್ನ ನೋಡಬೇಕು ಅಂತ ಹೇಳ್ತಾ ಇದ್ದರು" ಎಂದು ಪಿಸು ದನಿಯಲ್ಲಿ ಹೇಳಿದ.

"ಗ್ರಾಮದಲ್ಲಿ ಸುದ್ದಿ ಮುಟ್ಟಿತು. ಅದಕ್ಕೋಸ್ಕರವೇ ನಿನ್ನೆ ರಾತ್ರಿ ಬಂದೆ. ನಂಜೀನೂ ಕಂಡು ತುಂಬಾ ದಿನಗಳಾಗಿತ್ತು. ಅಲ್ಲೇ ಉಳಕೊಂಡೆ. ಬೆಳಗಿನ ಝಾಮದಲ್ಲೇ ಯಾರಿಗೂ ಕಾಣದಂತೆ ಬಂದೆ. ಯಜಮಾನರಿಗೆ ಸುದ್ದಿ ಮುಟ್ಟಿಸು" ಎಂದ ಬಿಡ್ಡಣ್ಣ. ಎರಡು ದಂ ಎಳೆದು ಬೀಡೀನ ಎಸೆದು ಇನ್ನೆರಡು ಗುಟುಕು ಕಾಫಿ ಕುಡಿದ.

"ನಿನ್ನ ಕಂಡಾಗಲೇ ಯಜಮಾನರಿಗೆ ಸುದ್ದಿ ಕಳಿಸಿದೆ. ಅವರೇನು ಹೇಳಿ ಕಳಿಸುತ್ತಾರೋ ನೋಡೋಣ. ಹೋದ ವಾರ ಎಲ್ಲಾ ಯಜಮಾನ್ರು ಬಹಳ

Scanned by CamScanner

ಕೆಲಸದಲ್ಲಿದ್ದರು. ದಿನಕ್ಕೆ ಆರೆಂಟು ಸರ್ತಿ ರಾವೋಜಪ್ಪ ಬಂದು ಮಾತನಾಡಿಕೊಂಡು ಹೋಗ್ತಾ ಇದ್ದರು. ಮಾಲತಮ್ಮನೂ ದೊಡ್ಡ ಹೋಟಲಿನಲ್ಲೇ ನಾಲ್ಕು ದಿನಗಳಿಂದ ಇದ್ದಾಳೆ" ಎಂದು ಅಹ್ಮದ್ ಕಾಕಾ ಹೇಳುತ್ತಿದ್ದಾಗ ಪುಟಾಣಿ ನಾಯಿಯೊಂದು ಅಡಿಗೆ ಮನೆಯ ಕಡೆಯಿಂದ ಬಂದು ಅಹ್ಮದ್ ಕಾಕನ ಕಾಲ ಬಳಿ ನೆಲವನ್ನು ಕೆರೆಯುತ್ತಾ ನಿಂತಿತು. ಮೇಜಿನ ಮೇಲಿದ್ದ ದೊಡ್ಡ ಸೀಸೆಯಿಂದ ಬಿಸ್ಕತ್ತೊಂದನ್ನು ತೆಗೆದು ಅಹ್ಮದ್ ಕಾಕಾ, ನಾಯಿಗೆ ಕೊಟ್ಟ. ಅದನ್ನು ಕಚ್ಚಿಕೊಂಡು ನಾಯಿ ಅಡಿಗೆ ಮನೆಯ ಕಡೆಗೆ ನಡೆಯಿತು. ಅದರ ಹಿಂದೆಯೇ ಬಿಡ್ಡಣ್ಣನೂ ನಡೆದ.

"ಅಷ್ಟು ಬೇಗ ಬಿಡ್ಡಣ್ಣನನ್ನು ಯಜಮಾನರು ಕರೆಸಿಕೊಳ್ಳಬೇಕಾದರೆ, ಅದೂ ಯಾರಿಗೂ ಸುಳಿವು ಕೊಡದಂತೆ ಈ ರೀತಿ ಟಾಮಿಯನ್ನು ಕಳಿಸಿ. ಕರೆಸಬೇಕಾದರೆ ಏನೋ ದೊಡ್ಡ ವ್ಯವಹಾರವೇ ಇರಬೇಕು. ಬಿಡ್ಡಣ್ಣನಿಗೂ ದೆಸೆ ಬಡಿದ ಹಾಗಿದೆ" ಎಂದು ಅಹ್ಮದ್ ಕಾಕಾ ತನ್ನ ಮನಸ್ಸಿನಲ್ಲೇ ಅಂದುಕೊಂಡ.

ಅಹ್ಮದ್ ಕಾಕಾ ಮೊದಲು ಭಿಕಾರಿಯಾಗಿ ಊರಿಗೆ ಬಂದಾಗ, ಬಸ್ ನಿಲ್ದಾಣದಲ್ಲಿ ಕೂಲಿ ಮಾಡಿ ಹೊಟ್ಟೆ ಹೊರೆದುಕೊಳ್ಳುತ್ತಿದ್ದ. ಒಂದು ದಿನ ಕೂಲಿಗೆ ಗೊತ್ತು ಮಾಡಿಕೊಂಡ ಒಬ್ಬಾತ,

"ದೃಢಕಾಯನಾಗಿದ್ದಿ, ಕೂಲಿನಾಲೀಲಿ ಏನು ಜೀವನ ಸಾಗುತ್ತೆ ? ಕಾಫಿ ಹೋಟೇಲು ಇಟ್ಟರೆ ನಿಮ್ಮೂರಿನವರೆಲ್ಲಾ ಗಿರಾಕಿಗಳಾಗುತ್ತಾರೆ. ಈ ಊರಿನಲ್ಲಿ ನಿಮ್ಮೋರು ಸುಮಾರು ಜನ ಇದ್ದಾರೆ. ನಂಬಿಕೆಯಿಂದ ನಾನು ಹೇಳಿದ ಕೆಲಸಾನ ಮಾಡೋದಾದರೆ ಹೋಟೇಲು ಇಟ್ಟುಕೊಡ್ತೀನಿ" ಎಂದಿದ್ದರು.

ಕೃತಜ್ಞತೆಯಿಂದ 'ಹ್ಞೂ' ಅಂದಿದ್ದ. ಮಜೇಂದ್ರ ವಿಲಾಸ ಹೋಟೇಲಿನ ಪಕ್ಕದ ಸಂದಿಯಲ್ಲಿ ಆತ ಹೋಟೇಲಿಗೆ ಸ್ಥಳ ಕೊಟ್ಟು ಸಲಕರಣೆಗಳನ್ನು ಒದಗಿಸಿದ್ದ. ಅಹ್ಮದ್ ಕಾಕಾ ಅಂದಿನಿಂದ ಆ ಚಿಕ್ಕ ಹೋಟೇಲ್ ನಡೆಸಿಕೊಂಡು ಪ್ರವರ್ಧಮಾನಕ್ಕೆ ಬಂದಿದ್ದ. ಅವನಿಗೆ 'ಆತ' ಎಂದಿಗೂ ಪೂಜಾರ್ಹನಾದ "ಯಜಮಾನರು", ಹೋಟೇಲ್ ಮಜೇಂದ್ರ ವಿಲಾಸವೂ ಯಜಮಾನರ ಸುಪರ್ದಿನಲ್ಲಿದೆ ಎಂದು ಅಹ್ಮದ್ ಕಾಕನಿಗೆ ಅನುಮಾನ ಇತ್ತು. ಅಷ್ಟೇ ಹೊರತು ಯಜಮಾನರ ವಿಚಾರ ಇನ್ನೇನೂ ಅವನಿಗೆ ತಿಳಿಯದು. ತಿಳಿದುಕೊಳ್ಳಲು ಇಷ್ಟವೂ ಇರಲಿಲ್ಲ. ಯಜಮಾನರು ಹೀಗೆ ಮಾಡು ಅಂತ ಹೇಳಿ ಕಳಿಸಿದರೆ ಹಾಗೆ ಹಿಂದು ಮುಂದು ನೋಡದೆ ಮಾಡಿಬಿಡುತ್ತಿದ್ದ. ಅವನ

ಕಾಫಿ ಹೊಟೇಲಿನ ವ್ಯವಹಾರದಲ್ಲಿ ಯಜಮಾನರಾದರೂ ಎಂದೂ ಕೈ ಹಾಕಲಿಲ್ಲ. ಎರಡು ವರ್ಷಗಳಲ್ಲಿ ಯಜಮಾನರು ಹಾಕಿದ್ದ ಬಂಡವಾಳವನ್ನು ಹಿಂತಿರುಗಿಸಿದ್ದ. ಆಮೇಲೆ, ಅಹ್ಮದ್ ಕಾಕಾ ತಿಂಗಳಿಗೆ ಹೊಟೇಲ್ ಬಾಡಿಗೆ ಎಂದು ಕೇವಲ ಹತ್ತು ರೂಪಾಯಿಗಳನ್ನು ಯಜಮಾನರಿಗೆ ತಲುಪಿಸುತ್ತಿದ್ದ. ಆ ಹೊಟೇಲಿಗೆ ಇನ್ಯಾರಾದರೂ ಬಾಡಿಗೆಗೆ ಬಂದಿದ್ದರೆ 60–70 ರೂಪಾಯಿಗಳನ್ನು ಸಂತೋಷವಾಗಿ ಕೊಡುತ್ತಿದ್ದರು ಎಂದು ಅಹ್ಮದ್ ಕಾಕಾನಿಗೆ ಗೊತ್ತಿತ್ತು. ನನ್ನ ಮೇಲಿರುವ ಯಜಮಾನರ ಪ್ರೀತಿ ಮತ್ತು ನಂಬಿಕೆಯೇ ಈ ಸೌಲಭ್ಯಕ್ಕೆ ಕಾರಣ ಎಂದೂ ಅಹ್ಮದ್ ಕಾಕಾನಿಗೆ ತಿಳಿದಿತ್ತು.

ಬಿಡ್ಡಣ್ಣ ಶುದ್ಧ ರೌಡಿ. ಅಸಭ್ಯ ಜೀವನ ನಡೆಸುತ್ತಿದ್ದ ಅವನನ್ನು ಯಜಮಾನರು ಯಾಕೆ ಕರೆಸಿ ಮಾತನಾಡುತ್ತಾರೆ ಎಂದು ಅವನಿಗೆ ಅನ್ನಿಸದೆ ಇರಲಿಲ್ಲ. ಬಿಡ್ಡಣ್ಣ ಕೂಡ ಅಹ್ಮದ್ ಕಾಕಾ ಮುಖಾಂತರವೇ ಯಜಮಾನರನ್ನು ಭೇಟಿಯಾಗುತ್ತಿದ್ದುದು. ನೇರ ಭೇಟಿ ಎಂದೂ ಇಲ್ಲ. ಆದರೆ ಈ ವಿಷಯ ನನಗ್ಯಾಕೆ ? ಯಜಮಾನರು ನನ್ನ ಭಾಗದ ದೇವರು. ದೇವರು ಯಾವಾಗ ಏನನ್ನು ಏತಕ್ಕೆ ಮಾಡುತ್ತಾನೆ ಎಂಬುವುದು ಯಾರಿಗೆ ಗೊತ್ತು ? ಅದನ್ನು ಕೆದಕಲು ಹುಲು ಮನುಷ್ಯರು ನಾವು ಯಾರು ? ಎಂದೇ ಅಹ್ಮದ್ ಕಾಕಾನ ತೀರ್ಮಾನ.

* * *

ಊಟ ಮುಗಿಸಿ ಎಲಡಿಕೆ ಅಗಿಯುತ್ತಾ ಭೀಮಾಜೋಷಿಯವರು ತಮ್ಮ ಹೆಂಡತಿಯನ್ನು ಎದುರಿಗೆ ಕೂರಿಸಿಕೊಂಡು,

"ಭಾಗು, ನಾಳೆಯ ದಿನ ನಮ್ಮ ಮಿಲ್ಲಿನ ಬೋರ್ಡ್ ಮೀಟಿಂಗಿದೆ. ಸುಮಾರು 18 ಲಕ್ಷ ರೂಪಾಯಿಗಳ ಬಟ್ಟೆ ದಾಸ್ತಾನು ಉಳಿದು ಹೋಗಿದೆ. ದಿನ ದಿನದ ವ್ಯವಹಾರಕ್ಕೇ ಹಣವಿಲ್ಲದಂತಾಗಿದೆ. ಮಿಲ್ಲನ್ನು ಮುಚ್ಚುವುದೇ; ಅಥವಾ ಇದೇ ರೀತಿ ನಷ್ಟದಲ್ಲಿ ನಡೆಸುವುದೇ ಎಂದು ನಾಳೆ ಮೀಟಿಂಗಿನಲ್ಲಿ ನಿರ್ಧರಿಸಬೇಕು. ಹೀಗಾಗಬಹುದು ಎಂದು ಎರಡು ಮೂರು ವರ್ಷಗಳ ಹಿಂದೆಯೇ ಅನುಮಾನ ಬಂತು. ಆದುದರಿಂದ ಹತ್ತಿಯನ್ನು ಕೊಳ್ಳುವಾಗ ಶಾಖಾಯ ಲವಣಾಯ ಮಾಡಿಕೊಂಡಿದ್ದೇನೆ. ಅದೊಂದು ಏಳೆಂಟು ಲಕ್ಷ ರೂಪಾಯಿಗಳಷ್ಟು ಗೋವಾ ಬ್ಯಾಂಕಿನಲ್ಲಿದೆ ನಿನ್ನ ಹೆಸರಿನಲ್ಲಿ.

ಇಲ್ಲಿ ಮಿಲ್ ಏನಾದರೂ ಮುಳುಗಿಹೋದರೆ, ನೆಟ್ಟಗೆ ಗೋವಾಕ್ಕೆ

Scanned by CamScanner

ಹೋಗಿ ಅಲ್ಲಿ ಬೇರೆ ಉದ್ಯಮ ಶುರು ಮಾಡಬೇಕಾಗಬಹುದು. ಕೆಲಸದವರ ಕೂಲಿ ಹೆಚ್ಚು ಮಾಡಿದ್ದು ಅಗತ್ಯ ಸಾಮಗ್ರಿಗಳ ಬೆಲೆ ಏರಿಕೆ, ತಯಾರಾದ ವಸ್ತ್ರಗಳನ್ನು ಕೊಳ್ಳುವವರಿಲ್ಲದೆ ಹೋದುದು, ಈ ಕಾರಣಗಳಿಗೆ ಮಿಲ್ ಮುಳುಗಿಹೋಯಿತು, ಎಂದು ಸಾಕ್ಷಿ ಕೊಡಬಹುದು.

ನಿನಗೂ ಈ ಸುದ್ದಿ ತಿಳಿಸಿರೋಣ ಅಂತ ಇವತ್ತು ಹೇಳ್ತಾ ಇದೀನಿ. ಯಾರಿಗೂ ಈ ವಿಷಯ ತಿಳಿಸಬೇಡ.

ರಾಜೀವಪುರದ ಹತ್ತಿ ಗಿರಣಿಯ ಮುಖ್ಯಭಾಗಸ್ಥರ ಹೆಂಡತಿ ಅಂತ ನಿನಗೆ ಸ್ವಲ್ಪ ಹೆಮ್ಮೆ ಇದೆ. ಇಂತಹ ದೊಡ್ಡ ಬಂಗಲೆಯನ್ನು ಬಿಟ್ಟು ಗೋವಾಕ್ಕೆ ಹೋಗೋದು ನಿನಗೆ ದುಃಖ ಕೊಡುತ್ತದೆ. ಆದರೆ ಈಗ ಬೇರೆ ಮಾರ್ಗವೇ ಇಲ್ಲ. ಬೆಂದ ಮನೆಯಲ್ಲಿ ಆದಷ್ಟನ್ನು ಕಾಣದ ಹಾಗೆ ಹಿರಿದು ಕೊಂಡಿದ್ದೀನಿ. ಮುಂದೆ ನಿರ್ಗತಿಕರಾಗಬೇಕಾಗಿಲ್ಲ. ಈಗಲೇ ಹೇಳಿದ್ದರೆ ಮುಂದೆ ನಿನಗೆ ಹಠಾತ್ತನೆ ಷಾಕ್ ಆಗಲಾರದು ಎಂದು ಹೇಳುತ್ತಿದ್ದೀನಿ" ಎಂದು ಹೇಳಿದರು.

ಹೆಂಡತಿಯ ಕಣ್ಣಲ್ಲಿ ಕಂಡು ಬಂದ ಎರಡು ಹನಿಯನ್ನು ಒರೆಸಿದರು.

* * *

ಮಾರನೆ ದಿನದ ಬೋರ್ಡ್ ಮೀಟಿಂಗ್‌ನಲ್ಲಿ ಭೀಮಾಜೋಷಿ ಅವರು ಡೈರೆಕ್ಟರುಗಳಿಗೆ ಪುಷ್ಕಳ ತಿಂಡಿ ತಿನಿಸುಗಳನ್ನು ಉಣ್ಣಿಸಿದರು. ನಂತರ ತಮ್ಮ ವರದಿಯನ್ನು ಓದಿದರು.

"ಈಗಿನ ಕಠಿಣ ಪರಿಸ್ಥಿತಿಯಲ್ಲಿ ಮಿಲ್ ಮುಚ್ಚುವುದೇ ಕ್ಷೇಮ. ಇಲ್ಲದೆ ಇದ್ದರೆ ನಷ್ಟದ ಮೊತ್ತ ಅತಿ ಹೆಚ್ಚಾಗುತ್ತದೆ. ಅಲ್ಲದೆ ಎಲ್ಲೂ ಸಾಲ ದೊರೆಯುವುದಿಲ್ಲವಾದ್ದರಿಂದ ಮಿಲ್ ನಡೆಸಲು ಅಸಾಧ್ಯ" ಎಂದು ತಮ್ಮ ಅಭಿಪ್ರಾಯವನ್ನೂ ಹೇಳಿದರು.

ಸರಕಾರದ ವತಿಯಿಂದ ಡೈರೆಕ್ಟರ್ ಆಗಿದ್ದ ಕೈಗಾರಿಕಾ ಕಮೀಷನರು,

"ನಿನ್ನೆಯ ದಿನ ಶ್ರೀ ರಾವೋಜಿ ಮತ್ತು ಶ್ರೀಮತಿ ಮಾಲತೀಜೀಯವರು ನನ್ನನ್ನು ಭೇಟಿಯಾಗಿದ್ದರು. ಕೇಂದ್ರ ಬ್ಯಾಂಕಿನ ಬೆಂಬಲ ಪಡೆದು ಅವರು ಬಂದಿದ್ದರು. ತಿಂಗಳಿಗೆ 3 ಲಕ್ಷ ರೂಪಾಯಿಗಳಷ್ಟು ಅವರು ನಮೂದಿಸಿದ ಬಟ್ಟೆಗಳನ್ನು ತಯಾರಿಸಿ ನಿಗದಿ ಬೆಲೆಗೆ ಅವರಿಗೆ ಮಾರುವುದಾದರೆ ವರ್ಷದ ವಹಿವಾಟಿಗೆ ಸಹಿ ಹಾಕುತ್ತಾರೆ. ಹೀಗೆ ಮಾಡಿದರೆ ದೈನಂದಿನ ವೆಚ್ಚಕ್ಕೆ ಹಣ

ಸಿಗುತ್ತದೆ. ಮುಂದೆ ಅವರಿಗೆ ಬೇಡದ ದಾಸ್ತಾನು ಬಟ್ಟೆಗಳಿದ್ದರೆ, ಕಾಲ ಪಕ್ವವಾದಾಗ ಮಾರಬಹುದು. ಮಿಲ್ ಮುಚ್ಚಬೇಕಾಗಿಲ್ಲ" ಎಂದರು.

ಭೀಮಾಜೋಷಿಯವರಿಗೆ ಆಸೆ ಚಿಗುರಿತು. "ಶ್ರೀ ರಾವೋಜಿಯವರು ನಮ್ಮ ಮಿಲ್ಲಿನಲ್ಲಿ ತಯಾರಾಗಬಹುದಾದ ಬಟ್ಟೆಗಳನ್ನು ಕೇಳಿದರೆ ಖಂಡಿತ ನೇಯ್ದು ಕೊಡಬಹುದು. ತಯಾರಿಕೆಯ ಬೆಲೆಯ ಮೇಲೆ ಶೇಕಡಾ ಹತ್ತು ಲಾಭ ಕೊಟ್ಟರೆ ಆ ಬೆಲೆಗೆ ಮಾರೋಣ" ಎಂದರು.

"ನಾಳೆ ಶ್ರೀ ರಾವೋಜಿಯವರನ್ನು ಕರಕೊಂಡು ಬರುತ್ತೇನೆ, ಒಪ್ಪಂದ ಮಾಡಿಕೊಂಡು ಮಿಲ್ ನಡೆಸೋಣ" ಎಂದರು ಸರಕಾರದ ಡೈರೆಕ್ಟರು.

ಮರುದಿನ ಶ್ರೀ ರಾವೋಜಿಯವರು ಕೈಗಾರಿಕಾ ಕಮೀಷನರೊಡನೆ ಬಂದು ಮಾತುಕತೆ ನಡೆಸಿದರು. ಮುಂದಿನ ತಿಂಗಳಿಂದ ಪ್ರತಿ ತಿಂಗಳೂ 3 ಲಕ್ಷ ರೂಪಾಯಿಗಳ ತಾವು ನಮೂದಿಸಿದ ರಖಂ ಬಟ್ಟೆಗಳನ್ನು ಯಾವ ಕಾರಣದಿಂದಲೂ ತಪ್ಪದೆ ತಯಾರಿಸಿಕೊಡುವುದಾಗಿಯೂ, ಒಂದು ವರ್ಷ ಈ ಒಪ್ಪಂದವೆಂದೂ, ಮಿಲ್ಲಿನ ಆಡಳಿತಗಾರರಲ್ಲದೆ, ಮುಖ್ಯ ಅಧಿಕಾರಿಗಳಾದ ಭೀಮಾಜೋಷಿಯವರೂ ವೈಯಕ್ತಿಕವಾಗಿ ಹೊಣೆಯಾಗಬೇಕೆಂದೂ ಒಪ್ಪಂದವಾಯಿತು.

ಕೇಂದ್ರದ ಬ್ಯಾಂಕಿನ 3 ಲಕ್ಷ ರೂಪಾಯಿನ ಚೆಕ್ಕನ್ನು ಶ್ರೀ ರಾವೋಜಿ ಅವರು ಭೀಮಾಜೋಷಿಯವರಿಗೆ ಮುಂಗಡವಾಗಿ ಕೊಟ್ಟರು. ಕೈ ಕೈ ಕುಲುಕುತ್ತಾ ಒಬ್ಬರನ್ನೊಬ್ಬರು ಪರಸ್ಪರ ಅಭಿನಂದಿಸುತ್ತ ಬೀಳ್ಕೊಟ್ಟರು.

* * *

ಎರಡು ತಿಂಗಳುಗಳಲ್ಲಿ ಕಾರ್ಮಿಕರ ಗುಸು ಗುಸು ಶುರುವಾಯಿತು. ಕಾರ್ಮಿಕರನ್ನು ಸಮಾಧಾನ ಮಾಡಲು, ಭೀಮಾಜೋಷಿ ಅವರಿಗೆ ಸಾಧ್ಯವಾಗಲಿಲ್ಲ, ಅವರ ಹೊಸ ಮುಖಂಡ ಕೇಳಪನ್ ಕೇಳಿಯೇ ಬಿಟ್ಟಿದ್ದ – ಹತ್ತಿಯನ್ನು ಕೊಳ್ಳುವಾಗ, ಯಂತ್ರಗಳನ್ನು ತರಿಸುವಾಗ ನಮ್ಮ ಸಲಹೆಯನ್ನೂ ಕೇಳಿ. ಆಮೇಲೆ ಲಾಭ ಮಿಲ್ಲಿಗೆ ಯಾಕಾಗುಲ್ಲ ನೋಡೋಣ ಈಗಲೂ ಲಾಭ ಬರುತ್ತೆ. ಆದರೆ ಮಿಲ್ಲಿಗೆ ಅಲ್ಲ' ಎಂದು. ಸಂಧಾನದ ಮಾತು ಮುಂದುವರೆಸಲು ಜೋಷಿಯವರು ಹಿಂತೆಗೆದರು. ಪರಿಸ್ಥಿತಿ ಬಿಗಡಾಯಿಸಿತು. ಮುಷ್ಕರ ಆರಂಭವಾಯಿತು. ಕಾರ್ಮಿಕ ವಿವಾದ ನ್ಯಾಯಾಲಯಕ್ಕೆ ಹೋಯಿತು. ಜೋಷಿಯವರು ಕೈ ತೊಳೆದುಕೊಂಡು ಹಾಯಾಗಿ ಕೂತರು.

Scanned by CamScanner

ಒಪ್ಪಂದದಂತೆ ಸರಕು ಕಳಿಸಿ ಎಂದು ಶ್ರೀ ರಾಮೋಜಿಯವರಿಂದ ಎರಡು ಮೂರು ಪತ್ರಗಳು ಬಂದುವು. ಮುಷ್ಕರದ ಕಾರಣ ಕಳಿಸಲಾಗಲಿಲ್ಲ ಎಂದು ಜೋಷಿಯವರು – ಉತ್ತರ ಕಳಿಸಿದರು. ಒಪ್ಪಂದದಲ್ಲಿ ಆ ಮಾತು ಇಲ್ಲ, ಅಂತ ರಾಮೋಜಿಯವರು ನೋಟಿಸ್ ಕೊಟ್ಟರು. ವಾರ ಮುಗಿಯುವುದ ರೊಳಗೆ ಜೋಷಿಯವರನ್ನು ಭೇಟಿಯಾಗಲು ಲಾಯರೊಂದಿಗೆ ಬಂದರು.

"ಕಾರ್ಮಿಕರು ಮುಷ್ಕರ ಹೂಡಿದರೆ ನಾನೇನು ಮಾಡಲಿ" ಎಂದರು ಜೋಷಿ.

"ಅದನ್ನು ಕಟ್ಟಿಕೊಂಡು ನಮಗೇನು? ಒಪ್ಪಂದದಲ್ಲಿ ಆ ವಿಷಯ ಎತ್ತೇ ಇಲ್ಲವಲ್ಲ ?" ಎಂದರು ಲಾಯರು.

"ಏನು ಬೇಕಾದರೂ ಮಾಡಿಕೊಳ್ಳಿ" ಎಂದರು ಜೋಷಿ, ರೇಗುತ್ತಾ..

"ನೋಡಿ ಜೋಷಿಯವರೇ ! ಒಪ್ಪಂದದ ಪ್ರಕಾರ ವ್ಯಾಪಾರ ಮಾಡಿದ್ದರೆ 36–40 ಲಕ್ಷ ರೂಪಾಯಿ ವ್ಯವಹಾರ ನಡೆಯುತ್ತಿತ್ತು. ಏನಿಲ್ಲ ಅಂದರೆ ನಾಲ್ಕೈದು ಲಕ್ಷ ಲಾಭ ಗಿಟ್ಟುತ್ತಿತ್ತು. ನಿಮ್ಮ ಕಷ್ಟಕಾಲದಲ್ಲಿ ಬಂದು ಅಷ್ಟೆಲ್ಲಾ ಹಣವನ್ನು ಮುಂಗಡ ಕೊಟ್ಟೆ. ಕೊಂಡ ಮಾಲನ್ನು ಮಾರೋಕ್ಕಾಗದೆ ಇದ್ದಿದ್ದರೆ ಅಷ್ಟೂ ನಷ್ಟ ಅನುಭವಿಸಬೇಕಾಗಿತ್ತು. ಹೀಗೆ ಬರಬಹುದಾದ ಲುಕ್ಸಾನನ್ನು ಗಣನೆಗೆ ತಾರದೆ ಒಪ್ಪಂದ ಮಾಡಿಕೊಂಡು, ಹಾಗೆ ಅದರಂತೆ ನಡೆದರೆ ನೀವು 'ನಾನೇನು ಮಾಡಲಿ' ಎಂದರೆ ಹೇಗೆ ?" ಎಂದು ಶ್ರೀ ರಾಮೋಜಿ ಕೇಳಿದರು.

"ವ್ಯಾಪಾರದಲ್ಲಿ ಇವೆಲ್ಲಾ ಸರ್ವೇಸಾಮಾನ್ಯ" ಎಂದರು ಜೋಷಿ.

"ಸರಿ ! ಮೊಕದ್ದಮೆ ಹೂಡೋಣ. ಆಗಬಹುದಾದ ನಷ್ಟವನ್ನು ಕಟ್ಟಿ ಕೊಡಲು ಕಂಪನಿಯ ಮತ್ತು ಜೋಷಿಯವರ ಮೇಲೆ ಮೊಕದ್ದಮೆ ಹಾಕೋಣ" ಎಂದರು ಲಾಯರು.

"ಕಂಪನಿ ಮೇಲೆ ಮೊಕದ್ದಮೆ ಹಾಕಿ, ನನ್ನ ಮೇಲೆ ಏನು ಬಂತು" ಎಂದರು ಜೋಷಿ.

"ಒಪ್ಪಂದ ಓದಿ, ವೈಯಕ್ತಿಕವಾಗಿ ನೀವೂ ಹೊಣೆ" ಎಂದರು ಗಡುಸಾಗಿ ಲಾಯರು.

"ಮೊಕದ್ದಮೆ ಹಾಕಿದರೆ, ಮಿಲ್ಲಿನ ಕೊಳ್ಳು ಕೊಡುವಿಕೆ, ತಯ್ಯಾರಿ ವೆಚ್ಚ, ಮಾರಾಟ ದರ ಎಲ್ಲವೂ ಬಹಿರಂಗವಾಗುತ್ತೆ. ಆಗಲಿ, ಕಡೇತನಕ ನೋಡೇಬಿಡ್ತೀನಿ" ಎಂದರು ರಾಮೋಜಿ.

"ಲ್ಲ" ಎಂದು ಉದ್ಗಾರ ತೆಗೆದರು ಜೋಷಿ. ಕಡೆಗೆ ತೀರ್ಮಾನ ಮಾಡಿಕೊಂಡರು. ಭೀಮಾಜೋಷಿ 3 ಲಕ್ಷ ರೂಪಾಯಿಗಳನ್ನು ಶ್ರೀ ರಾಮೋಜಿಯವರಿಗೆ ಕೊಡೋದು. ಒಪ್ಪಂದವನ್ನು ಹರಿದುಹಾಕೋದು ಅಂತ. ಜೋಷಿಯವರ ಗೋವಾನಿಧಿ ಕರಗಿ ಹರಿಯಿತು !

* * *

ವಜೇಂದ್ರ ವಿಲಾಸದ ಹಿಂಬದಿಯ ಸಣ್ಣ ಕೊಠಡಿಯಲ್ಲಿ ಬೆಳಗಿನ ಝಾಮ ಯುವಕನೊಬ್ಬ ಬರೆಯುತ್ತ ಕುಳಿತಿದ್ದ. ಬಡವರ ಉಡುಪು. ತೆಳುವಾದರೂ ದೃಢವಾದ ಮೈ. ಕೊಠಡಿಯಲ್ಲಿ ಯಾವ ಆಡಂಬರವೂ ಇಲ್ಲ.

"ರಾಜೀವಪುರದ ಹತ್ತಿ ಗಿರಣಿಯ ಆಳಧಿಕಾರಿಗಳು ಬೆಂದ ಮನೆಗೆ ಹಿರಿದಿದ್ದೇ ಲಾಭ ಎಂದು ಕೊಳ್ಳೆ ಹೊಡೆದರು. ಅದರ ಸುಳುಹು ತಿಳಿದು ರಾಮೋಜೀಗೆ ಹೀಗೆ ಹೀಗೆ ಒಪ್ಪಂದ ಮಾಡಿಕೊ ಎಂದು ಸೂಚಿಸಿದೆ. ಬೇಕಾದ ಹಣಕ್ಕೆ ಕೇಂದ್ರದ ಬ್ಯಾಂಕಿನ ಬೆಂಬಲವನ್ನೂ ಶ್ರೀಮತಿ ಮಾಲತೀಜೀಯವರ ಮೂಲಕ ಕೊಡಿಸಿದೆ. ಕೊಂಡ ಬಟ್ಟೆಯನ್ನು ಶತಾಂಶ ಐದರಷ್ಟು ನಷ್ಟಕ್ಕೆ ಬೇಗ ಮಾರುಕಟ್ಟೆಯಲ್ಲಿ ಮಾರಿಸಲು ಮಾಲತೀಜೀ ತುಂಬಾ ಸಹಾಯ ಮಾಡಿದರು. ಅವರ ಚುನಾವಣೆಯಲ್ಲಿ ಮಾಡಿದ ಸೇವೆಗೆ ಪ್ರತಿಫಲ ದೊರಕಿತು.

ಬಿಡ್ಡಣ್ಣನನ್ನು ಕರೆಸಿ ರಾಜೀವಪುರದ ಗಿರಣಿಯಲ್ಲಿ ರಾಮೋಜೀಯವರ ಶಿಫಾರ್ಸಿನ ಮೇಲೆ ಬೇರೆ ಹೆಸರಲ್ಲಿ ಸೇರಿಕೊಳ್ಳಲು ಕಳಿಸಿದೆ. ಕೇಳಪ್ಪನ್ ಮತ್ತು ಬಿಡ್ಡಣ್ಣ ಒಬ್ಬರೇ ಎಂದು ಯಾರಿಗೂ ತಿಳಿಯಲಿಲ್ಲ. ಜೋಷಿಯವರ ಕೊಂಡುಕೊಳ್ಳುವ ಮರ್ಮವನ್ನೂ ತಿಳಿಸಿದೆ. ಕೇಳಪ್ಪನ್ ರೋಪಿನಿಂದ ಮುಷ್ಕರ ಹೂಡಲು ಕಾರ್ಮಿಕರನ್ನು ಹೆದರಿಸಿ ಬೆದರಿಸಿ ಆಸೆ ತೋರಿಸಿ ಎತ್ತು ಕಟ್ಟಿದ. ಲಾಯರು ಒಪ್ಪಂದವನ್ನು ಬಹಳ ಮುಂಜಾಗ್ರತೆಯಿಂದ ನಾ ಹೇಳಿದಂತೆ ಜೋಷಿಯವರ ವೈಯಕ್ತಿಕ ಹೊಣೆ ಕೂಡಿಸಿ, ಮುಷ್ಕರ – ದೊಂಬಿ – ಗಲಭೆ ಇವುಗಳ ಹೆಸರು ಕೂಡ ಎತ್ತದೆ ಬರೆಸಿದರು. ರಾಮೋಜಿಯವರು ಮತ್ತು ಲಾಯರು ಒಪ್ಪಂದದ ಈ ಅಂಶಗಳನ್ನ ಎತ್ತಿ ತೋರಿಸಿದಾಗ, ಜೋಷಿ ಒಳಜೇಬು ತೆರೆದರು. ಒಟ್ಟು 3 ಲಕ್ಷ ಗಿಟ್ಟಿತು. ಇದರಲ್ಲಿ ರಾಮೋಜಿ ಹತ್ತು ಸಾವಿರ ತನಗೆ ಸಾಕು ಎಂದರು. ಹನ್ನೆರಡು ಸಾವಿರ ಬ್ಯಾಂಕಿಗೆ ಬೆಂಬಲ ನೀಡಿದಕ್ಕಾಗಿ ಕೊಟ್ಟೆ. ಬಿಡ್ಡಣ್ಣನ ಹೆಸರಿನಲ್ಲಿ ನಂಜೀಗೆ ಐದುಸಾವಿರದ ಮನೆ ಕೊಂಡುಕೊಟ್ಟೆ. ಬಿಡ್ಡಣ್ಣನ ಖರ್ಚು ಒಂದು ಸಾವಿರ ಆಗಿತ್ತು. ನೀವು

Scanned by CamScanner

ಹೇಳಿದ ಕೆಲಸ ಮಾಡುವ ಭಾಗ್ಯ ನನ್ನದು. ಅದಕ್ಕೆ ದುಡ್ಡು ತೆಗೆದುಕೊಳ್ಳಲಾರೆ. ನನ್ನ ಜೀವನವನ್ನೇ ಹಸನು ಮಾಡಿದಿರಿ ಎಂದ ಬಿಡ್ಡಣ್ಣ. ಮೂರು ಸಾವಿರದಷ್ಟು ಚಿಲ್ಲರೆ ಖರ್ಚಾಯಿತು. ಉಳಿದ ಲಾಭ ಎರಡೂವರೆ ಲಕ್ಷ.

ಅದನ್ನು ಕೊಂಡೆನಕಪಲ್ಲಿಯ ಭೈರವನ ಗುಡಿಯ ಪೂಜಾರಪ್ಪನವರ ಕಾಲುಗಳ ಮೇಲೆ ಹಾಕಿ, ಜನರಲ್ಲಿ ಧರ್ಮಬುದ್ಧಿಯನ್ನು ಕಲಿಸಲು ವಿನಿಯೋಗಿಸಿ ಎಂದು ಹೇಳಿ, ಜಗ್ಗೋಜಿ, ಕನ್ನೋಜಿ ಮತ್ತು ಇತರ ಕುಲದ ಹಿರಿಯರ ಋಣವನ್ನು ತೀರಿಸಿದ್ದೇನೆ ಈ ವರ್ಷ ನನ್ನ ಕೈಲಾದಷ್ಟು.

ಪೂಜಾರಪ್ಪನವರ ಆಣತಿಯಂತೆ ಇದನ್ನು ಪತ್ರಿಕಾ ಪ್ರಕಟಣೆಗೆ ಕಳಿಸುತ್ತಿದ್ದೇನೆ"

ಎಂದು ಬರೆದು "ಬುದ್ಧೋಜಿ" ಅಂತ ಸಹಿ ಹಾಕಿದ.

ಟಾಮಿ ಬಂದು ಕಾಲ ಬಳಿ ಕುಳಿತು ಬಗುಳಿತು.

"ಯಾರು ?" ಎಂದ ಬುದ್ಧೋಜಿ.

"ಅಹ್ಮದ್ ಕಾಕಾ, ನೆಲಗಡಲೆಕಾಯಿ ಬೇಯಿಸಿದ್ದೀನಿ. ತಂದು ಕೊಡಲಾ?" ಎಂದ,

"ಅರ್ಧ ಗಂಟೆಯ ಮೇಲೆ ತಂದುಕೊಡು. ಈ ಲಕ್ಕೋಟೆ ಕೊಡುತ್ತೇನೆ. ಶೇಷಯ್ಯನ ಮನೆಗೆ ಕೊಟ್ಟು ಬಾ, ಅವ ಎಲ್ಲ ಪತ್ರಿಕೆಗಳಲ್ಲೂ ಪ್ರಕಟಿಸುತ್ತಾನೆ. ಈಗ ನಾನು ತುಳಸಿ ತೋಟದ ಹತ್ತಿರ ನಡೆದಾಡಲು ಹೋಗಿ, ಬರುವಾಗ ಕಾಫಿ ಕುಡಿದು ಬರ್ತೀನಿ" ಎಂದ ಬುದ್ಧೋಜಿ.

ಗುಡ್ಡದ ಪಾಳ್ಯ

ಗುಡ್ಡದ ಪಾಳ್ಯದ ಬಾವಿಗಳಲ್ಲಿ ಆದಿರು ಸಿಗಲಿ, ಬಿಡಲಿ ಬಾವಿ ತೋಡಿದ ಕೂಲಿಗಾರನಿಂದ ಹಿಡಿದು, ಒಡೆಯನವರೆಗೆ ಎಲ್ಲರಿಗೂ ಲಾಭವಂತೂ ಗಿಟ್ಟಿತು

ಪೋಲೀಸ್ ಠಾಣೆಯಲ್ಲಿ ಜಾಗಟೆಯ ಮೇಲೆ ಪ್ಯಾದೆಯು ನಾಲ್ಕು ಸಾರಿ ಬಡಿದ. ನಿಶಿ ರಾತ್ರಿಯ ಸದ್ದುಗದ್ದಲವಿಲ್ಲದ ಆ ಸಮಯದಲ್ಲಿ ಜಾಗಟೆ ಬಡಿದ ಧ್ವನಿಯು ಕುಂಬಾರ ಕೇರಿಯ ತನಕ ಚೆನ್ನಾಗಿ ಕೇಳಿಸಿತು; ನಾಲ್ಕು ತಾಸು ಬಡಿದುದನ್ನು ಕೇಳಿ ಕೇರಿಯ ಗುಡಿಸಲೊಂದರಿಂದ ಹೆಣ್ಣೊಂದು ಹಾಸಿಗೆಯಿಂದ ಎದ್ದು, ಬಟ್ಟೆಯ ಗಂಟೊಂದನ್ನು ಎತ್ತಿಕೊಂಡು, ಸದ್ದುಗದ್ದಲ ಮಾಡದೆ ಹೊರಹೊರಟಿತು. ಗುಡಿಸಲ ತಡಿಕೆಯನ್ನು ತಿರುಗಿ ಮುಚ್ಚುವಾಗ ಹಾಸಿಗೆಯ ಮೇಲೆ ಗೊರಕೆ ಹೊಡೆಯುತ್ತ ಮಲಗಿದ್ದವನ ಕಡೆ ನೋಡಿ,

"ನಿನ್ನ ನನ್ನ ಋಣ ಇವತ್ತು ತೀರಿಹೋಯಿತು. ಬೇಕಾದ ಹಾಂಗ ಇದ್ದುಬಿಡೊ ಇನ್ನುಮ್ಯಾಗ ಎಷ್ಟಾರೂ ಕುಡುಕೋ, ಎಲ್ಲಾರ ಬಿದ್ದುಕೊ" ಎಂದು ಹೇಳಿ ಕೇರಿಯಾಚಿನ ರಸ್ತೆಯಲ್ಲಿ ಬಿರಬಿರನೆ ನಡೆದು ರೈಲ್ ನಿಲ್ದಾಣದ ಹತ್ತಿರಕ್ಕೆ ಹೋದಳು.

ರೈಲ್ ನಿಲ್ದಾಣದಲ್ಲಿ ಆ ವೇಳೆಗೆ ಆಗಲೇ ಕಾದು ನಿಂತಿದ್ದವ ಇವಳನ್ನು ಕಂಡು "ಬರ್ತೀಯೋ, ಇಲ್ಲವೋ ಅಂತ ಅನುಮಾನ ಪಡ್ತಿದ್ದೆ ಲಿಂಗಿ! ಕಡೆಗೂ ಮನಸ್ಸು ಮಾಡಿ ಬಂದೆಯಲ್ಲಾ, ಇನ್ನು ಅರ್ಧ ಗಂಟೆಯಲ್ಲಿ ಷಹರಿನ ರೈಲು ಬರ್ತದೆ. ಷಹರಿಗೆ ಹೋಗಿ ಹೊಸ ಬದುಕು ಶುರು ಮಾಡೋಣ" ಎಂದು ಗೆಲುವಿನಿಂದ ಹೇಳಿದ.

Scanned by CamScanner

"ಮೂರು ವರುಷದಿಂದ ನನಗೂ ಬೇಸರ ಬಂದಿತ್ತು ಕಾಳ. ಕುಡುಕನ ಜತೆ ಬಾಳೋದು ಬಲು ಕಷ್ಟ. ಆದರೂ ಅದೂ ಒಂದು ತರಹ ಬದುಕು ಅನ್ನು. ಈಗೇನೋ ನಿನ್ನ ಮಾತು ಕೇಳಿಕೊಂಡು ನಿನ್ನ ಕೂಡ ಬಂದು ಬಿಟ್ಟಿದ್ದೀನಿ. ನಿನ್ನನ್ನೇ ನಂಬಿ ಬಂದುಬಿಟ್ಟಿದ್ದೀನಿ. ಇಷ್ಟೂ ದಿವಸ ನೀನು ಹೇಳಿದ್ದು ನಿಜವಾಗ್ತೈತೋ ಹೇಗೋ ನೋಡ್ತೀನಿ, ಪರೀಕ್ಷೆ ಮಾಡ್ತೀನಿ ನನ್ನ ಹಣೇಬರಹಾನ" ಎಂದಳು ಲಿಂಗಿ.

"ಎಲ್ಲಾ ವ್ಯವಸ್ಥೇನೂ ಮಾಡೀನಿ ಲಿಂಗಿ. ಏನೂ ಕಾಳಜಿ ಮಾಡಬೇಡ. ಷಹರಿಗೆ ಈ ಸಂಜೆ ಮುಂದೆ ರೈಲು ತಲುಪುತ್ತೆ. ರಾತ್ರಿ ಮುಸಾಫರಖಾನೇಲಿ ಉಳಕೊಳ್ಳೋಣ. ನಾಳೆ ಮುಂಜಾನೆ ಷಹರಿನಿಂದ ಹೊರಟು ಗುಡ್ಡದ ಪಾಳ್ಯಕ್ಕೆ ಹೋಗೋದು. ಮೊದಲೇ ಹೋಗಿ ಮೇಸ್ತ್ರಿಯ ಹತ್ತಿರ ಮಾತ ನಾಡಿಕೊಂಡು ಬಂದೀನಿ. ಇಬ್ಬರಿಗೂ ಅಲ್ಲಿ ಕೂಲಿ ಕೆಲಸ ಸಿಗ್ತದೆ. ಹತ್ತಿಪ್ಪತ್ತು ಗುಡಿಸಲುಗಳನ್ನೂ ಆಗಲೇ ಹಾಕಿದ್ದರು ಅಲ್ಲಿ. ಅಲ್ಲೇ ನಾವೂ ಗುಡಿಸಲು ಕಟ್ಟಿಕೋಬಹುದು. ಕೈ ತುಂಬಾ ಕೂಲಿ ಕೊಡ್ತಾರೆ. ನೆಮ್ಮದಿಯಾಗಿರಬಹುದು" ಎಂದ ಕಾಳ.

ಅಷ್ಟು ಹೊತ್ತಿಗೆ ರೈಲು ಬಂದು ನಿಲ್ದಾಣದಲ್ಲಿ ನಿಂತಿತು. ಇವರಿಬ್ಬರೇ ಆ ನಿಲ್ದಾಣದಲ್ಲಿ ರೈಲು ಹತ್ತಿದವರು. ಕುಗ್ರಾಮದ ಆ ರೈಲು ನಿಲ್ದಾಣದಲ್ಲಿ ಎಂದೂ ಜನಸಂದಣಿ ಇರುವುದಿಲ್ಲ.

ಹಾಲು ಹೊತ್ತು ಬಂದಿದ್ದವರು ತುಂಬಿದ್ದ ಗಾಡಿಯಲ್ಲಿ ಹೇಗೋ ಸ್ಥಳ ಮಾಡಿಕೊಂಡು ಕಾಳ, ಲಿಂಗಿ ಇಬ್ಬರೂ ಕುಳಿತುಕೊಂಡರು. ಸಣ್ಣ ಪಟ್ಟಣದಲ್ಲಿ ರೈಲು ನಿಂತಾಗ, ಹಾಲು ಮಾರುವವರೆಲ್ಲಾ ಇಳಿದರು. ರೈಲಿನಲ್ಲಿ ತುಸು ಜಾಗ ದೊರಕಿತು. ತಾನು ತಂದಿದ್ದ ಬುತ್ತಿಯನ್ನು ಕಾಳ ಆಗ ಬಿಚ್ಚಿ, ಲಿಂಗಿಗೆ ಹಂಚಿಕೊಟ್ಟು ತಾನೂ ತಿಂದ. ಮನಸ್ಸಿನ ತಳಮಳದಿಂದ ಹಿಂದಿನ ರಾತ್ರಿ ಉಣ್ಣದೆ ಇದ್ದ, ಬೈಸಾರೆ ಏನೂ ತಿನ್ನದೆ ಹೊರಗೆ ಬಂದಿದ್ದ ಲಿಂಗಿಗೆ ಆ ರೊಟ್ಟಿ ಬಲು ರುಚಿಯಾಗಿದ್ದಂತೇ ಕಾಣಿಸಿತು.

"ನೀನೇ ಮಾಡಿದ್ದಾ ಕಾಳ" ಎಂದು ಕೇಳಿದಳು.

"ನಾನು ಮಾಡದೆ ಇನ್ನು ಯಾರು ಮಾಡ್ತಾರೆ. ತಬ್ಬಲಿಯಾಗಿ ಬೆಳೆದ ಮೇಲೆ ಇದನ್ನು ಕಲೀದಿದ್ದರೆ ಹ್ಯಾಂಗ. ನಿಂಗೂ ಹೀಗೆ ರೊಟ್ಟಿ ಮಾಡೋದನ್ನು ಕಲಿಸ್ತೀನಿ" ಎಂದ ಕಾಳ.

"ಗುಡ್ಡದ ಪಾಳ್ಯದಲ್ಲಿ ಯಾವ ಕೆಲಸ ಸಿಕ್ಕಿದೆ? ಅಲ್ಲಿ ಏನು ಕಾಂಗಾರಿ ನಡೀತಾ ಇದೆ" ಎಂದು ಲಿಂಗಿ ಕೇಳಿದಳು.

"ಹೋದ ಬಾರಿ ಷಹರಿಗೆ ಬಂದಿದ್ದಾಗ ಗುಡ್ಡದಪಾಳ್ಯದಲ್ಲಿ ಕೆಲಸ ಐತೆ, ಬೇಕಾರ ಹೋಗಿ ಕೇಳು ಅಂತ ಹೇಳಿದರು. ಷಹರಿನಿಂದ ಗುಡ್ಡದಪಾಳ್ಯ ಆರು ಮೈಲಿ ದೂರ ಐತೆ, ಅಲ್ಲಿಗೆ ಹೋದೆ. ಮೇಸ್ತ್ರಿಯನ್ನು ವಿಚಾರಿಸಿದೆ. "ಬಾವಿ ಅಗೆಯೋ ಕೆಲಸ ಇಲ್ಲಿ. ಇಲ್ಲೊಂದು, ಅಲ್ಲೊಂದು ಹೀಗೆ ಆರು ಬಾವಿ ತೋಡಬೇಕು" ಎಂದ. "ಹೆಣತೀನ ಕರಕೊಂಡು ಬರ್ತೀನಿ, ನಮ್ಮಿಬ್ಬರಿಗೂ ಕೂಲಿ ಕೆಲಸ ಸಿಕ್ತದಾ" ಎಂದು ಕೇಳಿದೆ. "ಟೊಂಕ ಬಗ್ಗಿಸಿ ದುಡಿದರೆ ಕೆಲಸ ಕೊಡ್ತೀನಿ. ಆಳುಗಳು ಬೇಕು. ಆದರೆ ಷಹರಿನಿಂದ ಯಾವ ಕೂಲಿಗಳೂ ಇಲ್ಲಿಗೆ ಬರುಲ್ಲ. ಬೆಳಗಾಗ ಗುಡ್ಡ ಹತ್ತಿ ಇಷ್ಟು ದೂರ ಯಾರು ಬರ್ತಾರೆ ಅಂತ ಅಂತಾರೆ. ಅದಕ್ಕೇ ಕೆಲಸ ಸಿಕ್ತದೆ ಅಂದೆ. ಆದರೆ ಕೆಲಸಕ್ಕೆ ಸೇರಿದ ಮೇಲೆ ಇಲ್ಲೇ ಇದ್ದು ಮುಗಿಯೋತನಕ ಇರ್ತೀನಿ ಅಂದರೆ ಕೆಲಸ ಕೊಡ್ತೀನಿ. ಅರ್ಧದಲ್ಲಿ ಬೇಜಾರಾಯಿತು ಅಥವಾ ಬೇರೆ ಕೆಲಸ ಸಿಕ್ಕಿತು ಅಂತ ಹೊರಟು ಹೋದರೆ, ಅಟ್ಟಿಸಿಕೊಂಡು ಬಂದು ಕೈಕಾಲು ಮುರೀತೀನಿ" ಅಂದ. "ಹಂಗಾರ ಹಳ್ಳಿಗೆ ಹೋಗಿ ಹೆಂಡ್ರನ್ನ ಕರಕೊಂಡು ವಾರದಲ್ಲಿ ಬರ್ತೀನಿ" ಎಂದು ಹೇಳಿ ಬಂದೆ. "ಯಾರೂ ಬರದೇ ಇರೋ ಕಡೆ ಕೆಲಸ ಮಾಡಿ ಕೊಂಡಿದ್ದರೆ, ಯಾರ ಕಣ್ಣಿಗೂ ಬೀಳುಲ್ಲವಲ್ಲ. ನಮ್ಮ ಪಾಡಿಗೆ ನಾವು ಸುಖವಾಗಿ ಇರಬಹುದಲ್ಲ" ಎಂದ ಕಾಳ.

"ಗುಡ್ಡದ ಮ್ಯಾಗ ಯಾರಾರು ಬಾವಿ ತೋಡ್ತಾರಾ? ಹಾಂಗೆ ತೋಡಿದರೆ ಅಲ್ಲಿ ನೀರು ಸಿಗ್ತದಾ? ಬಾವಿ ತೋಡಬೇಕಾದರೆ ಹಳ್ಳದ ಕಡಿ ತೋಡ ಬೇಡವಾ?" ಎಂದು ಕುತೂಹಲದಿಂದ ಲಿಂಗಿ ಕೇಳಿದಳು.

"ನಂಗೂ ಹಂಗೇ ಅನ್ನಿಸಿತು. ಮೇಸ್ತ್ರೀನ ಕೇಳಿದೆ. ಅವ ಅಂದ "ಇದು ನೀರು ಬರೋ ಬಾವಿ ಅಲ್ಲ. ಗಣಿ ಬಾವಿ. ಅಗೆದು ಅಲ್ಲಿ ಎಷ್ಟು ಅದಿರು ಸಿಕ್ತದೆ, ಯಾವ ಮಟ್ಟದಲ್ಲಿ ಸಿಕ್ತದೆ, ಅದೆಲ್ಲಾ ಕಂಡುಹಿಡಿಯಕ್ಕೆ" ಎಂದು.

"ಗಣಿ ಬಾವಿ ! ಹಂಗಂದರೇನು?" ಎಂದಳು ಲಿಂಗಿ.

"ನಂಗೂ ಚಂದಾಗಿ ಗೊತ್ತಿಲ್ಲ ಲಿಂಗಿ, ಹೆಂಗೂ ನಾಳೆ ಅಲ್ಲಿಗೆ ಹೋಗ್ತೀವಲ್ಲ, ನೀನೇ ನೋಡುವೆಯಂತೆ. ಮೇಸ್ತ್ರಿಯೂ ಒಳ್ಳೆಯವನ ಹಾಗೆ ಕಾಣಿ

Scanned by CamScanner

ಸಿದ. ಕಣಿವೆ ಕೆಳಗಿನವ. ಖಾಲಿ ಇದ್ದರೆ ಗುಡಿಸಲು ಕೊಡ್ತೀನಿ. ಇಲ್ಲದೆ ಇದ್ದರೆ ಗುಡಿಸಲು ಹಾಕಿಸಿ ಕೊಡ್ತೀನಿ ಎಂದು ಹೇಳಿದ" ಎಂದ ಕಾಳ.

* * *

ಷಹರಿನ ಬಾಳೆ ಸಾಹುಕಾರರ ಮನೆಯ ಮುಂದೆ ಮೋಟಾರಿನ ಓಡಾಟ ಹೆಚ್ಚಾಗಿತ್ತು. ಪ್ರಸಿದ್ಧರಾದ ಮೂರು ನಾಲ್ಕು ಜನ ಡಾಕ್ಟರುಗಳು ಆಗಿಂದಾಗ್ಗೆ ಸಾಹುಕಾರರ ಮನೆಗೆ ಬಂದು ಹೋಗುತ್ತಿದ್ದರು. ಒಂದು ವಾರದಿಂದ ಬಾಳೆ ಸಾಹುಕಾರರು ತೋಟಕ್ಕಾಗಲೀ, ಮಂಡಿಗಾಗಲೀ ಹೋಗುತ್ತಿಲ್ಲ. ಅವರ ತಾಯಿ, ಎಪ್ಪತ್ತು ವರ್ಷದ ಆಕೆ, ಕಾಯಿಲೆ ಬಿದ್ದಂದಿನಿಂದ ಸಾಹುಕಾರರು ಆಕೆಯ ಶುಶ್ರೂಷೆಯಲ್ಲೇ ನಿರತರಾಗಿದ್ದರು.

"ಮೂರು ವರ್ಷದ ಹುಡುಗನಾಗಿದ್ದಾಗ ಅಪ್ಪ ತೀರಿಕೊಂಡರು. ಅವತ್ತಿನಿಂದ ಅಮ್ಮನೇ ಜಮೀನು ಉಸ್ತುವಾರಿ, ನನ್ನ ಪೋಷಣೆ, ಎಲ್ಲವನ್ನೂ ನಿಭಾಯಿಸಿಕೊಂಡು ಬಂದಳು. ಪ್ರಾಯಕ್ಕೆ ಬಂದ ಮೇಲೆ ಕೂಡ, ಆಕೆಯ ಸಲಹೆಯನ್ನು ಕೇಳದೇ ಏನೊಂದು ಕೆಲಸವನ್ನೂ ಮಾಡುತ್ತಿರಲಿಲ್ಲ ನಾನು. ಇಂತಹ ಅಮ್ಮ ಯಾರಿಗೂ ಸಿಕ್ಕಿರಲಾರಳು ಡಾಕ್ಟರೇ ! ಏನಾದರೂ ಮಾಡಿ ಆಕೆಯ ಪ್ರಾಣ ಉಳಿಸಿ. ಎಷ್ಟು ಖರ್ಚಾದರೂ ಸಂತೋಷದಿಂದ ಮಾಡ್ತೀನಿ" ಎಂದು ಡಾಕ್ಟರ ಹತ್ತಿರ ಸಾಹುಕಾರರು ಅಳುತ್ತಾ ಹೇಳಿಕೊಂಡರು.

ಆ ಮುದುಕಿಗೆ ಸನ್ನಿ ಬಂದಿತ್ತು. ಕರಪಲ ಶುರುವಾಗಿತ್ತು. ಸಹೋದ್ಯೋಗಿಗಳ ಸಲಹೆಗಳೆಲ್ಲವನ್ನೂ ಡಾಕ್ಟರು ಗಮನಕ್ಕೆ ತಂದುಕೊಂಡು ಚಿಕಿತ್ಸೆ ಮಾಡುತ್ತಿದ್ದರು. ಆದರೂ ರೋಗದ ಉಲ್ಬಣ ಚಿಹ್ನೆಗಳನ್ನು ಕಂಡು ನಿರಾಸೆಯಿಂದ ತವಕಿಸುತ್ತಿದ್ದರು. ಬಾಳೆ ಸಾಹುಕಾರರಿಗೆ ಸಮಾಧಾನ ಹೇಳಲು ಕೂಡ ಉತ್ಸಾಹ ಅವರಲ್ಲಿರಲಿಲ್ಲ.

ಒಂದೆರಡು ದಿನಗಳು ಈ ರೀತಿ ಕಳೆದುವು. ಸನ್ನಿ, ಕರಪಲ. ಆದರೆ ಶುಕ್ರವಾರ ಬೆಳಿಗ್ಗೆ ಹಠಾತ್ತನೆ ಮುದುಕಿಯ ಸ್ಥಿತಿ ಉತ್ತಮಗೊಂಡಿತು. ಸನ್ನಿ ಇಳಿಯಿತು. ಎದುರಿದ್ದವರ ಗುರ್ತು ಹಿಡಿದು ಮಾತನಾಡಿಸಲಾರಂಭಿಸಿದಳು. ಡಾಕ್ಟರು ಬಂದಾಗ "ಎಷ್ಟು ದಿನಗಳಿಂದ ಕಷ್ಟ ಪಡುತ್ತಿದ್ದೀರಪ್ಪಾ ! ಬೀಳೋ ಮರಕ್ಕೆ ಇಷ್ಟೆಲ್ಲಾ ಆರೈಕೆ ವ್ಯರ್ಥ ಅಲ್ಲವೇ?" ಎಂದು ಹೇಳಿ ನಕ್ಕಳು. ಡಾಕ್ಟರೂ, ಬಾಳೆ ಸಾಹುಕಾರರು ಆ ಬೆಳಿಗ್ಗೆ ಒಬ್ಬರನ್ನೊಬ್ಬರು ಪರಸ್ಪರ ಅಭಿನಂದಿಸಿಕೊಂಡರು. ಶುಕ್ರವಾರ ಮಧ್ಯಾಹ್ನ ಹನ್ನೆರಡರ ಸಮಯ. ಕಿತ್ತಳೆ

ಹಣ್ಣಿನ ರಸವನ್ನು ಸಾಹುಕಾರರು ತಾಯಿಗೆ ಕುಡಿಸಿದರು. ಕುಡಿದ ನಂತರ ಮುದುಕಿಯು ಮಗನ ಕೈಹಿಡಿದುಕೊಂಡು "ಮಗು ಎಂಟು ಹತ್ತು ದಿನಗಳಿಂದ ತುಂಬಾ ಶ್ರಮ ತೆಗೆದುಕೊಂಡು ನನ್ನ ಸೇವೆ ಮಾಡಿದೆ. ನೀನು ಸೇವೆ ಮಾಡೋದು ಹಾಗಿರಲಿ, ಮನೆಗೆ ಬಂದ ನನ್ನ ಸೊಸೆಯೂ ಮನೆಮಗಳಂತೆ ಆದರದಿಂದ ಸೇವೆಮಾಡಿದಳು. ಈಗಿನ ಕಾಲಕ್ಕೆ ನಾನೇ ಪುಣ್ಯವಂತೆ. ನೀವು ಸುಖವಾಗಿರೋವಾಗಲೇ ಕಣ್ಣುಮುಚ್ಚಿಕೊಳ್ಳಬೇಕು ಎಂಬ ಆಸೆ. ಭಗವಂತ ಹೇಗೆ ನಡೆಸಿದರೆ ಹಾಗೆ ಆಗಲಿ. ಆದರೆ ಒಂದು ಮಾತು ನಿನಗೆ ಹೇಳಬೇಕು. ನಿಮ್ಮ ತಂದೆ ಹೆಸರಿನಲ್ಲಿ ಯಾವುದಾದರೂ ಒಂದು ಶಾಶ್ವತವಾದ ದಾನ ಮಾಡು, ತಬ್ಬಲಿಗಳಿಗೆ ಸಹಾಯವಾಗುವಂತಹ ವ್ಯವಸ್ಥೆ ಮಾಡು. ನಿನ್ನ ಹೆಂಡತಿಯೇ ಈ ಸಲಹೆಯನ್ನು ನನ್ನೆದುರಿಗೆ ಕೆಲವು ತಿಂಗಳ ಹಿಂದೆ ಮಾಡಿದ್ದಳು. ಇವತ್ತು, ನಾಳೆ ಅಂತ ಮುಂದಕ್ಕೆ ಹಾಕ್ತಾ ಇದ್ದೆ. ಅನಾಥಾಲಯವೇ, ಶಾಲೆಯೋ, ಮಕ್ಕಳ ಆಸ್ಪತ್ರೆಯೋ, ವಿದ್ಯಾರ್ಥಿಮಂದಿರವೇ ಎಂದು ಯೋಚನೆ ಮಾಡ್ತಾ ಇದ್ದೆ. ನಿರ್ಧಾರಕ್ಕೆ ಬರದೆ ಇದ್ದುದರಿಂದ ನಿನಗೆ ಹೇಳಲಿಲ್ಲ. ಈಗ ನಿನ್ನ ನಿರ್ಧಾರಕ್ಕೆ ಬಿಟ್ಟುಬಿಟ್ಟಿದೀನಿ" ಎಂದೂ ಹೇಳಿದರು.

"ಖಂಡಿತವಾಗಿ ಮಾಡ್ತೀನಮ್ಮಾ. ನಿನ್ನ ಸೊಸೆಯನ್ನು ಕೇಳಿ ಯಾವ ರೀತಿ ದಾನ ಮಾಡಬೇಕು ಎಂದು ನಿರ್ಣಯಿಸಿ ಮಾಡ್ತೀನಮ್ಮಾ. ನಿನ್ನ ಕಣ್ಣ ಎದುರಿಗೇ ಮಾಡ್ತೀನಿ" ಎಂದು ಬಾಳೆ ಸಾಹುಕಾರರು ಎದೆಯಾಳದಿಂದ ನುಡಿದರು.

* * *

"ನಾಳೆ ಬೆಳಿಗ್ಗೆ ಎಂಟು ಗಂಟೆ ಹೊತ್ತಿಗೆಲ್ಲಾ ಅಲ್ಲಿರಬೇಕು. ಅಂದರೆ ಏಳು ಗಂಟೆ ಹೊತ್ತಿಗೆಲ್ಲಾ ಇಲ್ಲಿಂದ ನಾವಿಬ್ಬರೂ ಹೊರಡಬೇಕು. ತಿಳೀತೇನೆ? ಬೆಳಗಿನ ಝಾಮ ಏದಕ್ಕೆದ್ದು, ಪೂಜಾ ಸಾಮಗ್ರಿಗಳನ್ನೆಲ್ಲಾ ಸಿದ್ಧ ಮಾಡು. ಸಾಹುಕಾರರ ಮೋಟಾರು ಏಳಕ್ಕೆ ಬರುತ್ತಂತೆ. ಅದರಲ್ಲಿ ಸಾಮಾನೆಲ್ಲವನ್ನು ಇಟ್ಟುಕೊಂಡು ದಂಪತಿಗಳು ನಾವಿಬ್ಬರೂ ಹೋಗಬೇಕು. ಎರಡು ವರ್ಷಗಳ ಹಿಂದೆ ಸಾಹುಕಾರರ ಮನೆಯಲ್ಲಿ ಗೋದಾನ, ಭೂದಾನ ಎಲ್ಲ ಮಾಡಿದರು. ಆಗ ನಿನಗೆ ಹಸಿರು ಜರತಾರಿ ಸೀರೇನ ದಾನ ಕೊಡಲಿಲ್ಲವೇ? ಅದನ್ನೇ ಉಟ್ಟುಕೋ. "ಇದೇ ತರಹಾ ಸೀರೆಯನ್ನೇ ಅಮ್ಮಾ ಉಡುತಾ ಇದ್ದರು.

"ಇದನ್ನು ಕಂಡರೆ ಅಮ್ಮನಿಗೆ ತುಂಬಾ ಮೆಚ್ಚುಗೆ" ಅಂತ ಸಾಹುಕಾರರು ಹೇಳಲಿಲ್ಲವೇ ಆಗ. ಇವತ್ತು ಅದೇ ಸೀರೆ ನೀನುಟ್ಟುಕೊಂಡು ಹೋದರೆ ಅಮ್ಮನ ಜ್ಞಾಪಕ ನಮಗೂ ಇದೆ ಅಂತ ಸಾಹುಕಾರರಿಗೆ ಮನದಟ್ಟಾದರೆ, ದಕ್ಷಿಣೆಯೂ ತಥಾ ರೀತಿ ಹೆಚ್ಚಾಗಬಹುದು" ಎಂದು ರಾಮಾಶಾಸ್ತ್ರಿಗಳು ತಮ್ಮ ಹೆಂಡತಿಗೆ ಶನಿವಾರ ರಾತ್ರಿ ಉಂಡು ಮಲಗುವ ಮುಂಚೆ ಹೇಳಿದರು.

"ಅದೇ ಸೀರೆಯನ್ನು ಮಡಿಗೆ ಹಾಕಿದ್ದೇನೆ. ನನಗೂ ನೀವು ಹೇಳಿದ ಹಾಗೇ ಅನ್ನಿಸಿತು. ತಾಯಿ ಮೇಲೆ ಅದೇನು ಮಮತೆ ಅಂತೀನಿ, ಬಾಳೆ ಸಾಹುಕಾರರಿಗೆ. ತಾಯಿಯ ಹೆಸರಿನಲ್ಲಿ ಮಕ್ಕಳ ಆಸ್ಪತ್ರೆ ಕಟ್ಟಿಸಲು ಮೂರು ಲಕ್ಷ ರೂಪಾಯಿ ಕೊಟ್ಟಿದ್ದಾರಂತಲ್ಲ, ಹೌದೇ ಅಂದ್ರೆ?" ಎಂದು ಆಕೆ ಕೇಳಿದಳು.

"ತಾಯಿಯ ಶ್ರಾದ್ಧಾದಿ ಕರ್ಮಗಳಿಗೆ ಇಪ್ಪತ್ತು ಸಾವಿರ ರೂಪಾಯಿ ಖರ್ಚು ಮಾಡಿದ ಆ ಪುಣ್ಯಾತ್ಮ. ಆಕೆ ಹೆಸರಿನಲ್ಲಿ ಆಸ್ಪತ್ರೆ ಕಟ್ಟಿಸಲು ಮೂರು ಲಕ್ಷ ಕೊಡೋದು ಏನು ಹೆಚ್ಚು. ದುಡ್ಡು ಇರೋದು ಹೆಚ್ಚಲ್ಲ ; ವಿತರಣೆಯಾಗಿ ಖರ್ಚು ಮಾಡೋದು ಹೆಚ್ಚು. ಅದಕ್ಕೇ ನೋಡು, ಮುಖ್ಯಮಂತ್ರಿಗಳು ಸರಕಾರದಿಂದ ಗುಡ್ಡದ ಪಾಳ್ಯವನ್ನೇ ಆಸ್ಪತ್ರೆಗಾಗಿ ಬಿಟ್ಟುಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ಇಂತಹ ಧರ್ಮಿಷ್ಟರು ಇದ್ದಾರೆ. ಸಾರ್ವಜನಿಕ ಸೇವೆಗಾಗಿ ಇಷ್ಟೆಲ್ಲಾ ದಾನ ಧರ್ಮ ಮಾಡ್ತಾರೆ. ನಮ್ಮ ಚುನಾವಣೆಗಳಿಗೂ ಸಾಕಷ್ಟು ಬೆಂಬಲ ನೀಡುತ್ತಾರೆ – ಎಂದು ಪ್ರಧಾನಿಗಳಿಗೆ ತೋರಿಸಿಕೊಟ್ಟರೆ ಅವರೂ ಹಿಗ್ಗುತ್ತಾರೆ. ಆದ್ದರಿಂದಲೇ ಶಂಕುಸ್ಥಾಪನೆಗೆ ಪ್ರಧಾನಿಯವರೇ ಖುದ್ದಾಗಿ ದಿಳ್ಳಿಯಿಂದ ಬರುತ್ತಾರೆ" ಎಂದು ರಾಮಾಶಾಸ್ತ್ರಿಗಳು ಜಂಭದಿಂದ ಹೇಳಿದರು.

"ಹುಟ್ಟಿದರೆ ಅಂತಹ ಮಗ ಹುಟ್ಟಬೇಕು" ಎಂದು ಉದ್ಗಾರ ತೆಗೆದಳು ಆಕೆ.

"ಅದೆಲ್ಲ ನಮ್ಮ ಕೈಲಿದೆಯೇನೇ? ನಮ್ಮ ಕೈಲಾದ್ದು ನಾವು ಮಾಡೋಣ ಪೂರ್ವಜನ್ಮದ ಪುಣ್ಯ ಹೇಗಿದೆಯೋ ಹಾಗೆ ನಡೆಯುತ್ತೆ" ಎಂದು ಪ್ರಕೃತ ವೇದಾಂತವನ್ನು ಹೇಳುತ್ತಾ ರಾಮಾಶಾಸ್ತ್ರಿಗಳು ದಿಂಬಿಗೆ ತಲೆಯನ್ನು ಕೊಟ್ಟರು.

"ಬೇಗ ಏಳಬೇಕು ಅಂದ್ರೆ" ಎಂದಳು ಹೆಂಡತಿ.

* * *

ಬಾಣಸಂದ್ರದ ಬಳಿ ಇರುವ ಮ್ಯಾಂಗನೀ ಹೋಬಳಿಯಲ್ಲಿ, ಸಂಜೆ ಆರು ಗಂಟೆಯ ಹೊತ್ತಿಗೆ ಲಾರಿಗಳ ತುಂಬಾ ಅದಿರನ್ನು ಎಂದಿನಂತೆ ತುಂಬಲಾಯಿತು. ಲಾರಿ ಮೇಸ್ತ್ರಿ ಬುಡಾಉದ್ದೀನ್ ಡ್ರೈವರುಗಳಿಗೆ ಕಡೆ ನಿಮಿಷದ ಆಣತಿಗಳನ್ನು ಕೊಡುತ್ತಿದ್ದ.

"ರಾತ್ರಿ ಎಂಟುಗಂಟೆ ಹೊತ್ತಿಗೆ ಇಂತಹ ಊರಿಗೆ ಹೋಗಿ ಅಲ್ಲಿ ಊಟ ಮಾಡಿ, ಒಂಬತ್ತರ ಹೊತ್ತಿಗೆ ಇಂತಹ ರಸ್ತೆಯಲ್ಲಿ ಇರುತ್ತೀರಿ, ಅಲ್ಲಿ ಪೋಲೀಸ್ ಠಾಣ್ಯ ಇದೆ. ಅಲ್ಲಿ ಈ ಕಾಗದ ಪತ್ರ, ರಹದಾರಿ ಚೀಟಿ ಎಲ್ಲವನ್ನೂ ತೋರಿಸಿ. ಮಾಮೂಲು ಕೊಟ್ಟು ನಂತರ ನೇರ ಇಂತಹ ಊರಿಗೆ ಬೆಳಗಿನ ಝಾವಕ್ಕೆ ತಲುಪುತ್ತೀರಿ, ಅಲ್ಲಿ ಅಜೀಜ್‌ಖಾನ್ ಭೇಟಿಯಾಗುತ್ತಾನೆ, ಮುಂದಿನ ಕಾರ್ಯಕ್ರಮವನ್ನು ಅವ ತಿಳಿಸ್ತಾನೆ" ಎಂದು.

ಎಲ್ಲ ಲಾರಿಗಳೂ ಒಂದರ ಹಿಂದೆ ಒಂದು ಹೊರಟವು. ಕಡೆಯ ಮೂರು ಲಾರಿಗಳು ಇನ್ನೇನು ಹೊರಡಬೇಕು! ಅಷ್ಟರಲ್ಲೇ ಬುಡಾಉದ್ದೀನ್ ಅವನ್ನು ತಡೆದ.

"ಆ ಲಾರಿಗಳ ಹಿಂದೆ ನೀವು ಹೋಗಬೇಕಾಗಿಲ್ಲ. ನಾನೂ ನಿಮ್ಮ ಜತೆ ಬರ್ತೀನಿ. ದಾರಿ ತೋರಿಸ್ತೀನಿ" ಎಂದು ಹೇಳಿದ.

ಮೂರು ಮೂರು ಹೆಚ್ಚು ಕೂಲಿಗಳನ್ನು ಮಮ್ಮಟಿ ಸಹಿತ, ಒಂದೊಂದು ಲಾರಿಯಲ್ಲೂ ಕೂರಿಸಿದ. ತಲೆಯ ತುಂಬಾ ಮಫ್ಲರ್ ಕಟ್ಟಿಕೊಂಡ. ಮುಂದಿದ್ದ ಲಾರಿಯಲ್ಲಿ ಡ್ರೈವರನ ಪಕ್ಕ ಕುಳಿತು, "ರೈಟ್" ಅಂದ.

ಮೂರು ಲಾರಿಗಳು ಒಂದರ ಹಿಂದೆ ಒಂದು ಗಡಗಡ ಶಬ್ದ ಮಾಡುತ್ತಾ ನಡೆದವು.

* * *

ಮಹೇಂದ್ರ ಭವನದಲ್ಲಿ ದೊಡ್ಡ ಸತ್ಕಾರ ಕೂಟ ಏರ್ಪಾಡಾಗಿತ್ತು. ಅಮೆರಿಕಾದಿಂದ ಬಂದಿದ್ದ ಗಣಿ ಇಂಜಿನಿಯರುಗಳ ಗೌರವಾರ್ಥ ಸರ್ದಾರ್ ಜುಗ್ಗಾಲ್ ಅವರು ಭವ್ಯ ಭೋಜನಕೂಟವನ್ನು ಏರ್ಪಡಿಸಿದ್ದರು. ಸರಕಾರದ ಹಿರಿಯ ಅಧಿಕಾರಿಗಳು, ಗಣಿ ಇಲಾಖೆಯ ಮುಖ್ಯಸ್ಥರು, ಮೂರು ನಾಲ್ಕು ಸಚಿವರು, ಎಲ್ಲರೂ ಅತಿಥಿಗಳಾಗಿ ಆಗಮಿಸಿದ್ದರು.

ಎತ್ತರದ ಕಣ್ ಸೆಳೆಯುವ ವ್ಯಕ್ತಿ ಸರ್ದಾರ್ ಜುಗ್ಗಾಲ್ ಅವರು. ತಿಳಿ ರೋಜಾ ಬಣ್ಣದ ಕುಚ್ಚಿನ ರುಮಾಲು. ಶಿಸ್ತಿನಿಂದ ಬೆಳೆಸಿದ್ದ ಚೆಂದ ಕಾಣುವ

Scanned by CamScanner

ಗಡ್ಡ ಮೀಸೆ, ಉದ್ದನೆ ರೇಷ್ಮೆ ಅಂಗಿ, ತಿಳಿ ಬಿಳಿಯ ಸುರುವಾಲು, ಕುಸುರಿ ಕೆಲಸದ ಪಾಪಾಸು, ಬೆರಳ ಮೇಲೆ ಭರ್ಜರಿ ಕೆಂಪಿನ ಉಂಗುರ : ಇವೆಲ್ಲವೂ ಸರ್ದಾರ್ ಜುಗ್ಗಾಲ್ ಅವರು ಶ್ರೀಮಂತರು ಎಂಬುದನ್ನೂ, ಸುಸಂಸ್ಕೃತರು ಎಂಬುದನ್ನೂ ಡಿಖಾವಾಗಿ ಸೂಚಿಸುತ್ತಿದ್ದುವು. ಸಾಕ್ಷಾತ್ ಅವರೇ ಹೊರ ಬಾಗಿಲಲ್ಲಿ ನಿಂತು ಬಂದ ಅತಿಥಿಗಳನ್ನು ಬಲು ಆದರದಿಂದ ಸ್ವಾಗತಿಸಿ, ಬೈಠಕ್ ಖಾನೆಗೆ ಕರೆದುಕೊಂಡು ಹೋಗಿ ಮುಖ್ಯ ಅತಿಥಿಗಳ ಪರಿಚಯ ಮಾಡಿಸಿ ಕೊಡುತ್ತಿದ್ದರು.

ಪಾನಕ ಸೇವನೆಗೆ ಶುರುವಾಯಿತು. ಎಲ್ಲರ ಪರಿಚಯವನ್ನು ಮಿಕ್ಕೆಲ್ಲರೂ ಗುಟುಕಿಗೆ ಒಬ್ಬರಂತೆ ಮಾಡಿಕೊಂಡು, ಆ ಮಾತು, ಈ ಮಾತು ಆಡುತ್ತಾ ಕೂಟಕ್ಕೆ ಕಳೆಯನ್ನು ಕಟ್ಟಲಾರಂಭಿಸಿದರು. ಬೇಗ ಬೇಗ ಕಳೆ ಕಟ್ಟಿತು.

ಮುಖ್ಯಮಂತ್ರಿಗಳು ಒಂಬತ್ತರ ವೇಳೆಗೆ ಬಂದರು. ಅವರ ಬರುವಿಕೆಗೆ ಕಾದಿದ್ದ ಸರ್ದಾರ್ ಜುಗ್ಗಾಲ್ ಅವರು, ಎರಡೂ ಕೈ ಹಿಡಿದು ಅವರನ್ನು ಸ್ವಾಗತಿಸಿ, ಮುಖ್ಯ ಅತಿಥಿಗಳಿಗೆ ಪರಿಚಯ ಮಾಡಿಸಿದರು. ಹೆಚ್ಚು ಹೊತ್ತು ಮಾತಿಗೆ ಬಿಟ್ಟರೆ ಇನ್ನೇನು ಪೆಚ್ಚು ಮಾತುಗಳು ಹೊರ ಬೀಳುತ್ತವೆಯೋ ಎಂಬ ಹೆದರಿಕೆಯೋ ಏನೋ, ಸರ್ದಾರ್ಜಿಯವರು ಭೋಜನದ ಗಂಟೆಯನ್ನು ಬಾರಿಸಿದರು.

ಎಲ್ಲರೂ ಭೋಜನಕ್ಕೆ ಕುಳಿತರು. ಭವ್ಯವಾದ ಭೋಜನ. ನಂತರ ಸರ್ದಾರ್ ಜುಗ್ಗಾಲ್ ಅವರು ಪುಟ್ಟ ಸ್ವಾಗತ ಭಾಷಣ ಮಾಡಿ, ಮುಖ್ಯ ಅತಿಥಿಗಳಿಗೆ ಆಯುರಾರೋಗ್ಯ ದೊರಕಲಿ ಎಂದು ಹೇಳಿ ಸ್ವಸ್ತಿಪಾನ ಮಾಡಿದರು. ನಂತರ ಮುಖ್ಯಮಂತ್ರಿಗಳು ಎದ್ದು "ಅಮೆರಿಕನ್ನರೂ ಭಾರತೀಯರೂ ಸೋದರರರಂತೆ. ಇಬ್ಬರದೂ ಪ್ರಜಾಸತ್ತೆ" ಇತ್ಯಾದಿ ಹತ್ತು ನಿಮಿಷ ಚುನಾವಣಾ ಭಾಷಣ ಬಿಗಿದರು. ನಂತರ ಒಣಗಿದ ಗಂಟಲಿಗೆ ಒಂದು ಗುಟುಕು ನೀರು ಹಾಕಿ ನೆನೆಸಿದರು. ಆಗ ಎಲ್ಲಿ ಭಾಷಣ ಮಾಡುತ್ತಿದ್ದೇನೆ? ಯಾರು ಊಟ ಹಾಕಿದರು? ಎಂಬುದರ ನೆನಪಾಗಿರಬೇಕು. ಮುಂದುವರೆದು,

"ಸರ್ದಾರ್ ಜುಗ್ಗಾಲ್ ಅವರು ಉತ್ತರಪ್ರದೇಶದಿಂದ ಇಲ್ಲಿಗೆ ಬಂದು, ಇಲ್ಲಿ ಗಣಿ ಉದ್ಯಮವನ್ನು ನೂತನ ಪಾಶ್ಚಾತ್ಯ ಮಾರ್ಗಗಳಿಂದ ಉದ್ಧರಿಸಲು ತೊಡಗಿದ್ದಾರೆ. ದಾಕ್ಷಿಣಾತ್ಯ ರಾಜ್ಯಗಳ ಪರವಾಗಿ ಅವರನ್ನು ಸ್ವಾಗತಿಸುತ್ತೇನೆ. ಅವರಿಗೆ ಸಹಕಾರದ ಹಸ್ತಲಾಘವ ಇತ್ತಿರುವ ಅಮೆರಿಕನ್ನರನ್ನೂ ಸ್ವಾಗತಿಸುತ್ತೇನೆ. ಸರಕಾರದ ಪರವಾಗಿ ಯಾವ ಯಾವ ಅಗತ್ಯವಾದ ಸಹಾಯ [illegible] ಬಹುದೋ ಅವೆಲ್ಲವನ್ನೂ ಬಿಚ್ಚುಗೈಯಿಂದ ನೀಡುತ್ತೇನೆ" ಎಂದು ಹೇಳಿ[illegible]

ಅಮೆರಿಕನ್ನರು, ಸರ್ದಾರ್ಜಿಯವರು, ಮತ್ತೆಲ್ಲರೂ ಚಪ್ಪಾಳೆ [illegible] ನಂತರ ಅಮೆರಿಕನ್ನರು ಮರುಭಾಷಣ ಮಾಡಿ, ಆತಿಥೇಯರನ್ನು [illegible] ಸರಕಾರವನ್ನು ಅಟ್ಟಕ್ಕೇರಿಸಿ ತಮ್ಮ ಕೈಲಾದ ನೆರವನ್ನೆಲ್ಲಾ [illegible] ಭರವಸೆ ಇತ್ತರು.

ಕೂಟ ಮುಕ್ತಾಯವಾಯಿತು. ಗಣಿ ಇಲಾಖಾ ಅಧಿಕಾರಿ[illegible] ಸರ್ದಾರ್ ಜುಗ್ಗಾಲ್ ಅವರೇ, ಮೋಟಾರಿನ ತನಕ ಕರೆದುಕೊಂಡು [illegible] ಬಾಗಿಲು ತೆಗೆದು ಕೂರಿಸಿ, ನಮಸ್ತೆ ಹೇಳಿ ಬೀಳ್ಕೊಟ್ಟರು.

ನಂತರ ಸರ್ದಾರ್ ಜುಗ್ಗಾಲ್ ಅವರು, ತಮ್ಮ ಕೊಠಡಿಗೆ [illegible] ಬಟ್ಟೆ ಬದಲಾಯಿಸಿದರು. ಮಹಡಿಯಿಂದ ಇಳಿದು ಬಂದು [illegible] ಹಿಂಭಾಗದತ್ತ ನಡೆದು ಹೋದರು.

* * *

ಸರಕಾರದ ಮುಖ್ಯ ಕಾರ್ಯದರ್ಶಿಗಳು ಮಧ್ಯಾಹ್ನ 2 ಗಂ[illegible] ಸರ್ದಾರ್ ಜುಗ್ಗಾಲ್ ಅವರಿಗೆ ಭೇಟಿ ಗೊತ್ತುಮಾಡಿದ್ದರು. 2 ಗಂಟೆ ಸರಿಯಾಗಿ ಕಾಗದ ಪತ್ರಗಳನ್ನು ಹಿಡಿದುಕೊಂಡು ಸರ್ದಾರಜೀಯವ[illegible] ಕೊಠಡಿಯನ್ನು ಪ್ರವೇಶಿಸಿದರು. ಎಂದೂ ಶಾಂತಮೂರ್ತಿಯಾಗಿರುತ್ತಿ[illegible] ಸರ್ದಾರಜೀಯವರು ಅಂದು ಕುಪಿತರಾಗಿದ್ದಂತೆ ಕಾಣಿಸುತ್ತಿತ್ತು. ಮು[illegible] ಕಾರ್ಯದರ್ಶಿಗಳು ತುಸು ಚಕಿತರಾದರು. "ನನ್ನ ಹತ್ತಿರ ಬರುವ[illegible] ಏನಾದರೂ ಬೇಡಲು ಬರುತ್ತಾರೆ. ಬಹಳ ನಮ್ರತೆಯಿಂದ ನಡೆದುಕೊ[illegible] ತ್ತಾರೆ. ಇವ ರೇಗುತ್ತಲೇ ಬಂದರೆ, ತಕ್ಕ ಶಾಸ್ತಿ ಮಾಡಬೇಕು. [illegible] ಎಂತಹ ಶ್ರೀಮಂತನೇ ಇರಲಿ, ಸರಕಾರದ ದೃಷ್ಟಿಯಲ್ಲಿ ಒಬ್ಬ ಪ್ರಜೆ [illegible] ನೋಡಿಕೊಳ್ಳಬೇಕು ಇವನನ್ನು" ಎಂದು ತಮ್ಮ ಮನಸ್ಸಿನಲ್ಲೇ [illegible] ಕೊಂಡರು. ನಂತರ "ಏನು ಬೇಕಾಗಿತ್ತು ನಿಮಗೆ? ನನ್ನ ಹತ್ತಿರ ಭೇಟಿ ಬೇಡಲು ಕಾರಣವೇನು?" ಎಂದು ಕೇಳಿದರು.

"ಸ್ವಾಮೀ ! ಭಾರತದ ಎಲ್ಲಿಂದಲಾದರೂ, ಯಾರಾದರೂ ಬರಲಿ, ಇಲ್ಲಿ ಉದ್ಯಮಗಳನ್ನು ಹೂಡಲಿ ಎಂದು ನಿಮ್ಮ ಸಚಿವರು ಘಂಟಾಘೋಷವಾಗಿ ಹೇಳುತ್ತಲೇ ಇದ್ದಾರೆ. ಅವರ ಮಾತುಗಳನ್ನು ನಂಬಿ, ಇಲ್ಲಿಗೆ ಬಂದು

ಗಣಿ ಉದ್ಯಮಕ್ಕೆ ತೊಡಗಿದೆ. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಹಲವಾರು ಗಣಿಗಳ ಮಾಲೀಕತ್ವವನ್ನು ಕೊಂಡೆ.

ಪಹರಿನ ಬಳಿ ಇರುವ ಗುಡ್ಡದ ಪಾಳ್ಯದ ಗಣಿಗಳನ್ನೂ ಕೊಂಡೆ. ಸರಿಯಾದ ಸಿಬ್ಬಂದಿಯನ್ನು ಗೊತ್ತುಮಾಡಿಕೊಂಡು ನಂತರ ಕೆಲಸವನ್ನು ಅಲ್ಲಿ ಶುರು ಮಾಡಲು ಅಂದಾಜು ಹಾಕಿದ್ದೆ. ಕೆಲಸದ ಆರಂಭಕ್ಕೆ ವ್ಯವಸ್ಥೆ ಮಾಡಲು ಮೊನ್ನೆ ಅಲ್ಲಿಗೆ ಹೋಗಿದ್ದೆ. ಅಲ್ಲಿ ಯಾವುದೋ ಆಸ್ಪತ್ರೆಯನ್ನು ಕಟ್ಟಲು ಸರಕಾರ ಏರ್ಪಾಡು ಮಾಡಿದೆ. ಇಲ್ಲಿ ನೀವು ಬರಲು, ಬಂದು ಗಣಿ ಅಗೆಯಲು ಅವಕಾಶವಿಲ್ಲ ಅಂತ ಅಲ್ಲಿದ್ದ ಕಟ್ಟಡದ ಕಂಟ್ರಾಕ್ಟರ್ ಹೇಳಿದ.

ಇದೆಂತಹ ದರ್ಬಾರು ಸ್ವಾಮೀ, ಗಣಿ ಅಗೆದು ಅದಿರು ಸಾಗಿಸುವ ಹಕ್ಕನ್ನು ನನಗೆ ಕೊಟ್ಟು, ಆ ಅವಕಾಶಕ್ಕೆ ಅಂತ ಮುಂಗಡ ಹಣವನ್ನೂ ಪಡೆದು, ಈಗ ಇಲ್ಲ ಅಂದರೆ ಹೇಗೆ?" ಎಂದು ಬಿರುಸಾಗಿಯೇ ನುಡಿದರು.

ಸಚಿವರುಗಳನ್ನು ಬಿಟ್ಟು ಮಿಕ್ಕ ಯಾರ ಹತ್ತಿರಲೂ ಬಿರುಸು ಮಾತುಗಳನ್ನು ಕೇಳುವ ಅಭ್ಯಾಸವೇ ಇಲ್ಲದ ಕಾರ್ಯದರ್ಶಿಗಳಿಗೆ ಬಿಸಿ ಏರಿತು. "ಗಣಿ ಇಲಾಖಾ ಕಾರ್ಯದರ್ಶಿಗಳ ಹತ್ತಿರ ಹೋಗಿ ವಿಚಾರಿಸಬೇಕಾಗಿತ್ತು. ನನ್ನ ಹತ್ತಿರ ಬರುವ ವಿಷಯವಲ್ಲ ಇದು. ನನ್ನ ಕಾಲವನ್ನು ವೃಥಾ ವ್ಯಯ ಮಾಡಿದಿರಿ" ಎಂದು ಗಡುಸಾಗಿ ಮುಖ್ಯ ಕಾರ್ಯದರ್ಶಿಯವರು ಹೇಳಿ ಮೇಜಿನ ಮೇಲಿದ್ದ ಗಂಟೆಯನ್ನು ಒತ್ತಿದರು. ಜವಾನ ಒಳಕ್ಕೆ ಬಂದಾಗ "ಸರ್ದಾರರು ಹೊರಗೆ ಹೋಗುವವರಿದ್ದಾರೆ, ಕಳಿಸಿಕೊಡು" ಎಂದರು.

ನಖಶಿಖಾಂತ ಸರ್ದಾರ್ಜೀಗೆ ರೇಗಿತು. ಆದರೆ ಏನು ಮಾಡಲು ಸಾಧ್ಯ? ಹೊರಕ್ಕೆ ಬಂದರು. ಗಣಿ ಇಲಾಖಾ ಕಾರ್ಯದರ್ಶಿಗಳು ಯಾರು ಎಂದು ತಿಳಿದುಕೊಳ್ಳುವುದಕ್ಕೆ ಮೂರು ದಿನ ಹಿಡಿಯಿತು. ಇವರನ್ನೆಲ್ಲಾ ಸತ್ಕಾರ ಕೂಟಗಳಿಗೆ ಕರೆದು ಪಾನಕ ಪೂಜೆ ಮಾಡಿದ್ದೆಲ್ಲಾ ವ್ಯರ್ಥವಾಯಿತು ಎಂದುಕೊಂಡರು. ಗಣಿ ಇಲಾಖಾ ಸೆಕ್ರೆಟರಿಯವರು ಇಂತಹವರು ಎಂದು ತಿಳಿದ ಮೇಲೆ ಅಲ್ಲಿಗೆ ಹೋದಾಗ ಆತ ಒಂದು ತಿಂಗಳು ರಜಾದ ಮೇಲೆ ಹೋಗಿದ್ದಾನೆ ಎಂದು ತಿಳಿಯಿತು.

ಉಶ್ಶಪ್ಪ ಎಂದು ತಮ್ಮ ಕೊಠಡಿಯಲ್ಲಿ ಕುಳಿತು ಗಾಳಿ ಬೀಸಿಕೊಂಡರು.

* * *

ಮಾಲತಮ್ಮನವರು ಮುಖ್ಯಮಂತ್ರಿಗಳ ಮನೆಗೆ ಹೋದಾಗ ಬೆಳಗ್ಗೆ

ಎಂಟರ ಸಮಯ. ಹೊರ ಕೊಠಡಿಯಲ್ಲಿ ಮಂತ್ರಿಗಳಿರಲಿಲ್ಲ. "ಓಹೋ ! ಆರೋಗಣೆ ಸಮಯ. ಊಟದ ಮನೆಗೆ ಹೋಗೋಣ" ಎಂದು ಮಾಲತಮ್ಮನವರು ಅಲ್ಲಿಗೆ ಹೋದರು.

"ಅಪರೂಪ ದರ್ಶನ ಮಾಲತಮ್ಮಾ! ಇತ್ತೀಚೆಗೆ ಕಾಣಿಸಲೇ ಇಲ್ಲವಲ್ಲ!" ಎಂದು ಮುಖ್ಯಮಂತ್ರಿಗಳು ಸ್ವಾಗತಿಸಿದರು.

"ಅಕ್ಕಿ ರೊಟ್ಟಿ ಬಲು ಹಿತವಾಗಿದೆ. ನೀವೂ ತಿನ್ನಬೇಕು, ಕೂಡ್ರಿ" ಎಂದು ಮುಖ್ಯಮಂತ್ರಿಗಳ ಹೆಂಡತಿಯೂ ಮಾಲತಮ್ಮನವರನ್ನು ಒತ್ತಾಯಪಡಿಸಿದರು.

ಆ ಮಾತು ಈ ಮಾತು ಆಡುತ್ತಾ ಮಾಲತಮ್ಮನವರು ಹೇಳಿದರು, "ಮೊನ್ನೆ ಖಾದಿ ವ್ಯವಸ್ಥೆ ಮಾಡಲು ಹೋಗಿದ್ದೆ. ಆ ದಿನ ಖಾದಿ ಭಂಡಾರಕ್ಕೆ ಉತ್ತರ ದೇಶದವರೊಬ್ಬರು ಬಂದಿದ್ದರು. ಏನೇನೊ ಉದ್ಯಮಗಳನ್ನು ಮಾಡುವವರಂತೆ. ಅವರ ಕೆಲಸಗಾರರಿಗೆಲ್ಲಾ ಖಾದಿ ಉಡುಪು ಕೊಡಿಸಿದರೆ ದೇಶಸೇವೆ ಮಾಡಿದ ಹಾಗೆ ಎಂದು ಹೇಳಿದೆ. ಒಟ್ಟು ಕೊಂಡರೆ ಶತಾಂಶ ಹತ್ತರಷ್ಟು ರಿಯಾಯ್ತಿ ಕೊಡುತ್ತೇವೆ ಎಂದೂ ಸೇರಿಸಿದೆ. ಆತ ಒಪ್ಪಿ 800 ರೂಪಾಯಿಗಳ ವ್ಯಾಪಾರ ಮಾಡಿದ. ನಮ್ಮ ಪಕ್ಷದ ನಿಧಿಗೆ ಆತನಿಂದ ಸುಮಾರು ಸಹಾಯ ಪಡೆಯಬಹುದು ಅನ್ನಿಸಿತು. ನಿಮ್ಮ ಬಳಿಗೆ ಒಮ್ಮೆ ಆತನನ್ನು ಕರೆತರಲೇ!" ಎಂದು.

"ಹಾಗೇನು? ಅಗತ್ಯ ಕರಕೊಂಡು ಬನ್ನಿ. ಆತನ ಹೆಸರೇನು?" ಎಂದರು ಮುಖ್ಯಮಂತ್ರಿಗಳು.

"ಸರ್ದಾರ್ ಜುಗ್ಗಾಲ್ ಅಂತ ಅವರ ಹೆಸರು" ಎಂದರು ಮಾಲತಮ್ಮ.

"ಎಲ್ಲೋ ಅವರ ಹೆಸರು ಕೇಳಿದ ಹಾಗಿದೆಯಲ್ಲ?" ಎಂದರು ಮಂತ್ರಿಗಳು. ಆದರೆ ನೆನಪು ಬಂದ ಹಾಗೆ ಕಾಣಿಸಲಿಲ್ಲ. ತಲೆ ಕೆರೆದುಕೊಂಡರು.

"ಮಹೇಂದ್ರ ಭವನದಲ್ಲಿ ಉಳಿದುಕೊಂಡಿದ್ದಾರೆ ಅ ವ ರು. ಅಲ್ಲಿ ಯಾವಾಗಲಾದರೂ ಸತ್ಕಾರ ಕೂಟಕ್ಕೆ ನೀವು ಹೋದಾಗ ಭೇಟಿಯಾಗಿರಬಹುದು" ಎಂದರು ಮಾಲತಮ್ಮ.

"ಈಚೆಗೆ ಅಲ್ಲಿಗೆ ಹೋದ ನೆನಪೇ ಇಲ್ಲ" ಎಂದರು ಮಂತ್ರಿಗಳು. ತಟ್ಟಂತ ನೆನಪಾಗಿರಬೇಕು.

"ಈಗ ಜ್ಞಾಪಕ ಬಂತು. ಬೆಳಗ್ಗೆ ಪೇಪರಿನಲ್ಲಿ ಓದಿದೆ. ಸರಕಾರದ

Scanned by CamScanner

ಮೇಲೆ ದಾವಾ ಹಾಕಿವ್ವಾನೆ ಆತ. ಯಾಕೆ ಅಂತ ವಿವರಗಳು ತಿಳಿಯದು" ಎಂದರು ಮುಖ್ಯಮಂತ್ರಿಗಳು.

"ಅಂತಹವರಲ್ಲ ಅವರು. ನಮಗೆ ಸಹಾಯ ಮಾಡುವ ಮನಸ್ಸು ಅವರಿಗಿದೆ. ನಾಳೆ ಕಚೇರಿಗೆ ಕರಕೊಂಡು ಬರ್‍ತೀನಿ. ಅಲ್ಲಿ ನೀವೇ ಮಾತನಾಡಿ" ಎಂದರು ಮಾಲತಮ್ಮ.

ಮಾರನೆ ದಿನ ಮೂರು ಗಂಟೆಗೆ ಮುಖ್ಯ ಸಚಿವರ ಕೊಠಡಿಯಲ್ಲಿ ಮಾಲತಮ್ಮ ಮತ್ತು ಸರ್ದಾರ್ ಜುಗ್ಗಾಲ್ ಕುಳಿತಿದ್ದರು. ಗಣಿಯ ಇಲಾಖಾ ಸೆಕ್ರೆಟರಿಗಳು ಮುಖ್ಯ ಕಾರ್ಯದರ್ಶಿಯವರೂ ಇದ್ದರು.

ಗುಡ್ಡದಪಾಳ್ಯದಲ್ಲಿ ಅದಿರು ತೆಗೆಯುವ ಹಕ್ಕನ್ನು 50 ವರ್ಷಗಳಿಗೆ ನಾಯಕ್ ಕಂಪನಿಗೆ ಕೊಟ್ಟಾಗಿದೆ. ಈ ವಿಷಯ ತಿಳಿಯದೆ ಸರಕಾರ ಆ ಜಾಗವನ್ನು ಕಾವೇರಮ್ಮ ಸೀತಾರಾಮಪ್ಪನವರ ಮಕ್ಕಳ ಆಸ್ಪತ್ರೆಗೆ ಬಿಟ್ಟು ಕೊಟ್ಟಿದೆ. ಪ್ರಧಾನಿಯವರೇ ಶಂಕುಸ್ಥಾಪನೆ ಮಾಡಿ 2 ವರ್ಷಗಳಾಯಿತು ಎಂಬ ವಿಷಯ ಹೊರಬಿದ್ದಿತು.

"ಏನೋ ಅಚಾತುರ್ಯ ನಡೆದುಹೋಯಿತು. ಆಸ್ಪತ್ರೆಯನ್ನು ಅಲ್ಲಿ ಕಟ್ಟಬೇಕು. ನೀವು ಮೊಕದ್ದಮೆಯನ್ನು ಹಿಂತೆಗೆದುಕೊಳ್ಳಬೇಕು" ಎಂದು ಮುಖ್ಯಮಂತ್ರಿಗಳು ಮನವಿ ಮಾಡಿದರು.

"ಒಳ್ಳೆಯ ಕೆಲಸ ಮಾಡುತ್ತಿದ್ದೀರಿ. ಅದಕ್ಕೆ ಅಡ್ಡ ಹಾಕಲು ಮನಸ್ಸಿಲ್ಲ. ಆದರೆ ಭಾರಿ ನಷ್ಟವಾಗುತ್ತೆ ನನಗೆ. ಅದನ್ನು ಸರಕಾರ ಕಟ್ಟಿಕೊಡಲಿ, ನಾನು ಮೊಕದ್ದಮೆಯನ್ನು ನಿಮ್ಮ ಆಜ್ಞೆಯ ಪ್ರಕಾರ ವಾಪಸು ಪಡೆಯುತ್ತೇನೆ" ಎಂದರು ಸರ್ದಾರ್ ಜುಗ್ಗಾಲ್.

"ಗುಡ್ಡದಪಾಳ್ಯದಲ್ಲಿ ಅದಿರು ಯಾವುದೂ ಸಿಗುಲ್ಲ. ಅಲ್ಲಿ ಪ್ರಯೋಗ ಬಾವಿಗಳನ್ನು ತೋಡಿ ಪರೀಕ್ಷಿಸಿತ್ತು. ಅದಿರು ಇರಲಿಲ್ಲ. ಸರ್ದಾರ್ ಜುಗ್ಗಾಲ್ ಅವರಿಗೆ ಅಲ್ಲಿ ಏನೂ ಲಾಭ ಬರುತ್ತಿದ್ದಿಲ್ಲ ಅಂದ ಮೇಲೆ ನಷ್ಟ ಎಲ್ಲಿಂದ ಬಂತು? ಅಲ್ಲದೆ ನಾಯಕ್ ಕಂಪನಿಯವರಿಗೆ ಹತ್ತು ವರ್ಷಗಳ ಹಿಂದೆ ಗಣಿ ಹಕ್ಕನ್ನು ಕೊಟ್ಟಿದೆ. ಆಗ ಜುಗ್ಗಾಲ್ ಎಲ್ಲಿದ್ದರು? ಈ ವರ್ಷವೇ ಇಲ್ಲಿಗೆ ಈತ ಬಂದಿರುವುದು" ಎಂದು ಮುಖ್ಯ ಕಾರ್ಯದರ್ಶಿಗಳು ಖಾರವಾಗಿ ಹೇಳಿದರು.

ಮುಖ್ಯ ಕಾರ್ಯದರ್ಶಿಗಳ ಮುಖವನ್ನು ಒಮ್ಮೆ ನೋಡಿ, ವಿನಯದಿಂದ ಸರ್ದಾರ್‌ಜೀ ಹೇಳಿದರು:

"ಮುಖ್ಯ ಕಾರ್ಯದರ್ಶಿಗಳಿಗೆ ವಿಷಯ ಸರಿಯಾಗಿ ತಿಳಿದಿರಲಾರದು. ನಾಯಕ್ ಕಂಪನಿಯನ್ನು ನಾನು ಕೊಂಡಿದ್ದೇನೆ. ಅಂದರೆ ಗಣಿಯ ಹಕ್ಕು ನನ್ನದು."

ಇನ್ನೊಂದು ಮಾತನ್ನು ಕಾರ್ಯದರ್ಶಿಯವರು ಹೇಳಿದರು. ಅದು ನ್ಯಾಯಸಮ್ಮತ. ಗುಡ್ಡದ ಪಾಳ್ಯದಲ್ಲಿ ಅದಿರೇ ಇಲ್ಲದಿದ್ದರೆ ನನಗೇನೂ ಲಾಭ ಸಿಗುತ್ತಿದ್ದಿಲ್ಲ. ಮಾಡಿದ ಖರ್ಚು ವ್ಯರ್ಥವಾಗುತ್ತಿತ್ತು. ಅದಿರು ಇದೆಯೋ ಇಲ್ಲವೋ ಸರಕಾರದ ಸಿಬ್ಬಂದಿಯೇ ಪರೀಕ್ಷೆ ನಡೆಸಲಿ. ಆದಾದ ಮೇಲೆ ನಷ್ಟ ಕಟ್ಟಿಕೊಡುವ ಮಾತು ಮುಂದುವರೆಸೋಣ" ಎಂದರು ಜುಗ್ಗಾಲ್.

ಎಲ್ಲರೂ ಒಪ್ಪಿದರು. ಹೀಗೆ ಹೀಗೆ ಮಾತಾಗಿ ಒಪ್ಪಂದವಾಗಿದೆ ಎಂದು ಜುಗ್ಗಾಲ್ ಅವರು ಅಲ್ಲಿಯೇ ಬರೆದರು. ಎಲ್ಲರೂ ಸಹಿ ಹಾಕಿದರು.

ಸರಕಾರದ ಗಣಿ ಸಿಬ್ಬಂದಿಯವರು ಗುಡ್ಡದ ಪಾಳ್ಯದ ಪ್ರಯೋಗದ ಬಾವಿಗಳ ತಳದಲ್ಲಿದ್ದ ಅದಿರು ಸಂಗ್ರಹಿಸಿ ಪರೀಕ್ಷೆ ನಡೆಸಿದರು. 40ವರ್ಷಗಳು ಆ ಗಣಿಯನ್ನು ತೋಡಿದರೆ, ಖರ್ಚು ಕಳೆದು 40 ಲಕ್ಷ ರೂಪಾಯಿಗಳು ಲಾಭ ಸಿಗುತ್ತದೆ ಎಂದು ವರದಿ ಕಳಿಸಿದರು.

ವರದಿ ಸರಕಾರಕ್ಕೆ ತಲುಪಿದ ಮೇಲೆ ಸರ್ದಾರ್ ಜುಗ್ಗಾಲ್ ಮತ್ತು ಮಾಲತಮ್ಮನವರು ಮುಖ್ಯ ಮಂತ್ರಿಗಳನ್ನು ಭೇಟಿಯಾದರು.

ಗಣಿ ಇಲಾಖಾ ಕಾರ್ಯದರ್ಶಿಗಳು ಹಾಜರಾಗಿದ್ದರು. ಮುಖ್ಯ ಕಾರ್ಯದರ್ಶಿಗಳು ಬಂದಿರಲಿಲ್ಲ.

ವಿಷಯಗಳೆಲ್ಲಾ ತಿಳಿದ ಮೇಲೆ ಮುಖ್ಯಮಂತ್ರಿಗಳು ಸರ್ದಾರ್ಜೀಯವರನ್ನು "ಈಗ ಏನು ಮಾಡಬೇಕು ಅಂತಿದ್ದೀರಿ" ಎಂದು ಕೇಳಿದರು.

"ಸ್ವಾಮೀ ! 40 ಲಕ್ಷ ನಷ್ಟ ಕಟ್ಟಿ ಕೊಡಿ ಎಂದು ಕೇಳುವುದಿಲ್ಲ. ನೀವಾದರೂ ಅಲ್ಲಿ ಆಸ್ಪತ್ರೆ ಕಟ್ಟಿಸಲು ಏರ್ಪಾಡು ಮಾಡಿದ್ದೀರಿ. ಪುಣ್ಯಾತ್ಮರೊಬ್ಬರು 3 ಲಕ್ಷ ರೂಪಾಯಿ ದಾನ ಕೊಟ್ಟಿದ್ದಾರೆ. ಈ ಗಣಿಗಳನ್ನು ತೋಡಲು ನಾನು ನಾಲ್ಕು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇನೆ. ಅಷ್ಟನ್ನೂ ಪರಿಹಾರ ಧನವನ್ನಾಗಿ ಕೊಡಿಸಿ. ಮೊಕದ್ದಮೆಯನ್ನು ಕೋರ್ಟಿನಿಂದ ವಾಪಸ್ ಪಡೆಯುತ್ತೇನೆ" ಎಂದರು ಸರ್ದಾರ್ಜೀ.

"ಆಗಲಿ, ನೀವೂ ತುಂಬಾ ನ್ಯಾಯವಾಗಿಯೇ ಕೇಳುತ್ತಿದ್ದೀರಿ" ಎಂದರು ಮಂತ್ರಿಗಳು. ಅದೇ ರೀತಿ ಆಜ್ಞೆಯನ್ನೂ ಮಾಡಿದರು.

* * *

Scanned by CamScanner

ಗಣಿ ಆಫೀಸಿನ ಶಾಂತಪ್ಪ "ಗುಡ್ಡದ ಪಾಳ್ಯದಲ್ಲಿ ಈಗ ಶಂಕುಸ್ಥಾಪನೆ ಹಾಕಿದ್ದಾರಲ್ಲ, ಆ ಜಾಗದ ಗಣಿ ತೆಗೆಯುವ ಹಕ್ಕನ್ನು ನಾಯಕ್ ಕಂಪನಿಗೆ ಎಂದೋ ಕೊಟ್ಟಿತ್ತು" ಎಂದು ಅಹ್ಮದ್ ಕಾಕಾನಿಗೆ ಹೇಳಿದ.

ಅದನ್ನು ತಿಳಿದು ರಾಮೋಜಿಗೆ ಹೇಳಿದೆ. ಸರ್ದಾರ್ ಜುಗ್ಗಾಲ್ ತರಹ ವೇಷ ಹಾಕಿಕೋ, ನಾಯಕ್ ಕಂಪನಿ ಕೊಂಡುಕೊ ಅಂತ 2ಲಕ್ಷ ರೂಪಾಯಿ ಹಾಕಿ ರಾಮೋಜಿ, ನಾಯಕ್ ಕಂಪನಿಯ ಆಡಳಿತ ವಹಿಸಿಕೊಂಡ.

ಬಿಡ್ಡಣ್ಣನಿಗೆ ಹೇಳಿದೆ, ಬಾಣಸಂದ್ರದ ಉತ್ತಮ ಗಣಿಗಳಿಂದ ಒಳ್ಳೆಯ ಅದಿರನ್ನು ಸಾಗಿಸಿ ಗುಡ್ಡದಪಾಳ್ಯದ ಹಾಳು ಬಾವಿಗಳಿಗೆ ತುಂಬಿಸು ಅಂತ.

ಬುಡಾ ಉದ್ದೀನ್ ಆಗಿ ಅವ ಆ ಕೆಲಸ ಪೂರೈಸಿದ.

ಮಾಲತಮ್ಮನಿಗೆ ಸುಳುಹು ಕೊಟ್ಟು ಮುಖ್ಯಮಂತ್ರಿಗಳ ಗಮನಕ್ಕೆ ಇವೆಲ್ಲಾ ಬರುವಂತೆ ಮಾಡಿದೆ. ಪಕ್ಷಕ್ಕೆ ಭಾರಿ ಹಣ ಕೊಡಿಸುವ ಆಸೆಯನ್ನು ಹುಟ್ಟಿಸಿದೆ.

ಈಗ ವ್ಯವಹಾರ ಮುಗಿಯಿತು. ನಾಯಕ್ ಕಂಪನಿಯನ್ನು ತಿರುಗಿ ಮಾರಿಸಿದೆ. 25,000 ರೂಪಾಯಿ ನಷ್ಟ ಆಯಿತು. ಬಿಡ್ಡಣ್ಣನ ಖರ್ಚು 13,000 ರೂಪಾಯಿಗಳು. ರಾಮೋಜಿಯ ಖರ್ಚು 46,000ರೂಪಾಯಿಗಳು. ಮಾಲತಮ್ಮನ ಖರ್ಚು 11,000 ರೂಪಾಯಿಗಳು. ಅದರಲ್ಲಿ ಗಣಿ ಸಿಬ್ಬಂದಿಯವರ ಖರ್ಚೂ ಸೇರಿದೆ.

ಒಟ್ಟು ಖರ್ಚು 95,000 ರೂಪಾಯಿಗಳು. ಸರಕಾರದಿಂದ ಗಿಟ್ಟಿಸಿದ ಪರಿಹಾರ ಧನ ನಾಲ್ಕು ಲಕ್ಷ.

5000 ರೂಪಾಯಿಗಳನ್ನು ಆ ಮಕ್ಕಳ ಆಸ್ಪತ್ರೆಗೆ ಕೊಟ್ಟುಬಿಟ್ಟು, ಮಿಕ್ಕ ಮೂರು ಲಕ್ಷ ರೂಪಾಯಿಗಳನ್ನು ಕೊಂಡೆನಕಪಲ್ಲಿಯ ಪೂಜಾರಪ್ಪನವರ ಕಾಲ ಮೇಲೆ ಹಾಕಿ, ಈ ವರ್ಷದ ಕಾಣಿಕೆ ಇದು ಎಂದು ಹೇಳಿ ನಮಸ್ಕಾರ ಮಾಡುತ್ತೇನೆ.

ಪೂಜಾರಪ್ಪನವರ ಆಣತಿಯ ಮೇಲೆ ಈ ವಿಷಯವನ್ನು ಪತ್ರಿಕೆಗಳಲ್ಲಿ ಪ್ರಚುರಪಡಿಸುತ್ತಿದ್ದೇನೆ"

"ಬುದ್ಧೋಜಿ".

ಸುರೇಂದರ್‌ನ ವಿದೇಶಿ ಪ್ರವಾಸ

ಈ ವಿದೇಶ ಪ್ರವಾಸದ ಹಿಂದೆ ಅಡಗಿದ್ದ ರಹಸ್ಯವಾದರೂ ಏನು ?

"ನಡಕೊಂಡೇ ಹೋಗಿಬಿಡೋಣ ಕಣೆ, ದಾರಿಯಲ್ಲಿ ಆಟೋ ಸಿಕ್ಕಿದರೂ ಸಿಕ್ಕಬಹುದು. ಸಿಗದೆ ಇದ್ದರೆ ಇನ್ನೂ ಚೆನ್ನಾಯ್ತು. ನಡೆದ ದಣಿವಿಗೆ ಆಮೇಲೆ ಕುಡಿಯುವ ಕಾಫಿ ಇನ್ನೂ ರುಚಿಯಾಗಿರುತ್ತೆ" ಎಂದಳು ಸುಶೀಲ.

"ಎಷ್ಟು ಸುಲಭವಾಗಿ ಹೇಳಿಬಿಡ್ತೀಮ್ಮಾ! ಸುಶಿ! ಹಗೂರು ಸೀರೆ ಉಟ್ಟಿದಿ ನೀನು, ಹಳೇ ಚಪ್ಪಲಿ ಹಾಕಿಕೊಂಡಿದಿ, ನಡೆಯೋಣ ಅಂತ ಸುಲಭವಾಗಿ ಹೇಳ್ತಾ ಇದಿ. ಜರ್ಕಿನ್ ಮತ್ತು ಜೀನ್ಸ್ ಹಾಕಿದ್ದೀನಿ ನಾನು. ಹೊಸಾ ಪ್ಲಾಟ್ ಫಾರಂ ಚಪ್ಪಲ್ ಧರಿಸಿದ್ದೀನಿ. ಹದಿನೈದು ಇಪ್ಪತ್ತು ನಿಮಿಷ ನಡೆದರೆ, ತುಂಬಾ ತೊಂದರೆಯಾಗುತ್ತಮ್ಮ! ಅದೂ ಕಬ್ಬನ್‌ಪಾರ್ಕ್ ಮಧ್ಯೆ ಹೋಗಬೇಕು. ಬಿಗಿಯಾದ ನನ್ನ ಜೀನ್ಸ್ ಅನ್ನು ನೋಡಿ ಮರ ಮರಗಳೂ ಪೊದೆ ಪೊದೆಗಳೂ ಸೀಟಿ ಹೊಡೆಯುತ್ತವೆ. ಮುಖ ಕೆಂಪೇರುತ್ತೆ. ಮೈ ಬೆವರುತ್ತೆ, ಆಗ ಬಟ್ಟೆ ಒದ್ದೆಯಾಗುತ್ತೆ. ಆಗ ಇನ್ನೂ ಹೆಚ್ಚಾಗಿ ಸೀಟಿಗಳು ಕೇಳಿಬರುತ್ತೆ. ಬೇಡಮ್ಮಾ ನಡೆಯೋದು. ಇನ್ನೂ ಸ್ವಲ್ಪ ಹೊತ್ತು ಕಾಯೋಣ. ತಿಳಿದವರ ಕಾರ್ ಯಾವುದಾದರೂ ಬರಬಹುದು ಎಂದಳು" ಕುಮುದ.

ಸುಶೀಲ, ಕುಮುದ ಇಬ್ಬರೂ ಷಹರಿನ ಬಡಾವಣೆಯಿಂದ, ರಾಜಾ ಸರ್ಕಲ್‌ಗೆ ಬಸ್‌ನಲ್ಲಿ ಬಂದಿದ್ದರು. ಅಲ್ಲಿ ಇಳಿದು ಕಂಟೋನ್ಮೆಂಟ್ ಬಸ್ ಹತ್ತಿ, ರಾಣಿ ಸರ್ಕಲ್ ಹತ್ತಿರ ಇಳಿದು, ತುಸು ದೂರ ನಡೆದು, ಮಜೇಂದ್ರ

Scanned by CamScanner

ಭವನಕ್ಕೆ ಹೋಗಿ ಐಸ್ ಕ್ರೀಂ, ಕಾಫಿಯ ಪ್ರೋಗ್ರಾಂ ಹಾಕಿಕೊಂಡಿದ್ದರು. ರಜ ಬಂದರೆ ಈ ಹುಡುಗಿಯರಿಗೆ ಇದೇ ಮೆಚ್ಚಿನ ಪ್ರೋಗ್ರಾಂ. ಪರೀಕ್ಷೆ ಬಂತು ಅಂತ ಮನೆಯಲ್ಲಿ ಕೂತು ಕಾಲೇಜ್ ಪಾಠಗಳನ್ನು ಓದುವ ಚಟವಿರಲಿಲ್ಲ. ಇದೇ ಮಜ ಎನ್ನುವ ಮನೋಭಾವ. ಅದಕ್ಕೆ ಸರಿಯಾಗಿ ಮೆರೆಸುವ ಉಡುಪನ್ನೂ ಧರಿಸಿದ್ದರು. ಹೊಲಿಸಿದ ನವ್ಯ ಉಡುಪು ತೊಟ್ಟವರ ಕಣ್ಣಿಗೆ ಚಂದ ಕಂಡರೆ ಏನು ಭಾಗ್ಯ ಬಂತು? ನೋಡಿದವರು ಕರುಬುವಂತಾದರೆ ತಾನೇ ಹಿಗ್ಗು ಉಕ್ಕುವುದು? ಕಂಡವರು ತಿರುತಿರುಗಿ ನೋಡಿದರೆ ತಾನೇ ಮನಸ್ಸಿಗೆ ಖುಷಿ? ಕಾರಣ ಮಜೇಂದ್ರ ಭವನದಲ್ಲಿ ಐಸ್‌ಕ್ರೀಂ ಕಾಫಿಯ ಪ್ರೋಗ್ರಾಂ. ಅಲ್ಲಿಗೆ ತಾನೇ ಷಹರಿನ ಅಂತಸ್ತಿನ ಯುವಕರೆಲ್ಲ ಕಾಫಿಯ ನೆಪ ಹಾಕಿಕೊಂಡು ಬರುವುದು ?

"ಕುಮ್ಮು, ಕುಮ್ಮು! ಅಲ್ಲಿ ನೋಡೇ, ಸುರೇಂದರ್ ಕಾರ್ ಬರುತ್ತಾ ಇರುವ ಹಾಗಿದೆ. ಕೈ ಆಡಿಸಿ ನಿಲ್ಲಿಸೋಣ" ಎಂದಳು ಸುಶಿ ದೂರದಲ್ಲಿ ಅವರ ಕಡೆಗೆ ಬರುತ್ತಿದ್ದ ದೊಡ್ಡ ಕೆಂಪು ಬಣ್ಣದ ಮೋಟಾರನ್ನು ಕಂಡು.

"ನಾವು ಕೈ ಆಡಿಸಿದರೆ ಅಷ್ಟು ಶ್ರೀಮಂತನಾದ ಸುರೇಂದರ್ ಕಾರ್ ನಿಲ್ಲಿಸಿ ಲಿಫ್ಟ್ ಕೊಡ್ತಾರೇನೇ?" ಎಂದಳು ಕುಮುದ.

"ನಿನ್ನ ಉಡುಪು ನೋಡಿದರೆ ಆತ, ಖಂಡಿತವಾಗಿ ಕಾರ್ ನಿಲ್ಲಿಸ್ತಾನೆ. ಲಿಫ್ಟ್ ಅನ್ನೂ ಕೊಡುತ್ತಾನೆ. ಬಂತು ಕಾರ್, ಈಗಿನಿಂದಲೇ ಕೈಬೀಸೋಣ" ಎಂದು ಸುಶೀಲ ಚಿಕ್ಕ ಕರವಸ್ತ್ರವಿದ್ದ ಕೈಯನ್ನು ಬೀಸಲಾರಂಭಿಸಿದಳು.

ಕುಮ್ಮುವೂ ಕೈ ಬೀಸಲು ಶುರು ಮಾಡಿದಳು.

ಸಾಮಾನ್ಯವಾಗಿ ಸುರೇಂದರ್ ಇಂತಹ ಉಡುಗೆಯವರನ್ನು ಕಂಡ ಕೂಡಲೇ, ಅವರು ಕೈ ಬೀಸದೇ ಇದ್ದರೂ ನಿಲ್ಲಿಸಿ ಯೋಗಕ್ಷೇಮ ವಿಚಾರಿಸುವ ಜಾಯಮಾನದವನು. ಆಗರ್ಭ ಶ್ರೀಮಂತ. ದೊಡ್ಡ ಕಾರ್ಖಾನೆಗಳ ಸುಪರ್ದು ಇವನ ಕೈಲಿತ್ತು. ಸೀಬೆಕಾಯಿ ಮರಕ್ಕೆ ಕಲ್ಲು ಎಸೆಯುವುದು, ಬಿದ್ದ ಸೀಬೇಕಾಯನ್ನು ಕಡಿದು ರುಚಿ ನೋಡಿ ಬಿಸಾಕುವುದು, ಇದೇ ಅವನ ಬಾಳ ನೀತಿ.

ಆದರೆ ಆ ಸಂಜೆ ಮುಂದೆ ರಾಣಿ ಸರ್ಕಲ್ ಹತ್ತಿರ ಅವ ಕಾರು ನಡೆಸಿಕೊಂಡು ಹೋಗುತ್ತಿದ್ದಾಗ, ಏನು ಕಾರಣವೋ ಏನೋ? ರಸ್ತೆಯಂಚಿನಲ್ಲಿ ಕೈಬೀಸುತ್ತಾ ನಿಂತಿದ್ದ ಈ ಚೆಂದುಳ್ಳಿ ಹುಡುಗಿಯರು ಅವನ ಕಣ್ಣಿಗೆ ಬೀಳಲೇ

ಇಲ್ಲ. ಹಿಂದಿನ ಸೀಟಿನಲಿ ಅವನ "ತಂದೆ ಕೂತಿದ್ದರಿಂದಲೋ ಏನೋ, ಕಾರು ರಭಸದಿಂದ ಮುಂದೆ ಓಡಿಹೋಯಿತು.

ಸುಶೀ, ಕುಮ್ಮು ಇನ್ನೂ ಕೈಬೀಸುತ್ತಲೇ ಇದಾರೆ.

ಹಿಂದೆ ಬರುತ್ತಿದ್ದ ಕಾರು ಇವರ ಬಳಿ ನಿಂತಿತು. ಅದರಿಂದ ಒಬ್ಬ ಮುಸಲ್ಮಾನ ಇಳಿದ. ಅಚ್ಚ ಕನ್ನಡದಲ್ಲಿ ಅವ ಸ್ಫುಟವಾಗಿ ಹೇಳಿದ: "ನಿಮ್ಮ ಪರಿಚಯ ಇದ್ದವರ ಕಾರನ್ನು ನಿಲ್ಲಿಸಲು ನೀವು ಕೈ ಬೀಸುತ್ತಿದ್ದುದನ್ನು ಕಂಡೆ. ಆ ಕಾರು ಮುಂದೆ ಹೋದುದನ್ನೂ ಕಂಡೆ. ನೀವು ಇನ್ನೂ ಕೈಬೀಸುತ್ತಲೇ ಇದ್ದೀರಿ. ಕೈಲಾದರೆ ನೆರವಾಗೋಣ ಅಂತ ಕಾರು ನಿಲ್ಲಿಸಿದೆ. ಅರ್ಧ ಗಂಟೆಯ ಹಿಂದೆ ಹಠಾತ್ತನೆ ರಾಜೀವಪುರದ ಬಸ್‌ನವರು ಯಥಾಪ್ರಕಾರ ಮಿಂಚಿನ ಮುಷ್ಕರ ಹೂಡಿದರು ಮಾರ್ಕೆಟ್ ಹತ್ತಿರ. ಅಂದಮೇಲೆ ನೀವು ಬಸ್ಸಿಗೆ ಕಾಯುವುದು ಪ್ರಯೋಜನವಿಲ್ಲ. ಮಾರ್ಕೆಟ್ ಕಡೆಯಿಂದಲೇ ನಾನು ಬರುತ್ತಾ ಇದೀನಿ. ನನ್ನ ಹೆಸರು ಮನ್ಸೂರ್ ಅಲಿಖಾನ್ ಅಂತ. ಕಂಟೋನ್ಮೆಂಟ್ ಕಡೆಗೆ ಹೋಗುತ್ತಾ ಇದ್ದೀನಿ. ಎಲ್ಲಿಗೆ ನೀವು ಹೋಗಬಯಸುತ್ತೀರೋ ಅಲ್ಲಿ ಬಿಟ್ಟು ಹೋಗುವಷ್ಟು ಕಾಲಾವಕಾಶವಿದೆ" ಎಂದು.

ಸುಮಾರು ನಲವತ್ತರ ಪ್ರಾಯದವನಾದರೂ ಎಳಸಾಗಿತ್ತು ಮುಖ. ಸಭ್ಯ ಗೃಹಸ್ಥನಂತೆ ಕಾಣುತ್ತಿದ್ದ.

ಕುಮ್ಮುವೇ ಹೇಳಿದಳು, "ತುಂಬಾ ಥ್ಯಾಂಕ್ಸ್ ಸರ್, ನಾವು ಮಜೇಂದ್ರ ಭವನಕ್ಕೆ ಹೋಗುವವರಿದ್ದೆವು. ಅದರ ಹತ್ತಿರ ಎಲ್ಲಾದರೂ ಇಳಿಸಿದರೆ ಸಾಕು" ಎಂದು.

"ಇನ್ನೂ ಚೆನ್ನಾಯಿತು, ಮಜೇಂದ್ರ ಭವನಕ್ಕೆ ನಾನೂ ಹೋಗುತ್ತಿದ್ದೆ. ಬನ್ನಿ, ಕೂತುಕೊಳ್ಳಿ" ಎಂದು ಕಾರಿನ ಹಿಂದಿನ ಬಾಗಿಲು ತೆಗೆದು ಇಬ್ಬರು ತರುಣಿಯರನ್ನೂ ಕುಳ್ಳಿರಿಸಿ ಬಾಗಿಲು ಮುಚ್ಚಿದ. ನಂತರ ಸುತ್ತು ಬಂದು ಡ್ರೈವಿಂಗ್ ಸೀಟಿನಲ್ಲಿ ಕುಳಿತು ಕಾರನ್ನು ನಡೆಸಿದ.

ಮಜೇಂದ್ರ ಭವನದ ಪಾರ್ಕಿಂಗ್ ಲಾಟ್‌ನಲ್ಲಿ ಕಾರನ್ನು ನಿಲ್ಲಿಸಿ, "ಹೇಗೂ ನನ್ನ ಜತೆಗೆ ಬಂದಿದ್ದೀರಿ, ನಾನು ಕಾಫಿ ಕುಡಿಯುವ ಹೊತ್ತು ಈಗ. ನೀವೂ ನನ್ನ ಅತಿಥಿಗಳಾದರೆ ನಿಮಗೆ ಆಭಾರಿ" ಎಂದ ಮನ್ಸೂರ್.

ಸುಶಿ, ಕುಮ್ಮು ಒಬ್ಬರ ಮುಖವನ್ನು ಒಬ್ಬರು ನೋಡಿಕೊಂಡು "ನಿಮಗ್ಯಾಕೆ ಅಷ್ಟೆಲ್ಲ ತೊಂದರೆ" ಎಂದು ಬಾಯಲ್ಲಿ ಹೇಳುತ್ತಲಿದ್ದರೂ ಮುಖದಲ್ಲಿ ಆಗಬಹುದು ಎನ್ನುವ ಕಿರುನಗೆಯನ್ನು ಸೂಸಿದ್ದರು.

Scanned by CamScanner

"ತೊಂದರೆಯೇನು ಬಂತು, ಇದೊಂದು ಹೆಮ್ಮೆಪಡುವಂತಹ ಸದವಕಾಶ. ಇಂತಹ ಸುಂದರ ಹೆಣ್ಣು ಮಕ್ಕಳನ್ನು ನಾನು ಪಡೆದಿದ್ದೀನಿ ಎಂದು ಕಂಡವರು ಕರುಬುತ್ತಾರೆ" ಎಂದು ಹೇಳುತ್ತಾ ಮನ್ಸೂರ್ ಇಬ್ಬರನ್ನೂ ಕರೆದುಕೊಂಡು ಒಳಕ್ಕೆ ನಡೆದ.

ಹೋಟಲಿನ ಕಾಫಿ ಲೌಂಜಿನಲ್ಲಿ ಮೂವರೂ ಮೇಜಿನ ಸುತ್ತ ಕುಳಿತರು. ತರುಣಿಯರನ್ನು ಒತ್ತಾಯ ಮಾಡಿ ಐಸ್‌ಕ್ರೀಂ ಕೊಡಿಸಿದ ಮನ್ಸೂರ್. ನಂತರ ಕಾಫಿಯನ್ನೂ ತರಿಸಿದ. ಊರು ಮಾತು, ಕೇರಿ ಮಾತು ಇತ್ಯಾದಿಗಳನ್ನಾಡುತ್ತಾ ಕಾಫಿ ಕುಡಿಯುತ್ತಿದ್ದರು.

ತುಂಬಾ ಸೊಗಸು ಕಾಣುತ್ತಿದ್ದ ಪುಟಾಣಿ ನಾಯಿಯೊಂದು ಕಾಫಿ ಲೌಂಜಿನ ಹತ್ತಿರ ಬಂದಿತು. ಅದನ್ನು ಕಂಡ ಕುಮುದಳು "ನೋಡೇ ಸುಶಿ! ಎಷ್ಟು ಚೆನ್ನಾಗಿದೆ ಈ ನಾಯಿ! ಇಂತಹ ನಾಯನ್ನು ಸಾಕಬೇಕಮ್ಮ" ಎಂದು ಉದ್ಗಾರ ತೆಗೆದಳು. "ಇಂತಹ ನಾಯನ್ನು ನೀನು ಮನೆಯಲ್ಲಿ ಸಾಕೋಕೆ ಶುರು ಮಾಡಿದರೆ, ನಿಮ್ಮಜ್ಜಿ ನಿನ್ನನ್ನು ಮನೆ ಬಿಟ್ಟು ಓಡಿಸಿ ಬಿಡುತ್ತಾರೆ, ನಿನ್ನ ಈ ಉಡುಪನ್ನು ನೋಡಿದರೇ ಆಕೆ ಕಣ್ಣು ತೊಳೆದುಕೊಂಡು ಸ್ನಾನ ಮಾಡುತ್ತಾಳೆ. ನೀನೋ? ನಿನ್ನ ಆಸೆಯೋ?" ಎಂದು ಸುಶಿ ಪರಿಹಾಸ್ಯ ಮಾಡಿದಳು.

ಆ ವೇಳೆಗೆ ಆ ನಾಯಿ ಮನ್ಸೂರನ ಕಾಲ ಬಳಿ ಹೋಗಿ, ಅವನ ಶೂಗಳನ್ನು ಕೆರೆಯಲು ಶುರು ಮಾಡಿತು.

"ಬಂದುಬಿಟ್ಟೆ, ಟಾಮಿ, ಒಂದು ನಿಮಿಷ" ಎಂದು ನಾಯಿಗೆ ಹೇಳಿ ಮನ್ಸೂರನು ಬೇರರನ್ನು ಕರೆದು, ಬಿಲ್ಲಿಗೆ ಸಹಿ ಹಾಕಿ,

"ಕ್ಷಮಿಸಬೇಕು, ಸ್ವಲ್ಪ ತುರ್ತು ಕೆಲಸವಿದೆ, ಹೋಗಬೇಕು; ಅಪ್ಪಣೆ ಕೊಡುತ್ತೀರಾ?" ಎಂದು ತರುಣಿಯರಿಗೆ ಹೇಳಿ ಟಾಮಿಯನ್ನು ಎತ್ತಿಕೊಂಡು ಮಜೇಂದ್ರು ಭವನದ ಹಿಂಭಾಗದತ್ತ ನಡೆದ.

* * *

ಸಿಗರೇಟ್ ಒಂದನ್ನು ಕೇಸಿನಿಂದ ತೆಗೆದು, "ಸೇದುತ್ತೀಯಾ?" ಎಂದು ಗಫೂರ್ ಚಿನ್ನಪಿಳ್ಳೈಯನ್ನು ಕೇಳಿದ. "ಥ್ಯಾಂಕ್ಸ್" ಎಂದು ಹೇಳುತ್ತಾ ಸಿಗರೇಟ್ ಇಸುಕೊಂಡು, ಬಾಯಲ್ಲಿಟ್ಟು ಬೇಗ ಕಡ್ಡಿ ಹಚ್ಚಿ ಗಫೂರನ ಮುಖದ ಮುಂದಿಟ್ಟ.

"ಬಲು ಚೆನ್ನಾಗಿದೆ ಸಿಗರೇಟ್ ಕೇಸ್. ಎಲ್ಲಿ ತೆಗೆದುಕೊಂಡೆ?" ಎಂದು ಚಿನ್ನಪಿಳ್ಳೈ ಕೇಳಿದ.

"ಸಾಹೇಬರು ಹೋದ ಬಾರಿ ಇಂಗ್ಲೆಂಡಿನಿಂದ ಹಿಂತಿರುಗಿದಾಗ ಇದನ್ನು ತಂದು ನನಗೆ ಬಹುಮಾನ ಕೊಟ್ಟರು" ಎಂದ ಗಫೂರ್, ಹೊಗೆ ಎಳೆಯುತ್ತ.

"ಯಾವ ಸಾಹೇಬರು?" ಎಂದು ಚಿನ್ನಪಿಳ್ಳೈ ಕೇಳಿದ.

"ಸುರೇಂದರ್ ಸಾಬ್ ಗೊತ್ತಿಲ್ಲವೇ? ಸರಸ್ವತಿ ಕಾಗದದ ಕಾರ್ಖಾನೆಯ ಧಣಿಗಳು. ಕಾರ್ಖಾನೆಯ ಬಡಾವಣೆಗೆ ಯಂತ್ರಗಳನ್ನು ತರಲು ಈಗ ಜರ್ಮನಿಗೆ ಹೊರಟಿದ್ದಾರೆ. ತುಂಬಾ ದಿಲ್‌ದಾರ್ ಸಾಹೇಬರು" ಎಂದ ಗಫೂರ್ ಹೆಮ್ಮೆಯಿಂದ.

"ಕಾರ್ಖಾನೆಯಲ್ಲಿ ನನಗೂ ಯಾವುದಾದರೂ ಕೆಲಸ ಕೊಡಿಸುತ್ತೀಯಾ?" ಎಂದು ಚಿನ್ನಪಿಳ್ಳೈ ಕೇಳಿದ.

"ಯಾಕೆ? ಈಗಿರುವ ಕೆಲಸ ಸುಖವಿಲ್ಲವೇ? ಎಷ್ಟು ಪಗಾರ?" ಎಂದು ಗಫೂರ್ ಕೇಳಿದ.

"ಈಗ ನಾನು ಮಜೇಂದ್ರು ಭವನದಲ್ಲಿ ಕೆಲಸದಲ್ಲಿ ಇದ್ದೇನೆ. ಸಂಬಳವೇನೋ ಮುನ್ನೂರು. ಆದರೆ ನಮ್ಮ ಧಣಿಗಳು ಯಾವಾಗ ಅಂದರೆ ಆವಾಗ ಜಟ್ಟಂತ ನಾನ್ನೂರು ಐನೂರು ಮೈಲಿ ಪ್ರಯಾಣಮಾಡುತ್ತಾರೆ. ಕೈ ತುಂಬ ಹಣ ಉಂಟು. ಅವರೂ ಒಳ್ಳೆಯವರು, ಆದರೆ ಕೆಲಸ ಒಮ್ಮೊಮ್ಮೆ ವಿಪರೀತ. ಎರಡನೇ ಹೆಂಡತಿಯನ್ನು ಮನೆಯಲ್ಲಿ ಬಿಟ್ಟು ಎಂಟು–ಹತ್ತು ದಿನ ಟೂರ್ ಮಾಡಬೇಕು ಎಂದರೆ ಯಾರಿಗೂ ಬೇಜಾರಲ್ವಾ?" ಎಂದ ಚಿನ್ನಪಿಳ್ಳೈ.

ಆಗ ಗಫೂರ್ ಏರೋಡ್ರೋಂ ಕಡೆಗೆ ನೋಡಿದ. "ಅರೆ! ಗ್ರೇಸಿ ಅಮ್ಮ ಬಂದುಬಿಡ್ತಾ ಇದಾರೆ" ಎಂದು ಉದ್ಗಾರ ತೆಗೆದ.

"ಪ್ಲೇನ್ ಹೊರಡುತ್ತೆ ಅಂತ ಕಾಣುತ್ತೆ. ಕಾರ್ಖಾನೆಯಲ್ಲಿ ಕೆಲಸ ಸಿಗಬೇಕಾದರೆ ಆ ಅಮ್ಮಾ ಅಸ್ತು ಅನ್ನಬೇಕು" ಎಂದ ಗಫೂರ್ ತನ್ನ ಸಮವಸ್ತ್ರದ ಟೋಪಿಯನ್ನು ಸರಿಮಾಡಿಕೊಂಡ.

ಆ ವೇಳೆಗೆ ಗ್ರೇಸಿಯಮ್ಮ ಕಾರಿನ ಹತ್ತಿರಕ್ಕೆ ಬಂದಳು. ಕೈ ತುಂಬಾ ಹೂವಿನ ಮಾಲೆಗಳು. ಓಡಿಹೋಗಿ ಗಫೂರ್ ಆ ಮಾಲೆಗಳನ್ನು ತಾನು ತೆಗೆದುಕೊಂಡು ಗಾಡಿಯಲ್ಲಿಟ್ಟ.

ಅಷ್ಟರಲ್ಲಿ ಚಿನ್ನಪಿಳ್ಳೈಯ ಧನಿಗಳೂ ಕಾರಿನ ಬಳಿಗೆ ಬಂದರು. ಗ್ರೇಸಿಯಮ್ಮನನ್ನು ಕಂಡಕೂಡಲೆ,

Scanned by CamScanner

"ಹಲೋ ಮಿಸ್ ಗ್ರೇಸಿ! ನೀವು ಯಾವಾಗ ಬಂದಿರಿ, ವಿಮಾನ ನಿಲ್ದಾಣದಲ್ಲಿ ಕಾಣಲೇ ಇಲ್ಲವಲ್ಲ!" ಎಂದು ಕುಶಲ ಪ್ರಶ್ನೆಗೆ ಶುರು ಮಾಡಿದರು.

"ಬಾಸ್ ಸುರೇಂದರ್ ಜರ್ಮನಿಗೆ ಹೊರಟರು. ಅವರನ್ನು ಬೀಳ್ಕೊಡಲು ಬಂದಿದ್ದೆ. ತಾವು ಯಾವಾಗ ಬಂದಿರಿ? ಯಾರು ಪ್ರಯಾಣ ಮಾಡಿದರು?" ಎಂದು ಗ್ರೇಸಿ ಕೇಳಿದಳು.

20–25ರ ಪ್ರಾಯದ ಗ್ರೇಸಿ ಬಲು ಚಾಲೂಕಾಗಿದ್ದಳು. ಆಂಗ್ಲ ಭಾರತ ಸಮನ್ವಯದ ಸಂಕೇತದಂತಿದ್ದ ಆಕೆ ಸೀರೆಯನ್ನು ಉಟ್ಟಿದ್ದರೂ ತಲೆಯ ಬಾಬ್‌ಕಟ್ ಲಕ್ಷಣವಾಗಿ ಕಾಣುತ್ತಿತ್ತು. ಮಿಶ್ರತಳಿಗಳ ಸೊಬಗೇ ಒಂದು ತರಹ! ಬಾಳಿನ ಹೋರಾಟದಲ್ಲಿ ಗೆಲ್ಲುವ ಛಾತಿ ಮತ್ತು ಕೆಚ್ಚು ಅವಕ್ಕೆ ಇರುತ್ತವೆ, ಎಂದು ಜೀವಶಾಸ್ತ್ರಜ್ಞರು ಹೇಳುವುದು ಸರಿ ಎಂದನಿಸುತ್ತಿತ್ತು ಗ್ರೇಸಿಯ ಪರಿಚಯವಿದ್ದವರಿಗೆ.

"ಕೊಯಮತ್ತೂರಿನಿಂದ ನನ್ನ ಸ್ನೇಹಿತರು ಬರಬೇಕಾಗಿತ್ತು. ಅವರನ್ನು ಎದುರುಗೊಳ್ಳಲು ಬಂದಿದ್ದೆ. ಏನು ಕಾರಣವೊ ಆತ ಬರಲಿಲ್ಲ. ಬರೀ ಕೈಯಲ್ಲಿ ಪೆಚ್ಚು ಪೆಚ್ಚಾಗಿ ಹಿಂದಿರುಗುತ್ತಿದ್ದೇನೆ."

–ಎಂದ ಮನ್ಸೂರ್ ಅಲೀಖಾನ್.

"ಅದು ಯಾಕೆ ಅಷ್ಟು ಬೇಸರದ ಧ್ವನಿ" ಎಂದು ಕ್ಕೊಂಕುತ್ತಾ ಗ್ರೇಸಿ ಕೇಳಿದಳು.

ಒಬ್ಬನೇ ಅಷ್ಟು ದೂರ ಹೋಗಬೇಕಲ್ಲ. ಅಂದಹಾಗೆ ನೀವೂ ಒಬ್ಬರೇ ಇರುವ ಹಾಗಿದೆ. ನನ್ನ ಜತೆಯಲ್ಲಿ ಬನ್ನಿ. ಮಜೇಂದ್ರ ಭವನಕ್ಕೆ ಹೋಗಿ ಕಾಫಿ ಕುಡಿದು ನಂತರ ನಿಮ್ಮ ಮನೆಗೆ ಮುಟ್ಟಿಸುತ್ತೇನೆ. ನಿಮ್ಮ ಕಾರು ಹೂ ಹಾರಗಳನ್ನು ತೆಗೆದುಕೊಂಡು 'ಬಾಸ'ನ ಮನೆಗೆ ಕೊಡಲಿ" ಎಂದ ಮನ್ಸೂರ್ ಅಲೀಖಾನ್.

"ಆಗಬಹುದು" ಎಂದು ಸೂಚಿಸುವ ನಗೆ ಹೂಡಿ ಸೀರೆಯನ್ನು ತುಸು ಮೇಲಕ್ಕೆ ಹಿಡಿದು ಮನ್ಸೂರನ ಕಾರಿನಲ್ಲಿ ಗ್ರೇಸಿ ಕುಳಿತಳು.

ಸಧ್ಯ! ಇವತ್ತು ಬೇಗ ಮನೆಗೆ ಹೋಗಿ ಬೀಬಿಯನ್ನು ಕರೆದುಕೊಂಡು ಅಂಗಡಿ ವ್ಯಾಪಾರ ಮಾಡಿ, ಆಮೇಲೆ ಹಿಂತಿರುಗಿ ಧಣಿಗಳ ಮನೆಗೆ ಹೋಗಬಹುದು ಎಂದು ಸಂತೋಷದಿಂದ ತನಗೆ ತಾನೇ ಹೇಳಿಕೊಂಡು ಗಫೂರ್ ಕಾರಿನಲ್ಲಿ ಕುಳಿತು ಸ್ಟಾರ್ಟ್ ಮಾಡಿದ.

ಪುಟ್ಟದಾದರೂ ಅಚ್ಚುಕಟ್ಟಾಗಿತ್ತು ಆ ಮನೆ. ಹೊರಬಾಗಿಲ ಪಕ್ಕದಲ್ಲಿದ್ದ ಗುಂಡಿಯನ್ನು ಮಾಲತೀಜೀ ಒತ್ತಿದಳು. ಮನೆಯ ಒಳಗೆ ಟಿಂಗ್ ಟಾಂಗ್ ಟಿಂಗ್ ಎಂದು ಸಂಗೀತದ ತೆರನಾಗಿ ಗಂಟೆಯು ಬಾರಿಸಿತು. ಎರಡು ಮೂರು ಕ್ಷಣಗಳಲ್ಲಿ ಹೊರ ಬಾಗಿಲು ತೆರೆಯಿತು. ಸುಮಾರು, ನಲವತ್ತು ಐವತ್ತು ವರ್ಷದ, ಅಗ್ನಿಗೆ ಅಭಿಷೇಕ ಮಾಡಿಸಿದಂತಿದ್ದ ದುಡುಮಿ ಹೆಂಗಸು "ಬನ್ನಿ, ಮಾಲತೀಜೀ! ಗ್ರೇಸಿಯಮ್ಮ ಸ್ನಾನ ಮಾಡಿ ಬಟ್ಟೆ ಹಾಕಿಕೊಳ್ಳುತ್ತಿದ್ದಾರೆ. ಒಂದು ನಿಮಿಷದಲ್ಲಿ ಸಿದ್ಧವಾಗ್ತಾರೆ, ಬಂದು ಬಿಡ್ತಾರೆ. ನೀವು ಬಂದರೆ ಡ್ರಾಯಿಂಗ್ ರೂಂನಲ್ಲಿ ಕೂರಿಸು ಎಂದು ಹೇಳಿದರು. ಬನ್ನಿ ಕೂತುಕೊಳ್ಳಿ" ಎಂದು ಹೇಳುತ್ತಾ ಮಾಲತೀಜೀಯವರನ್ನು ಡ್ರಾಯಿಂಗ್ ರೂಂನಲ್ಲಿ ಕೂರಿಸಿದಳು.

ಸುತ್ತಲೂ ನೋಡಿದಳು ಮಾಲತೀಜೀ! ಆಂಗ್ಲೋ ಭಾರತೀಯ ಹೆಣ್ಣುಗಳು. ಎಷ್ಟು ಲಕ್ಷಣವಾಗಿ ಡ್ರಾಯಿಂಗ್ ರೂಮನ್ನು ಸಿಂಗರಿಸುತ್ತಾರೆ! ಎಂದುಕೊಂಡಳು. ಕುಳಿತುಕೊಳ್ಳುವ ಸೋಫಾದ ಬಳಿ ಪುಟ್ಟ ಕೈ ಮೇಜ. ಅದರ ಮೇಲೊಂದು ಹೊಸಾ ನಮೂನೆ ಟ್ರಾನ್ಸಿಸ್ಟರ್! ಆ ಕಡೆ ಕಣ್ಣೆಳೆಯುವ ಚಿತ್ರಗಳಿರುವ ಹೆಂಗಸರ ಪತ್ರಿಕೆಗಳು. ಯೇಸುವಿನ ದಂತದ ಶಿಲುಬೆ ಗೋಡೆಯ ಮೇಲೆ. ಹಾಸಿರುವ ರತ್ನಗಂಬಳಿ ಎಷ್ಟು ಅಂದದ ಡಿಸೈನ್‌ನಲ್ಲಿದೆ.

ಅಷ್ಟರಲ್ಲೇ ಡ್ರಾಯಿಂಗ್ ರೂಂನೊಳಕ್ಕೆ ಹಗುರಾದ ಹಿತಪರಿಮಳವು ಹರಡಿ ಬಂತು. ಅದರ ಹಿಂದೆಯೇ ಗ್ರೇಸಿಯೂ ಬಂದಳು–"ಚಾನಲ್ ನಂಬರ್ 5" ಅಂದುಕೊಂಡಳು ಮಾಲತೀಜೀ–ಗ್ರೇಸಿಯ ಪರಿಮಳವನ್ನು ಗಮನಿಸಿ.

"ತುಂಬಾ ಹೊತ್ತು ಕಾಯಿಸಿದೆನೇನಮ್ಮ! ಕ್ಷಮಿಸಬೇಕು" –ಎಂದು ಹೇಳುತ್ತ, ಮಾಲತೀಜೀಯ ಕೈಹಿಡಿದು ಸೋಫಾದ ಮೇಲೆ ಕೂರಿಸಿ ಅವಳನ್ನು ಒತ್ತಿಕೊಂಡು ಕೂತಳು. ಮಾಲತಿಯ ಕೈಗಳನ್ನು ತನ್ನ ತೊಡೆಯ ಮೇಲಿರಿಸಿಕೊಂಡು ಹಗುರಾಗಿ, ಹೊಸೆಯುತ್ತ,

"ಈ ಉಂಗುರವನ್ನು ಯಾವಾಗ ಕೊಂಡೆ ಮಾಲತೀಜೀ" ಎಂದು ಉದ್ಗಾರದಿಂದ ಕೇಳಿದಳು.

"ಚರಕಾ ಸಂಘದ ಸಿಬ್ಬಂದಿಯವರು ಹೋದ ಹುಟ್ಟಿದ ಹಬ್ಬದ ದಿನ ಇದನ್ನು ನನಗೆ ಉಡುಗೊರೆಯಾಗಿ ಕೊಟ್ಟರು. ಅಷ್ಟು ವಿಶ್ವಾಸದಿಂದ ಕೊಟ್ಟರೆ ಹೇಗೆ ಬೇಡ ಅನ್ನುವುದು. ತೆಗೆದುಕೊಂಡೆ. ಒಂದೂವರೆ ಕ್ಯಾರಟ್ ಈ ವಜ್ರ

Scanned by CamScanner

ಎಂದು ಉಂಗುರ ನೋಡಿದವರು ಹೇಳಿದರು. ನನಗೆ ವಜ್ರವೈಢೂರ್ಯ ಅಂದರೆ ಏನೂ ತಿಳಿಯದು! ಅದು ನಿನಗೂ ಗೊತ್ತಲ್ಲ" ಎಂದು ಮಾಲತೀಜೀ ತುಂಬಾ ನಮ್ರತೆಯಿಂದಲೆಂಬಂತೆ ಹೇಳಿದಳು.

"ಚರಕಾ ಸಂಘಕ್ಕೆ ಅಷ್ಟು ದೊಡ್ಡ ಸಾಲವನ್ನು ಸರಕಾರದಿಂದ ಕೊಡಿಸಿದಿ, ಮಾಲತೀಜೀ ನಿನ್ನ ಉಪಕಾರಕ್ಕೆ ಅವರು ಕೃತಜ್ಞತೆಯ ವಿಶ್ವಾಸವನ್ನು ಸ್ವಲ್ಪವಾದರೂ ತೋರಿಸಬೇಡವೇ?"ಎಂದು ಗ್ರೇಸಿ ಲೊಚಗುಟ್ಟಿದಳು. ಅವಳ ಹೊಟ್ಟೆಯಲ್ಲೂ ಆ ವಜ್ರದ ಉಂಗುರವನ್ನು ನೋಡಿದ ಮೇಲೆ ಕಿಚ್ಚು ಬಿದ್ದಂತಾಗಿತ್ತು.

ಆ ವೇಳೆಗೆ ಗ್ರೇಸಿ ಮನೆಯ ಆಯಾ ಟೀ ಮತ್ತು ಬಿಸ್ಕತ್‌ಗಳನ್ನು ತಂದು ಮುಂದೆ ಇಟ್ಟಳು.

"ಟೀ ತೊಗೋ ಮಾಲತೀ!" ಎಂದು ಆಹ್ವಾನಿಸುತ್ತ ಗ್ರೇಸಿ ಟ್ರಾನ್ಸಿಸ್ಟರನ್ನು ತಿರುಗಿಸಿದಳು. ಸಂಗೀತ ಹಿತವಾಗಿ ಹೊರಹೊಮ್ಮಿತು.

"ಎಷ್ಟು ಸ್ಪಷ್ಟವಾಗಿ ಸಂಗೀತ ಕೇಳಿಸುತ್ತೆ ಗ್ರೇಸಿ! ಎಲ್ಲಿಂದ ತರಿಸಿದೆ ಟ್ರಾನ್ಸಿಸ್ಟರನ್ನು" ಎಂದು ಅಚ್ಚರಿ ಪಡುತ್ತ ಮಾಲತೀಜೀ ಕೇಳಿದಳು. ಒಂದು ಬಿಸ್ಕತ್ತನ್ನು ಕಚ್ಚಿ ತಿನ್ನುತ್ತಾ ಟೀ ಕುಡಿಯಲಾರಂಭಿಸಿದಳು.

"ಹೋದಸಲ ನಮ್ಮ ಬಾಸ್ ಜರ್ಮನಿಗೆ ಹೋಗಿದ್ದರಲ್ಲ, ಆಗ ಇದನ್ನು ತಂದರು, ಉಡುಗೊರೆಯಾಗಿ ನನಗೆ ಕೊಟ್ಟರು." ಎಂದು ತುಸು ಹೆಮ್ಮೆಯಿಂದಲೇ ಹೇಳಿದಳು.

ಟೀ ಮುಗಿಯಿತು. ನಂತರ ಗ್ರೇಸಿ ಕೇಳಿದಳು.

"ನೀನು ಬಂದ ಕೆಲಸವೇನು ಅದನ್ನು ಹೇಳಲೇ ಇಲ್ಲವಲ್ಲೇ"

"ಈಗ ಹೇಳೋಣ ಅಂತಿದ್ದೆ. ನೀನೇ ಕೇಳಿದೆ. ಶುಭ ಸೂಚನೆ ಅನ್ನು. ಖಾದಿ ಸಹಕಾರ ಸೊಸೈಟಿಯ ರಜತ ಹಬ್ಬಕ್ಕೆ ಅಂತ ಒಂದು ಸಂಗೀತ ಕಚೇರಿ ಏರ್ಪಡಿಸಿದ್ದೇವೆ. ಟಿಕೆಟ್ಟುಗಳನ್ನು ಸಂಗೀತ ಕಚೇರಿಗೆ ಅಂತ ಮಾರಿ, ಬಂದ ಲಾಭದಿಂದ ರಜತ ಹಬ್ಬವನ್ನು ಆಚರಿಸಬೇಕು. ಏಕೆಂದರೆ ಸೊಸೈಟಿಯ ಗ್ರಾಂಟ್ ಹಣವೆಲ್ಲ ಮುಗಿದುಹೋಗಿದೆ. ನೀನು ಒಂದಿಪ್ಪತ್ತು ಟಿಕೆಟ್‌ಗಳನ್ನು ಮಾರಿಕೊಡಬೇಕು" ಎಂದು ಮಾಲತೀಜೀ ಕೇಳಿದಳು.

"ಇಪ್ಪತ್ತು ಟಿಕೆಟ್ಟುಗಳನ್ನು ಮಾರಬಹುದು, ಆದರೆ ಟಿಕೆಟ್‌ನ ಮೊತ್ತವೆಷ್ಟು?" ಎಂದು ಗ್ರೇಸಿ ಕೇಳಿದಳು.

"ಐವತ್ತು ರೂಪಾಯಿನ ಟಿಕೆಟ್ಟಿದೆ, ನೂರರದೂ ಇದೆ. ಐನೂರರದೂ ಇದೆ. ಯಾವುದು ಕೊಡಲಿ?" ಎಂದಳು ಮಾಲತೀಜೀ.

"ಐವತ್ತರದೇ ಕೊಡಮ್ಮ! ನೀನು ಗಾಳ ಹಾಕಿದ ಮೇಲೆ ಕಚ್ಚಿಕೊಳ್ಳದೇ ಇರೋಕ್ಕೆ ಆಗುತ್ತೇ?" ಎಂದಳು ಗ್ರೇಸಿ.

20 ಟಿಕೇಟುಗಳ ಪುಸ್ತಕವನ್ನು ಗ್ರೇಸಿಯ ಕೈಲಿಟ್ಟು ಮಾಲತೀಜೀ ಹೊರಬಂದಳು.

* * *

ಗೊಲ್ಲರ ಕೇರಿಯ ಕೊನೆ ಮನೆಯ ಮುಂದೆ ಓರಣವಾಗಿ ಸೆಗಣಿ ನೀರು ಚಿಮುಕಿಸಿ, ರಂಗೋಲಿ ಇಟ್ಟಿತ್ತು. ಅದನ್ನು ತುಳಿದುಕೊಂಡೇ ಹೋದ ಪೋಲೀಸ್ ಪ್ಯಾದೆ ಮನೆಯ ಬಾಗಿಲನ್ನು ಬಲವಾಗಿ ತಟ್ಟಿದ. ಒಳಗಿಂದ "ಯಾರೋ ಅದು ಬಾಗಿಲು ಮುರಿಯೋ ಹಾಗೆ ತಟ್ತೀಯಲ್ಲೋ?" ಎಂದು ರೇಗಿದ ಧ್ವನಿ ಕೇಳಿಸಿತು. ಹಿಂದೆಯೇ ಮನೆಯಾಕೆ ಬಂದಳು. ಬಾಗಿಲ ಅಗುಳಿ ತೆಗೆದಳು. ಅವಳ ಮುಖದಲ್ಲಿ ಇನ್ನೂ ಕೋಪ ಮಿಂಚುತ್ತಿತ್ತು. ಕಣ್ಣುಗಳು ಕೆಂಪೇರಿದ್ದುವು. ಕೈಯಲ್ಲಿ ಕಸಪೊರಕೆಯೂ ಇತ್ತು. ಆದರೆ ಎದುರಿನಲ್ಲಿ ಪೋಲೀಸಿನವ ನಿಂತಿದ್ದನ್ನು ನೋಡಿ ಗಾಬರಿಯಾದಳು.

"ಇಲ್ಲಿಗೆ ಯಾಕೆ ಬಂದೇಪ್ಪಾ! ಏನು ಬೇಕಾಗಿತ್ತು. ಗಂಡಸರು ಹೊರಗೆ ಹೋಗಿದಾರೆ" ಎಂದಳು. ಸೆರಗನ್ನು ಪೂರ್ತಿ ಹೊದ್ದುಕೊಂಡಳು.

"ಬಿಡ್ಡಣ್ಣನ ಮನೆ ಅಲ್ವಾ ಇದು?" ಎಂದ ಪೋಲೀಸಿನವ.

"ಅಲ್ಲ" ಎಂದಳು ಆಕೆ.

"ಅ್ಹ... ಮತ್ತೆ ಇದೇ ಬಿಡ್ಡಣ್ಣನ ಮನೆ ಎಂದು ಹೇಳಿದರು" ಎಂದ ಸ್ವಲ್ಪ ತಡವರಿಸುತ್ತಾ ಪೋಲೀಸಿನವ.

"ಇದು ನನ್ನ ಮನೆ. ನಂಜೀ ಮನೆ. ಬಿಡ್ಡಣ್ಣನವರು ನನ್ನ ಗಂಡಸರು" ಎಂದಳು ಕೆಚ್ಚಿನಿಂದ, ನಂಜಿ.

"ವ್ಹಾರೆ, ಮಿಯ್ಯಾ! ಇದು ನಿನ್ನ ಮನೆ, ನಿನ್ನ ಗಂಡಸಿನದಲ್ಲ" ಎಂದು ಮೀಸೆಯನ್ನು ತಿರುವಿದ ಬಿಡ್ಡಣ್ಣ.

ಎಲ್ಲೋ ಕೇಳಿದ ಧ್ವನಿ ಇದ್ದ ಹಾಗಿತ್ತು ನಂಜೀಗೆ, ಆದರೆ ಸುಲಭವಾಗಿ ನೆನಪಾಗಲಿಲ್ಲ.

"ಬಿಡ್ಡಣ್ಣನ ವಿಚಾರದಲ್ಲಿ ನಿನ್ನನ್ನು ಒಂದೆರಡು ಪ್ರಶ್ನೆ ಕೇಳಬೇಕಾಗಿದೆ. ನಡಿ, ಒಳಕ್ಕೆ" ಎಂದನ್ನುತ್ತಾ ಪೋಲಿಸಿನವ, ನಂಜಿಯನ್ನು ನೂಕಿಕೊಂಡೇ ಒಳಕ್ಕೆ ಹೋದ. ನಖಶಿಖಾಂತ ಕೋಪ ಉಕ್ಕುತ್ತಿತ್ತು ನಂಜೀಗೆ. ಕೈಲಿದ್ದ

Scanned by CamScanner

ಕಸಪೊರಕೆಯನ್ನು ಬಿಗಿಯಾಗಿ ಹಿಡಿದುಕೊಂಡಳು. ಎರಡು ಏಟು ಮಡಗಿ ನಂತರ ಬೊಬ್ಬೆ ಹೊಡೆಯುವುದೇ? ಅಥವಾ ಮೊದಲೇ ಬೊಬ್ಬೆ ಹೊಡೆದು ಬೀದಿಯವರನ್ನು ಬರಮಾಡಿಕೊಂಡು ನಂತರ ಛೀಮಾರಿ ಹಾಕುವುದೇ – ಎಂದು ಒಂದು ಕ್ಷಣ ಯೋಚಿಸಿದಳು.

ಅಷ್ಟರಲ್ಲಿ ಪೋಲೀಸಿನವ ರುಮಾಲು ತೆಗೆದಿಟ್ಟ. ಮೀಸೆಯನ್ನೂ ಕಳಚಿ ಜೇಬಿನಲ್ಲಿಟ್ಟ.

"ನೀನಾ! ಹಿಂಗ್ಯಾಕೆ ಮಾಡಿದೆ ಬಿಡ್ಡಣ್ಣ! ಒಂದು ಕ್ಷಣ ಆಗಿದ್ದರೆ ಈ ಪೊರಕೇಲಿ ನಿನ್ನ ಮೀಸೇನ ಗುಡಿಸಿ ಬಿಡ್ತಾ ಇದ್ದೆನಲ್ಲಾ!" ಎಂದು ನಂಜಿ ಆಶ್ಚರ್ಯಪಡುತ್ತಾ ಹೇಳಿದಳು.

"ರೇಗಿದಾಗ ನೀ ಬಲು ಚೆಂದ ಕಾಣ್ತಿ, ನಂಜಿ! ರೇಗಿಸಿ ನೋಡೋಣ ಅಂತಲೇ ಬಂದೆ. ಆದರೆ ಕಸಪೊರಕೆ ನೋಡಿದ ಮೇಲೆ ಬೇಗ ರುಮಾಲು ಕಳಚಿ, ಮೀಸೆ ತೆಗೆದಿಟ್ಟೆ" ಎಂದ ಬಿಡ್ಡಣ್ಣ ನಗುತ್ತಾ.

"ಇದೇನು ವೇಷ ನಿಂದು? ಎಂಟು ದಿನ ಆತು ಮನೆ ಬಿಟ್ಟು ಹೋಗಿ, ಏನೊಂದೂ ಹೇಳಲಿಲ್ಲ. ಈಗ ಹೀಗೆ ಬಂದೆ. ಏನು ವಿಷಯ? ಕಾಫಿ ಕಾಯಿಸಿ ಕೊಡಲಾ?" ಎಂದು ನಂಜಿ ಕೇಳಿದಳು.

"ರಾಮೋಜಪ್ಪ-ಹೇಳಿಕಳಿಸಿದರು, ಜಟ್ಪಂತ ಬಾ ಅಂತ. ಅವರ ತಾವಕೆ ಹೋದೆ. ಪೋಲೀಸ್ ವೇಷ ಹಾಕ್ಕೊಂಡು–ಕಾಗದದ ಕಾರ್ಖಾನೆ ಇಲ್ಲಾ – ಅಲ್ಲಿಗೆ ಹೋಗಿ ಅಲ್ಲಿನ ಧಣಿಗಳ ಹತ್ತಿರ ಹೀಗೆ ಹೀಗೆ ಹೇಳು ಅಂದರು, ಹೇಳಿ ಬಂದೆ. ತರಪೇತು ಮಾಡುಕ್ಕೆ 5–6 ದಿನ ತೊಗೊಂಡರು. ನಿನ್ನೆ ಸಾಯಂಕಾಲ ನನ್ನ ಕೆಲಸ ಮುಗಿಸಿದೆ. ಆದರೆ ರಾಮೋಜಪ್ಪ ಅಂದರು ಇವತ್ತು ರಾತ್ರಿ ನೀನು ಅಹ್ಮದ್ ಕಾಕಾ ಜತೆ ಇರು. ಏನಾದರೂ ಬೇಕಾದರೆ ಕರೀತೀನಿ. ಅಗತ್ಯ ಇಲ್ಲದೆ ಇದ್ದರೆ ಬೆಳಿಗ್ಗೆ ಮನೆಗೆ ಹಿಂತಿರುಗು, ಅಂತ. ಹಂಗೇ ಮಾಡಿದೆ. ವಸಿ ಕಾಫಿ ಮಾಡಿ ತಾ. ಕಾಕಾನ ಚಾ ಕುಡಿದು ನಾಲಿಗೆ ಮುಲ ಮುಲ ಅಂತಿದೆ" ಎಂದ ಬಿಡ್ಡಣ್ಣ.

"ಕಾಗದದ ಕಾರ್ಖಾನೆ ಧಣಿಗಳ ತಾವ ನೀನೇನು ಹೇಳಿದೆ ಅದನ್ನು ಹೇಳದೆ, ಕಾಫಿ–ಮಾಡಿ ತಾ ಅಂದರೆ ಹೋಗೇನಾ?" ಎಂದಳು ನಂಜಿ.

"ಅದೆಲ್ಲ ಗುಟ್ಟು, ಹೇಳಬಾರದು" ಅಂದ ಬಿಡ್ಡಣ್ಣ ಅಂಗಿ ಕಳಚುತ್ತಾ.

"ಗುಟ್ಟು ರಟ್ಟಾಗದೆ ಇದ್ದರೆ, ರೊಟ್ಟೀನೂ ಇಲ್ಲ, ಕಾಫೀನೂ ಇಲ್ಲ" ಎಂದಳು ಖಡಾಖಂಡಿತವಾಗಿ ನಂಜಿ.

ಬಿಡ್ಡಣ್ಣ ಮೆದುವಾದ. ನಂತರ ನುಡಿದ–

"ಅವನಿಗೆ 'ನಿನ್ನ ಮೇಲೆ ಮೂಗರ್ಜಿ ಬಂದಿದೆ. ಜರ್ಮನಿಗೆ ಹೋದಾಗ ಎರಡು ಲಕ್ಷ ರೂಪಾಯಿನ ಯಂತ್ರಗಳಿಗೆ ನಾಲ್ಕು ಲಕ್ಷ ಅಂತ ಅಲ್ಲಿ ಬಿಲ್ ಹಾಕಿಸಿದಿ ಅಂತ. ಅಲ್ಲೇ ನಿನ್ನ ಹೆಸರಿನಲ್ಲಿ 2ಲಕ್ಷ ಮಾರ್ಕ್ಸ್ ಇಟ್ಟಿದೀ ಅಂತ. ಕಾರ್ಖಾನೆ ಬಿಲ್ ನೋಡಿಕೊಂಡು ಹೋಗಬೇಕು, ತನಿಖೆ ಮಾಡಬೇಕು ಅಂತ ಬಂದೀನಿ' ಎಂದೆ.

ಧಣಿ ಯಾರು ಗೊತ್ತಾ? ಒಳ್ಳೇ ಶಿಸ್ತುಗಾರ ಪುಟ್ಟಸ್ವಾಮಿ. ಸುರೇಂದರ್ ಅಂತ. ಒಂದು ನಿಮಿಷ ತಬ್ಬಿಬ್ಬಾದ. ನಂತರ ಕಾರ್ಖಾನೆ ಪುಸ್ತಕಗಳನ್ನು ತರಿಸಿ ತಪಶೀಲು ತೋರಿಸಿದ. ಎಲ್ಲಾ ಸರಿಯಾಗಿದೆ ಅಂತ ಒಪ್ಪಿಕೊಂಡೆ. "ನೋಡಿ ಸಾರ್! ಯಾರೋ ನಿಮಗೆ ಬೇಡದವರು ರಿಸರ್ವ್ ಬ್ಯಾಂಕಿಗೆ ಮೂಗರ್ಜಿ ಬರೆದಿದ್ದಾರೆ. ಅವರೇ ನನ್ನನ್ನು ಕಳಿಸಿದ್ದಾರೆ' ಎಂದು ಹೇಳಿದೆ.

'ನಿನ್ನ ಕೆಲಸ ನೀನು ಮಾಡಿದೆ' ಅಂದರು. 'ನಿನ್ನ ತಪ್ಪೇನೂ ಇಲ್ಲ' ಅಂದರು. ನಗುನಗುತಾನೇ ಕಾಫಿ ತರಿಸಿಕೊಟ್ಟು ಕಳಿಸಿದರು. ಅಷ್ಟೇ ನೋಡು ನಾನು ಮಾಡಿದ್ದು.

ಪುನಃ "ಬೆಳಿಗ್ಗೆ ಅಹ್ಮದ್ ಕಾಕಾನ ಅಂಗಡಿಯಿಂದ ಹಿಂತಿರುಗುವಾಗ ರಾಮೋಜಪ್ಪನವರನ್ನು ನೋಡುಕ್ಕೇ ಆಗಲಿಲ್ಲ. ಮೊದಲೇ ಹೇಳಿದ್ದರಲ್ಲಾ ಅಂತ ಬಂದು ಬಿಟ್ಟೆ. ಹಂಗೂ ನಿನ್ನ ನೋಡೋಣ ಅಂತ ಅನ್ನಿಸ್ತು. ದಿರಸೂ ಇತ್ತು. ಒಂದು ಆಟ ಹೂಡಿದೆ" ಎಂದ ಬಿಡ್ಡಣ್ಣ.

ಕಾಫಿ ಕಾಯಿಸೋಕೆ ನಂಜಿ ಅಡಿಗೆ ಕೋಣೆಗೆ ಹೋದಳು.

* * *

ಮೇಜಿನ ಮೇಲಿದ್ದ ಕಾಗದಗಳನ್ನು ಒಂದೊಂದನ್ನಾಗಿ ಸುರೇಂದರ್ ನೋಡುತ್ತಿದ್ದ. ಒಂದು ಕಾಗದವನ್ನು ನೋಡಿ ಜಟ್ಪಂತ ಸೆಟೆದು ಕುಳಿತ. ಮೇಜಿನ ಬಳಿ ಇದ್ದ ಗುಂಡಿಯನ್ನು ಒತ್ತಿದ. ಕೆಲವೇ ಸೆಕೆಂಡುಗಳಲ್ಲಿ ಒಳಕ್ಕೆ ಬಂದ ಗ್ರೇಸಿ ತನ್ನ 'ಬಾಸ್'ನ ಮುಖವನ್ನು ನೋಡಿದಳು. ಮುಖ ಬಿಳುಪೇರಿತ್ತು. ಕಳೆಗುಂದಿತ್ತು, ನನ್ನ ಮುಖವನ್ನು ಕಂಡರೆ ತತ್‌ಕ್ಷಣ ನಗುಮುಖಿಯಾಗುತ್ತಿದ್ದ 'ಬಾಸ್' ಇವತ್ತು ಹೀಗೇಕೆ? ಎಂದು ಅವಳಿಗೂ ಕಾತರವಾಯಿತು.

"ಈ ಕಾಗದ ಯಾವಾಗ ಬಂತು?" ಎಂದ ಸುರೇಂದರ್.

"ನಿನ್ನೆ ಸಂಜೆ ನಮ್ಮ ಟಪಾಲ್ ಪೆಟ್ಟಿಗೆಯಲ್ಲಿ ಹಾಕಲ್ಪಟ್ಟಿತ್ತು. ಈ ದಿನ ಬೆಳಿಗ್ಗೆ ತೆಗೆದಾಗ ಸಿಕ್ಕಿತು. ನಿಮ್ಮ ವೈಯಕ್ತಿಕ ಕಾಗದ ಎಂದು ಹಾಗೇ ಇರಿಸಿದೆ" ಎಂದಳು ಗ್ರೇಸಿ.

ಎರಡು ನಿಮಿಷ ಸುರೇಂದರ್ ಮಾತನಾಡಲಿಲ್ಲ. ಆ ಎರಡು ನಿಮಿಷ ಅಲ್ಲಿ ನಿಂತಿದ್ದ ಗ್ರೇಸಿಗೆ ಎರಡು ಯುಗಗಳಂತೆ ಅನಿಸಿತು. ಕಡೆಗೆ ತಡೆಯ ಲಾರದೆ,

"ಕಾಗದದಲ್ಲಿ ಏನಿದೆ? ಹೇಳಿದರೆ ಸಂಬಂಧ ಪಟ್ಟ ಕಾಗದ ಪತ್ರಗಳನ್ನು ಹುಡುಕಿ ತರುತ್ತೇನೆ" ಎಂದಳು ಗ್ರೇಸಿ.

"ಕಾಗದದಲ್ಲಿ ಏನಿದೆ? ಏನೂ ಅಂತಹ ದೊಡ್ಡ ಸುದ್ದಿ ಇಲ್ಲ. ಆದರೆ ನನ್ನನ್ನು ಜೈಲಿಗೆ ಕಳಿಸಿ, ಮಾನ ಮರ್ಯಾದೆ ಎಲ್ಲವನ್ನೂ ಕಳೆಯುವಷ್ಟು ಸಾಮಗ್ರಿ ಇದೆ ಅಷ್ಟೇ. ಈಗ ನೀನು ಹೋಗಬಹುದು" ಎಂದ ಸುರೇಂದರ್ ನಂತರ ತಲೆಯನ್ನು ಎರಡೂ ಕೈಗಳಲ್ಲೂ ಅದುಮಿಟ್ಟುಕೊಂಡ.

ಗ್ರೇಸಿ ಹಿಂತಿರುಗಿದಳು.

ಕೆಲವೇ ನಿಮಿಷಗಳಲ್ಲಿ ಕೊಠಡಿಯಿಂದ ಸುರೇಂದರ್ ಹೊರಕ್ಕೆ ಬಂದ. "ಗ್ರೇಸಿ! ತುರ್ತಾಗಿ ಹೊರಗೆ ಹೋಗಬೇಕಾಗಿದೆ. ಹಿಂತಿರುಗಿ ಬರುವುದಕ್ಕೆ ಎಷ್ಟು ಹೊತ್ತು ಆಗುತ್ತೋ ತಿಳಿಯದು. ಯಾರಾದರೂ ಫೋನ್ ಮಾಡಿ ದರೆ, ನಾಳೆಗೆ ಭೇಟಿ ಗೊತ್ತು ಮಾಡು" ಎಂದು ಹೇಳಿ ಹೊರಗಡೆಗೆ ಹೊರಟ.

ಕಾರ್ ಹತ್ತಿಕೊಂಡು ನೆಟ್ಟಗೆ ಮಜೇಂದ್ರು ಭವನಕ್ಕೆ ಹೋದ. ಲಿಫ್ಟ್ ಹತ್ತಿ ಮೊದಲನೆಯ ಅಂತಸ್ತಿನಲ್ಲಿದ್ದ ರೂಂ ನಂ. 137ಕ್ಕೆ ಹೋದ. ಬಾಗಿ ಲನ್ನು ಹಗುರಾಗಿ ತಟ್ಟಿದ. ಬಾಗಿಲು ತೆಗೆಯಿತು.

"ಇದೇನು ಮಿ॥ ಸುರೇಂದರ್ ! ಫೋನ್ ಮಾಡದೇ ನೀವೇ ಬಂದಿದ್ದೀ ರಲ್ಲ ! ಹೇಳಿ ಕಳಿಸಿದ್ದರೆ ನಾನೇ ಬರುತ್ತಿದ್ದೆ. ಏನು ಬೇಕಾಗಿತ್ತು" ಎಂದು ಮನ್ಸೂರ್ ಅಲಿಖಾನ್ ಕೇಳುತ್ತಾ ಬರಮಾಡಿಕೊಂಡ.

ತನಗೆ ಬಂದಿದ್ದ ಕಾಗದ ಅದರಲ್ಲಿದ್ದ ಅಂಕಿ ಅಂಶಗಳು ಎಲ್ಲವನ್ನೂ ವಿವರಿಸಿ. "ಮನ್ಸೂರ್ ಭಾಯಿ ! ಈ ವಿಪತ್ತಿನಿಂದ ನನ್ನನ್ನು ಪಾರುಮಾಡ ಬೇಕು, ಈ ಕಾಗದ ಬರೆದವರಿಗೆ ಎಲ್ಲ ವಿವರಗಳೂ ತಿಳಿದಂತಿದೆ. ಅದನ್ನು ಅವರು ರಿಸರ್ವ್ ಬ್ಯಾಂಕಿಗೆ ಕಳಿಸಿದರೆ, ನನಗೆ ಜೈಲು ಖಂಡಿತ. ನಿಮಗೆ ಸುಮಾರು ಜನರ ಪರಿಚಯವಿದೆ. ಹೇಗಾದರೂ ಮಾಡಿ ನನ್ನನ್ನು ಬದುಕಿಸಿ.

ಎಷ್ಟು ಖರ್ಚಾದರೂ ಪರವಾಗಿಲ್ಲ. ಎಂಟು ಹತ್ತು ವರ್ಷಗಳಿಂದ ಈ ಕೆಲಸ ವನ್ನು ಮಾಡುತ್ತಿದ್ದೆ. ಯಾರಿಗೂ ಸುಳಿವು ಸಿಕ್ಕಲಿಲ್ಲ. ಈಗ ಕೆಟ್ಟೆ" ಎಂದು ಸುರೇಂದರ್ ಹೇಳಿದ.

ಕಾಗದವನ್ನು ಇಸುಕೊಂಡು ಮನ್ಸೂರ್ ಓದಿದ. ನಂತರ ಎರಡು ನಿಮಿಷ ಯೋಚಿಸಿ "ಸುರೇಂದರ್, ಭಾಯಿ ! ಮೊನ್ನೆ ಪಾರ್ಟಿಯಲ್ಲಿ ಯಾರೋ ಈ ಸುದ್ದಿಗೆ ಸಂಬಂಧಿಸಿದಂತೆ ಮಾತನಾಡಿದ ನೆನಪು. ವಿಚಾರಿಸಿ ನೋಡುತ್ತೇನೆ. ನನ್ನ ಕೈಲಾದ್ದು ಮಾಡುತ್ತೇನೆ. ನಾಳೆ ನಾಡಿದ್ದರಲ್ಲಿ ನಿಮಗೆ ಪತ್ರ ಕಳಿಸುತ್ತೇನೆ. ಅಥವಾ ನಾನೇ ಬಂದು ನೋಡುತ್ತೇನೆ. ಊರು ಬಿಟ್ಟು ಹೋಗಬೇಕಾಗಬಹುದು. ಆದುದರಿಂದ ಪತ್ರದ ಮಾತೆತ್ತಿದೆ'' ಎಂದ ಮನ್ಸೂರ್ ಭಾಯಿ.

ಮೂರನೆಯ ದಿನ ಸುರೇಂದರ್‌ಗೆ ಪತ್ರ ಬಂತು. ಮನ್ಸೂರರು ಬರೆದಿದ್ದು.

"ರೂಂ ನಂಬರ್ 136ರಲ್ಲಿ ಶ್ರೀ ರಾಮೋಜಿ ಅಂತ ಒಬ್ಬರಿದ್ದಾರೆ. ನಿಮ್ಮ ವ್ಯವಹಾರಕ್ಕೆ ಸಂಬಂಧಿಸಿದ ಕಾಗದ ಪತ್ರಗಳು ಆತನಲ್ಲಿವೆ. ಐದು ಲಕ್ಷ ರೂಪಾಯಿಗಳನ್ನು ಆತನಿಗೆ ನಂಬಿಕಸ್ಥನ ಕೈಲಿ ಕಳಿಸಿ. ಆತ ಆ ಕಾಗದ ಪತ್ರಗಳನ್ನು ನಿಮಗೆ ಕಳಿಸಿಕೊಡುತ್ತಾನೆ. ಮಿಕ್ಕ ವಿಷಯ ತಿಳಿದುಕೊಳ್ಳಲು ಕೈ ಹಾಕಬೇಡಿ" ಎಂದಿತ್ತು.

ಗ್ರೇಸಿಯೇ ಹಣವನ್ನು ತೆಗೆದುಕೊಂಡು ಹೋಗಿ ರೂಂ ನಂ. 136 ರಲ್ಲಿದ್ದಾತನಿಗೆ ಕೊಟ್ಟು ಆತ ಕೊಟ್ಟ ಕಾಗದ ಪತ್ರಗಳನ್ನು ತೆಗೆದುಕೊಂಡು ಹೋಗಿ ಸುರೇಂದರ್‌ನಿಗೆ ಕೊಟ್ಟಳು. ಲಕೋಟೆಯನ್ನು ಒಡೆದು ಅದರಲ್ಲಿದ್ದ ಕಾಗದಗಳನ್ನು ನೋಡಿ ಸುರೇಂದರ್‌ನ ಮುಖ ಹಿಗ್ಗಿತು. ಉಕ್ಕಿದ ಸಂತೋಷ ದಲ್ಲಿ ಅವನು ಗ್ರೇಸಿಯನ್ನು ತಬ್ಬಿಕೊಂಡು ಮುತ್ತಿಟ್ಟು "ಥ್ಯಾಂಕ್ ಯೂ ಗ್ರೇಸಿ" ಎಂದು ಹೇಳಿದ.

* * *

ಸ್ವಾಮಿ ಸಂಪಾದಕರೆ,

ಯಂತ್ರಗಳನ್ನು ಕೊಳ್ಳುವ ನೆಪದಲ್ಲಿ ಸುರೇಂದರ್ ವಿದೇಶೀ ವಿನಿಮಯ ವನ್ನು ಚೂಟಿಯಿಂದ ಮಾಡುತ್ತಿದ್ದ. ಎರಡು ಲಕ್ಷದ ವಿನಿಮಯ ಪಡೆದು ಅದಕ್ಕೆ ತಕ್ಕ ಇನ್‌ವಾಯ್ಸ್‌ಮಾಡಿಸಿ, ಒಂದೇ ಲಕ್ಷದ ಯಂತ್ರಗಳನ್ನು ತರಿ ಸುತ್ತಿದ್ದ. ಇನ್ನೊಂದು ಲಕ್ಷ ಹೊರ ದೇಶಗಳಲ್ಲೇ ಇರುತ್ತಿತ್ತು. ವಿದೇಶ ಗಳಿಗೆ ಹೋಗುವ ಇತರರಿಗೆ ಒಂದಕ್ಕೆರಡು ಲಾಭ ಪಡೆದು, ಹೊರಗೆ ಇದ್ದ

Scanned by CamScanner

ಹಣವನ್ನು ಅವರಿಗೆ ಸಿಗುವ ಹಾಗೆ ಮಾಡುತ್ತಿದ್ದ. ರಾಮೋಜಿಗೆ ಹೀಗೆ ಮಾಡು ಎಂದು ಹೇಳಿದೆ. ಅದರಂತೆ ಮನ್ಸೂರ್ ಅಲಿಖಾನ್ ಆದ. ತನ್ನ ಕೊಠಡಿಯ ಪಕ್ಕದ ರೂಂ ನಂಬರ್ 137ರಲ್ಲಿ ಉಳಕೊಂಡ. ಗ್ರೇಸಿಯ ಗೆಳೆತನವನ್ನು ಬೆಳೆಸಿದ. ಜರ್ಮನಿಯ ತಯಾರಕರಿಂದ ಮೊದಲು ಬಂದಿದ್ದ ಎಸ್ಟಿಮೇಟ್‌ಗಳನ್ನೂ ನೋಡಿದ. ನಂತರ ತಾನೇ ಜರ್ಮನಿಗೆ ಬರೆದು. ಸುರೇಂದರ್ ತರಿಸಿದ ಯಂತ್ರಗಳ ತಪಶೀಲು ಕೊಟ್ಟು ಇವು ನನಗೆ ಬೇಕು. ಎಷ್ಟು ಬೆಲೆ ಎಂದು ಬರೆದ. ಅವರು ಪತ್ರ ಬರೆದರು. ಅದನ್ನೆಲ್ಲ ಮನ್ಸೂರ್ ಭದ್ರವಾಗಿಟ್ಟ.

ಬಿಡ್ಡಣ್ಣನ ಕೈಲಿ ರಿಸರ್ವ್ ಬ್ಯಾಂಕಿನವರಿಗೆ ಅನುಮಾನ ಬಂದಿದೆ ಎಂದು ಸೂಚನೆ ಕೊಟ್ಟ.

ನಂತರ ತಾನೇ ಒಂದು ಪತ್ರವನ್ನು ಬರೆದು ಸುರೇಂದರ್‌ನ ವ್ಯವಹಾರದ ತಪಶೀಲನ್ನು ಕೊಟ್ಟು, ಇದನ್ನು ರಿಸರ್ವ್ ಬ್ಯಾಂಕಿಗೆ ಕಳಿಸೋಣ ಎಂದು ಕೊಂಡಿದ್ದೇನೆ ಎಂದು ಸಹಿ ಇಲ್ಲದ ಕಾಗದ ಕಳಿಸಿಕೊಟ್ಟ.

ಸುರೇಂದರ್ ಬುಟ್ಟಿಗೆ ಬಿದ್ದ. ಮನ್ಸೂರ್ ಅಲಿಖಾನ್‌ನನು ಅವ ತುರ್ತಾಗಿ ಭೇಟಿಯಾದಾಗಲೇ ಬಿದ್ದ ಅಂತ ಗೊತ್ತಾಯಿತು.

ಗ್ರೇಸಿ ಮನೆಗೆ ಹೋಗಿ ಮಾಲತೀಜಿ, ಸುರೇಂದರ್‌ನ ಟೂರ್ ವಿಷಯವನ್ನು ತಿಳಿದುಕೊಂಡು ಬಂದು ಹೇಳಿದಳು. ಗ್ರೇಸಿಯು ಕಾಗದ ಪತ್ರಗಳ ವಿವರವನ್ನು ಮನ್ಸೂರ್‌ನಿಗೆ ಗತ್ತಾ ಗತ್ತಾ ತಿಳಿಸಿದಳು. ಪಾಪ! ಅವಳಿಗೆ ಆಸೆ, ಮನ್ಸೂರರನ್ನು ಮದುವೆಯಾಗಿ, ಅವ ತೆರೆಯುವ ಹೊಸ ಕಾರ್ಖಾನೆಯ ಒಡತಿ ಆಗುತ್ತೇನೆ ಎಂದು.

ಮಾಲತೀಜೀಯ ಖರ್ಚು, ಬಿಡ್ಡಣ್ಣನ ಖರ್ಚು ಒಟ್ಟು 5000ರೂ. ರಾಮೋಜೀ ಬಿನ್ ಮನ್ಸೂರನ ಖರ್ಚು 5000. ಒಟ್ಟು ಗಿಟ್ಟಿಸಿದ್ದು 5 ಲಕ್ಷ. ನಾಲ್ಕು ಲಕ್ಷ ತೊಂಬತ್ತು ಸಾವಿರ ರೂಪಾಯಿಗಳನ್ನು ಕೊಂಡೆನಕಪಲ್ಲಿಯ ಪೂಜಾರಪ್ಪನವರ ಕಾಲ ಬಳಿ ಹಾಕಿ, ಈ ಸರದಿಯ ಕಾಣಿಕೆ ತೀರಿತು ಎಂದು ಅಡ್ಡಬಿದ್ದೆ.

ಅವರ ಅಣತಿಯ ಪ್ರಕಾರ ಈ ವಿಷಯದ ವಿವರಗಳನ್ನು ಪ್ರಚಾರಕ್ಕೆ ಕಳಿಸಿದ್ದೇನೆ.

"ಬುದ್ಧೋಜಿ"

ಕರಿಕೆರೆ ರಂಗನಾಥಸ್ವಾಮಿ

ಯಾವ ಹುತ್ತದಲ್ಲಿ ಯಾವ ಹಾವು ಸೇರಿಕೊಂಡು ಯಾವಾಗ ಹೆಡೆಯಾಡಿಸುತ್ತೋ ಭಗವಂತನೇ ಬಲ್ಲ.

"ನೀನು ಒಂದು ಸರ್ತಿ ಹೋಗಿ ನೋಡಿಕೊಂಡು ಬಾ. ದೇವಸ್ಥಾನವೇನೋ ಹಳೆಯದು, ಸಣ್ಣದೂ ಕೂಡ. ಆದರೆ ಅಲ್ಲಿರುವ ರಂಗನಾಥ ದೇವರು ತುಂಬಾ ಸತ್ಯವಂತ ದೇವರಪ್ಪ. ಭಕ್ತರ ಕೈಬಿಡೋ ದೇವರಲ್ಲ, ಅಲ್ಲಿರೋದು.

ಸುಲ್ತಾನನ ಕಾಲದಲ್ಲಿ ಆ ದೇವಸ್ಥಾನಕ್ಕೆ ವಿಶೇಷ ಮರ್ಯಾದೆ ಕೊಡುತ್ತಿದ್ದರು. ವೈಭವದ ಉತ್ಸವಗಳು, ಪೂಜೆ ಪುನಸ್ಕಾರಗಳು, ಮಂತ್ರಘೋಷ ಎಲ್ಲವೂ ಭರ್ಜರಿ ಮಟ್ಟದ್ದು.

ಒಂದು ಸಲ ಮರಾಠೆಯವರು ಸುಲ್ತಾನನ ಮೇಲೆ ದಾಳಿ ಮಾಡಿದಾಗ ಈ ದೇವಸ್ಥಾನದ ಹತ್ತಿರವೇ ಸುಲ್ತಾನ ಪಾಳ್ಯ ಹೂಡಿದ್ದ. ಅವನ ಫೌಜು ಅಷ್ಟೇನೂ ದೊಡ್ಡದಾಗಿರಲಿಲ್ಲ. ಮರಾಠೆಯವರೇನೊ ಭಾರಿ ಫೌಜು ತಂದಿದ್ದರು. ಸೋಲಬೇಕು ಅಥವಾ ತಲೆ ತಪ್ಪಿಸಿಕೊಂಡು ಓಡಿಹೋಗಬೇಕು ಅನ್ನೋ ಸ್ಥಿತಿ ಒದಗಿತ್ತು. ರಾತ್ರಿ ತುಂಬಾ ಯೋಚನೆ ಮಾಡ್ತಿದ್ದಾಗ ಅವನ ಜನಾನಾದಲ್ಲಿದ್ದ ಲಚುಮಿಬಾಯಿ 'ಹತ್ತಿರದಲ್ಲೇ ಕರಿಕೆರೆ ರಂಗನಾಥಸ್ವಾಮಿ ದೇವಸ್ಥಾನ ಇದೆ. ಆ ದೇವರಿಗೆ ನಾನು ಹರಿಸಿಕೊಂಡಿದ್ದೀನಿ. ಆ ದೇವರ ಪ್ರಸಾದಾನ ಬೆಳಗಿನ ಝಾವ ತರಿಸಿ ನಿಮ್ಮ ಕತ್ತೀಗೆ ಹಚ್ಚೀನಿ. ಆಮೇಲೆ ಯುದ್ಧಮಾಡಿ. ಗೆದ್ದೇ ಗೆಲ್ತೀರಿ' ಎಂದು ಹೇಳಿದಳಂತೆ.

ಸುಲ್ತಾನ ಹಾಗೇ ಮಾಡಿ ಆ ಯುದ್ಧದಲ್ಲಿ ಗೆದ್ದ. ಲಚುಮಿಬಾಯಿಯ ಸಲಹೆಯ ಮೇರೆಗೆ ಆ ದೇವಸ್ಥಾನಕ್ಕೆ ಬೇಕಾದಷ್ಟು ಧನ ಸಹಾಯ ಮಾಡಿದ

Scanned by CamScanner

ನಂತೆ. ತಾಮ್ರದ ಶಾಸನ ಬರೆಸಿ ಸಾಕಷ್ಟು ಜಮೀನನ್ನು ದೇವಸ್ಥಾನದ ಪೂಜೆಗೆ ಅಂತ ಇನಾಂಕೊಟ್ಟು ಫರ್ಮಾನ್ ಹೊರಡಿಸಿದನಂತೆ.

ಸುಲ್ತಾನನಿಗೆ ಹಿಂದೂ ದೇವಾಲಯಗಳ ಮೇಲೆ ದ್ವೇಷವೇನೂ ಇರ್ಲಿಲ್ಲ. ಜನರು ಸುಳ್ಳು ಸುದ್ದಿ ಹರಡಿದರು. ಇದೆಲ್ಲಾ ಇಂಗ್ಲಿಷಿನವರ ಕುಚೇಷ್ಟೆ."

–ಎಂದು ಮೂಡಲಗಿರಿ ಅಜ್ಜಯ್ಯ ನಾನು 6–8 ವರ್ಷದ ಹುಡುಗನಾಗಿದ್ದಾಗ ಹೇಳುತ್ತಿದ್ದರು; ಅವರಿಗೆ ಆಗ 104 ವರ್ಷ ವಯಸ್ಸು. ಕಣ್ಣು ಸರಿಯಾಗಿ ಕಾಣಿಸುತ್ತಿರಲಿಲ್ಲ. ಆದರೂ ತಕ್ಕಮಟ್ಟಿಗೆ ಗಟ್ಟಿಮುಟ್ಟಾಗಿದ್ದರು. ಅವರ ತಂದೆ, ತಾತ ಎಲ್ಲರೂ ಕರಿಕೆರೆ ಹೋಬಳಿಯಲ್ಲೇ ಮೊದಲಿದ್ದುದು. ಆದರೆ ನನ್ನ ತಂದೆ ಬೆಂಗಳೂರಿನಲ್ಲಿ ಕೆಲಸಕ್ಕೆ ಸೇರಿಕೊಂಡಾಗ ಅವರೂ ಬಂದು ಇಲ್ಲೇ ವೃದ್ಧಾಪ್ಯವನ್ನು ಕಳೆಯುತ್ತಿದ್ದರು ಮಗನ ಮನೆಯಲ್ಲಿ.

ಓದುಬರಹ, ಕೆಲಸ ಹುಡುಕುವುದು, ಇಲ್ಲ ಅನ್ನಿಸಿಕೊಳ್ಳುವುದು, ಇತ್ಯಾದಿ ಗಲಾಟೆಯಲ್ಲಿ ಕರಿಕೆರೆಗೆ ಹೋಗಲು ಸಾಧ್ಯವೇ ಆಗಲಿಲ್ಲ. ಆದರೆ ಮೊನ್ನೆ ನನ್ನ ಕಕ್ಷಿಗಾರ ರಾಮಾನುಜಂ ಬಂದು "ಕರಿಕೆರೆ ರಂಗನಾಥಸ್ವಾಮಿಗೆ ನಾಳೆ ಉತ್ಸವ ಏರ್ಪಡಿಸಿದ್ದೇನೆ. ನನ್ನದೇ ಕೈಂಕರ್ಯ. ನಮ್ಮ ಮನೆದೇವರು ಅದು. 10–12 ವರ್ಷಗಳು ನಾನೇ ಧರ್ಮದರ್ಶಿಯಾಗಿದ್ದೆ. ಪಹರಿಗೆ ಬಂದು ನೆಲೆಸಿದ ಮೇಲೆ ಆ ಕೆಲಸವನ್ನು ಮುಂದುವರಿಸಲಾಗಲಿಲ್ಲ. ಆದರೂ ಆಗಾಗ್ಗೆ ಹೋಗಿ ಸೇವೆ ಮಾಡಿ ಬರುತ್ತೇನೆ. ಚಿನ್ನದ ಕಿರೀಟವೊಂದನ್ನು ಮಾಡಿಸಿ ಅರ್ಪಿಸುತ್ತಿದ್ದೇನೆ. ನೀವು ಖಂಡಿತ ಬರಬೇಕು" ಎಂದು ಕರೆದಾಗಲೇ ಮೂಡಲಗಿರಿ ಅಜ್ಜಯ್ಯ 30 ವರ್ಷಗಳ ಹಿಂದೆ ಹೇಳಿದುದರ ನೆನಪಾಯ್ತು.

"ಆಗಲಿ, ಬಂದು ದೇವರ ಸೇವೆಯನ್ನು ಮಾಡುವ ಅವಕಾಶವನ್ನು ಏಕೆ ಕಳೆದುಕೊಳ್ಳಲಿ" ಎಂದೆ. ಲಕ್ಷಾಧಿಪತಿ ಕಕ್ಷಿಗಾರ ಕರೆದರೆ ಇಲ್ಲ ಅನ್ನಬಹುದೇ?

ಕಿರೀಟಧಾರಣಾ ಉತ್ಸವಕ್ಕೆ ನನ್ನ ಕಾರಿನಲ್ಲೇ ಹೋಗಿ ಬಂದೆ. ಅಷ್ಟೇನೂ ದೊಡ್ಡದಾದ ದೇವಸ್ಥಾನವಲ್ಲ. ಕರಿಕೆರೆ ಹೋಬಳಿಯಲ್ಲೂ 20–30 ಮನೆಗಳಿದ್ದರೆ ಹೆಚ್ಚು. ಮೂಡಲಗಿರಿ ಅಜ್ಜಯ್ಯನ ತಂದೆ ತಾತಂದಿರು ಈ ಗ್ರಾಮದ ಯಾವ ಮನೆಯಲ್ಲಿದ್ದರು ಎಂದು ವಿಚಾರಿಸಿದೆ. ಅವರುಗಳ ಹೆಸರು ಕೂಡ ಈಗ ಅಲ್ಲಿರುವ ಜನರಿಗೆ ತಿಳಿದಿದ್ದಿಲ್ಲ. ಪಾಳುಬಿದ್ದ ಗ್ರಾಮ. ಹಳೇ ತಲೆಗಳು ಯಾವುದೂ ಇಲ್ಲ. ಅಂದ ಮೇಲೆ 50–60 ವರ್ಷಗಳ ನಂತರ ಯಾರಿಗೂ ಹಳಬರ ನೆನಪು ಇರುವುದಿಲ್ಲ. ಅವರುಗಳಿದ್ದ ಮನೆ ಈಗ

ಇದೆಯೋ ಇಲ್ಲವೋ, ಅದನ್ನು ನೋಡಿ ಆಗುವ ಉದ್ಧಾರ ತಾನೇ ಏನು ಎಂದುಕೊಂಡು ಉತ್ಸವವನ್ನು ರಾತ್ರಿ ಕಣ್ಣು ತುಂಬಾ ನೋಡಿ ನಂತರ ಊರಿಗೆ ಹಿಂತಿರುಗಿದೆ.

*

ಅವತ್ತು ಶುಕ್ರವಾರ ಇರಬೇಕು. ಏಕೆಂದರೆ ಮಾರನೆ ದಿನ ಬೆಳಿಗ್ಗೆ "ವೆಂಕಟೇಶಾಯನಮಃ" ಎಂದು ಪಟ್ಟೆ ಪಟ್ಟೆ ನಾಮ ಹಾಕಿಕೊಂಡು, ಪಕ್ಕದ ಮನೆಯ ಶಿವಸ್ವಾಮಿ ಭಿಕ್ಷೆ ಬೇಡಲು ಬೆಳ್ಳಿ ಚೊಂಬು ಹಿಡಿದು ಬಂದಿದ್ದ. ಚೆನ್ನಾಗಿ ಜ್ಞಾಪಕ ಇದೆ. ಶ್ರಾವಣ ಶನಿವಾರವೇ. ಎಂಟು ವರ್ಷದ ಶಿವಸ್ವಾಮಿಯ ಕೆನ್ನೆ ಚಿವುಟಿ, ಅಕ್ಕಿ ಜತೆಗೆ ಬಾದಾಮಿ ಕೆಂಪು ಕಲ್ಲುಸಕ್ಕರೆ, ಗೋಡಂಬಿ ದ್ರಾಕ್ಷಿ ಎಲ್ಲವನ್ನೂ ಚೊಂಬಿಗೆ ಹಾಕುವ ಮೊದಲು, ನನ್ನಾಕೆ ನನ್ನನ್ನು ಕರೆದು "ನೋಡಿ ಅಂದ್ರೆ! ಶಿವೂನಿಗೆ ನಾಮ ಹಾಕಿದರೆ ಎಷ್ಟು ಮುದ್ದಾಗಿ ಕಾಣಿಸ್ತಾನೆ" ಎಂದು ಉದ್ಗಾರ ತೆಗೆದಿದ್ದಳು.

ಆ ಶುಕ್ರವಾರ ಸಂಜೆ ಗುಮಾಸ್ತ ಅಚ್ಚಪ್ಪ ಬಂದು,

"ಇವತ್ತು ಟೈಪ್ ಮಾಡಲು ಹೊತ್ತಿಲ್ಲ, ರಾಯರೇ! ಬೇಗ ಮನೆಗೆ ಹೋಗಬೇಕು. ನಾಳೆ ನಾಡಿದ್ದರಲ್ಲಿ ಬಂದು ಟೈಪ್ ಮಾಡಿಕೊಡುತ್ತೇನೆ. ಕ್ಷಮಿಸಬೇಕು. ಅಲ್ಲದೆ ನೀವು ಅವತ್ತು ಕೊಟ್ಟಿದ್ದಿರಲ್ಲಾ ಮೂವತ್ತು ರೂಪಾಯಿ ಕೈ ಸಾಲ, ಅದನ್ನು ಇಷ್ಟು ದಿನ ತೀರಿಸಲಾಗಲಿಲ್ಲ. ಈವತ್ತು ಹಿಂತಿರುಗಿ ಕೊಡ್ತೀನಿ. ಇಷ್ಟು ವಿಳಂಬವಾದುದಕ್ಕೆ ಕ್ಷಮೆ ಕೋರುತ್ತೇನೆ" ಎಂದ.

ನನಗೆ ಆಶ್ಚರ್ಯವಾಯಿತು. ಗುಮಾಸ್ತ ಅಚ್ಚಪ್ಪ ಮುಜರಾಯಿ ಆಫೀಸಿನಲ್ಲಿ ಕೆಳದರ್ಜೆಯ ಗುಮಾಸ್ತ. ವಾರಕ್ಕೆರಡೋ ಮೂರೋ ದಿನ ನನ್ನ ಆಫೀಸಿಗೆ ರಾತ್ರಿ ಬಂದು ಏನಾದರೂ ಟೈಪ್ ಮಾಡುವ ಕೆಲಸ ಇದ್ದರೆ ಮಾಡಿಕೊಡುತ್ತಿದ್ದ. ಹಾಳೆಗೆ 2 ರೂಪಾಯಿನ ಹಾಗೆ ಹಣ ಕೊಡುತ್ತಿದ್ದೆ. ಇಷ್ಟೆಲ್ಲಾ ದುಡಿದರೂ ತಿಂಗಳ ವರಮಾನದಲ್ಲಿ ಅವನ ತುಂಬು ಸಂಸಾರವನ್ನು ತೂಗಿಸಲು ಬಹಳ ಕಷ್ಟವಾಗುತ್ತಿತ್ತು. ಮೊದಲ ಮಗನ ಪರೀಕ್ಷೆ ಹಣ ಸಾಲದೆ ಬಂದಾಗ ನನ್ನ ಹತ್ತಿರ 30 ರೂ. ಸಾಲವನ್ನು 2ವರ್ಷಗಳ ಹಿಂದೆ ಮಾಡಿದ್ದ. ಆ ಹಣ ಹಿಂತಿರುಗಿ ಬರುತ್ತೆ ಎಂದು ನಾನೇನೂ ಆಸೆಪಟ್ಟಿರಲಿಲ್ಲ. ಓದುವ ಜಾಣ ಹುಡುಗನಿಗೆ ಸಹಾಯ ಮಾಡಿದೆ ಎಂದುಕೊಂಡಿದ್ದೆ.

Scanned by CamScanner

ಆದರೆ ಎಂದೋ ಕೊಟ್ಟ ಸಾಲವನ್ನು ಹಿಂತಿರುಗಿಕೊಡುತ್ತಿದ್ದಾನೆ ! ಹಠಾತ್ತನೆ ಹಣ ಇವನಿಗೆ ಹೇಗೆ ಬಂದಿರಬಹುದು ? ಎಂದು ಅನ್ನಿಸಿತು.

"ಅಂತಹ ಅವಸರವೇನೂ ಇದ್ದಿಲ್ಲವಲ್ಲಾ ಅಚ್ಚಪ್ಪಾ ! ಇನ್ನೆಲ್ಲಾದರೂ ಸಾಲ ಮಾಡಿ ತಂದುಕೊಟ್ಟೆಯಾ" ಎಂದು ಕೇಳಿದೆ.

"ಎಲ್ಲೂ ಸಾಲ ಮಾಡಲಿಲ್ಲ, ರಾಯರೇ. ಆದರೆ ಶುಕ್ರಮಾರ್ಕನ ದೆಸೆ ಸ್ವಲ್ಪ ಬಡಿಯಿತು. ದೇವರು ಕಣ್ಣುಬಿಟ್ಟು ನೋಡಿದ ಹಾಗಿದೆ.

ಸುಮಾರು 2–3 ವಾರಗಳ ಹಿಂದೆ ಹಳ್ಳಿಯ ಶಾನುಭೋಗ ಒಬ್ಬ ಬಂದು ಕರಿಕೆರೆ ಶಾನುಭೋಗ ನಾನು ರಂಗನಾಥಸ್ವಾಮಿ ದೇವಾಲಯದ ಹಳೆ ಕಡತಗಳನ್ನು ಸ್ವಲ್ಪ ನೋಡಬೇಕು ಎಂದು ಕೇಳಿದ. ಸರಕಾರದ ಕಾಗದ ಪತ್ರಗಳನ್ನು ನೋಡಲು ಕಮೀಶನರ ಆರ್ಡರ್ ತರಬೇಕು ಎಂದು ಗಡು ಸಾಗೇ ಹೇಳಿದೆ. ಶಾನುಭೋಗನ ಕೋಪಕ್ಕೆ ನಾನೇಕೆ ಹೆದರ್‍ತೀನಿ. ಶಾಯಿ ಕುಡಿಕೆ ಹೆದರಬೇಕು ! ಹೀಗೆ ರೇಗಿ ಉತ್ತರ ಹೇಳಿದರೂ ಶಾನುಭೋಗ ಕೆರಳ ಲಿಲ್ಲ. ಮೆದುವಾಗಿಯೇ ಅವ ಹೇಳಿದ,

"ಸಾಹೇಬ್ರೇ ! ಕರಿಕೆರೆ ದೇವಸ್ಥಾನಕ್ಕೆ ಅದೃಷ್ಟ ಕುಲಾಯಿಸಿದಂತಿದೆ. ಮಧುರೆಯಿಂದ ಮಿರಾಸ್‌ದಾರರೊಬ್ಬರು ದೇವರ ಸೇವೆಗೆ ಅಂತ ನಮ್ಮ ಗ್ರಾಮಕ್ಕೆ ಬರುತ್ತಾ ಇದ್ದಾರೆ. ಅವರಿಗೇನೋ ಕೆಟ್ಟ ಕಾಯಿಲೆ ಬಂದಿತ್ತಂತೆ. ಕನಸು ಬಿತ್ತಂತೆ, ಇಂತಹ ಊರಿನಲ್ಲಿ ನಾನಿದೀನಿ, ನನ್ನ ಸೇವೆಯನ್ನು ದಂಪತಿ ಗಳು ನೀವು ಮಾಡಿ. ಕಾಯಿಲೆ ಗುಣವಾಗುತ್ತೆ ಅಂತ ದೇವರು ಹೇಳಿದಂತಾ ಯಿತಂತೆ. ಕನಸಿನಲ್ಲಿ ಕಂಡ ಗುರ್ತು ಹಿಡಿದು ಕರಿಕೆರೆ ರಂಗನಾಥಸ್ವಾಮಿಯೇ ಕನಸಿನಲ್ಲಿ ನುಡಿದಿದ್ದು ಎಂದು ಅವರಿಗೆ ಖಾತರಿಯಾಯಿತಂತೆ. ಆದಕಾರಣ ಷಹರಿನಲ್ಲಿ ಉಳಿದುಕೊಂಡು ದಿನಾಗಲೂ ಬೆಳಗಿನ ಝಾವ ಆರರ ಹೊತ್ತಿಗೆ ದಂಪತಿಗಳು ಮೋಟಾರಿನಲ್ಲಿ ಕರಿಕೆರೆಗೆ ಬರುತ್ತಾರೆ. ಮಿರಾಸ್‌ದಾರರು ಹಳ್ಳಿಯ ಕುಂಟೆಯಲ್ಲಿ ಸ್ನಾನ ಮಾಡಿ, ದೇವಸ್ಥಾನದ ಸುತ್ತಲೂ ಉರುಳು ಸೇವೆ ಹಾಕುತ್ತಾರೆ. ನಂತರ ದೇವರಪೂಜೆ ಮಾಡುತ್ತಾರೆ. ಒಂದು ಮಂಡಲ ಹೀಗೆ ಮಾಡಿದರು. ಕಾಯಿಲೆ ಪೂರ್ಣವಾಗಿ ಗುಣವಾಯಿತಂತೆ. ಮೊನ್ನೆ ಸಂತರ್ಪಣೆ ಮಾಡಿಸಿದ್ದರು. ಸುತ್ತುಮುತ್ತಲಿನ ಹಳ್ಳಿಯವರನ್ನೆಲ್ಲಾ ಕರೆಸಿ ದ್ದರು. ದಿವನಾದ ಭೋಜನ. ಅನಂತರ ಹೇಳಿದರು ತಮಿಳು ಮಿಶ್ರಿತ ಕನ್ನಡ ದಲ್ಲಿ,

'ದೇವಸ್ಥಾನದ ಈಗಿನ ಪರಿಸ್ಥಿತಿಯನ್ನು ಕಂಡು ತುಂಬಾ ದುಃಖವಾ

ಗುತ್ತದೆ. ಈ ದೇವರ ಮಹಿಮೆಯಿಂದ ನನಗೆ ಬಂದಿದ್ದ ರೋಗ ವಾಸಿ ಯಾಯಿತು. ಕಳೆದ 5 ವರ್ಷಗಳಿಂದ ಐವತ್ತು ಅರವತ್ತು ಸಾವಿರ ರೂಪಾ ಯಿಗಳನ್ನು ಡಾಕ್ಟರುಗಳಿಗೆ, ವೈದ್ಯರಿಗೆ, ಹಕೀಮರಿಗೆ ಹಂಚಿದೆ. ಏನೂ ಗುಣ ವಾಗಲಿಲ್ಲ. ಕನಸಿನಲ್ಲಿ ರಂಗನಾಥ ಪ್ರತ್ಯಕ್ಷವಾಗಿ ಹೀಗೆ ಮಾಡು ಎಂದು ಆಜ್ಞೆ ಯಿತ್ತಂತಾಯಿತು. ಅದೇ ರೀತಿ ಉರುಳುಸೇವೆ ಹಾಕಿದೆ. ಈಗ ರೋಗವು ಗುಣವಾಯಿತು.

ಈ ದೇವಸ್ಥಾನಕ್ಕೆ ನನ್ನ ಕಾಣಿಕೆಯನ್ನು ಅರ್ಪಿಸಬೇಕು. ದಿನವೂ ಪೂಜೆ ಪುನಸ್ಕಾರಗಳಿಗೆ ಏರ್ಪಾಡು ಮಾಡಬೇಕು. ಎಷ್ಟು ಹಣ ಖರ್ಚಾದರೂ ವೆಚ್ಚ ಮಾಡಲು ಸಿದ್ಧ' ಎಂದು ಹೇಳಿದರು.

ಗ್ರಾಮದ ಜನರೆಲ್ಲಾ ನನ್ನನ್ನು ಮುಂದೆ ಮಾಡಿ ಮಿರಾಸ್‌ದಾರರಿಗೆ ಎಲ್ಲ ನೆರವನ್ನೂ ಕೊಡಲು ನಾವೂ ಸಿದ್ಧ ಎಂದು ತಿಳಿಸಿದರು.

ನಾವೆಲ್ಲಾ ಸೇರಿ ಆತನನ್ನು ದೇವಸ್ಥಾನದ ಧರ್ಮದರ್ಶಿಯನ್ನಾಗಿ ಆಯ್ಕೆ ಮಾಡಿದ್ದೇವೆ. ಈಚೆಗೆ ಯಾರೂ ಧರ್ಮದರ್ಶಿಗಳಿಲ್ಲ.

ನೀವು ಒಂದು ಸರ್ತಿ ಬಂದು ದೇವರ ಸೇವೆ ಮಾಡಿ. ಮಿರಾಸ್‌ದಾರರ ಭೇಟಿ ಮಾಡಿ. ನಾನೇ ಕರಕೊಂಡು ಹೋಗಿ ಹಿಂತಿರುಗಿ ಕರೆತರ್ತೀನಿ" ಎಂದ.

ಭಾನುವಾರ ಹೋಗಿ ಬಂದೆ. ಮಿರಾಸ್‌ದಾರರನ್ನು ಕಂಡು ಮಾತ ನಾಡಿದೆ. ತುಂಬಾ ಶ್ರೀಮಂತ. ದೈವಭಕ್ತ. ದೇವಸ್ಥಾನದ ಧರ್ಮದರ್ಶಿ ಯಾದವನಿಗೆ ಅದರ ಸಂಬಂಧದ ಹಳೇ ಕಡತಗಳನ್ನು ತೋರಿಸಲು ಯಾವ ಆಕ್ಷೇಪಣೆಯೂ ಇಲ್ಲವಲ್ಲ. ಕಾರಣ ಆತ ಬಂದಾಗ ಕಚೇರಿಯಲ್ಲಿದ್ದ ಆ ದೇವ ಸ್ಥಾನಕ್ಕೆ ಸಂಬಂಧಪಟ್ಟ ಹಳೇ ಕಡತಗಳನ್ನೆಲ್ಲಾ ಆತನಿಗೆ ಕೊಟ್ಟೆ. ಕಚೇರಿ ಯಲ್ಲೇ ಕೆಲವನ್ನು ಆತನ ನೌಕರ ಓದಿದ. ಇನ್ನೂ ಕೆಲವು ಮೋಡಿಯಲ್ಲಿದೆ. ಓದಿಸಿ ತಿರುಗಿ ತಂದುಕೊಡ್ತೀನಿ ಎಂದ. ಆ ಕಡತಗಳು ಯಾರಿಗೆ ಬೇಕು? ಆಗಲಿ ಎಂದೆ.

ಆತ ಮೊನ್ನೆ ಮನೆಗೆ ಬಂದು "ನಿಮ್ಮ ಹುಡುಗ ಕಾಲೇಜಿನಲ್ಲಿ ಓದುತ್ತಾ ಇದ್ದಾನಂತೆ. ಅವನ ವಿದ್ಯಾಭ್ಯಾಸಕ್ಕೆ ನನ್ನ ಆಶೀರ್ವಾದಪೂರ್ವಕ ಇದನ್ನು ಕೊಡುತ್ತೇನೆ ಎಂದು ನಮ್ಮ ರಾಮು ಕೈಲಿ ಒಂದು ಲಕ್ಕೋಟೆಯನ್ನು ಕೊಟ್ಟು ಹೋದ. ಆ ಲಕ್ಕೋಟೆಯನ್ನು ರಾಮು ನನ್ನ ಕೈಲಿಟ್ಟ. ಒಡೆದು ನೋಡಿದೆ. ಐದು ನೂರು ರೂಪಾಯಿನ ನೋಟುಗಳು! ದೇವರು ಕಣ್ಣು ಬಿಟ್ಟರೆ ಬಾಳು ಹಸನಲ್ಲವೇ? ರಾಯರೇ! ರಾಮು ಪರೀಕ್ಷೆಗೆ ಹಣ ಕಟ್ಟಬೇಕಾದಾಗ ನೀವು

ಕೊಟ್ಟಿರಿ. ಅದನ್ನು ಮೊದಲು ತೀರಿಸಿ ಮಿಕ್ಕ ಹಣವನ್ನು ಅವನ ವಿದ್ಯಾಭ್ಯಾಸಕ್ಕೆ ಮುಡಿಪು ಇಡುತ್ತೇನೆ" ಎಂದ ಗುಮಾಸ್ತ ಅಚ್ಚಪ್ಪ.

ದಂಗು ಬಡಿದ ಹಾಗಾಯ್ತು ನನಗೆ. ದೇವರು ಯಾವ ಯಾವ ರೂಪದಲ್ಲಿ ಯಾರು ಯಾರಿಗೆ ಯಾವಾಗ ಕಾಣಿಸಿಕೊಂಡು ಅನುಗ್ರಹಿಸುತ್ತಾನೋ ಅವನೇ ಬಲ್ಲ ಎಂದು ಅಂದುಕೊಂಡೆ.

ರಾತ್ರಿ ಆಫೀಸಿನ ಕೆಲಸವನ್ನು ಬೇಗ ಮುಗಿಸಿಕೊಂಡು ರಾಮಾನುಜಂ ಅವರ ಮನೆಗೆ ಹೋದೆ. ಆಗ ತಾನೇ ಊಟ ಮುಗಿಸಿ ಆರಾಮವಾಗಿ ಎಲಡಿಕೆ ಅಗಿಯುತ್ತ ಅವರು ಬೈಠಕ್‌ಖಾನೆಯಲ್ಲಿ ಕುಳಿತಿದ್ದರು. "ಬನ್ನಿ, ಕೂತುಕೊಳ್ಳಿ, ನಿಮಗೆ ತೊಂದರೆ ಕೊಟ್ಟಹಾಗಾಯ್ತು. ಆದರೆ ಗುಟ್ಟಾಗಿ ಮಾತನಾಡಿ ನಿಮ್ಮ ಸಲಹೆ ಕೇಳಬೇಕಾಗಿತ್ತು. ಆದುದರಿಂದ ಕರೆ ಕಳಿಸಿದೆ" ಎಂದು ಪೀಠಿಕೆ ಹಾಕಿ, ನನಗೂ ಒಂದು ಸಿಗರೇಟ್ ನೀಡಿ, ಮಾತು ಮುಂದುವರೆಸಿದರು.

"ಕೋಟೆ ಹತ್ತಿರ ದೊಡ್ಡ ರಸ್ತೆಯಲ್ಲಿ ಹಳೆ ಕಾಲದ ಮಹಡಿ ಮನೆ ಇದೆಯಲ್ಲಾ. ನೀವು ನೋಡಿರಬಹುದು. ಸುಲ್ತಾನನ ಕಾಲದ ಮನೆ ಅಂತ ಜನ ಅನ್ನುತ್ತಾರೆ. ಅದನ್ನು ಕೊಂಡುಕೊಳ್ಳೋಣ ಅಂತ ಯೋಚಿಸುತ್ತಿದ್ದೇನೆ. ಮನೆಯ ವಾರಸುದಾರರು ಸಂಬಂಧಪಟ್ಟ ಕಾಗದಪತ್ರಗಳನ್ನು ಕೊಟ್ಟು ಮಾತನಾಡಿಕೊಂಡು ಹೋದರು. ನೀವು ಒಂದು ಸರ್ತಿ ಇವನ್ನೆಲ್ಲಾ ತನಿಖೆ ಮಾಡಿ. ಎರಡು ಲಕ್ಷ ರೂಪಾಯಿನ ವ್ಯವಹಾರ. ನಮ್ಮ ಹುಷಾರಿನಲ್ಲಿ ನಾವು ಇರಬೇಕು. 'ದೊಡ್ಡ ಮನೆತನ ನಮ್ಮದು. ಈಗ ಮನೆ ಮಾರಿಕೊಂಡರು ಅಂತ ಎಲ್ಲರೂ ನಗುತ್ತಾರೆ, ತಿಳಿದರೆ. ಆದುದರಿಂದ ಹೆಚ್ಚು ಬಹಿರಂಗ ಪಡಿಸದೆ ಮನೆಯನ್ನು ಮಾರುತ್ತೇವೆ' ಎಂದು ವಾರಸುದಾರರು ಹೇಳಿದರು. ಆದರೂ ಗುಟ್ಟಾಗಿ ಯಾರದೋ ಮನೆಯನ್ನು ಇನ್ನು ಯಾರೋ ಮಾರಿಬಿಟ್ಟರೆ? ಅದಕ್ಕೇ ನಿಮ್ಮನ್ನು ಬರಹೇಳಿದೆ. ಯಾರಿಗೂ ತಿಳಿಸದೆ, ಕಾಗದಪತ್ರಗಳು ಸರಿಯಾಗಿವೆಯೇ ನೋಡಿ ಎಂದು."

"ಮೂರು ನಾಲ್ಕು ದಿನಗಳು ವ್ಯವಧಾನ ಕೊಡಿ. ಸರಿಯಾಗಿ ತನಿಖೆ ಮಾಡಿ ಮನೆಯ ಮೇಲೆ ಬೇರಾವ ಸಾಲಗಳೂ ಇಲ್ಲವೆಂಬುದನ್ನು ಖಚಿತ ಮಾಡಿಕೊಂಡು ಬಂದು ಹೇಳ್ತೀನಿ. ಬೇಕಾದರೆ ಕ್ರಯಪತ್ರವನ್ನೂ ಬರೆದು ತರುತ್ತೇನೆ. ನೀವು ಒಪ್ಪಿದರೆ ನಂತರ ಸ್ಟಾಂಪ್ ಪೇಪರಿನ ಮೇಲೆ ಬರೆಸೋಣ" ಎಂದೆ. ಇಂತಹ ವಿಚಾರ ವ್ಯವಹಾರಗಳಲ್ಲಿ ರಾಮಾನುಜಂ ಅವರದು ಬಿಡುಗೈ.

ಇಷ್ಟು ಖರ್ಚು ಅಂತ ಹೇಳಿದರೆ ಸಂತೋಷವಾಗಿ ಕೊಡುತ್ತಾರೆ. ಅಂದಮೇಲೆ ತರದೂದು ಮಾಡಿ ಬೇಗ ಈ ಕೆಲಸ ಮುಗಿಸೋಣ ಎಂದು ನನಗೆ ಆಸೆ.

"ಆಗಬಹುದು ರಾಯರೇ! ಆದರೆ ಅಷ್ಟೇನೂ ಅವಸರವಿಲ್ಲ. ಮನೆಯ ವಾರಸುದಾರರು ಬೊಂಬಾಯಿನಲ್ಲಿರೋದು. ರಜಾ ಮುಗಿದು ಹೋಯಿತು ಅಂತ ಊರಿಗೆ ಹಿಂತಿರುಗಿ ಹೋಗಿದ್ದಾರೆ. ಇನ್ನೆರಡು ತಿಂಗಳು ಆದಮೇಲೆ ಪುನಃ ಬರುತ್ತಾರಂತೆ. ಆ ಹೊತ್ತಿಗೆ ಸಿದ್ಧವಾಗಿದ್ದರೆ ಸಾಕು.

ಅಲ್ಲದೆ ಈ ವರ್ಷ ಚುನಾವಣೆ ನಡೆಯುತ್ತಲ್ಲ. ಅಭ್ಯರ್ಥಿಯಾಗಿ ನಿಲ್ಲಬೇಕು ಅಂತ ಸ್ನೇಹಿತರೆಲ್ಲಾ ನನ್ನನ್ನು ಒತ್ತಾಯಪಡಿಸುತ್ತಿದ್ದಾರೆ. ದೇಶಸೇವೆ ಮಾಡೋಣ ಅಂತ ನನಗೂ ಅನ್ನಿಸ್ತಾ ಇದೆ. ಪಕ್ಷದ ನಾಯಕರೇ ಮೊನ್ನೆ ಮನೆಗೆ ಬಂದು ನೀವು ನಿಲ್ಲಲೇಬೇಕು ಎಂದು ಹೇಳಿದರು. ಈ ವಾರದಲ್ಲೇ ನಾಮಪತ್ರ ಸಲ್ಲಿಸೋಣ ಎಂದು ಯೋಚನೆ ಮಾಡ್ತಾ ಇದೀನಿ. ಗುರುವಾರ ಒಳ್ಳೆಯ ದಿನ ಅಂತ ವಾದ್ಯಾರು ಹೇಳಿದರು.

ಚುನಾವಣೆಗೆ ನಿಂತ ಮೇಲೆ ನಿಮ್ಮೆಲ್ಲರ ಸಹಾಯ ಬೆಂಬಲ ಇಲ್ಲದೆ ಇದ್ದರೆ ಗೆಲ್ಲಲು ಸಾಧ್ಯವಿಲ್ಲ. ನಿಮ್ಮ ಸ್ನೇಹಿತರು, ಕಕ್ಷಿಗಾರರು ಮತ್ತಿತರರನ್ನೂ ನನಗೆ ಮತ ಕೊಡುವಂತೆ ಸ್ವಲ್ಪ ಮೆಹನತ್ತು ಮಾಡಬೇಕು, ನೀವು" ಎಂದರು.

"ಖಂಡಿತ ನಿಮ್ಮ ಪರ ಕೆಲಸ ಮಾಡ್ತೀನಿ. ಆದರೆ ನನ್ನ ಪ್ರಭಾವ ಹೆಚ್ಚು ಜನದ ಮೇಲೆ ಬೀರಲಾರದಲ್ಲ, ಆದರೂ ಅಳಿಲ ಸೇವೆಗೆ ಸದಾ ಸಿದ್ಧ" ಎಂದೆ.

ರಾಮಾನುಜಂ ಕೊಟ್ಟ ಕಾಗದ ಪತ್ರಗಳನ್ನು ನನ್ನ ಸಂಚಿಯಲ್ಲಿ ಹಾಕಿ ವಂದನೆ ಹೇಳಿ ಮನೆಗೆ ಹಿಂತಿರುಗಿದೆ.

ದೈವಭಕ್ತರು, ಶ್ರೀಮಂತರು, ಓದಿದವರು ಧಾರಾಳಿ ಇಂತಹವರು ಚುನಾವಣೆಗೆ ನಿಂತರೆ, ನಿಂತು ಜಯಗಳಿಸಿದರೆ ಖಂಡಿತವಾಗಿಯೂ ಸಚಿವರಾಗಿಯೇ ಆಗುತ್ತಾರೆ. ಪ್ರಭಾವೀ ಸಚಿವರೂ ಆಗುತ್ತಾರೆ. ದೇಶವನ್ನೂ ಉದ್ಧಾರ ಮಾಡುತ್ತಾರೆ ಎಂದು ಹಿಗ್ಗಿದೆ.

*

ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ಈ ಮನೆಯ ವಿಚಾರದ ಭೋಗ್ಯ, ಕ್ರಯಪತ್ರ ಇತ್ಯಾದಿ ಆಗಿದೆಯೇ ಇಲ್ಲವೇ ನೋಡಿಸಲು 6 ದಿನಗಳಾದುವು. 30 ರೂಪಾಯಿ ಖರ್ಚಾಯಿತು. ನಂತರ ಕ್ರಯಪತ್ರದ ಡ್ರಾಫ್ಟ್ ಹಾಕಿದೆ.

Scanned by CamScanner

ಮುಂದಿನ ಪದಿನೈದು ದಿನಗಳಲ್ಲಿ ನಾಲ್ಕೈದು ಸರ್ತಿ ರಾಮಾನುಜಂ ಅವರ
ಮನೆಗೆ ಹೇಳಿ ಕಳಿಸಿದೆ. ಅವರು ಸಿಗಲೇ ಇಲ್ಲ. ಚುನಾವಣೆ ಗಲಾಟೆಯಲ್ಲಿ
ದ್ದಾರೆ. ವಿರಾಮವಾದಾಗ ಅವರೇ ಹೇಳಿ ಕಳಿಸುತ್ತಾರೆ ಎಂದುಕೊಂಡು,
ಅವರನ್ನು ಅಟ್ಟಿಸಿಕೊಂಡು ಹೋಗುವ ಬೇಜಾರು ಕೆಲಸವನ್ನು ತುಂಡುಹಾಕಿ,
"ಎಲ್ಲ ಸಿದ್ಧವಾಗಿದೆ, ಹೇಳಿಕಳಿಸಿದಾಗ ಬರ್‍ತೀನಿ'' ಎಂದು ಒಂದು ಕಾಗದ
ಹಾಕಿದೆ.

ಪಾಪ ಅವರಿಗೂ ಚುನಾವಣೆ ಕಾಲ. ನಿಂತಲ್ಲಿ ನಿಲ್ಲುಕ್ಕೆ ವ್ಯವಧಾನವಿರುಲ್ಲ.
ಮನೆದೇವರು ಕರಿಕೆರೆ ರಂಗನಾಥನ ಬಳಿಗೆ ಆಗಾಗ್ಗೆ ಹೋಗಿ ಹರಕೆ ಒಪ್ಪಿಸಿ
ಬರಬೇಕು. ಅದಕ್ಕಿಂತ ಮಿಗಿಲಾಗಿ ಪುಢಾರಿಗಳ ಬೆಂಬಲ ಪಡೆಯಬೇಕು.
ಹಣವೂ ಸುಮಾರು ಕೈ ಬಿಡುವ ಸಮಯ. ಇಂಥಹ ಸಂದರ್ಭದಲ್ಲಿ ಅವರಿಗೇ
ಭೇಟಿಯ ದಿನವನ್ನು ಗೊತ್ತು ಮಾಡಲು ಬಿಡುವುದು ಸೂಕ್ತ ಎನ್ನಿಸಿತ್ತು.

ಒಂದು ತಿಂಗಳಾಯಿತು. ಅವರಿಂದ ಕರೆ ಬರಲಿಲ್ಲ. ಚುನಾವಣೆಯ
ಅರ್ಭಟವೇನೋ ರಸ್ತೆ ರಸ್ತೆಯಲ್ಲೂ ಬಿಗಡಾಯಿಸಿಕೊಂಡಿತ್ತು. ಈ ವಿಚಾರ
ದಲ್ಲಿ ನಾನು ಯಾಕೆ ತಲೆ ಕೆಡಿಸಿಕೊಳ್ಳಲಿ ಎಂದುಕೊಂಡೆ. ಆದರೆ ಹೀಗೆಂದು
ಕೊಂಡ ಕ್ಷಣದಲ್ಲಿ ಪಕ್ಕದಲ್ಲಿ ಕಾಫಿ ಕುಡಿಯುತ್ತಿದ್ದ ಸ್ನೇಹಿತ "ಕೇಳಿದಿರಾ
ರಾಯರೇ. ನಿಮ್ಮ ಕರಿಕೆರೇ ರಾಮಾನುಜಂ ಅವರು ಒಂದು ವಾರದಿಂದ ಜ್ವರ
ಬಂದು ಮಲಗಿಬಿಟ್ಟಿದ್ದಾರಂತೆ. ಚುನಾವಣಾ ಕಾಲದಲ್ಲಿ ಹೀಗೆ ಕಾಯಿಲೆ
ಬಿದ್ದು ಹಾಸಿಗೆ ಹಿಡಿದರೆ ಮುಂದೆ ಗತಿ ?" ಎಂದು ಹೇಳಿದ. "ನನಗೆ ಗೊತ್ತಿ
ರ್‍ಲಿಲ್ಲಾ! ನಾಳೆ ನಾಡಿದ್ದರಲ್ಲಿ ಹೋಗಿ ನೋಡಿಕೊಂಡು ಬರಬೇಕು" ಎಂದು
ಹೇಳಿ ಕಾಫಿ ಮುಗಿಸಿ ಕೋರ್ಟಿಗೆ ಹೋದೆ.

ಆ ಸಂಜೆ ರಾಮಾನುಜಂ ಅವರಿಂದ ಕಾಗದ ಬಂದಿತ್ತು. ಬಿಡುವು
ಮಾಡಿಕೊಂಡು ಬಂದು ಕಾಣಬೇಕು ಎಂದು ಹೇಳಿದ್ದರು. ಕಾಗದ ಪತ್ರ
ಗಳನ್ನೆಲ್ಲಾ ತೆಗೆದುಕೊಂಡು ಆ ಸಂಜೆಯೇ ಅವರ ಮನೆಗೆ ಹೋದೆ, ಅವರ
ಅಪ್ಪನೌಕರ ಒಳಗೆ ಹೋಗಿ ವಿಚಾರಿಸಿಕೊಂಡು ಬಂದು ನನ್ನನ್ನು ರಾಮಾನುಜಂ
ಮಲಗಿದ್ದ ಕೊಠಡಿಗೆ ಕರೆದುಕೊಂಡು ಹೋದ. ಹಾಸಿಗೆಯ ಮೇಲೆ
ರಾಮಾನುಜಂ ಕೂತಿದ್ದರು.

"ಬನ್ನಿ, ಕೂತುಕೊಳ್ಳಿ ರಾಯರೇ! ಚುನಾವಣೆ ಗಲಾಟೆಯಲ್ಲಿ ನಿಮಗೆ ಹೇಳಿ ಕಳಿಸಲಾಗಲಿಲ್ಲ. ಕರಿಕೆರೆಗೆ ಬೇರೆ ಎರಡು ಮೂರು ಸರ್ತಿ ಹೋಗಿ ದೇವರ ಸೇವೆ ಮಾಡಿಕೊಂಡು ಬಂದೆ. ಹವಾ ವ್ಯತ್ಯಾಸವೋ, ಕರಿಕೆರೆಯ

ಕೊಳದ ಪ್ರಭಾವವೋ ಭಾರೀ ನೆಗಡಿ ಹಿಡಿದು ಜ್ವರ ಬಂತು. ನಿನ್ನೆಯಿಂದ ಜ್ವರ ಬಿಟ್ಟಿದೆ. ಮೈ ಸುಸ್ತಾಗಿದ್ದರೂ ಹಗುರಾಗಿದೆ. ಅದಕ್ಕೇ ಹೇಳಿ ಕಳಿಸಿದೆ.

"ಕೋಟೆ ಮನೆ ಕೊಂಡುಕೊಳ್ಳೋಣ ಅಂತ ಹೇಳಿದ್ದೆನಲ್ಲಾ, ಈಗ ಯೋಚನೆ ಮಾಡಿದ ಮೇಲೆ ಅಷ್ಟು ಹಣವನ್ನೂ ಪುರಾತನವಾದ ಹಾಗೂ ಶಿಥಿಲವಾಗಿರುವ ಆ ಮನೆಯ ಮೇಲೆ ಹಾಕುವುದು ಜಾಣತನವಲ್ಲ ಎನ್ನಿಸಿತು. ಆದ್ದರಿಂದ ಆ ವ್ಯವಹಾರವನ್ನು ಮಾಡೋದು ಬೇಡ. ಕಾಗದ ಪತ್ರಗಳನ್ನು ವಾರಸುದಾರರಿಗೆ ಹಿಂತಿರುಗಿ ಕಳಿಸೋಣ" ಎಂದರು.

ಕೈಗೆ ಬಂದ ತುತ್ತು ಬಾಯಿಗಿಲ್ಲ. ಅಲ್ಲದೆ ಕೈಯಿಂದ ಖರ್ಚೂ ಆಗಿದೆ. ಆದರೂ ಇದನ್ನೆಲ್ಲಾ ಇಂತಹ ಭಾರಿ ಕಕ್ಷಿಗಾರರ ಹತ್ತಿರ ಹೇಳಬಾರದು ಎಂದುಕೊಂಡೆ.

"ಹಾಗೆಯೇ ಮಾಡೋಣ ಸಾರ್! ನನಗೂ ಆಗಲೇ ಅನ್ನಿಸಿತು. ಆ ಹಳೆಯ ಮನೆಗೆ ಎರಡು ಲಕ್ಷ ತುಂಬಾ ದುಬಾರಿಯಾಯಿತು ಅಂತ. ನಿಮ್ಮ ಹೆಸರಿನ ನಿಮ್ಮ ಬಡಾವಣೆಯಲ್ಲೇ 20–30 ನಿಮ್ಮ ಮನೆಗಳೇ ಇವೆ. ಈ ಮನೆಯ ಮೇಲೆ ಏಕೆ ಅಷ್ಟು ಹಣ ಹಾಕಬೇಕು ಅಂತ ಅನ್ನಿಸಿತು. ಆದರೂ ನಿಮ್ಮ ವ್ಯಾಪಾರ ಸಾಪಾರಕ್ಕೆ ಅಲ್ಲಿ ಅನುಕೂಲವೇನೋ ಅಂತ ಸುಮ್ಮನಿದ್ದೆ" ಎಂದು ಹೇಳಿದೆ.

"ಈ ತನಕ ಈ ಸಂಬಂಧದಲ್ಲಿ ನಿಮಗಾಗಿರುವ ಖರ್ಚಿಗೆ ಮತ್ತು ನಿಮ್ಮ ಶ್ರಮಕ್ಕೆ ಸರಿಯಾದ ಬಿಲ್ ಕಳಿಸಿ" ಸಂಕೋಚಪಡದೆ ಕಳಿಸಿ ಎಂದರು ರಾಮಾನುಜಂ.

ದಿಟವಾಗಲೂ ರಾಮಾನುಜಂ ದೊಡ್ಡ ಮನುಷ್ಯರು ಉದಾರಿಗಳು ಇತರರ ಕಷ್ಟ ಸುಖದ ಅರಿವು ಅವರಿಗಿದೆ.

ಚುನಾವಣೆಯಲ್ಲಿ ರಾಮಾನುಜಂ ಭಾರಿ ಜಯಗಳಿಸಿದರು. ಬಡಾವಣೆಯ ಜನರೆಲ್ಲಾ ಅತಿ ಉತ್ಸಾಹದಿಂದ ಅವರ ಮೆರವಣಿಗೆಯನ್ನು ನೆರವೇರಿಸಿದರು. ಅಭಿನಂದನಾ ಸಭೆಗೆ ಪಕ್ಷದ ನಾಯಕರೇ ಅಧ್ಯಕ್ಷರಾಗಿದ್ದರು. ರಾಮಾನುಜಂ ಅವರು ನನ್ನ ಬಲಗೈ ಇದ್ದಂತೆ ಎಂದು ಅಧ್ಯಕ್ಷ ಭಾಷಣದಲ್ಲಿ ಹೇಳಿ ಭವಿಷ್ಯದ ಸೂಚನೆಯನ್ನೂ ಕೊಟ್ಟರು. ನನ್ನ ಕಕ್ಷಿಗಾರರೊಬ್ಬರು ಈ ರೀತಿ ಹಿರಿ

Scanned by CamScanner

ನಾಯಕರಾದುದು ನನಗೂ ಹೆಮ್ಮೆಯನ್ನು ತಂದಿತ್ತು. ಆ ದಿನ ನಾಲ್ಕು ಜನ ಸ್ನೇಹಿತರನ್ನು ಊಟಕ್ಕೆ ಕರೆದು ಹಬ್ಬದ ಅಡಿಗೆ ಮಾಡಿಸಿ ಔತಣ ಕೊಟ್ಟೆ.

*

ಇದಾಗಿ 3–4 ದಿನಗಳಾಗಿರಬಹುದು. ಸಂಜೆ ಬಂದಿದ್ದ ಗುಮಾಸ್ತ ಅಚ್ಚಪ್ಪ, ಕೆಲಸ ಮುಗಿದ ಮೇಲೆ, "ರಾಯರೇ ! ಮಧುರೆ ಮಿರಾಸ್ ದಾರರು ತಮ್ಮೂರಿಗೆ ಹೋಗಿ ಬರ್‍ತಾರಂತೆ. ಮುಂದಿನ ವರ್ಷ ಉತ್ಸವದ ಹೊತ್ತಿಗೆ ಬರ್‍ತೀನಿ ದೇವರು ಕರೆಸಿಕೊಂಡರೆ ಎಂದು ಹೇಳಿ ಹೋದರು. ನಮಗೆಲ್ಲಾ ಉಡುಗೊರೆ ಕೊಟ್ಟು ಹೋದರು" ಎಂದು ಹೇಳಿದ. ತುಂಬಾ ಬೇಕಾದ ನೆಂಟರು ದೂರದ ದೇಶಕ್ಕೆ ಹೋದರೆ ಹೇಗೆ ದುಃಖವಾಗುತ್ತದೊ ಹಾಗೆ ಅಚ್ಚಪ್ಪ ದುಃಖಿತನಾಗಿದ್ದ.

ಮಾರನೆ ದಿನ ಲಕ್ಕೋಟೆಯೊಂದನ್ನು ಅಂಚೆಯವ ತಂದುಕೊಟ್ಟ. ಆ ಲಕ್ಕೋಟೆಯ ಭರ್ಜರಿ ಅಲಂಕಾರವನ್ನು ಕಂಡು, ಭಕ್ಷೀಸಿಗಾಗಿ ಅಂಚೆಯವ ಕೈ ನೀಡಿದ! ಲಕ್ಕೋಟೆಯನ್ನು ಕಂಡಾಗ ನನಗೂ ಇದರಲ್ಲಿ ಚೆಕ್ಕು ಇರಬಹುದು ಎಂದು ಆಸೆಯಾಯಿತು. ಕಾರಣ ಅಂಚೆಯವನ ಕೈಯಲ್ಲಿ ಪಾವಲಿ ಇಟ್ಟೆ. ಒಳಕ್ಕೆ ಹೋಗಿ ಲಕ್ಕೋಟೆ ಒಡೆದು ನೋಡಿದೆ. ಭರ್ಜರಿ ಕಾಗದದ ಮೇಲೆ ಬರೆದ ಪತ್ರ—

"ರಾಯರಿಗೆ ವಂದನೆಗಳು,

ಪೂಜಾರಪ್ಪನವರಿಗೆ ಮಾತು ಕೊಟ್ಟಿದ್ದೆ. ನಾನು ಮಾಡುವ ಕಾರ್ಯದ ತಪಶೀಲನ್ನೆಲ್ಲಾ ಬರೆದು ಪತ್ರಿಕಾ ಪ್ರಕಟಣೆಗೆ ಕಳುಹಿಸುತ್ತೀನಿ ಎಂದು. ಆದರೆ ಆ ಊರಿನಲ್ಲಿ ಮಾಡಿದ ಕಾರ್ಯದ ವಿವರಗಳನ್ನು ಹಾಗೆ ಕಳಿಸಬಾರದು. ನಿಮಗೆ ವರದಿ ಒಪ್ಪಿಸಿದರೆ ಮಾತು ಉಳಿಸಿಕೊಂಡಹಾಗಾಗುತ್ತೆ ಎನ್ನಿಸಿತು. ಆದಕಾರಣ ಈ ಕಾಗದವನ್ನು ಬರಿಯುತ್ತಿದ್ದೇನೆ.

ಕರೀಕೆರೆಯ ರಂಗನಾಥಸ್ವಾಮಿ ದೇವಸ್ಥಾನಕ್ಕೆ ಸುಲ್ತಾನನ ಕಾಲದಲ್ಲಿ ಹೂ ತೋಟ, ತುಳಸಿ ತೋಟಗಳಿಗಾಗಿ, ಎಂಟು ಎಕರೆ ಆರುಗುಂಟೆ ಜಮೀನನ್ನು ಸುಲ್ತಾನರು ಇನಾಂ ಬಿಟ್ಟಿದ್ದರು. ಅಲ್ಲದೆ ಬೆಂಗಳೂರಿನ ಉತ್ತರದಲ್ಲಿ ಹತ್ತು ಎಕರೆ ಜಮೀನನ್ನು ಪೂಜೆ ಪುನಸ್ಕಾರಗಳಿಗೆ ಅಂತಲೂ ಧರ್ಮ ಮಾಡಿದ್ದರು. ಆ ದೇವಸ್ಥಾನದ ಧರ್ಮದರ್ಶಿಗಳಾಗಿದ್ದ ನಿಮ್ಮ ಶ್ರೀ ರಾಮಾನುಜಂ ಅವರು ಬೆಂಗಳೂರಿನ ಜಮೀನು ಯಾವ ಉತ್ಪತ್ತಿಯನ್ನೂ

ಕೊಡುತ್ತಿಲ್ಲ. ಆದ್ದರಿಂದ ಅದನ್ನು ಮಾರಿ ಬಂದ ಹಣದಲ್ಲಿ ದೇವಸ್ಥಾನದ ಜೀರ್ಣೋದ್ಧಾರ ಮಾಡಬೇಕು ಎಂದು ಸರಕಾರಕ್ಕೆ ಸಲಹೆ ಮಾಡಿದರು. ಸರಕಾರದ ಒಪ್ಪಿಗೆ ಪಡೆದು, ಆ ಹತ್ತೂ ಎಕರೆಗಳನ್ನು ಐನೂರು ರೂಪಾಯಿ ಗಳಿಗೆ ಮಾರಿ, ದೇವಸ್ಥಾನದ ಸುಪರ್ದು ಮಾಡಿದರು.

ಆದರೆ ಮಾರಿದ್ದು ತಮ್ಮ ಹೆಸರಿಗೆ.

ಹತ್ತು ಎಕರೆಗಳಲ್ಲಿ ಮನೆ ಕಟ್ಟುವ ಸೈಟುಗಳನ್ನಾಗಿ ಮಾಡಿ, 30 ಮನೆ ಗಳಿಗೆ ಆಗುವಷ್ಟನ್ನು ಉಳಿಸಿಕೊಂಡು, ಮಿಕ್ಕಿದುದನ್ನು ಹರಾಜು ಹಾಕಿ ಲಕ್ಷಾಧಿ ಪತಿಯಾದರು.

ನನ್ನ ಜತೆಗಾರ ಬಿಡ್ಡಣ್ಣ ಮತ್ತು ಅವನ ಒಡನಾಡಿ ನಂಜಿಯನ್ನೂ ಕರಿ ಕೆರೆಗೆ ಕಳಿಸಿದ್ದೆ. ಮಧುರೆ ಮಿರಾಸ್‌ದಾರ್ ದಂಪತಿಗಳಂತೆ ಅವರು ಅಲ್ಲಿ ಸೇವೆ ಮಾಡಿ, ಮುಜರಾಯಿ ಕಡತಗಳಿಂದ ಈ ಎಲ್ಲಾ ವಿವರಗಳನ್ನೂ ಪತ್ತೆ ಹಚ್ಚಿ ದರು.

ಚುನಾವಣೆಗೆ ನಿಂತಾಗ, ಮಿರಾಸ್‌ದಾರರು ತಮಗೆ ತಿಳಿದುಬಂದ ವಿವರ ಗಳನ್ನೂ ರಾಮಾನುಜಂ ಅವರಿಗೆ ಗೋಪ್ಯವಾಗಿ ಹೇಳಿ ಇವನ್ನೆಲ್ಲಾ ಪತ್ರಿಕೆ ಗಳಲ್ಲಿ ಪ್ರಕಟಿಸಬೇಕೆಂದು ನಮ್ಮ ಧಣಿ ಹೇಳ್ತಾರೆ ಎಂದರು. ನಿಮ್ಮ ಹೆಸರಿಗೆ ಮಸಿ ಬಳಿದು ನಿಮ್ಮ ಭವಿಷ್ಯಕ್ಕೆ ಕಲ್ಲುಹಾಕುವ ಯೋಚನೆ ನಮಗಿಲ್ಲ. ಆದರೆ ಆ ಆಸ್ತಿಯಿಂದ 8–10 ಲಕ್ಷ ಅನಾಯಾಸವಾಗಿ ಪಡೆದಿದ್ದೀರಿ. ಧರ್ಮಕಾರ್ಯ ಗಳನ್ನು ಮಾಡಲು ನಮಗೆ ಎರಡೂವರೆ ಲಕ್ಷ ರೂಪಾಯಿಗಳ ಅವಶ್ಯಕತೆ ಇದೆ. ಅದನ್ನು ನೀವು ನನಗೆ ಕೊಟ್ಟರೆ, ಮುಜರಾಯಿ ಕಚೇರಿಯ ಸಂಬಂಧ ಪಟ್ಟ ಕಡತಗಳನ್ನೂ ನಿಮಗೆ ಕೊಡುತ್ತೇವೆ. ಮುಂದೆ ನಿಮಗೆ ಯಾವ ತೊಂದರೆಯೂ ಬರೋಲ್ಲ ಎಂದು ಮಾತುಕೊಟ್ಟರು.

ರಾಮಾನುಜಂ ಅವರು ತುಂಬಾ ಜಾಣರು. ಪರಿಸ್ಥಿತಿಯ ಅರಿವಾದ ಕೂಡಲೇ ಬಿಡ್ಡಣ್ಣನ ಅಂದರೆ ಮಿರಾಸ್‌ದಾರನ ಸಲಹೆಯನ್ನು ಒಪ್ಪಿಕೊಂಡರು.

ಬಿಡ್ಡಣ್ಣನ ಖರ್ಚು ಜಾತಾ ಎರಡು ಲಕ್ಷ ಹತ್ತು ಸಾವಿರ ರೂಪಾಯಿ ದಕ್ಕಿತು. ಅದನ್ನು ಪೂಜಾರಪ್ಪನವರ ಕಾಲಮೇಲೆ ಹಾಕಿ ನಮಸ್ಕಾರ ಹಾಕುತ್ತೇನೆ.

Scanned by CamScanner

ಈ ವಿಷಯವನ್ನು ಬಹಿರಂಗ ಪಡಿಸಬಾರದು. ಆದರೂ, ಮಾತು ಉಳಿಸಿಕೊಳ್ಳಬೇಕು ಎನ್ನುವ ಕಾತುರತೆಯಿಂದ ನಿಮಗೆ ಪತ್ರ ಬರೆದಿದ್ದೇನೆ. ವಿಷಯ ನಿಮ್ಮಲ್ಲೇ ಇರಲಿ.

"ಬುದ್ಧೋಜ"

*

ವಿಷಯ ನನ್ನಲ್ಲೇ ಇದೆ. ಯಾವ ಹುತ್ತದಲ್ಲಿ ಯಾವ ಹಾವು ಯಾವಾಗ ಸೇರಿಕೊಂಡು ಹೆಡೆ ಆಡಿಸುತ್ತೋ ಭಗವಂತ ಬಲ್ಲ ಎಂದುಕೊಂಡೆ.

K824.6
RAS

387731

ಮೆಯಿನ್ ಲೈನಿನ ಷಾಕ್

ಲೈಟ್ ಆಫೀಸಿನ ಲಕ್ಷ್ಮಣ್ ಸಿಂಗ್, ಸಂತಾನ ವರ ಪಡೆಯಲು ಮೌನಿ ಸಾಧುಗಳ ಬಳಿಗೆ, ಮಡದಿಯರೊಡಗೂಡಿ ಹೋದಾಗ ಅವರಿಗೇ ದೊಡ್ಡ ಷಾಕ್ ಹೊಡೆಯಿತು

ಅದೆಷ್ಟು ಚೆನ್ನಾಗಿ ಹರಿಕಥೆ ಮಾಡಿದಾ ಅಂತೀ ? ಸರಸ್ವತಿ ಒಲಿದಿದ್ದಾಳಮ್ಮಾ, ಅವನ ನಾಲಿಗೆಗೆ ; ಹಾಡನ್ನು ಎಷ್ಟು ಚೆನ್ನಾಗಿ ಹಾಡ್ತಾನೆ ಅಂತ. ನಂಗನಕ ಅವನನ್ನು ತಬ್ಬಿಕೊಂಡು, ಕೆನ್ನೆ ಚಿವುಟಿ ಮುತ್ತು ಕೊಟ್ಟುಬಿಡೋಣ ಅನ್ನಿಸ್ತಮ್ಮಾ. ನೀನು ಬಂದಿದ್ದರೆ ಎಷ್ಟು ಸಂತೋಷಪಟ್ಟುಕೊಳ್ಳುತ್ತಿದ್ದೆಯೋ ? ಮಾಲತಮ್ಮನನ್ನೂ ಕರಕೊಂಡು, ನಿಮ್ಮ ಸಮಾಜದ ಕೆಲಸವನ್ನು ಬೇಗ ಮುಗಿಸಿ ಬರಬಹುದಾಗಿತ್ತು. ಆದದ್ದು ಆಗಿಹೋಯ್ತಲ್ಲಾ ! ನಾಡಿದ್ದು ಭಾನುವಾರ ಲೈಟ್ ಆಫೀಸ್ ಲಕ್ಷ್ಮಣ ಸಿಂಗರ ಮನೆಯಲ್ಲಿ ಅವನ ಹರಿಕಥೆಯನ್ನು ಏರ್ಪಾಡು ಮಾಡಿದ್ದಾರೆ. ಸಿಂಗರ ಹೆಂಡತೀನೆ ಎಲ್ಲರನ್ನೂ ನಮ್ಮನೆ ಹರಿಕಥೆಗೂ ಬನ್ನಿ ಅಂತ ಕರೆದಳು. ಅಲ್ಲಿಗಾದರೂ ಹೋಗಿ ಸಂತೋಷ ಪಡೇ" ಎಂದು ಅಂಬುಜಮ್ಮ ತನ್ನ ಸೊಸೆಗೆ ರಾತ್ರಿ ಒಂಬತ್ತರ ವೇಳೆಯಲ್ಲಿ ಹಿಂತಿರುಗಿದಾಗ ಹೇಳಿದರು.

ಅಂಬುಜಮ್ಮನ ಮುಖವನ್ನೇ ಮಾಲತೀಜೀ ಎರಡು ನಿಮಿಷ ಎವೆಯಿಕ್ಕದೇ ನೋಡಿದಳು. ಅದನ್ನು ಕಂಡ ಅಂಬುಜಮ್ಮ ತಾನು ಅಂದಿದ್ದೇನು ಎಂಬುದನ್ನು ನೆನೆಸಿಕೊಂಡರು. ಸ್ವಲ್ಪ ನಾಚಿಕೆಯಿಂದ ಮುಖ ಕೆಂಪಗಾಯಿತು.

"ಅದು ಯಾಕೆ ಹಾಗೆ ನೋಡ್ತೀ ಮಾಲತೀ ! ಹರಿಕಥೆ ದಾಸರನ್ನೇ ತಬ್ಬಿಕೊಂಡು, ಕೆನ್ನೆ ಚಿವುಟಿ ಮುತ್ತು ಕೊಡಬೇಕು ಅಂತ ಅನ್ನಿಸ್ತು ಅಂತ ಅಂದಿದ್ದ

ರಿಂದಲೇ ! ನಿಂಗೆ ಪೂರ್ತಿ ಹೇಳಲಿಲ್ಲ. ಹರಿಕಥೆ ಮಾಡಿದ ದಾಸರಿಗೆ ಹನ್ನೆರಡೇ ವರ್ಷ ವಯಸ್ಸು. ಆದರೂ ಅದೇನೆಲ್ಲಾ ಕಲಿತಿದ್ದಾನಮ್ಮ. ಮೊಮ್ಮಗನ ವಯಸ್ಸು ದಾಸರಿಗೆ. ಹಾಗಂದಿದ್ದು ಏನು ಸೋಜಿಗ ?" ಎಂದರು ಅಂಬುಜಮ್ಮ.

"ಹೇಗೂ ಮಾಲತಿ ನಮ್ಮೂರಿನಲ್ಲೇ ಇನ್ನೂ ಮೂರು ದಿವಸ ಇರಲೇಬೇಕು. ಸಂಸಾರ ನಿಯಂತ್ರಣದ ವಿಷಯವಾಗಿ ಆಕೆ ಇನ್ನೂ ನಾಲ್ಕು ಭಾಷಣಗಳನ್ನು ಅಜೂಬಾಜೂ ಹಳ್ಳಿಗಳಿಗೆ ಹೋಗಿ ಮಾಡಬೇಕು. ಇವತ್ತು ಎರಡು ಕಡೆ ಭಾಷಣ ಮಾಡಬೇಕಾದ್ದರಿಂದ, ಅವಳ ಜತೆಯಲ್ಲಿ ಅಧ್ಯಕ್ಷಿಣಿಯಾಗಿ ನಾನೂ ಹೋಗಬೇಕಾದುದರಿಂದ ನಾವಿಬ್ಬರೂ ಹರಿಕಥೆಗೆ ಬರಲಿಕ್ಕಾಗಲಿಲ್ಲ. ನಾಡಿದ್ದು ಭಾನುವಾರ ಬಿಡುವು ಮಾಡಿಕೊಂಡು ಹರಿಕಥೇನ ಕೇಳೋಕ್ಕೆ ಬರ್ತ್ರೀವಿ. ಮಾಲತಿ ಹೇಗಿದ್ದರೂ ಲಕ್ಷ್ಮಣ ಸಿಂಗರ ಹೆಂಡತಿಯನ್ನು ಕಾಣಬೇಕು ಅಂತಿದ್ದಾಳೆ. ಅವರ ಮುಖಾಂತರ ಲೈಟ್ ಕಾಲನಿ ಹೆಂಗಸರನ್ನೆಲ್ಲಾ ಕೂಡಿಹಾಕಿ, ಸಂತಾನ ನಿಯಂತ್ರಣದ ಅವಶ್ಯಕತೆಯನ್ನು ವಿವರಿಸಬೇಕು ಅಂತಿದ್ದಾಳೆ" ಎಂದು ಸೊಸೆ ಗಿರಿಜಾ ಹೇಳಿದಳು.

"ಯಾವ ಹೆಂಡತೀನ ನೋಡಬೇಕು ಅಂತಲೇ? ಮೊದಲನೆಯವಳನ್ನೋ, ಎರಡನೆಯವಳನ್ನೋ ? ಇಬ್ಬರಿಗೂ ಮಕ್ಕಳಿಲ್ಲ. ಸಂತಾನ ನಿಯಂತ್ರಣ ಕಟ್ಟಿಕೊಂಡು ಅವರಿಗೇನೇ? ಮಕ್ಕಳಾದರೆ ಸಾಕು ಅಂಥ ಇಬ್ಬರೂ ಏನೆಲ್ಲಾ ಲಾಗ ಹಾಕ್ತಾ ಇದ್ದಾರೆ. ಅವರೆಂಥ ಸಹಾಯವನ್ನು ಮಾಡುತ್ತಾರೆಯೇ ನಿಮಗೆ?" ಎಂದು ಅಂಬುಜಮ್ಮನವರು ಕೇಳಿದರು.

"ಗಿರಿಜಾ! ಈ ವಿಷಯವನ್ನು ನನಗೆ ಹೇಳಲೇ ಇಲ್ಲವಲ್ಲೇ ! ಲಕ್ಷ್ಮಣ ಸಿಂಗರ ಯಾವ ಹೆಂಡತಿಯನ್ನು ನಮಗೆ ನೆರವಾಗಿ ಅಂತ ಕೇಳಿಕೊಳ್ಳುವುದೇ ಈಗ! ಸ್ವಲ್ಪ ತೊಂಚಾವಂಚಕ್ಕೆ ಇಟ್ಟುಕೊಂಡಿತಲ್ಲೇ" ಎಂದಳು ಮಾಲತೀಜೀ. ರಾಜೀವಪುರದಿಂದ ಖಾನ್‌ಖಾನ್ ಪಾಳ್ಯಕ್ಕೆ ಆಕೆ ಸರಕಾರಿ ಖರ್ಚಿನಲ್ಲಿ, ಸಂತಾನ ನಿಯಂತ್ರಣದ ಪ್ರಚಾರ ಮಾಡಲು ಬಂದಿದ್ದಳು. ಹಿಂತಿರುಗಿ ಹೋದ ಮೇಲೆ ರಾಜಧಾನಿಯಲ್ಲಿ ಹಿಂದಘಟ್ಟದ ಖಾನ್‌ಖಾನ್ ಪಾಳ್ಯದಲ್ಲಿ ಇಷ್ಟು ಜನರನ್ನು ಭೇಟಿಯಾಗಿದ್ದೆ ಎಂದು ಭರ್ಜರಿ ವರದಿಯನ್ನು ಒಪ್ಪಿಸಬೇಕಾಗಿತ್ತು. ಚೂಟಿ ಕೆಲಸಗಾರ್ತಿ ಎಂದು ಸಾರ್ವಜನಿಕ ಕ್ಷೇತ್ರದಲ್ಲಿ ಹೆಸರು ಪಡೆದ ಮಾಲತೀಜೀಗೆ ಹೆಸರನ್ನು ಉಳಿಸಿಕೊಳ್ಳಬೇಕೆಂಬ ತೀವ್ರ ಹಂಬಲ.

"ಎರಡು ಕುದುರೆ ಸಾರೋಟು ನಡಸ್ತಾರೆ ಲಕ್ಷ್ಮಣ ಸಿಂಗರು, ಅಂತ ನನಗೆ

ಗೊತ್ತೇ ಇಲ್ಲಮ್ಮಾ! ಅವರನ್ನು ನೋಡಿದರೆ ಸಾಧು ಮುದುಕರ ತರಹ ಕಾಣಿಸ್ತಾರೆ. ನಾನು ಕಂಡಿರೋದು ಅವರ ಮೊದಲನೆಯ ಹೆಂಡತಿ ಅಂತ ಕಾಣುತ್ತೆ. ಎರಡನೆಯ ಹೆಂಡತಿಯನ್ನು ಕಂಡ ನೆನಪಿಲ್ಲವಲ್ಲ" ಎಂದಳು ಗಿರಿಜಾ.

"ಎರಡನೆಯ ಹೆಂಡತಿಯನ್ನು ಯಾರೂ ಕಾಣುವ ಹಾಗಿಲ್ಲ ಕಣೇ! ಅವಳ ಮೇಲೆ ಸರ್ಪಗಾವಲು. ಮನೆಯ ಹೊರಗೆ ಆಕೆ ಬಂದಿದ್ದೇ ಇಲ್ಲ. ಮೊದಲನೆ ಹೆಂಡತಿಯೇ ಉತ್ಸವಮೂರ್ತಿ ಆ ಮನೆಯಲ್ಲಿ" ಎಂದರು ಅಂಬುಜಮ್ಮ.

"ಹಾಗಾದರೆ ಮೊದಲನೆಯ ಹೆಂಡತಿಯ ಮಾತೇ ಕಾಲನಿಯಲ್ಲಿ ನಡೆಯೋದು. ಅವರನ್ನೇ ಕಾಣೋಣ" ಎಂದಳು ಗಿರಿಜಾ.

"ಭಾನುವಾರ ಸಂಜೆ ಹರಿಕಥೆ ಶುರುವಾಗುವುದಕ್ಕೆ ಅರ್ಧ ಗಂಟೆ ಮುಂಚೆ ಮೂರುವರೆ, ಮೂರೂಮುಕ್ಕಾಲಿಗೆಲ್ಲಾ ಲಕ್ಷ್ಮಣ ಸಿಂಗರ ಮನೆಗೆ ಹೋಗೋಣ. ನಮ್ಮ ಕೆಲಸವನ್ನು ಮೊದಲು ಮುಗಿಸಿಕೊಂಡು ಬಿಡೋಣ" ಎಂದಳು ಮಾಲತೀಜೀ.

ಈ ಮಾತುಗಳೆಲ್ಲ ಮುಗಿಯುವ ಹೊತ್ತಿಗೆ ಅಂಬುಜಮ್ಮನವರು, ನಡೆದು ಬಂದ ದಣಿವಿನ ಪರಿಹಾರವಾಗಿ ಚೇತರಿಸಿಕೊಂಡಿದ್ದರು. ಎಲ್ಲರೂ ರಾತ್ರಿಯ ಊಟಕ್ಕೆ ಹೋದರು.

ಭಾನುವಾರ ಮಧ್ಯಾಹ್ನ ಮೂರೂವರೆ ಗಂಟೆಯ ವೇಳೆಗೆ ಗಿರಿಜಾ ಮತ್ತು ಮಾಲತಿ ಲಕ್ಷ್ಮಣ ಸಿಂಗರ ಮನೆಗೆ ಹೋದರು. ಆ ವೇಳೆಗೆ ಆಗಲೇ ಮುಂದಿನ ದೊಡ್ಡ ಹಜಾರದಲ್ಲಿ ಹರಿಕಥೆಯ ಏರ್ಪಾಡೆಲ್ಲವೂ ಮುಗಿಸಾಗಿತ್ತು. ಹಿರಿಯ ಹೆಂಡತಿಯು ಇಬ್ಬರನ್ನೂ ಬರಮಾಡಿಕೊಂಡು ತನ್ನ ಕೈಲಾದ ಸಹಾಯವನ್ನೆಲ್ಲಾ ಮಾಡುವುದಾಗಿ ಹೇಳಿದರು. "ನನ್ನ ತಂಗಿ ಭವಾನಿ ಇದಾಳಲ್ಲಾ ಅವಳಿಗೆ ಸಂಗೀತ ಚೆನ್ನಾಗಿ ಬರುತ್ತೆ. ಕಾಲನಿಯ ಹೆಣ್ಣು ಮಕ್ಕಳು ಅವಳಲ್ಲಿಗೆ ಸಂಗೀತ ಕಲಿಯಲು ಬರುತ್ತಾರೆ. ಅವಳಿಗೂ ಹೇಳ್ತೀನಿ. ಅವಳ ಮುಖಾಂತರವೂ ನೀವು ಪ್ರಚಾರ ಮಾಡಬಹುದು" ಎಂದು ಹೇಳಿ, ಆಕೆ ಭವಾನಿಯನ್ನು ಕರೆದಳು. ಒಳಗಿನಿಂದ ಎರಡನೆಯ ಹೆಂಡತಿ ಭವಾನಿ ಬಂದಳು. ರೂಪಸ್ಥೆಯರು ಯಾರು ಎರಡನೆಯ ಮದುವೆಗೆ ಸಿಗುತ್ತಾರೆ? ಆದರೂ ಮೈಕಟ್ಟು ಬಿಗಿಯಾಗಿತ್ತು. ಮುಖದಲ್ಲಿ ಕಳೆ ಇತ್ತು. ಮುಖ ಪ್ರಾಯವಿತ್ತು. ಉತ್ಸಾಹದಿಂದ ಆಕೆ "ಅಕ್ಕ ಹೇಳಿದ್ದನ್ನು ಸಂತೋಷದಿಂದ ಮಾಡ್ತೀನಿ. ಸಂಗೀ

Scanned by CamScanner

ತದ ಪಾಠಕ್ಕೆ ಬರುವವರ ಮನೆಗೆಲ್ಲಾ ನೀವು ಕೊಡುವ ಪ್ರಚಾರ ಪತ್ರಗಳನ್ನು ಕಳಿಸಿ ಕೊಡ್ತೀನಿ" ಎಂದು ಹೇಳಿದಳು.

ಆ ವೇಳೆಗೆ ಹರಿಕಥೆ ದಾಸರು, ಹಿಮ್ಮೇಳದವರೊಡನೆ ಬಂದರು. ನಾಲ್ಕೂ ಕಾಲು ಗಂಟೆಯಾಗಿತ್ತು. ಜನರೂ ಬಂದಿದ್ದರು. ಹರಿಕಥೆ ಶುರುವಾಯಿತು.

ದಾಸರಿಗೆ ದಿಟವಾಗಲೂ 12–13 ವರ್ಷ ವಯಸ್ಸೇ. ಕಂಠ ಇನ್ನೂ ಒಡೆದಿರಲಿಲ್ಲ. ಹಾಗಾಗಿ ಮಾತು, ಹಾಡು ಎಲ್ಲವೂ ತುಂಬಾ ಹಿತವಾಗಿತ್ತು. ವಾಕ್‌ಸಿದ್ಧಿಯೂ ಹುಡುಗನಿಗಿತ್ತು. ಗಿಳಿಪಾಠ ಒಪ್ಪಿಸಿದಂತೆ ಅವ ಹರಿಕಥೆಯನ್ನು ಮಾಡಲಿಲ್ಲ. ಅನುಭವ ಇದ್ದವರಂತೆಯೇ ತುಸು ಹಾಸ್ಯದ ಮೆರಗು ಕೊಟ್ಟು ಹರಿಕಥೆಯನ್ನು ಮಾಡಿದ. ಅವನ ಹಾಡಿಗೆ ಹಿಮ್ಮೇಳದವರೂ ಹದವಾಗಿ ಓಗೊಟ್ಟಿದ್ದರು. ಮಂಗಳ ಹಾಡಿದಾಗ, ಇಷ್ಟು ಬೇಗ ಮುಗಿದು ಹೋಯಿತಲ್ಲಾ ಅಂತ ಜನರಿಗನ್ನಿಸಿತು.

ಪ್ರಸಾದವನ್ನು ತೆಗೆದುಕೊಂಡು ಮಾಲತೀ, ಗಿರಿಜಾ ಇಬ್ಬರೂ ಹಿಂತಿರುಗಿದರು. "ಸೊಂಟ ಹಿಡಿದುಕೊಳ್ಳದೆ ಇದ್ದರೆ ನಮ್ಮ ಅತ್ತೆಯೂ ಬರ್ತಾ ಇದ್ದರು ಕಣೆ. ನಮಗಿಂತ ಹೆಚ್ಚು ಸಂತೋಷ ಪಡ್ತಾ ಇದ್ದರು" ಎಂದು ಗಿರಿಜಾ ಹಿಂತಿರುಗುವಾಗ ಹೇಳಿದಳು. "ಅದು ದಿಟ ಅನ್ನು, ಆದರೆ ನಂಗೇನೂ ದಾಸರನ್ನು ಕಂಡಾಗ ತಬ್ಬಿಕೋಬೇಕು ಅಂತ ಅನ್ನಿಸಲಿಲ್ಲವಲ್ಲಮ್ಮಾ" ಎಂದಳು ಮಾಲತೀ.

"ಕರುವನ್ನು ಕಂಡರೆ ತಬ್ಬಿಕೋಬೇಕು ಅಂತ ತಾಯಂದಿರಿಗೆ ಅನ್ನಿಸುತ್ತೆ. ನಿಂಗ್ಯಾಕನ್ನಿಸುತ್ತೆ ಹಾಗೆ! ಹೋರಿಗಳ ಮೇಲೇ ನಿನ್ನ ಕಣ್ಣು!" ಎಂದು ಗಿರಿಜಾ ಛುಡಾಯಿಸಿದಳು. ಹೈಸ್ಕೂಲಿನಿಂದ ಕಾಲೇಜಿನ ತನಕ ಇಬ್ಬರೂ ಗೆಳತಿಯರಾಗಿದ್ದರು. ಬಿಚ್ಚು ಮಾತುಗಳಲ್ಲಿ ಛುಡಾಯಿಸುವುದು ಅವರ ಹಕ್ಕು.

"ಅಂದ ಹಾಗೇ ಆ ತಬಲ ಬಾರಿಸುತ್ತಿದ್ದನಲ್ಲಾ, ಅವ ಬಲು ಚೆನ್ನಾಗಿ ಕೈ ಆಡಿಸುತ್ತಿದ್ದನಮ್ಮ. ಹಾವಿನ ಹೆಡೆ ಹರಿದ ಹಾಗೆ ಅವನ ಅಂಗೈ ಹರಿಯುತ್ತಿತ್ತು. ಅದನ್ನೇ ನೋಡುವ ಹಾಗಾಗಿತ್ತು" ಎಂದಳು ಮಾಲತೀಜೀ.

"ನೀನು ನೋಡ್ತಾ ಇದ್ದುದನ್ನು ನಾನೂ ನೋಡಿದೆ. ಅದಕ್ಕೇ ಹಾಗೆ ಛುಡಾಯಿಸಿದೆ. ನಿನಗಿಂತ ಹೆಚ್ಚು ಹಸಿವಿನಿಂದ ಭವಾನಿಯೂ ತಬಲವನ್ನು ನೋಡುತ್ತಿದ್ದಳು. ಆ ತಾಳದಲ್ಲೇ ಅವಳೂ ತಲ್ಲೀನಳಾದ ಹಾಗೆ ಕಾಣಿಸಿತಮ್ಮ" ಎಂದಳು ಗಿರಿಜೆ. ಆ ವೇಳೆಗೆ ಮನೆ ಸಿಕ್ಕಿತು.

* * *

"ಇವತ್ತು ಹಸನಾಗಿ ಮುದ್ದೆ ಬೇಯಿಸಬೇಕು. ಬಟಾಣಿ ಕಾಳು ಈರುಳ್ಳಿ ಹಾಕಿ ಪಸಂದ್ ಎಸರು ಮಾಡಬೇಕು. ನಾಲ್ಕು ಮೆಣಸಿನ ಕಾಯನ್ನು ಕರಿದಿಡಬೇಕು. ರಾತ್ರಿ ಮನೆಗೆ ನಾ ಬರೋ ಹೊತ್ತಿಗೆ ಅಡಿಗೆಯ ಘಮಘಮ ರಸ್ತೆಗಿಳಿದಿರಬೇಕು. ತಿಳೀತಾ" ಎಂದು ಗೆಳತಿಗೆ ಬಿಗುಮಾನದಿಂದ ತನ್ನ ಮೀಸೆ ಮೇಲೆ ಕೈಯ್ಯಾಡಿಸಿಕೊಂಡು ಬಿಡ್ಡಣ್ಣ ಜಬರದಸ್ತಿನಿಂದ ಹೇಳಿದರೂ ಆದರದ ಕಿರುನಗೆಯು ಅವನ ಮೀಸೆ ತುದಿಯಲ್ಲಿ ಮಿಂಚುತ್ತಿತ್ತು. ಮಧ್ಯಾಹ್ನ ಹನ್ನೊಂದು ಗಂಟೆಗೆಲ್ಲಾ ಇಬ್ಬರೂ ಊಟ ಮುಗಿಸಿದ್ದರು. ಉಂಡು ಮಲಗಿದ್ದರು. ಸುಮಾರು ನಾಲ್ಕರ ವೇಳೆಗೆ ಎದ್ದು ಬಿಸಿ ಕಾಫಿ ಮಾಡಿ, ತಾನು ಕುಡಿದು ಬಿಡ್ಡಣ್ಣನಿಗೂ ಕೊಟ್ಟ ಮೇಲೆ, ಇಬ್ಬರ ಆಯಾಸವೂ ಪರಿಹಾರವಾದಂತೆ ಕಾಣಿಸಿತು. ಆಗಲೇ ರಾತ್ರಿಯ ಊಟದ ವಿವರಗಳನ್ನು ಬಿಡ್ಡಣ್ಣ ಸೂಚಿಸಿದ್ದು.

"ಈ ಸಂಜೇಗ ಅದು ಯಾಕ ಅಷ್ಟು ಭರ್ಜರಿ ಊಟ! ನಿಂಗೇನು ಇವತ್ತು ಹುಟ್ಟಿದ ಹಬ್ಬಾನ? ಅಥವಾ ಶೋಭನಾನ! ಅಲ್ಲಾ ಲಾಟರಿ ಗೀಟರೀಲಿ ಏನಾರ ಬಂಡಿ ಹಣಾ ಬಂತಾ? ಏನೂ ಕಾರಣ ಇಲ್ಲದೆ ತಿರುಗಿ ರಾತ್ರಿ ಅಡಿಗೆ ಮಾಡುಕ್ಕೆ ನನಗೆ ಬೇಜಾರು. ಮೈ ಕೈ ಎಲ್ಲಾ ಇನ್ನೂ ನೋವಸ್ತದೆ" ಎಂದಳು ಬಿಡ್ಡಣ್ಣನ ಗೆಳತಿ.

"ಪಸಂದ್ ಊಟ ಮಾಡುಕ್ಕೆ ಹುಟ್ಟಿದ ಹಬ್ಬಾನೇ ಬರಬೇಕಾ? ಬಂಡಿ ತುಂಬಾ ಹಣಾ ಬಂದೋರಿಗೆ ಹಸಿವು ಇಂಗಿಹೋಗುತ್ತಂತೆ? ಅವರೇನು ಉಂಡಾರು? ಶೋಭನದ ಅವಸರ ನಂಗ್ಯಾಕ? ಹಸೆಗೆ ಕರೆದಾಗ ಬಂದು ಕೂಡ್ತೀನಿ, ಏನೋ ಆಸೆ ಆಯಿತು ಆ ಊಟ ಮಾಡುವ ಅಂತ ಕೇಳಿದೆ. ಆದರೆ ಮಾಡು ತಿಂತೀನಿ, ಇಲ್ಲದೆ ಇದ್ದರೆ ಹೊಟ್ಟೆಮೇಲೆ ಒದ್ದೆ ಬಟ್ಟೆ ಹಾಕ್ಕೊಂಡು ಮಲಕೋತೀನಿ!

"ಬೆಳಗಾಗೆದ್ದು ರಾಮೋಜಪ್ಪನವರ ಜತೆಗೆ ಖಾನ್‌ಖಾನ್ ಪಾಳ್ಯಕ್ಕೆ ಹೋಗಬೇಕು. ಅವರ ಜತೆ ಹೊಂಟರೆ, ಹಿಂತಿರುಗೋದು ಯಾವಾಗಲೊ ಯಾರಿಗೆ ಗೊತ್ತು? ಖಾನ್‌ಖಾನ್ ಪಾಳ್ಯ ಎಂತಹ ಕೊಂಪೇನೋ? ಅಲ್ಲಿ ತಿನ್ನುಕ್ಕೆ ಏನಾರ ಸಿಕ್ತದೋ, ಕುಡಿಯಕ್ಕೆ ನೀರಾದರೂ ಸಿಕ್ತದೋ ಒಂದೂ ಗೊತ್ತಿಲ್ಲ. ಅವರ ಕೂಡೆ ಹೋದರೆ ದಿನವೆಲ್ಲಾ ದುಡಿಸ್ತಾರೆ. ಜಟ್‌ಪಟ್ ಅಂತ ಕೆಲಸ ಆಗಬೇಕು ಅಂತಾರೆ. ಅಂದ ಮೇಲೆ ಆ ವನವಾಸವನ್ನ ಎಷ್ಟು ದಿವಸ ಮಾಡಬೇಕೋ, ಕಾಣೆ. ಅದಕ್ಕೇ ಕೇಳಿದೆ. ರಾತ್ರಿ ಗಡದ್ದು ಊಟ

ಉಂಡು ಬೆಳಗಿನ ಝಾಮದಲ್ಲೇ ಹೋಗೋಣ ಅಂತ. ಯಾಕೇ ನೀನು ಪೋಲೀಸಿನವರ ತರಹ 'ಕೊಶ್ಚನ್' ಹಾಕ್ತಾ ಇದಿ" ಎಂದು ಬಿಡ್ಡಣ್ಣ ತುಸು ಬೇಸರದಿಂದಲೇ ಹೇಳಿದಂತಿತ್ತು.

"ಪಯಣ ಹೋಗಬೇಕು ನಾಳೆ, ಅಂತ ಹೇಳಲೇ ಇಲ್ಲ. ನನಗೆ ಹೇಗೆ ಗೊತ್ತಾಗಬೇಕು. ಮೊದಲೇ ಹೇಳಿದ್ದರೆ ಮಧ್ಯಾಹ್ನದ ಊಟಕ್ಕೆ ಅದೆಲ್ಲಾ ಮಾಡಿಡ್ತಿದ್ದೆ" ಎಂದಳು ಬಿಡ್ಡಣ್ಣನ ಗೆಳತಿ.

"ಅದೇನೋ ಅಂದೆಯಲ್ಲ, ಶೋಭನದ ಊಟ ಅದು. ಅದನ್ನ ರಾತ್ರಿ ಮಾಡಬೇಕೇ ಹೊರತು ಮಧ್ಯಾಹ್ನ ಯಾರಾರೂ ಮಾಡಾರಾ ? ಒಳ್ಳೇ ಸಂಸಾರಗಿತ್ತೀ ನೀ" ಅಂದ ಬಿಡ್ಡಣ್ಣ.

"ಹಗಲೇನು ಬಂತು, ರಾತ್ರಿ ಏನು ಬಂತು ನಿಮಗ ಶೋಭನದ ಊಟ ಮಾಡುಕ್ಕೆ. ನನ್ನ ಅಂದಕೋತೀರಿ, ಸಂಸಾರಗಿತ್ತಿ ಅಂತ. ಹೋಗಲಿ ಬಿಡಿ. ರಾತ್ರಿಗೆ ನೀವು ಬಯಸಿದ ಅಡಿಗೆ ಮಾಡಿಡ್ತೀನಿ. ಆದರೆ ರಾಮೋಜಪ್ಪನವರು, ಖಾನ್‌ಖಾನ್ ಪಾಳ್ಯಕ್ಕೆ ಯಾಕ ಹೋಗ್ತಾರ ? ಆ ಊರ ಹೆಸರ್ರೂ ಕೇಳಿಲ್ಲ" ಎಂದಳು ಬಿಡ್ಡಣ್ಣನ ಗೆಳತಿ.

"ನಾನೂ ಕೇಳಿತ್ತಿಲ್ಲ. ಅದೆಲ್ಲೋ ಹಿಂದಘಟ್ಟದ ಡಿಸ್ಟ್ರಿಕ್ಟ್‌ನಲ್ಲಿದೆಯಂತೆ. ಲೈಟ್ ಗಿಯ್ರ್ ಹಾಕ್ತಾ ಇದಾರೆ ಅಂತ ಅಂತಿದ್ದರು. ಜಮೀನು ಕೊಂಡು ಕೊಂಡು ಬರೋಣ, ಬಾ ಅಂದರು. ನಾನು ಸೈ ಅಂದೆ. ಅವರೇ ಅಂದರು, ಮಾಲತಮ್ಮನವರು ಆ ಕಡಿ ಹೋಗಿದ್ದರು. ಜಮೀನು ಅಲ್ಲಿ ಬಹಳ ಪಸಂದ್ ಇದೆ. ಹಣವಂತರು ಸುಮಾರು ಜನ ಅಲ್ಲಿ ಇದಾರೆ ಅಂತ. ಮುಪ್ಪಿನ ಕಾಲ ದಲ್ಲಿ, ಸ್ವಲ್ಪ ಜಮೀನಿದ್ದರೆ ತಲೆ ಕಾಯುತ್ತೆ, ಕೊಳ್ತೀನಿ ಅಂದರು. ಜಮೀನು ಯಾವುದು ಚೆಂದ, ಎಷ್ಟು ಸುಲಭಕ್ಕೆ ಗಿಟ್ಟುತೈತಿ ಎಂದು ನೀ ಹೇಳು ಬಾ ಅಂತ ಕರೆದರು. ಒಕ್ಕಲ ಮಕ್ಕಳ ಜತೆ ನಾ ಅಡ್ಡಾಡಿದರೆ, ಜಮೀನಿನ ಗುಟ್ಟು ತಿಳೀತದೆ. ಅದನ್ನ ಭದ್ರ ಮಾಡಿಕೊಂಡು ರಾಮೋಜಪ್ಪ ಜಮೀನ್ದಾರರಿಂದ ಭೂಮಿ ಕೊಳ್ಳಬಹುದು. ಆಗ ಮೋಸ ಆಗುಲ್ಲ" ಎಂದ ಬಿಡ್ಡಣ್ಣ.

"ದೊಡ್ಡ ಹೋಟಲಿನಾಗ ವೇಷ ಕಟ್ಟಿಕೊಂಡು ಆಡೋರು, ರಾಮೋ ಜಪ್ಪ ; ಅವರು ಹಳ್ಳಿ ಕೊಂಪೇಲಿ ಹೋಗಿ ನೆಲ ಮಾಡಿಸ್ತಾ ಕೂತುಕೊಂಡಾರಾ? ಇದರಾಗೆ ಇನ್ನೇನೋ ಆಟ ಐತಿ, ನಂಗೆ ತಿಳೀವಲ್ಲದು. ಅದು ಕಟ್ಟಿಕೊಂಡು ನನಗೇನು ? ನೀ ಬೇಗ ಹಿಂತಿರುಗಿ ಬಂದರೆ ಸಾಕು. ಒಬ್ಬಳೇ ಇರುಕ್ಕೆ ತುಂಬಾ ಬೇಸರ ಬರುತ್ತೆ. ಅಂದ ಹಾಗೆ ನೀ ಬರುಕ್ಕೆ ಮುಂಚೆ, ಮದ್ವಿ ಗಿದ್ವಿ ಅಂದರೆ

ಬೇಡಪ್ಪಾ ಬೇಡ, ನನಗೆ ಬೇಕಾದ್ಹಾಂಗ ಬೇಕಾದೋರ ಕೂಡಿ ಜೀವನ ಮಾಡೋದೇ ಚೆಂದ ಅನಿಸಿತ್ತು. ಈಗೀಗ ಯಾಕೋ ನಿನ್ನ ಮದ್ವಿ ಆದರೇ ಚೆನ್ನೇನೋ ಅನಿಸ್ತದೆ" ಎಂದಳು ಬಿಡ್ಡಣ್ಣನ ಗೆಳತಿ.

"ಹಂಗೆಲ್ಲಾ ಕೆಟ್ಟ ಕೆಟ್ಟ ಮಾತಾಡಬೇಡ, ಬಿಡ್ತು ಅನ್ನು. ಈಗಿರೋ ಹಾಗೇ ಸುಖವಾಗಿರೋಣ. ಮದ್ವಿ ಗಿದ್ವಿ ಆದರೆ ನೀ ನನ್ನ ತಾವ ಇದ್ದೇ ಇರ್ತಿ ಅಂತ ಒಂದು ತರಹಾ ಜಂಭ ಬಂದು ಬಿಡ್ತದೆ. ಆಮೇಲೆ ನಾ ಜೋರು ಮಾಡಾಂವ. ನನ್ನ ಜೋರನ್ನ ನೀ ಕೇಳ್ತೀಯಾ ? ನೀನೂ ಕಸಪರಿಕೆ ತೊಗೋತಿ. ತೊಗೋ, ಶುರುವಾಗುತ್ತೆ ದಿನ ಬೆಳಗೂ ಲಟಾಪಟಿ.

"ಈಗ ನಂಗೆ ತುಸು ಭಯ. ಇನ್ನು ಮ್ಯಾಲ ನೀ ಬೇಡ ಅಂತ ಎಂದಾರೂ ಹೇಳ್ತೀಯೇನೋ ಅಂತ, ಅದಕ್ಕೆ ನಾನು ವೈನಾಗಿರ್ತೀನಿ. ನೀನೂ ಹಂಗೇ. ಹಿಂಗೇ ನಮ್ಮ ಜೀವನಾನ ನಗ್ತಾ ನಗ್ತಾ ನಡೆಸಿ ಬಿಡೋಣ. ಮೆಣಸಿನ ಕಾಯಿ ಕರಿದಾಗ, ಕರಕಲು ಕಪ್ಪಗೆ ಕರೀಬೇಡ, ಳ್ಳಾ !" ಎಂದ ಬಿಡ್ಡಣ್ಣ "ಮಾರುಕಟ್ಟೆ ತಾಕ್ಕೆ ಹೋಗಿ ಬರ್‍ತೀನಿ" ಅಂತ ಹೇಳಿ ಹೊರಬಿದ್ದ.

* * *

"ಇಷ್ಟು ಹೊತ್ತಿಗೆ ಬರಬೇಕಾಗಿತ್ತಲ್ಲ! ಇನ್ನೂ ಯಾಕೆ ಬರಲಿಲ್ಲ? ದಾರಿಯಲ್ಲಿ ಏನಾದರೂ ಮೋಟಾರು ತೊಂದರೆ ಕೊಟ್ಟಿರಬಹುದೇ ? ನಮ್ಮ ಜೀಪಿನಲ್ಲೇ ಆ ದಾರಿಯಲ್ಲಿ ಸ್ವಲ್ಪ ದೂರ ಹೋಗಿ ನೋಡಿಕೋಡು ಬಾ ಅಂತ ಹೇಳಲೇ ?" ಎಂದು ಲಕ್ಷ್ಮಣ ಸಿಂಗ್ ಅವರು, ಶೇಕ್‌ದಾರ್ ಸುಬ್ಬಯ್ಯನವರಿಗೆ ಹೇಳಿದರು. ಬೆಳಿಗ್ಗೆ ಎಂಟು ಗಂಟೆಯಿಂದ ಹೂವಿನ ಹಾರಗಳನ್ನು ಹಿಡಿದು ಕೊಂಡು ಇಬ್ಬರೂ ಉಕ್ಕಡದ ಬಳಿ ಕಾದಿದ್ದರು.

"ಬೆಳಿಗ್ಗೆ ಸುಮಾರು ಎಂಟೂವರೆ ಗಂಟೆಯ ಹೊತ್ತಿಗೆ ಬರುತ್ತಾರೆ ಎಂದು ಖಂಡಿತವಾಗಿ ಬರೆದಿದ್ದರೇನು ?" ಎಂದು ಸುಬ್ಬಯ್ಯನವರು ಪುನಃ ಕೇಳಿದರು.

"ಬೆಳಿಗ್ಗೆ ಎಂಟೂವರೆ ಗಂಟೆಗೆ ಸರಿಯಾಗಿ ಬರುತ್ತಾರೆ. ನಮ್ಮ ಸಚಿವರ ಆಪ್ತ ಮಿತ್ರರು ಅವರು. ಎರಡು ದಿನ ಇದ್ದು ಹೋಗುತ್ತಾರೆ. ಸಾಧ್ಯ ವಾದಷ್ಟು ಸೌಕರ್ಯಗಳನ್ನು ಮಾಡಿ ಕೊಡಿ ಎಂದು ಸಚಿವರ ಆಪ್ತ ಕಾರ್ಯ ದರ್ಶಿಯೇ ನನಗೆ ಕಾಗದ ಬರೆದಿದ್ದಾನೆ. ಇಕೋ ನೋಡಿ ?" ಎಂದು ಕಾಗದ ವನ್ನು ತೋರಿಸಿ, "ನಮ್ಮ ಇಲಾಖೆಗೂ ನಿಮ್ಮ ಇಲಾಖೆಗೂ ಅವರೇ ಸಚಿವರು. ಆದುದರಿಂದ ಆಪ್ತ ಮಿತ್ರರನ್ನು ನಾವಿಬ್ಬರೂ ಒಲಿಸಿಕೊಂಡರೆ, ಮುಂದೆ ಕಷ್ಟ

Scanned by CamScanner

ಗಿಷ್ಟು ಬಂದರೆ, ಸಚಿವರನ್ನು ವಾಲಿಸಿಕೊಳ್ಳಬಹುದು. ಅದಕ್ಕೇ ನಿಮಗೂ ಈ ವಿಷಯ ತಿಳಿಸಿ ಕರೆದುಕೊಂಡು ಬಂದೆ" ಎಂದರು ಲೈಟ್ ಆಫೀಸ್ ಲಕ್ಷ್ಮಣ ಸಿಂಗ್ ಅವರು.

"ಎಂಟೂವರೆ ಆಯಿತು. ಮೋಟಾರು ಬರುವ ಸೂಚನೆಯೇ ಇಲ್ಲವಲ್ಲ. ನೇರವಾಗಿ ಐದಾರು ಮೈಲಿ ದೂರ ಈ ರಸ್ತೆ ಇದೆ. ಮೋಟಾರು ಮೊದಲು ಮೊದಲು ಕಾಣಿಸದೆ ಇದ್ದರೂ ಧೂಳು ಎದ್ದಿದ್ದು ಸುಮಾರು ದೂರಕ್ಕೆ ಕಾಣಿಸಬೇಕಲ್ಲ" ಎಂದರು ಸುಬ್ಬಯ್ಯನವರು.

"ನಿನ್ನೆ ಅಷ್ಟು ಮಳೆ ಹೊಡೆದಿದೆ. ಇವತ್ತು ಧೂಳು ಯಾಕೆ ಎದ್ದಾತು?" ಎಂದರು ಲಕ್ಷ್ಮಣ ಸಿಂಗರು.

"ಅದೂ ದಿಟ...ಅಲ್ಲೆಲ್ಲೋ ಮೋಟಾರು ಹಾರ್ನ್ ಮಾಡಿದ ಶಬ್ದ ಕೇಳಿಸಿದ ಹಾಗಾಯ್ತು ಅವರೇನೇನೋ?" ಎಂದರು ಸುಬ್ಬಯ್ಯನವರು.

ಆ ವೇಳೆಗೆ ದೂರದಲ್ಲಿ ಮೋಟಾರು ಬರುತ್ತಿರುವುದು ಕಾಣಿಸಿತು. ಬೇಗ ಬಂದೂ ಬಿಡ್ತು. ಉಕ್ಕಡದ ಹತ್ತಿರ ನಿಲ್ಲುತ್ತಿದ್ದಂತೆಯೇ ಲಕ್ಷ್ಮಣ ಸಿಂಗ್ ಅವರು ಮೋಟಾರಿನ ಹಿಂದಿನ ಸೀಟಿನ ಬಳಿಗೆ ನಡೆದರು. ಬಾಗಿಲು ತೆಗೆದು ಕೊಂಡು ಆ ವೇಳೆಗೆ ಅಲ್ಲಿ ಕುಳಿತಿದ್ದಾತ ಹೊರಕ್ಕೆ ಇಳಿದಿದ್ದ. ಖಾದಿ ಜುಬ್ಬ, ನೆಹ್ರೂ ವೇಸ್ಟ್, ಗಾಢ ಬಟ್ಟೆಯ ಕಚ್ಚೆ ಪಂಚೆ–ಸಚಿವರ ಮಿತ್ರನೇ ಇರ ಬೇಕು ಎಂದನ್ನಿಸಿತು. ಲಕ್ಷ್ಮಣಸಿಂಗ್ ಅವರ ಕೈಲಿದ್ದ ಹಾರವನ್ನು ಆತನ ಕೊರಳಿಗೆ ಹಾಕಿ ಸ್ವಾಗತ ಬಯಸುತ್ತಾ "ಸಚಿವರ ಆಪ್ತ ಕಾರ್ಯದರ್ಶಿಗಳು ಕಾಗದ ಬರೆದಿದ್ದರು, ತಾವು ಬರ್‍ತೀರಿ ಅಂತ. ಈ ಕೊಂಪೆಯಲ್ಲಿ ವಸತಿಯ ಸೌಕರ್ಯವು ಅಷ್ಟು ಚೆನ್ನಾಗಿಲ್ಲ. ಆದುದರಿಂದ ಕಾಲನಿಯ ಇನ್ಸ್‌ಪೆಕ್ಷನ್ ಬಂಗಲೆಯಲ್ಲೇ ಬಿಡಾರವನ್ನು ಏರ್ಪಡಿಸಿದ್ದೇನೆ" ಎಂದು ಹೇಳಿದರು.

ಹಿಂದಿನ ಸೀಟಿನಿಂದ ಇಳಿದಿದ್ದ ಇನ್ನೊಬ್ಬಾತ ಖಾದಿ ಚಡ್ಡಿಯನ್ನು ಧರಿಸಿದ್ದ. ಚಪ್ಪಲಿಯನ್ನು ಮೆಟ್ಟಿದ್ದ. ಉದ್ದನೆ ಷರ್ಟನ್ನು ತೊಟ್ಟಿದ್ದ. ಜತೆಗೆ ಖಾದಿ ಟೊಪ್ಪಿಯೂ ಇತ್ತು. ಅಂದರೆ ವೀರ ದೇಶಪ್ರೇಮಿ ಎಂದು ಕಾಣಿಸುತ್ತಿತ್ತು. ಸುಬ್ಬಯ್ಯನವರು ಅವನ ಕೊರಳಿಗೆ ಮಾಲೆ ಹಾಕಿದರು. ಸ್ವಾಗತ ಬಯಸಿದರು.

"ನನಗ್ಯಾಕ್ರಿ ಹಾರ ಹಾಕ್ತೀರಿ. ಅವರು, ರಾಮೋಜಪ್ಪನವರು, ದೊಡ್ಡವರು. ಅವರ ಸೇವಕ ನಾನು" ಎನ್ನುತ್ತ ಅವ ಹಾರವನ್ನು ತೆಗೆದು ಸುಬ್ಬಯ್ಯನವರ ಕೈಗೆ ಕೊಟ್ಟ. ಸುಬ್ಬಯ್ಯನವರ ಮುಖ ಚಿಕ್ಕದಾಯಿತು.

ಅದನ್ನು ಕಂಡ ರಾಮೋಜಪ್ಪನವರು "ನಮ್ಮ ದೇಶದಲ್ಲಿ ಇನ್ನು ಮುಂದೆ ದೊಡ್ಡವರು ಚಿಕ್ಕವರು. ಧಣಿಗಳು ಸೇವಕರು ಎನ್ನುವ ಭಿನ್ನಭಾವವನ್ನು ತೊಡೆದುಹಾಕುತ್ತೇವೆ. ನಾವೆಲ್ಲಾ ಮಾನವರು ಅಂದ ಮೇಲೆ ಅತಿಥಿಗಳಾಗಿ ಬಂದ ನಮ್ಮಿಬ್ಬರಿಗೂ ಸರಿಸಮಾನವಾದ ಮರ್ಯಾದೆಯನ್ನು ಮಾಡುವುದು ನ್ಯಾಯವೇ? ನೀನು ನನ್ನ ಸೇವೆ ಮಾಡಬಹುದು, ನಾನು ಸಚಿವರ ಸೇವೆ ಮಾಡುತ್ತೇನೆ. ಅವರು ದೇಶ ಸೇವೆ ಮಾಡುತ್ತಾರೆ, ದೇಶ ನಮ್ಮೆಲ್ಲರ ಸೇವೆಯನ್ನೂ ಮಾಡುತ್ತದೆ. ಈ ಸೇವಾಚಕ್ರದಲ್ಲಿ ಯಾವ ಕೊಂಡಿ ದೊಡ್ಡದು ಎಂದು ಹೇಳಬರುವುದಿಲ್ಲಾ ಅಲ್ಲವೇ" ಅಂತ ಒಂದು ಪುಟ್ಟ ಭಾಷಣ ಬಿಗಿದು. "ತಾವು ಲೈಟಾಫೀಸ್ ಲಕ್ಷ್ಮಣ ಸಿಂಗ್ ಅಲ್ಲವೇ?" ಎಂದು ಕುಲುಕಲು ಕೈ ಚಾಚಿದರು. ಲಕ್ಷ್ಮಣ ಸಿಂಗ್‌ರು ಕೈ ಕುಲುಕಿದ ಮೇಲೆ ಸುಬ್ಬಯ್ಯನವರ ಕಡೆಗೆ ದೃಷ್ಟಿ ಹರಿಸಿದರು. "ಇವರು ಶೇಕ್‌ದಾರ್ ಸುಬ್ಬಯ್ಯನವರು" ಎಂದು ಪರಿಚಯ ಮಾಡಿಕೊಟ್ಟರು, ಲಕ್ಷ್ಮಣ ಸಿಂಗ್.

"ಇವ ರಾಮು ಅಂತ. ನನ್ನ ನೆರಳು ಇದ್ದ ಹಾಗೆ. ಇವನಿಗೆ ತಿಳಿಯದ ಹಾಗೆ ನಾನು ಏನನ್ನೂ ಮಾಡಲು ಸಾಧ್ಯವಿಲ್ಲ" ಎಂದು ತಮ್ಮ ಸೇವಕ ರಾಮನನ್ನು ಇಬ್ಬರಿಗೂ ಪರಿಚಯ ಮಾಡಿಕೊಟ್ಟರು. ನಂತರ ಮೋಟಾರಿನಲ್ಲಿ ರಾಮೋಜಪ್ಪ ಮತ್ತು ಲೈಟಾಫೀಸ್ ಲಕ್ಷ್ಮಣ ಸಿಂಗರು ಕೂತರು. ಕಾಲನಿಯ ಅತಿಥಿ ಮಂದಿರದ ಬಳಿಗೆ ಹೊರಟರು. ಹಿಂದೆಯೇ ಜೀಪಿನಲ್ಲಿ ಸುಬ್ಬಯ್ಯನವರೂ, ರಾಮನೂ ಕುಳಿತು ಹಿಂಬಾಲಿಸಿದರು. "ಎಂತಹ ತಪ್ಪು ಮಾಡಿದೆ ನಯ್ಯಾ" ಅಂತ ಸುಬ್ಬಯ್ಯನವರು ಉದ್ಗಾರ ತೆಗೆದಾಗ "ಬಿಡ್ರಿ, ಈ ಕಾಲದಾಗ ಸಚಿವರಾರು, ಸೇವಕರಾರು ಅಂತ ಯಾರಿಗೂ ಸುಲಭವಾಗಿ ಪತ್ತೆ ಹತ್ತುಲ್ಲ. ಹಿಂದೆ ಎಷ್ಟೋ ಸರ್ತಿ, ಸಚಿವರ ಅಂಗರಕ್ಷಕನಾಗಿ ನಾ ಹೋದಾಗ, ನನಗೇ ಮೊದಲು ಹಾರ ಹಾಕ್ತಾ ಇದ್ದರು. ಇದಕ್ಯಾಕ ಕಾಳಜಿ ಮಾಡ್ತೀರಿ" ಎಂದು ರಾಮು ಸಮಾಧಾನವನ್ನು ಹೇಳಿದ.

ಕಾಲನಿಯ ಅತಿಥಿ ಮಂದಿರದಲ್ಲಿ ರಾಮೋಜಪ್ಪನವರೂ, ರಾಮನೂ ಇಳಿದುಕೊಂಡರು.

* * *

ಹತ್ತೂವರೆ ಗಂಟೆ ಹೊತ್ತಿಗೆ, ರಾಮೋಜಪ್ಪನವರು, ಸ್ನಾನ ಮುಗಿಸಿ ಹೊರ ಹೊರಡಲು ಸಿದ್ಧವಾಗಿದ್ದರು. ಲಕ್ಷ್ಮಣ ಸಿಂಗರು ಹೊತ್ತಿಗೆ ಸರಿಯಾಗಿ ಬಂದರು. "ನೋಡಿ ಸಿಂಗರೇ! ನನ್ನ ಕೆಲಸ ಒಂದು ರೀತಿಯಾಗಿ ಸ್ವಂತದ್ದು.

Scanned by CamScanner

ಈ ಪ್ರದೇಶದಲ್ಲಿ ಹುರುಳಿಯ ಬೆಳೆ ಹೊರವಾಗಿದೆ ಎಂದು ಕೇಳಿದ್ದೇನೆ. ಇಲ್ಲಿ ಒಂದು ನೂರು ಎಕರೆ ಜಮೀನು ಕೊಂಡು, ಹುರುಳಿ ಹಪ್ಪಳದ ಅಪ್ ಟು ಡೇಟ್ ಕಾರ್ಖಾನೆಯನ್ನು ಹಾಕುವ ಎನ್ನುವ ಯೋಚನೆ. ಕೇಂದ್ರ ಮತ್ತು ರಾಜ್ಯ ಸರಕಾರಗಳೆರಡೂ ಬೊಗಸೆ ಬೊಗಸೆ ಸಹಾಯ ಮಾಡುತ್ತವೆ ಎನ್ನುವ ಧೈರ್ಯ ಇದೆ. ಸುಧಾರಿತ ರೀತಿಯಲ್ಲಿ ಹುರುಳಿ ಹಪ್ಪಳವನ್ನು ಮಾಡಿ, ಹೊರ ದೇಶಗಳಿಗೆ ಕಳಿಸಿದರೆ, ಭಂಡಿ ವ್ಯಾಪಾರವನ್ನು ಮಾಡಬಹುದು. ಜೋಳಿಗೆ ಜೋಳಿಗೆ ವಿದೇಶಿ ಹಣ ನಮಗೆ ದೊರೆಯುತ್ತೆ. ಸರಕಾರದವರೇ ಇದನ್ನು ಮಾಡುವಂತಿಲ್ಲ. ತುಂಬಾ ಅಡಚಣೆಗಳಿರುತ್ತವೆ. ಆದುದರಿಂದ ಸರಕಾರದ ನೆರವಿನಲ್ಲಿ ಆದರೆ ಸ್ವಂತ ಕಾರ್ಪೊರೇಷನ್ ರಚಿಸಿ ಈ ಉದ್ಯಮ ವನ್ನು ಸ್ಥಾಪಿಸಬೇಕೆಂದು ಸಚಿವರ ಯೋಜನೆ. 'ರಾಮೋಜಿ ! ಈ ಕೆಲಸಕ್ಕೆ ಅಗತ್ಯವಾದ ಸಿದ್ಧತೆಗಳನ್ನು ಮಾಡು' ಎಂದವರು ಹೇಳಿದರು. ಅದಕ್ಕಾಗಿ ಬಂದಿದ್ದೀನಿ. ಸುಮಾರಾಗಿ ನೀರು ದೊರೆಯುವ ಜಮೀನು ಎಲ್ಲಿದೆ ಎಂದು ಹೇಳಿದರೆ ನೋಡಿಕೊಂಡು ಬರಬಹುದು.

"ನಿಮಗೆ ಸರಕಾರದ ಕೆಲಸ ತುಂಬಾ ಇರುತ್ತೆ. ನನ್ನ ಜತೆ ಅಡ್ಡಾಡುಕ್ಕೆ ವ್ಯವಧಾನವಿಲ್ಲದೆ ಇರಬಹುದು. ಆದ ಕಾರಣ, ಇನ್ನು ಯಾರನ್ನಾದರೂ ಜತೆ ಮಾಡಿ ಕಳಿಸಿದರೆ ಸಾಕು" ಎಂದು ಹೇಳಿದರು ರಾಮೋಜಪ್ಪ.

"ಸರಕಾರದ ಕೆಲಸಕ್ಕೆ ಕುಂದು ಬರದಂತೆ ಎಲ್ಲಾ ಏರ್ಪಾಡುಗಳನ್ನೂ ಮಾಡಿದ್ದೀನಿ. ನಿಮ್ಮಂತಹವರು ಈ ಕೊಂಪೆಯ ಕಡೆ ಯಾಕೆ ತಾನೆ ಬರ್‍ತೀರಿ, ನಿಮಗೆ ಅನುವಾದರೆ ನನ್ನ ಪುಣ್ಯ ಎಂದಂದುಕೊಳ್ಳುತ್ತೇನೆ. ಬನ್ನಿ, ಹೋಗೋಣ. ಮಧ್ಯಾಹ್ನದ ಭೋಜನವನ್ನು ನಮ್ಮ ಮನೆಯಲ್ಲೇ ಏರ್ಪಡಿಸಿದೀನಿ. ಸುಬ್ಬಯ್ಯನವರು ರಾಮನ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾರೆ" ಎಂದು ಲಕ್ಷ್ಮಣ ಸಿಂಗ್ ಹೇಳಿದರು. ಇಬ್ಬರೂ ಹೊರಬಿದ್ದರು.

ಎರಡು ಗಂಟೆಯ ಹೊತ್ತು ಇಬ್ಬರೂ ಖಾನ್‌ಖಾನ್ ಪಾಳ್ಯದ ಸುತ್ತ ಮುತ್ತಲಿನ ಪ್ರದೇಶಗಳಲ್ಲೆಲ್ಲಾ ಅಡ್ಡಾಡಿ ಬಂದರು.

"ಇಲ್ಲಿ ನೋಡಿ, ಕಣಿವೆಯ ಜಾಗ, ನೂರು ಎಕರೆ ಜಮೀನು ಇಲ್ಲಿ ಸಿಗುತ್ತದೆ. ಆದರೆ ಫಲವತ್ತಾದ ಜಮೀನು. ಕಾರ್ಪೊರೇಷನ್ ಕೊಳ್ಳುತ್ತೆ ಎಂದರೆ ಬೆಲೆ ಏರುತ್ತೆ. ಎಕರೆಗೆ ಎಂಟು ಹತ್ತು ಸಾವಿರದ ತನಕ ಏರಬಹುದು"ಎಂದು ಲಕ್ಷ್ಮಣ ಸಿಂಗರು ಪಡುವಲ ಕಡೆಯಿದ್ದ ಬಂಜರು ಭೂಮಿಯನ್ನು ತೋರಿಸಿದರು.

"ಸಿಂಗರೇ! ಇದು ತರೀ ಜಮೀನಲ್ಲ. ಬಂಜರು ಬಂಜರಾಗಿದೆ. ಇದನ್ನು ಫಲವತ್ತಾದ ಜಮೀನು ಅಂತ ಯಾಕಂತೀರಿ?" ಎಂದು ರಾಮೋಜಪ್ಪ ಕೇಳಿದರು.

"ಖುಷ್ಕಿ ಜಮೀನು ಇದು. ಆದರೆ ರಾಗಿ ಬೆಳೆದಾಗ ನೀವು ನೋಡಬೇಕು, ಒಂದೇ ಸಮನೆ ಸಮುದ್ರದಂತೆ ತೆನೆಗಳು ತಲೆಯಾಡಿಸುತ್ತಿರುತ್ತವೆ. ಕುಯ್ಲಾದ ಎರಡು ತಿಂಗಳುಗಳ ಮೇಲೆ ಈ ಜಮೀನಿಗೆ ಈ ತೆರನ ಸ್ಮಶಾನದ ಕಳೆ ಇರುತ್ತದೆ ಅಷ್ಟೆ" ಎಂದರು ಲಕ್ಷ್ಮಣ ಸಿಂಗ್.

ತಮ್ಮ ಅಭಿಪ್ರಾಯಗಳನ್ನು ರಾಮೋಜಪ್ಪನವರು ಒಪ್ಪದಿರಬಹುದು ಎಂಬ ಅನುಮಾನವೂ ಲಕ್ಷ್ಮಣ ಸಿಂಗರಿಗೆ ಹೊಳೆಯಿತು. ಆದುದರಿಂದಲೇ "ಆದರೆ, ಸಾಹೇಬ್ರೇ! ಈ ಜಮೀನಿನ ಮಧ್ಯದಲ್ಲಿ ಮೈನ್ ಲೈನ್ ಹಾದು ಹೋಗುತ್ತೋ ಏನೋ. ನಮ್ಮ ಡಿಪಾರ್ಟ್‌ಮೆಂಟಿನವರು ಇನ್ನೂ ಮೈನ್ ಲೈನ್ ಸರ್ವೆಯನ್ನು ಖಚಿತಗೊಳಿಸಿಲ್ಲ. ಅಂದಮೇಲೆ ಈ ಜಮೀನಿನ ಯೋಚನೆಯನ್ನು ಬಿಟ್ಟು ಬಿಡಬಹುದು. ಮೂಡಲ ದಿಕ್ಕಿನಲ್ಲಿ ನೂರು ಎಕರೆಗಳು ಒಂದೇ ತಾಣದಲ್ಲಿದೆ. ಏರುತಿಟ್ಟುಗಳಿಲ್ಲದೆ ಇದೆ. ಅದನ್ನು ನೋಡಿಕೊಂಡು ಊಟಕ್ಕೆ ಹಿಂತಿರುಗೋಣ" ಎಂದರು ಲಕ್ಷ್ಮಣ ಸಿಂಗ್.

"ಮಟ್ಟವಾಗಿದೆ ಜಾಗ. ಕಲ್ಲು ಮುಳ್ಳು ಹೊರವಾಗಿರುವುದನ್ನು ಕಂಡರೆ, ಇದು ಸರಕಾರದ ನೆಲವೇ ಆಗಿರಬೇಕು. ಕಾರ್ಖಾನೆಗೆ ಪ್ರಶಸ್ತವಾಗಿದೆ. ಇದರ ವಿಷಯಗಳನ್ನು ತಿಳಿದುಕೊಂಡರೆ ಒಳಿತು" ಎಂದರು, ರಾಮೋಜಪ್ಪ; ಮೂಡಲ ಕಡೆಯಿದ್ದ ಬಂಜರು ಭೂಮಿಯನ್ನು ನೋಡಿದಾಗ.

"ಇದು ಸರಕಾರದ ಭೂಮಿಯಲ್ಲ ಅಂತ ನನ್ನ ನೆನಪು. ಆದರೂ ಶಾನುಭೋಗರನ್ನು ಈ ಮಧ್ಯಾಹ್ನ ವಿಚಾರಿಸಿ, ನಂತರ ತಮಗೆ ತಿಳಿಸುತ್ತೇನೆ" ಎಂದರು ಲಕ್ಷ್ಮಣ ಸಿಂಗ್.

ಈ ಸಂದರ್ಭದಲ್ಲಿ ಏನಾದರೂ ಮಾಡಿ ತನ್ನ ಕಿಸೆಯನ್ನು ಲಕ್ಷ್ಮಣ ಸಿಂಗ್ ತುಂಬಿಕೊಳ್ಳಬೇಕೆಂದಿದ್ದಾನೆ ಎನ್ನುವ ಅನುಮಾನ ರಾಮೋಜಪ್ಪನಿಗೆ ಬಂದೇ ಬಂದಿತ್ತು, ಇಬ್ಬರೂ ಮಧ್ಯಾಹ್ನದ ಊಟಕ್ಕೆ ಹಿಂತಿರುಗುವಾಗ.

* * *

ಲಕ್ಷ್ಮಣ ಸಿಂಗರ ಮನೆಯ ಮಧ್ಯಾಹ್ನದ ಭೋಜನ ಭರ್ಜರಿಯಾಗಿತ್ತು. "ಇಷ್ಟನ್ನೆಲ್ಲಾ ಯಾಕೆ ಮಾಡಿಸಿದಿರಿ ಸಿಂಗರೇ? ನನ್ನಿಂದ ತಿನ್ನುಕ್ಕೆ ಆಗುಲ್ಲ"

Scanned by CamScanner

ಎಂದು ರಾಮೋಜಪ್ಪನವರು ಹೇಳುತ್ತಲೇ ಇದ್ದರು. "ಮುಖ್ಯ ನಿಮ್ಮ ಹೃದಯ ದೊಡ್ಡದು, ಅದರ ತರಹವೇ ನಿಮ್ಮ ಆತಿಥ್ಯ ಕೂಡ" ಎಂದು ಮುಂದುವರೆದರು. "ನಾಳೆ ಸಂಜೆಗೆ ಊರಿಗೆ ಹಿಂತಿರುಗುತ್ತೇನೆ. ನಾಳೆ ಬೆಳಿಗ್ಗೆ ಉತ್ತರ ಮತ್ತು ದಕ್ಷಿಣದ ದಿಕ್ಕುಗಳತ್ತ ಹೋಗಿ ಬರೋಣ. ತಿರುಗಿ ನಾನು ಬರುವುದು ಕಷ್ಟವಾಗಬಹುದು. ಆದುದರಿಂದ ನಿಮಗೆ ಪತ್ರ ಬರೆಯುತ್ತೇನೆ. ಇಂತಹ ಕಡೆ ನಾವು ನೋಡಿದ ಭೂಮಿಯನ್ನು ಕಾರ್ಪೊರೇಷನ್ನಿಗಾಗಿ ಕೊಳ್ಳಬೇಕು ಅಂತ. ಆಗ ನೀವು ಮುಂದೆ ನಿಂತು ಖರೀದಿ ಮಾಡಿಸಬೇಕು" ಎಂದು ಹೇಳಿದರು. ಮೊಸರನ್ನದ ಕೊನೆಯ ತುತ್ತನ್ನು ತಿನ್ನುತ್ತಿದ್ದಾಗ "ಕಾರ್ಖಾನೆಯ ಭೂಮಿಗಾಗಿ ಎರಡು ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದೇವೆ" ಎಂದೂ ಹೇಳಿದರು.

ಹಠಾತ್ತನೆ ಲಕ್ಷ್ಮಣ ಸಿಂಗರ ಮೀಸೆಯ ತುದಿಯ ಮೇಲಿದ್ದ ಅಗಳು ಕುಣಿಯಲಾರಂಭಿಸಿತು. ಕಣ್ಣುಗಳಲ್ಲಿ ಎಂತದೋ ಹೊಳಪು ಕೂಡಿತು. ಇದನ್ನು ರಾಮೋಜಪ್ಪನವರು ಗಮನಿಸದೆ ಇರಲಿಲ್ಲ. ಅವರಿಗೂ ತುಸು ಖುಷಿಯಾಯಿತು.

ಊಟ ಮುಗಿಸಿ ಎಲಡಿಕೆ ಮೆಲ್ಲಲು ಇಬ್ಬರೂ ಹಜಾರದಲ್ಲಿ ಕುಳಿತರು. ಲೋಕಾಭಿರಾಮದ ಮಾತುಗಳಿಂದ ಕುಶಲ ಪ್ರಶ್ನೆಗಳತ್ತ ಹರಿಯಿತು ಸಂಭಾಷಣೆ. ಇಬ್ಬರೂ ಪ್ರಸನ್ನರಾಗಿದ್ದರಲ್ಲ!

"ಮಕ್ಕಳು ಯಾರೂ ಕಾಣಸಲಿಲ್ಲವಲ್ಲ, ಶಾಲೆಗೆ ಹೋಗಿದ್ದಾರೆಯೆ? ಮಧ್ಯಾಹ್ನದ ಉಪಾಹಾರಕ್ಕೆ ಈ ವೇಳೆಗೆ ಬರಬೇಕಲ್ಲ" ಎಂದರು ರಾಮೋಜಪ್ಪ.

"ಕೇಳಿಕೊಂಡು ಬರಲಿಲ್ಲ, ಆ ಪುಣ್ಯವನ್ನ" ಎಂದರು ಲಕ್ಷ್ಮಣ ಸಿಂಗ್ ಖಿನ್ನರಾಗಿ.

"ಅದು ಯಾಕೆ ಹಾಗಂತೀರಿ! ಎಲ್ಲಿ ನಿಮ್ಮ ಕೈ ತೋರಿಸಿ" ಎಂದು ರಾಮೋಜಪ್ಪನವರು ಸಿಂಗರ ಬಲ ಅಂಗೈಯನ್ನು ಸೆಳೆದುಕೊಂಡು ದಿಟ್ಟಿಸಿ ನೋಡಹತ್ತಿದರು.

"ಎಂತಹ ಸ್ಪಷ್ಟ ರೇಖೆಗಳಿವೆ! ಧನರೇಖೆಯನ್ನು ನೋಡಿದರೆ ನಂಬುವುದಕ್ಕೇ ಆಗುವುದಿಲ್ಲ. ಕೋಟ್ಯಧೀಶ್ವರರ ಕೈಲಿರುವ ಉದ್ದನೆ ರೇಖೆ! ಮೂರು ಜನ ಮಕ್ಕಳು ಕಡೇ ಪಕ್ಷ ಆಗಲೇಬೇಕು. ಹೃದಯ ರೇಖೆಯಿಂದ ಕವ

ಲೊಡೆದು ಮೂರು ರೇಖೆಗಳು ಎದ್ದು ಸ್ಪಷ್ಟವಾಗಿ ನಿಂತಿವೆ! ಆ ಪುಣ್ಯ ಇಲ್ಲ ಎಂದು ಯಾಕಂತೀರಿ" ಎಂದರು ರಾಮೋಜಪ್ಪ.

ಸಿಂಗರ ಮನಸ್ಸಿನಲ್ಲಿ ಆಸೆಯ ಬೆಳದಿಂಗಳು ಹರಡಿದಂತಾಯ್ತು. ಬಡತನದಲ್ಲಿ ಹುಟ್ಟಿ ಡಿಪ್ಲೊಮಾ ಪಾಸು ಮಾಡಿದ್ದರೂ, ಗೆಜೆಟೆಡ್ ಕೆಲಸ ಸಿಕ್ಕಿತ್ತು. ಸಂಬಳಕ್ಕಿಂತ ಗಿಂಬಳದ ಸಂಪಾದನೆ ಯಥೇಚ್ಛವಾಗಿದ್ದುದು ಅವರೊಬ್ಬರಿಗೆ ಗೊತ್ತಿದ್ದುದು. ಆ ಗುಟ್ಟನ್ನು ಅಂಗೈ ರೇಖೆಯಲ್ಲಿ ರಾಮೋಜಪ್ಪ ಗುರ್ತಿಸಿದರಲ್ಲ! ಇವರು ಹಸ್ತ ಸಾಮುದ್ರಿಕದಲ್ಲಿ ಪರಿಣತರಿರಬೇಕು ಎಂದನ್ನಿಸಿತು.

"ಹಾಗಂತೀರಾ? ನನ್ನ ಕೈ ಮಾತ್ರ ನೋಡಿದರೆ ಸಾಕೆ? ನನ್ನ ಹೆಂಡತಿಯ ಕೈ ನೋಡಿ ಹೇಳಬೇಕಲ್ಲವೆ?" ಎಂದರು ಲಕ್ಷ್ಮಣ ಸಿಂಗ್.

"ಹೌದು" ಎಂದರು ರಾಮೋಜಪ್ಪ.

"ಹಾಗಾದರೆ ಕರೀತೀನಿ. ಆಕೆಯ ಕೈಯನ್ನೂ ನೋಡಿ ಹೇಳಿ" ಎಂದರು ಸಿಂಗರು.

"ಅಂಬಾ" ಎಂದು ಕೂಗಿದರು, ಸಿಂಗರು.

ಅಂಬಾ ಬಂದರು. ನಲವತ್ತರ ಪ್ರಾಯದ ತುಸು ಭಾರದ ಒಡಲಿನಾಕೆ ನಾಚುತ್ತ ಬಂದು ಗಂಡನು ಹೇಳಿದಂತೆ, ಕುಳಿತು ಅಂಗೈ ತೋರಿಸಿದಳು.

ಸುಮಾರು ಹೊತ್ತು ಪರೀಕ್ಷಿಸಿ, ನೋಡಿದರು ರಾಮೋಜಪ್ಪ. ಮುಗಿಯಿತು ಎನ್ನುವಂತೆ ತಲೆಯಾಡಿಸಿದರು. ಗಂಡನ ಇಂಗಿತವನ್ನು ಗುರುತಿಸಿ ಅಂಬಾಬಾಯಿಯವರು ಒಳಕ್ಕೆ ಹೋದರು.

"ಸಂತಾನ ರೇಖೆ ಆಕೆಯ ಕೈಯಲ್ಲಿಲ್ಲ. ನಾನು ಮೊದಲಿಂದಿದ್ದು ಸುಸ್ತಾಯಿತು. ಆದರೆ....ಆದರೆ ನಿಮಗೇನೂ ವಯಸ್ಸಾಗಿಲ್ಲವಲ್ಲ. ಇನ್ನೊಂದು ಮದುವೆಯಾಗಬಾರದೆ? ಪುತ್ರಪ್ರಾಪ್ತಿಗಾಗಿ...."ಎಂದರು ರಾಮೋಜಪ್ಪ.

"ಅದನ್ನೂ ಮಾಡಿಕೊಂಡು ನಾಲ್ಕು ವರ್ಷಗಳಾದುವು. ಫಲವಿಲ್ಲ. ಆಕೆಯ ಕೈಯನ್ನೂ ನೋಡಿ ಬಿಡ್ತೀರಾ?" ಎಂದು ಸಿಂಗರು,

"ಭವಾನೀ" ಅಂತ ಕೂಗಿದರು.

ಭವಾನಿ ಬಂದಳು. ಬಲು ಬಲು ನಾಚುತ್ತಾ, ಮುದುಡಿಕೊಂಡು ಗಂಡ ಹೇಳಿದಲ್ಲಿ ಕುಳಿತಳು. ಆಕೆಯ ಅಂಗೈಯನ್ನು ನೋಡುತ್ತಾ ನೋಡುತ್ತಾ, ರಾಮೋಜಪ್ಪನವರ ಮುಖ ಅರಳಿದಂತಾಯಿತು. ಅದನ್ನು ಕಂಡು ಸಿಂಗರ ಆಸೆಯೂ ಕುಡಿ ಒಡೆಯಿತು. ಆಕೆಯು ಒಳಕ್ಕೆ ಹೋದನಂತರ ರಾಮೋಜಪ್ಪ

ನವರು ಹೇಳಿದರು "ಈಕೆಯು ಕೈಯ ಸಂತಾನ ರೇಖೆಗಳು ಪ್ರಶಸ್ತವಾಗಿವೆ. ಆದರೆ ಯಾವುದೋ ಗ್ರಹ ಚೇಷ್ಟೆ ಕಾಡುತ್ತಿರುವಂತಿದೆ. ಅದು ನಿವಾರಣೆ ಯಾದರೆ ಮಕ್ಕಳಾಗಲೇಬೇಕು" ಎಂದು.

"ಏನೆಲ್ಲ ಪೂಜೆ ಪುನಸ್ಕಾರಗಳನ್ನೆಲ್ಲ ಮಾಡಿಸಾಯಿತು" ಎಂದರು ಸಿಂಗರು.

"ಅಷ್ಟಕ್ಕೇ ಬೇಸರ ಪಟ್ಟುಕೊಳ್ಳಬೇಡಿ. ರಾಜೀವಪುರಕ್ಕೆ ಒಮ್ಮೆ ಬನ್ನಿ. ಹೆಂಡತಿಯರನ್ನೂ ಕರೆದುಕೊಂಡು ಬನ್ನಿ. ಅಲ್ಲೊಬ್ಬ ಮೌನಿ ಸಾಧು ಇದ್ದಾರೆ. ಸಾಮಾನ್ಯವಾಗಿ ಯಾರಿಗೂ ಅವರು ದರ್ಶನವನ್ನು ಕೊಡುವುದಿಲ್ಲ. ನಿಮಗೆ ಅವರ ದರ್ಶನ ಮಾಡಿಸಿ ಕೊಡುತ್ತೇನೆ. ಆತ ಎಂತಹ ಗ್ರಹಚೇಷ್ಟೆ ಯನ್ನೂ ಚಿಟಿಕೆ ಹೊಡೆಯುವಷ್ಟರಲ್ಲಿ ಬಿಡಿಸಿಬಿಡುತ್ತಾನೆ" ಎಂದರು ರಾಮೋಜಪ್ಪ.

"ಅಷ್ಟು ಮಾಡಿಸಿದರೆ, ನಿಮ್ಮ ಹೆಸರು ಹೇಳಿ ಮನೆಯಲ್ಲಿ ದೀಪ ಹಚ್ಚು ತೀನಿ" ಎಂದರು. ಸಿಂಗರು ಎದೆಯಾಳದಿಂದ ಆ ಮಾತನ್ನು ಆಡಿದ್ದರು.

* * *

ಸುಬ್ಬಯ್ಯನವರ ಮನೆಯಲ್ಲಿ ಉಂಡು, ರಾಮ ಊರನ್ನು ನೋಡಿ ಕೊಂಡು ಬರುತ್ತೇನೆ ಎಂದು ಅಡ್ಡಾಡ ಹೊರಟ. ಒಬ್ಬನೇ ಹೊರಟವ, ಸಂಜೆಗೆ ಮುಂಚೆ ಊರಾಚೆ ದೂರದಲ್ಲಿ ಗುಡಿಸಲುಗಳಿದ್ದ ಪಡಖಾನೆಯ ಬಳಿಗೆ ಹೋಗಿ ಸೇರಿದ. ಮಧ್ಯಾಹ್ನ ಕಸಾಯಿ ಅಂಗಡಿಯ ಬಳಿ ಸಿಕ್ಕಿದ, ಊರಿನವ ಜತೆ ಬಿದ್ದ ಮೇಲೆ, ತನ್ನ ದಾಹದ ಬಿರುಸನ್ನು ಅವನಿಗೆ ಹೇಳಿದ ಮೇಲೆ, ಜೇಬಿನಲ್ಲಿ ಸಾಕಷ್ಟು ಜಣ ಜಣ ಇದೆ ಎಂದು ಮುಗುಮ್ಮಾಗಿ ತಿಳಿಸಿದ ಮೇಲೆ, ಅವನೊಡನೆ ನಡೆದುದರಿಂದ, ಪಡಖಾನೆಯು ಸುಲಭವಾಗಿ ಸಿಕ್ಕಿತು.

ಖಾನ್‌ಖಾನ್ ಪಾಳ್ಯದ ಆಜೂಬಾಜು ಹಳ್ಳಿಗರವರು, ಅಲ್ಲಿ ಸೇರಿ ಸುಖವಾಗಿ ಮೋಜು ಮಾಡುತ್ತಿರುತ್ತಾರೆ ಎಂದು ಯಾವ ಪೋಲೀಸಿನವನಿಗೂ ತಿಳಿದಂತಿರಲಿಲ್ಲ. ಬಿಚ್ಚುಗೈಯ್ಯಿನ ರಾಮ ಎಲ್ಲರೊಂದಿಗೂ ಸ್ವಾಭಾವಿಕವಾಗಿ ಆತ್ಮೀಯನಾಗಿ ಬಿಟ್ಟ. "ಅಮ್ಮಾಲೇ, ಒಂದೇ ಬುಡ್ಡಿಗೆ ಬಿಕ್ತೀಯಲ್ಲಮ್ಮಾ" ಅಂತ ಬೆನ್ನು ಗುದ್ದಿ ಇನ್ನೊಂದು ಗುಟುಕು ಕುಡಿಸುವಷ್ಟು ಆತ್ಮೀಯನಾಗಿ ಬಿಟ್ಟ. ರಾತ್ರಿ ಯಾವುದೋ ಹೊತ್ತಿನಲ್ಲಿ ಕಾಲನಿಯ ಅತಿಥಿ ಮಂದಿರಕ್ಕೆ ಹಿಂತಿರುಗಿದ. ರಾಮೋಜಪ್ಪನವರೆ ಬಾಗಿಲು ತೆರೆದರು.

"ಇದೇನೋ ದರಿದ್ರ ವಾಸನೆ. ನನ್ನ ಮಾನ ಹೋಗುತ್ತಲ್ಲೋ"ಎಂದರು.

"ಪರ್ಟಿನ ಮೇಲೆ ಸೇಂದಿ ಬಿದ್ದು ಒದ್ದೆಯಾಗಿ ವಾಸನೆ ಬಡೀತಿದೆ, ಧಣಿಗಳೇ! ತುಟಿಯಿಂದ ಗಂಟಲಿಗಿಳಿಯಲೇ ಇಲ್ಲ. ಗಲ್ಲದ ಮೇಲಿಂದ ಷರ್ಟ ನ್ನೆಲ್ಲಾ ತೋಯಿಸ್ತು" ಎಂದು ಹೇಳಿದ. "ಏನಾದರೂ ತಿಂದೆಯಾ? ಬೇಕಾದರೆ ನನ್ನ ಪೆಟ್ಟಿಗೆಯಲ್ಲಿ ಊರಿಂದ ತಂದಿದ್ದ ಗುಜರಾತಿ ಚಪಾತಿ ಇದೆ" ಎಂದರು ರಾಮೋಜಪ್ಪ. "ಬದುಕಿದೆ ನನ್ನೊಡೆಯಾ?" ಅಂತ ಹೇಳಿ ರಾಮ ಪೆಟ್ಟಿಗೆಯತ್ತ ನಡೆದ.

* * *

ಮಜೇಂದ್ರ ಭವನದ ಬಲ ಪಕ್ಕದ ಸಂದಿಯಲ್ಲಿ ಹೋದರೆ, ಅಹ್ಮದ್ ಕಾಕಾನ 'ಛಾಯ್ಕೆ' ಅಂಗಡಿ ಸಿಗುತ್ತಲ್ಲ, ಆ ಅಂಗಡಿಯ ಅಡಿಗೆಮನೆಯನ್ನು ಹಾದು ಹೋದರೆ ಮಜೇಂದ್ರ ಭವನದ ದೊಡ್ಡ ಹಿತ್ತಲು ಸಿಗುತ್ತೆ. ಎರಡು ಯಾತದ ದೊಡ್ಡ ಬಾವಿಯೊಂದಿದೆಯಲ್ಲ, ಅದರ ಹಿಂದೆಯೇ ಒಂದು ಹೊರ ವಾಗಿ ಬೆಳೆದ ಹಲಸಿನ ಮರವಿದೆ. ಅದರ ಬುಡದಲ್ಲಿ ಒಂದು ಹಳೆಯ ಕಾಲದ ಮಂಟಪವಿದೆ.

ರಾತ್ರಿ ಎಂಟರ ಹೊತ್ತಿಗೆ ರಾಮೋಜಪ್ಪನವರು, ಲಕ್ಷ್ಮಣ ಸಿಂಗರನ್ನೂ ಅವರ ಇಬ್ಬರು ಹೆಂಡತಿಯರನ್ನೂ, ಮಜೇಂದ್ರ ಭವನದಿಂದ, ಆ ಮಂಟಪಕ್ಕೆ ಕರೆದುಕೊಂಡು ಹೋದರು. ತಮ್ಮ ಕೈಯಲ್ಲಿ ಇದ್ದ ಟಾರ್ಚಿನ ಬೆಳಕಿನಿಂದ ದಾರಿಯನ್ನು ತೋರಿಸದೆ ಇದ್ದಿದ್ದರೆ, ಸಿಂಗರೋ ಅಥವಾ ಹೆಂಡಿರೋ ಎಡವಿ ಪೆಟ್ಟು ಮಾಡಿಕೊಳ್ಳುತ್ತಿದ್ದರು. ಅಷ್ಟು ಕತ್ತಲಾಗಿತ್ತು ಯಾತದ ಬಾವಿಯಾಚೆ.

ಮಂಟಪದ ಮೂಲೆಯಲ್ಲಿ ಕಪ್ಪಂಕರ್ರಗಿರುವ ಹೊರವಾದ ಗಡ್ಡ ಮೀಸೆ ಗಳನ್ನು ಹೊತ್ತ ಸಾಧುವೊಬ್ಬ ಕುಳಿತಿದ್ದುದು, ಹಣತೆಯ ಬೆಳಕಿನಲ್ಲಿ ಕಾಣಿಸಿತು. ಮುಂದೆ ನಡೆದ ರಾಮೋಜಪ್ಪನವರು ಹತ್ತಿರದಲ್ಲಿದ್ದ ಪೆಟ್ರೋಮ್ಯಾಕ್ಸ್ ದೀಪವನ್ನು ಹಚ್ಚಿದರು. ಆ ಬೆಳಕಿನಲ್ಲಿ ಸಾಧುವಿನ ತೀವ್ರ ತೇಜಸ್ಸು ಉರಿಯುವಂತೆ ಕಾಣಿಸಿತು. ಹೆಂಡತಿಯರೊಡನೆ ಸಿಂಗರು ಸಾಧುವಿಗೆ ನಮಸ್ಕಾರ ಮಾಡಿದರು. ಅವರೆದುರಿನಲ್ಲಿ ತಾವು ತಂದಿದ್ದ ಪೂಜಾ ವಸ್ತುಗಳನ್ನು ಇರಿಸಿದರು.

Scanned by CamScanner

ಲಕ್ಷ್ಮಣ ಸಿಂಗರು ಹೆಂಡತಿಯೊಡನೆ ಬಂದಿರುವುದರ ಕಾರಣವನ್ನೂ, ಅವರ ಪ್ರಾರ್ಥನೆಯನ್ನೂ, ರಾಮೋಜಪ್ಪನವರೇ ಸಾಧುಗಳಿಗೆ ತಿಳಿಸಿದರು.

ಸಾಧುಗಳು ಲಕ್ಷ್ಮಣ ಸಿಂಗರ ಮುಖವನ್ನೇ ಕೊರೆಯುವಂತೆ ದಿಟ್ಟಿಸಿ ನೋಡಿದರು. ಎರಡು ನಿಮಿಷ ಹಾಗೆ ಎವೆಯಿಕ್ಕದೆ ನೋಡಿರಬೇಕು, ಆದರೆ ಎರಡು ಯುಗಗಳಂತೆ ಸಿಂಗರಿಗೆ ತೋರಿತು. ಅಂಬಾ, ಭವಾನಿಯರು ಸಾಧುವನ್ನೇ ನೋಡುತ್ತಿದ್ದರು. ನಂತರ ಸಾಧುಗಳು ಧ್ಯಾನಾಸಕ್ತರಾದರು. ಸ್ವಲ್ಪ ಹೊತ್ತಾದ ಮೇಲೆ ತಮ್ಮ ಎದುರಿನಲ್ಲಿದ್ದ ಹಲಗೆಯ ಮೇಲೆ ಹತ್ತಾರು ಬಾರಿ ಕೈಯಾಡಿಸಿದರು. ನಂತರ ನಿಟ್ಟುಸಿರುಬಿಟ್ಟರು. ಹತ್ತಿರ ಬಾ ಎನ್ನುವಂತೆ ಸಿಂಗರನ್ನು ಸಂಜ್ಞೆಯಿಂದ ಕರೆದರು.

ಸಾಧುವಿನ ಬಳಿಗೆ ಹೋಗಿ ಸಿಂಗರು ಎದುರು ಕುಳಿತರು. ಸಿಂಗರ ಹಣೆಯಮೇಲೆ ತಮ್ಮ ಕೈಬೆರಳನ್ನು ಸಾಧುಗಳು ಒತ್ತಿದರು. ತಿರುಗಿ ಧ್ಯಾನಾಸಕ್ತರಾದರು. ಸಿಂಗರ ಹಣೆಯ ಮೇಲೆ ರೂಪಾಯಗಲದ ಕುಂಕುಮದ ಬೊಟ್ಟು ಬಿದ್ದಿತು.

"ಸಾಧುಗಳ ಅನುಗ್ರಹವಾಗಿದೆ. ಇನ್ನು ಹಿಂತಿರುಗೋಣ" ಎಂದರು ರಾಮೋಜಪ್ಪ. ಹಾಗನ್ನುತ್ತಿರುವಾಗಲೇ ಸಾಧುಗಳು ಕೈಯಾಡಿಸಿದ್ದ ಜಾಗಕ್ಕೆ ಕೈ ಚಾಚಿದರು. ಅಲ್ಲಿದ್ದ ಸ್ಲೇಟನ್ನು ಎತ್ತಿದರು. ಸಾಧುಗಳು ಕೈಯಾಡಿಸಿದ ಕಡೆ ಏನೂ ಇತ್ತಿಲ್ಲ. ಆದರೆ ತಿರುಗಿಸಿದಾಗ ಹೀಗೆ ಬರೆದಿದ್ದುದು ಕಾಣಿಸಿತು.

ರಂಗನಗೌಡ	4,000	ಮಲ್ಲನಗೌಡ	3,000
ಭೀಮನಗೌಡ	12,000	ಚಿಕ್ಕನಾಯ್ಕ	14,000
ಶಾಂತವ್ವ	8,000	ಸಾಕವ್ವ	13,000
ಬೆಟ್ಟಪ್ಪ	9,000	ಗಿಡ್ಡಣ್ಣ	15,000
ಒಟ್ಟು	77	ದಂಡ	133

ಮಂಡಲ ಭಜನೆ ಮನೆಯಲ್ಲಿ.

ಅದನ್ನು ಓದಿದ ಲಕ್ಷ್ಮಣ ಸಿಂಗರ ಮುಖ ಬಿಳುಚಿಕೊಂಡಿತು. ಮೈಯೆಲ್ಲಾ ಕಟ್ಟು ಬೆವರಿತು. ತೊಡೆಗಳು ಬಿದ್ದುಹೋದಂತಾಯಿತು.

ರಾಮೋಜಪ್ಪನವರು ಮತ್ತು ಹೆಂಡಿರಿಬ್ಬರೂ ಬೆಂಬಲವಾಗಿ ನಿಂತಾಗಲೇ ಸಿಂಗರು ನಿಲ್ಲುಕ್ಕೆ ಸಾಧ್ಯವಾಯಿತು. ಇನ್ನೊಮ್ಮೆ ನಿಂತಲ್ಲೇ ಸಾಧುಗಳಿಗೆ ನಮಸ್ಕಾರ ಮಾಡಿ ಹಿಂತಿರುಗಿದರು.

ಮಹೇಂದ್ರ ಭವನಕ್ಕೆ ಹಿಂತಿರುಗುವ ವೇಳೆಗೆ ಸಿಂಗರು ಸ್ವಲ್ಪ ಸುಧಾರಿಸಿಕೊಂಡಿದ್ದರು. ತಮ್ಮ ಕೊಠಡಿಗೆ ಹೋದ ಮೇಲೆ. ಒಂದು ಲೋಟ ನೀರು ಕುಡಿದರು. ನಂತರ "ರಾಮೋಜಪ್ಪನವರ ಕೂಡ ಸ್ವಲ್ಪ ಮಾತನಾಡಬೇಕು. ನೀವಿಬ್ಬರೂ ಊಟ ತೀರಿಸಿಕೊಂಡು ಉಂಡು ಮಲಗಿರಿ" ಎಂದು ಹೇಳಿ ರಾಮೋಜಪ್ಪನವರೊಡನೆ ಕಾಲು ಎಳೆದುಕೊಳ್ಳುತ್ತಾ, ಅವರ ಕೊಠಡಿಯತ್ತ ನಡೆದರು.

"ರಾಮೋಜಪ್ಪನವರೇ! ಮೌನಿ ಸಾಧುಗಳು ತ್ರಿಕಾಲ ಜ್ಞಾನಿಗಳು" ಎಂದರು.

"ಅದು ನನಗೂ ಗೊತ್ತು. ಆದರೆ ನೀವು ಯಾಕೆ ಹಾಗೆ ಸುಸ್ತಾದಿರಿ" ಎಂದರು ರಾಮೋಜಪ್ಪ. "ಅದು ಕಟ್ಟಿಕೊಂಡು ಈಗೇನು? ಆದರೆ ನಿಮ್ಮಿಂದ ಒಂದು ಸಹಾಯವಾಗಬೇಕು. ಖಾನ್‌ಖಾನ್ ಪಾಳ್ಯಕ್ಕೆ ಹೋದಮೇಲೆ ನಿಮಗೆ ಸ್ವಲ್ಪ ಹಣವನ್ನು ಕಳಿಸುತ್ತೇನೆ. ಅದನ್ನು ಮೌನಿ ಸಾಧುಗಳಿಗೆ ತಲಪಿಸಿಬಿಡಿ. ನಲವತ್ತು ದಿನ ಮನೆಯಲ್ಲಿ ಭಜನೆ ಮಾಡಿಸುತ್ತೇನೆ. ಸಾಧುಗಳ ಅನುಗ್ರಹವಾದರೆ ಮಕ್ಕಳಾಗಬಹುದು ಎಂದು ಧೈರ್ಯ ಬಂದಿದೆ" ಎಂದರು.

"ಸಾಧು ಮೌನಿಗಳು ಯಾವಾಗ ಎಲ್ಲಿಗೆ ಹೋಗ್ತಾರೋ ಯಾರಿಗೂ ತಿಳಿಯದು. ಆದರೆ ನೀವು ಕಳಿಸಿದ ಹಣವನ್ನು ಅವರು ಸಿಕ್ಕಿದಾಗ ಅವರ ಕಾಲ ಮೇಲೆ ಹಾಕುತ್ತೇನೆ, ನಿಮ್ಮ ಹೆಸರಿನಲ್ಲಿ" ಎಂದು ರಾಮೋಜಪ್ಪ ಭರವಸೆಕೊಟ್ಟರು.

* * *

ಸಂಪಾದಕರೇ,

ಮಾಲತೀಜೀ ಖಾನ್‌ಖಾನ್ ಪಾಳ್ಯದಿಂದ ಹಿಂತಿರುಗಿದಾಗ, ಲಕ್ಷ್ಮಣ ಸಿಂಗರ ಮನೆಯ ಸಂಪತ್ತು ಐಶ್ವರ್ಯಗಳ ಸೂಚನೆಯನ್ನು ಕೊಟ್ಟಳು. ರಾಮೋಜಿಯನ್ನು ಯಾವುದಾದರೂ ನೆಪ ಹೂಡಿ ನೋಡಿಕೊಂಡು ಬಾ ಎಂದು ಕಳಿಸಿದೆ. ನಾನೂರು ರೂಪಾಯಿನ ಸಂಬಳದವ ಲಕ್ಷಾಂತರ ಆಸ್ತಿಯನ್ನು ಹೇಗೆ ಮಾಡಿದ ತಿಳಿದು ಬಾ ಎಂದು ಕಳಿಸಿದೆ. ಬಿಡ್ಡಣ್ಣನನ್ನೂ ಜತೆಯಲ್ಲಿ ಕಳಿಸಿದೆ. ಅವ 'ರಾಮು'ನಾಗಿ ಪಡಖಾನೆಗೆ ಹೋಗಿ ವಿವರಗಳನ್ನು ತಿಳಿದುಕೊಂಡ.

ಲೈಟ್ ಆಫೀಸ್ ಲಕ್ಷ್ಮಣ ಸಿಂಗರು, ಮೈನ್‌ಲೈನ್ ಸರ್ವೆ ನೆಪದಲ್ಲಿ ಭಾರಿ ತೋಟಗಳ ಮಧ್ಯೆ ಸರ್ವೆ ಸರಪಣಿಗಳನ್ನು ಹಾಯಿಸುವ ವಾಡಿಕೆ.

Scanned by CamScanner

ತೋಟದ ಮಾಲೀಕರು, ರಾತ್ರಿ ಬಂದು, ನಮ್ಮ ತೋಟದಲ್ಲಿ ಮೈನ್‌ಲೈನ್ ಹಾಕಬೇಡಿ. ಹಾಗೆ ಹಾಕಿದರೆ, ತೋಟ ತುಂಡಾಗುತ್ತೆ, ನೀರು ಹಾಯಿಸಲು ಕಷ್ಟ, ಕಾವಲಿಡುವುದೂ ಕಷ್ಟ. ಆದ್ದರಿಂದ ಮೈನ್‌ಲೈನ್ ಸ್ವಲ್ಪ ದೂರಕ್ಕೆ ಸಾಗಿಸಿ ಎಂದು ಹೇಳಿ ಇವರ ಕೈ ತುಂಬಾ ಹಣವನ್ನು ಲಂಚ ಕೊಡುತ್ತಿದ್ದರು. ಅಲ್ಲಿ ಲೈನ್ ಹಾಕುವ ಯೋಜನೆಯೇ ಇಲ್ಲದ್ದರಿಂದ ಪೂರ್ವ ನಿಯೋಜಿತ ಕಡೆಯಲ್ಲೇ ಲೈನ್ ಹಾಕಿದುದರಿಂದ, ಮೇಲಧಿಕಾರಿಗಳಿಗೆ ಯಾವ ಸಂಶಯವೂ ಬರಲಿಲ್ಲ. ಲಂಚ ಕೊಟ್ಟವರೂ ಹೇಳಿಕೊಳ್ಳಲಿಲ್ಲ. ಪಡಖಾನೆಯಲ್ಲಿ ಹೀಗೆ ಮಾಡಿ ನಮ್ಮ ತೋಟ ಉಳಿಸಿಕೊಂಡೆವು ಎಂದವರು ಬಿಡ್ಡಣ್ಣನಿಗೆ ಹೇಳಿದಾಗಲೇ ತಿಳಿದಿದ್ದು. ಲಂಚ ಕೊಟ್ಟವರ ಹೆಸರುಗಳು, ಸಂದ ಹಣದ ವಿವರ, ಎಲ್ಲವನ್ನೂ ಬಿಡ್ಡಣ್ಣ ವರದಿ ಮಾಡಿದ.

ಬಿಡ್ಡಣ್ಣನೇ ಮೌನಿ ಸಾಧುವಾಗಿ ಕುಳಿತ. ಸ್ಲೇಟಿನ ಒಂದು ಕಡೆ ಲಂಚದ ವಿವರಗಳನ್ನು ಬರೆದು ತಲೆಕೆಳಗಾಗಿರಿಸಿದ್ದ. ಯಾರಿಗೂ ತಿಳಿಯದು ಎಂದು ಕೊಂಡಿದ್ದ ಗುಟ್ಟು ಸಾಧುವಿಗೆ ಗೊತ್ತಾಗಿದೆ ಎಂದೂ ಸಿಂಗನಿಗೆ ಅರಿವಾದಾಗ ಅವ ಭಯಬಿದ್ದ. ಕಳ್ಳನ ಮನಸ್ಸು ಹುಳ್ಳಹುಳ್ಳಗೇ ಅಲ್ಲವೆ? ಒಟ್ಟು ಲಂಚ ತೆಗೆದುಕೊಂಡಿದ್ದು 77 ಸಾವಿರ. ದಂಡ 133. ಮೊತ್ತ 210 ಸಾವಿರ. ಅಷ್ಟನ್ನು ಡ್ರಾಫ್ಟ್ ಮೂಲಕ ರಾಮೋಜಿಗೆ ಕಳಿಸಿದ. ಬಿಡ್ಡಣ್ಣನ ಖರ್ಚು 5 ಸಾವಿರ. ರಾಮೋಜಿಯದು 5000. ಮಾಲತೀಜೀ ಖರ್ಚು ಸರಕಾರ ವಹಿಸಿಕೊಂಡಿತ್ತು. ಮಿಕ್ಕ ಎರಡು ಲಕ್ಷವನ್ನು ಕೊಂಡೆನಕಪಲ್ಲಿಯ ಪೂಜಾರಪ್ಪನವರ ಕಾಲ ಮೇಲೆ ಹಾಕಿದ್ದೇನೆ.

ನಲವತ್ತು ದಿನಗಳು ಸಿಂಗರ ಮನೆಯಲ್ಲಿ ಭಜನೆ ಮಾಡುವಾಗ ತಬಲದವನೂ ಹೋಗಿರುತ್ತಾನೆ. ಅಷ್ಟು ದಿವಸ ಅವಕಾಶವಿದ್ದರೆ, ಭವಾನೀಗೆ ಮಕ್ಕಳು ಆಗಬಹುದು.

ಗುರುಗಳಿಗೆ ಕೊಟ್ಟ ವಚನದಂತೆ ವಿವರಗಳನ್ನೂ ಪ್ರಕಟಣೆಗೆ ಕಳಿಸಿದ್ದೇನೆ.

"ಬುದ್ಧೋಜಿ."

ಸಬ್ಜಿ ಸುಲ್ತಾನ್

ವರಾಂಡದ ಕಂಬವನ್ನು ಒರಗಿಕೊಂಡು ನಿಂತಿದ್ದ ಭವ್ಯದೇಹದ ವ್ಯಕ್ತಿಯು ರಸ್ತೆಯ ಕಡೆಗೆ ಇಣಿಕಿ ಇಣಿಕಿ ನೋಡುತ್ತಿದ್ದ. ಯಾರ ಆಗಮನವನ್ನೋ ನಿರೀಕ್ಷಿಸುತ್ತಿದ್ದಂತೆ ಕಾಣುತ್ತಿತ್ತು. ಆಗಿಂದಾಗ್ಗೆ ತನ್ನ ಭರ್ಜರಿಮೀಸೆಯ ಮೇಲೆ ಬೆರಳುಗಳನ್ನಾಡಿಸುತ್ತಿದ್ದ ಆರಡಿ ಎತ್ತರದ ಆಳು ತುಸು ಕೆಮ್ಮಿದರೂ ಗುಟುರು ಹಾಕಿದಂತಾಗುತ್ತಿತ್ತು. ನೆರೆಹೊರೆಯ ನಾಯಿಗಳು ಕೂಡ ಆಗ ಬಗುಳುವುದನ್ನು ನಿಲ್ಲಿಸುತ್ತಿದ್ದುವು. ಸೈನ್ಯದಲ್ಲಿ ಮೇಜರ್ ಪದವಿಯನ್ನು ಹೊಂದಬೇಕಾದರೆ ವ್ಯಕ್ತಿತ್ವವು ಆ ರೀತಿ ಭಯಾನಕವಾಗಿರಬೇಕಾದ್ದು ನ್ಯಾಯವೇ! ಅದರಲ್ಲೂ ಮೇಜರ್ ಕನ್ನ ಎಂದರೆ ಇಡೀ ಸೈನ್ಯದಲ್ಲಿ ಪ್ರಸಿದ್ಧನಾದವ. ಯಾವುದಕ್ಕೂ ಹೆದರುವುದಿಲ್ಲ; ಎಂತಹ ಪರಿಸ್ಥಿತಿಯಲ್ಲಿಯೂ ಧೃತಿಗೆಡುವುದಿಲ್ಲ; ಮಾನ ಅವಮಾನ ಅಂತ ಅವ ಎಂದೂ ಕಾಳಜಿ ಮಾಡಿದವನಲ್ಲ; ಧಿಮ್‌ರಂಗ ಅಂತ ಅಂದರೆ ಅವನೇ ಎಂದು ಅವನ ಪಟಾಲಂನ ಸಿಪಾಯಿಗಳೂ, ಸಹ ಅಧಿಕಾರಿಗಳೂ ಕೂಡ ಹೇಳುತ್ತಿದ್ದರು.

ಮೇಜರ್ ಕನ್ನ ಆ ಬೆಳಿಗ್ಗೆ ಏಳರ ಹೊತ್ತಿಗೆ ವರಾಂಡದಲ್ಲಿ ಕಾಯುತ್ತ ನಿಂತಿರುವುದಕ್ಕೆ ಕಾರಣವೊಂದಿತ್ತು. ಹಿಂದಿನ ರಾತ್ರಿ ಕರ್ನಲ್‌ರ ಮನೆಗೆ ಊಟಕ್ಕೆ ಹೋಗಿದ್ದ. ಪುಕಟ್ಟು ಸಿಕ್ಕ ಪಾನೀಯವನ್ನು ಧಾರಾಳವಾಗಿ ಬಸು ಕೊಂಡಿದ್ದ. ಈ ವಿಷಯದಲ್ಲಿ ಘನಪಾಟಿ ಅವ. ಆದುದರಿಂದ ಕುಡಿದವರಂತೆ ಆಡದಿದ್ದರೂ, ಮೈ ಮನಸ್ಸು ಒಂದು ರೀತಿಯಾಗಿತ್ತು. ರಾತ್ರಿ ನಿದ್ದೆಯೂ ಸರಿಯಾಗಿ ಬಂದಿರಲಿಲ್ಲ. ಬೇಗ ಎಚ್ಚರವಾಗಿತ್ತು. ನಾಲಿಗೆಯು ಚಪ್ಪಳದ ಅಟ್ಟೆಯಂತೆ ಒಣಗಿ ದಪ್ಪವಾಗಿತ್ತು. ತಲೆಯು ಸರಳವಾಗಲಿ ಎಂದು ಎದ್ದವನೇ ಒಂದು ಗುಟುಕು ಜಿನ್ ಕುಡಿದು, ವರಾಂಡಕ್ಕೆ ಬಂದು, ನಿಂತಿದ್ದ.

ಮೋಟಾರು ಬಂದು ಅವನ ಮನೆಯ ಎದುರಿಗೆ ನಿಂತಿತು. ಆದರಿಂದ

Scanned by CamScanner

ಇಳಿದು ಬಂದ 40-45ರ ಆಸಾಮಿಯು ಮುಚ್ಚಂಗಿಯನ್ನು ತೊಟ್ಟಿದ್ದ. ಬಿಳಿಯ ಟೋಪಿಯನ್ನು ಹಾಕಿಕೊಂಡಿದ್ದ. ಕಚ್ಚೆಪಂಚೆಯನ್ನು ಉಟ್ಟಿದ್ದ. ಚಪ್ಪಲಿಯನ್ನು ಮೆಟ್ಟಿದ್ದ. ಗಿರ್ ಗಿರ್ ಸದ್ದನ್ನು ಚಪ್ಪಲಿಗಳಿಂದ ಮಾಡಿಸುತ್ತ ಆಸಾಮಿ ಓಡೋಡಿ ಬಂದ. ಅವನ ಹಿಂದೆಯೇ ಒಂದು ಬುಟ್ಟಿಯನ್ನು ಹೊತ್ತ ಸೇವಕನೂ ಓಡೋಡಿ ಬಂದ. ''Happy Birthday to you, sir'' ಎಂದು ಅಭಿವಂದಿಸಿದ. ನಂತರ ಬುಟ್ಟಿಯಿಂದ ಹೂಹಾರವನ್ನು ತೆಗೆದು, ಮೇಜರ್ ಕನ್ನ ಅವರ ಕೊರಳಿಗೆ ಹಾಕಿದ.

"ಇದೆಲ್ಲ ಯಾಕೆ ? ಸೇನಪ್ಪ ! ಶುಭಾಶಯಗಳನ್ನು ಕೋರಿದ್ದರೆ ಸಾಕಾಗಿತ್ತು" ಎಂದರು ಮೇಜರ್ ಕನ್ನ, ಭಾರಿ ಹೂಮಾಲೆಯನ್ನು ಕೊರಳ ಸುತ್ತ ಸರಿಪಡಿಸಿಕೊಳ್ಳುತ್ತಾ.

ತಟ್ಟೆಯೊಂದರಲ್ಲಿ ಹಣ್ಣು, ಮೂರು ಶೀಷೆಗಳು, ಮತ್ತು ದಢೂತಿ ಲಕ್ಕೋಟೆಯೊಂದು, ಇವನ್ನು ಮೇಜರ್ ಕನ್ನ ಅವರಿಗೆ ಅರ್ಪಿಸುತ್ತಾ, ಸೇನಪ್ಪ,"ನೀವು ಮೇಜರ್, ನಾನು ಸೈನ್ಯದ ಕಂಟ್ರಾಕ್ಟರು ಅಂತ ನಿಮಗೆ ಮರ್ಯಾದೆಯನ್ನು ಮಾಡುತ್ತಿಲ್ಲ ಸಾರ್! ನನ್ನ ಮಾತೃಭೂಮಿಯ ಸೇವೆಯನ್ನು ಮಾಡುವ ಒಬ್ಬ ಪ್ರಜೆ ನಾನು; ಆ ಮಾತೃಭೂಮಿಯನ್ನು ಒಡಲ ಪಣವಿಟ್ಟು ರಕ್ಷಿಸುವ ಅಮರ ಯೋಧರು ನೀವು. ನಿಮ್ಮಂತಹ ವೀರಾಗ್ರಣಿಗಳಿಗೆ, ದೇಶಭಕ್ತನು ಪೂಜ್ಯಭಾವದಿಂದ, ಪವಿತ್ರವಾದ ನಿಮ್ಮ ಹುಟ್ಟಿದ ಹಬ್ಬದಂದು ಅರ್ಪಿಸುವ ಕಿರು ಕಾಣಿಕೆ ಇದು. ದೊಡ್ಡ ಮನಸ್ಸು ಮಾಡಿ ನೀವು ಸ್ವೀಕರಿಸಿ ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕು" ಎಂದು ಕೇಳಿಕೊಂಡ.

ತಟ್ಟೆಯ ಮೇಲಿದ್ದ ಶೀಷೆಗಳ ಮೇಲೆ ಒಂದು ಕಣ್ಣು : ಲಕ್ಕೋಟೆಯ ಮೇಲೆ ಇನ್ನೊಂದು ಕಣ್ಣು ; ಎರಡನ್ನೂ ಒಂದೇ ಕಾಲದಲ್ಲಿ ದುರುಗುಟ್ಟಿಕೊಂಡು ನೋಡಲು ಯತ್ನಿಸಿದ ಮೇಜರ್ ಕನ್ನ ಅವರು ಮೆಳ್ಳಗಣ್ಣಿದ್ದವರಂತೆ ಅರೆಕ್ಷಣ ಕಾಣಿಸಿದರು. ಆಗ ದಿಟವಾಗಲೂ ಅವರು ನರಭಕ್ಷಕ ರಾಕ್ಷಸರಂತೆ ಕಾಣಿಸಿದರು.

ಈ ದೃಶ್ಯವನ್ನು ಕಂಡ ಸೇನಪ್ಪ, ಶಾಂತರ್ಥವಾಗಿಯೋ ಎಂಬಂತೆ, ಪಿಸುಮಾತಿನಲ್ಲಿ "ಮೂರೂ ಸ್ಕಾಟ್‌ಲೆಂಡಿನದು ; ಇನ್ನೂರು ಹಸಿರು ಕಂತೆ : ಮೊನ್ನೆ ತಾವು ಸೂಚಿಸಿದಂತೆ" ಎಂದು ಹೇಳಿದ.

ಆ ಹೊತ್ತಿಗೆ ಸರಿಯಾಗಿ ಇನ್ನೊಂದು ಟ್ಯಾಕ್ಸಿ ಬಂದು ನಿಂತಿತ್ತು. ಅದರೊಳಗಿಂದ ಇಳಿದು ಬಂದ ಸ್ತ್ರೀಯನ್ನು ಕಂಡು ಮೇಜರ್ ಕನ್ನ ಅವರು "ಇಷ್ಟು ಬೇಗ ಬಂದಿರಲ್ಲಾ ಮಾಲತೀಜೀ! ಸುಂದರ್ ಕೌರ್ ಅಡಿಗೆಮನೆಯಲ್ಲಿರಬೇಕು. ಅಲ್ಲೇ ಹೋಗಿ ನೋಡಬಹುದು, ತುಂಬಾ ಅವಸರದಲ್ಲಿದ್ದ ಹಾಗೆ ಇದೆಯಲ್ಲ" ಎಂದರು. "ಹೌದು, ಮೇಜರ್ ಸಾಬ್. ಈ ಸಂಜೆ ಮಹಿಳಾ ಸಮಾಜದಲ್ಲಿ ಕಾರ್ಯಕಾರಿ ಸಭೆ ಇದೆ. ಸುಂದರ್ ಕೌರ್ ಅಧ್ಯಕ್ಷಿಣಿಯಾಗಬೇಕು. ನಿಮ್ಮ ಹುಟ್ಟಿದ ಹಬ್ಬದ ಪಾರ್ಟಿ ರಾತ್ರಿ ಏಳಕ್ಕೆ ಪ್ರಾರಂಭ ಅಲ್ಲವೆ ? ಅದಕ್ಕೆ ತುಂಬಾ ಮುಂಚಿಯೇ ನಮ್ಮ ಮೀಟಿಂಗ್ ಮುಗಿಸಿ, ನಿಮ್ಮಾಕೆಯನ್ನು ಕರೆದುಕೊಂಡು ನಾನೂ ಹಿಂತಿರುಗಿ ಬರುತ್ತೀನಿ. ಭರ್ಜರಿ ಡಿನ್ನರ್ ಅಣಿ ಮಾಡಿರುತ್ತಲ್ಲ" ಎಂದು ಹೇಳುತ್ತಾ, ಮಾಲತೀಜೀಯು ಮನೆಯೊಳಕ್ಕೆ ನಡೆದುಹೋದಳು. ಸೇನಪ್ಪನನ್ನೂ, ಸೇನಪ್ಪ ಪಿಸುಗುಡುತ್ತ ಹೇಳಿದ ಮಾತುಗಳನ್ನೂ ಅವಳು ಕಂಡು, ಕೇಳಿಸಿಕೊಂಡಿದ್ದಳು. ತಟ್ಟೆಯ ಮೇಲೂ ದೃಷ್ಟಿಯನ್ನು ಹರಿಸಿದಳು. ತುಂಬಾ ಚಾಣಾಕ್ಷಿ ಅವಳು.

ಮನೆಯೊಳಕ್ಕೆ ಮಾಲತೀಜೀಯು ಹೋದ ಬಳಿಕ ಸೇನಪ್ಪ ತನ್ನ ಮಾತನ್ನು ಮುಂದುವರಿಸಿದ, "ಅಮ್ಮಾವರು ಹೇಳಿದ್ದಾರೆ, ಮಧ್ಯಾಹ್ನ ನಾಲ್ಕು ಗಂಟೆಯ ಹೊತ್ತಿಗೆ ಬಿರಿಯಾನಿ ಮತ್ತು ತಂದೂರಿಗಳನ್ನು ಕಳಿಸು ಅಂತ. ನಮ್ಮ ಗಫಾರ್ ಕೈಲಿ ಅಡಿಗೆ ಮಾಡಿಸಿ ತರುತ್ತೇನೆ. ಸುಮಾರು ನಲವತ್ತು ಜನಕ್ಕೆ ಸಾಕಾಗುವಷ್ಟು ಇದ್ದರೆ ಸಾಕಲ್ಲವೆ?" ಎಂದು ಕೇಳಿದ. "ನಾವು ಆಹ್ವಾನಿಸಿರುವುದು ಏಳೆಂಟು ಸಂಸಾರಗಳನ್ನು. ಆದರೂ ಈ ಕ್ಯಾಂಪಿನಲ್ಲಿ ಪರಿಚಯಸ್ಥರು ಬಹಳ ಮಂದಿ. ಅತಿಥಿಗಳಿಗಿಂತ ಅಭ್ಯಾಗತರು ಹೆಚ್ಚು ಜನ ಬರಬಹುದು. ಹಾಗಾದರೂ ಕೂಡ ನಲವತ್ತರ ಮೇಲೆ ಆಗಲಾರದು. ಊಟದ ಕಾಳಜಿ ಅಷ್ಟು ನನಗಿಲ್ಲ. ಆದರೆ ಅಷ್ಟೂ ಜನ ಬಂದರೆ ಮೂರು ಬಾಟಲು ಸಾಕಾಗುತ್ತದೆಯೇ? ಎಂದು ಸಂಶಯ" ಎಂದರು ಮೇಜರ್ ಕನ್ನ. "ಅದಕ್ಕೆ ಯಾಕೆ ಯೋಚನೆ ಮಾಡ್ತೀರಿ. ಇನ್ನೊಂದು ಇನ್ನೂರು ರೂಪಾಯಿ ಬಿಸಾಕಿದರೆ ಒಂದು ಶೀಷೆ ಸಿಗುತ್ತೆ. ಅಗತ್ಯ ಬಿದ್ದರೆ ಹೇಳಿ, ಅದನ್ನೂ ತಂದುಕೊಡ್ತೀನಿ" ಎಂದ ಸೇನಪ್ಪ. "ತರೋದನ್ನು ತಂದಿಟ್ಟಿರು. ಅಗತ್ಯ ಇಲ್ಲದೆ ಇದ್ದರೆ ನಾಳೆ ಬೆಳಿಗ್ಗೆ ಹಿಂತಿರುಗಿ ತೆಗೆದುಕೊಂಡು ಹೋಗಬಹುದು" ಎಂದರು ಮೇಜರ್.

"ಹಾಗೆಯೇ ಮಾಡ್ತೀನಿ ಸಾರ್" ಎಂದು ಹೇಳಿ ಸೇನಪ್ಪ ವಂದನೆಯನ್ನು ಮಾಡಿ ತನ್ನ ಕಾರಿನತ್ತ ಹಿಂದಿರುಗಿದ. "ನಾಳೆ ಬೆಳಿಗ್ಗೆ ಹಿಂತಿರುಗಿ ಕೊಡ್ತಾನಂತೆ, ಶೀಷೇನ, ಉಪಯೋಗಿಸದೆ ಇದ್ದರೆ! ಇವನ ತಲೆ! ಇವತ್ತಲ್ಲದೆ

Scanned by CamScanner

ಇದ್ದರೆ ನಾಳೆ ಅವನೇ ಉಪಯೋಗಿಸಿಕೊಳ್ಳುತ್ತಾನೆ. ಸ್ಮಶಾನಕ್ಕೆ ಹೋದ ಹೆಣದಂತೆ ಇವನಿಗೆ ಕೊಟ್ಟ ಬುಡ್ಡಿ! ಅಂದರೆ ಈ ಖುಷಿಯಲ್ಲಿರುವಾಗಲೇ ನನ್ನ 'ಬಿಲ್ಲು'ಗಳನ್ನು ಪಾವತಿ ಮಾಡಿಸಿಕೊಂಡು ಬಿಡಬೇಕು. ಇವನಿಗೇನಾದರೂ ವರ್ಗ ಆಗಿಹೋದರೆ ನೀರಿನಲ್ಲಿ ಹೋಮ ಮಾಡಿದಂತಾಗುತ್ತದಲ್ಲ!" ಎಂದು ತನ್ನಲ್ಲಿ ತಾನೇ ಲೊಟಕಿಕೊಳ್ಳುತ್ತ, ಮನೆಯನ್ನು ಸೇರಿದ.

*

ಬೇವಿನ ಮರದ ರಸ್ತೆಯ ಉತ್ತರದ ತುದಿಯಲ್ಲಿ ರಸ್ತೆಯ ಎಡಗಡೆಗೆ ಕವಲೊಡೆಯುತ್ತಲ್ಲಾ, ಅಲ್ಲಿ ಒಂದು ಸಣ್ಣ ಆಂಜನೇಯನ ಗುಡಿ ಇದೆ. ಸುಮಾರು ನಾಲ್ಕಡಿ ಉದ್ದ ಅಗಲ ಮತ್ತು ಎತ್ತರ ಇರುವ ಈ ಪಾಳು ಬಿದ್ದಿರುವ ಪುಟಾಣಿ ಗುಡಿಯನ್ನು ಯಾರೂ ಸಾಮಾನ್ಯವಾಗಿ ಗಮನಿಸುವುದೇ ಇಲ್ಲ. ಆದರೆ ಕೆಲವು ಮನೆತನಗಳಿಗೆ ಈ ಗುಡಿಯ ಆಂಜನೇಯ ಮನೆ ದೇವರು. ಹರಕೆ ಹೊತ್ತು ಅದನ್ನು ಸಾಂಗಗೊಳಿಸಲು ಮಾಡುವ ಪೂಜೆ ಪುನಸ್ಕಾರಗಳನ್ನು ಈ ಗುಡಿಯ ಬಳಿಯೇ ಈ ಮನೆತನದವರು ನಡಸುತ್ತಾರೆ. ವರ್ಷದಲ್ಲಿ ಎರಡು ಮೂರು ಬಾರಿ ಇಂತಹ ಪೂಜೆಗಳನ್ನು ಅಲ್ಲಿ ಕಾಣಬಹುದು. ಅಂದರೆ ಆ ಮನೆತನಗಳವರು, ಕಾಲವು ಮುಂದುವರೆದಂತೆಲ್ಲ, ಜೀವನೋಪಾಯಕ್ಕಾಗಿ ದೂರ ದೇಶಗಳಿಗೆ ಹೋಗಿ ನೆಲೆಸಿದ್ದಾರೆ ಎಂಬುದು ಸ್ಪಷ್ಟವಾಗುತ್ತಿತ್ತು.

ಒಂದು ದಿನ ಬೆಳಗಿನ ಝಾವದ ಹೊತ್ತಿನಲ್ಲಿ ನಡು ಹರೆಯದ ಹೆಂಗಸೊಬ್ಬಳು ಈ ಗುಡಿಯ ಮುಂದಿನ ಜಾಗವನ್ನು ಗುಡಿಸಿ ಸಾರಿಸುತ್ತಿದ್ದಳು. ಲಕ್ಷಣವಾಗಿ ಗೋಮಯವನ್ನು ಹಚ್ಚಿದ ಬಳಿಕ, ರಂಗೋಲಿಯ ಹಸೆಯನ್ನು ಇಡಲು ಪ್ರಾರಂಭಿಸಿದ್ದಳು. ಮಂಡಿಗಳನ್ನು ತುಸು ಬಾಗಿಸಿಕೊಂಡು, ಸೊಂಟವನ್ನು ಸಾಕಷ್ಟು ಬಗ್ಗಿಸಿ, ರಂಗೋಲಿಯ ರಚನೆಯಲ್ಲಿ ಆಕೆ ಭಕ್ತಿಪೂರ್ಣವಾಗಿ ಮಗ್ನಳಾಗಿದ್ದಳು.

ಸುಮಾರು ಹತ್ತು ಹೆಜ್ಜೆಗಳ ದೂರದಲ್ಲಿ ಬಲಿತ ಬೇವಿನ ಮರದ ಮರೆಯಲ್ಲಿ ಸೈನಿಕನೊಬ್ಬನು ಆಕೆಯನ್ನು ಕಳ್ಳತನದಲ್ಲಿ ನೋಡುತ್ತ ನಿಂತಿದ್ದನು. ಮೂವತ್ತು ನಲವತ್ತರ ಪ್ರಾಯದ ಈ ಸೈನಿಕನು ದಷ್ಟಪುಷ್ಟವಾಗಿದ್ದರೂ ಸ್ವಲ್ಪ ಅವಲಕ್ಷಣವಾಗಿಯೇ ಇದ್ದ. ಮೇಲ್ದುಟಿಯು ಗೋರಿಲ್ಲಾದಂತೆ ಉಬ್ಬಿಕೊಂಡಿತ್ತು. ಅದರ ಅವಲಕ್ಷಣವನ್ನು ಮರೆಮಾಡಲು ಮೀಸೆಯನ್ನಾದರೂ ಹೊರವಾಗಿ ಆತ ಬೆಳೆಸಬಾರದಾಗಿತ್ತೇ? ಇಲ್ಲ, ಮೂಗಿನ ಹೊಳ್ಳೆಗಳೂ ಅಡ್ಡಗಲವಾಗಿ ಹರಡಿ, ಗೋರಿಲ್ಲದ ಚಪ್ಪಟೆ ಮೂಗನ್ನು ಹೋಲುತ್ತಿತ್ತು. ಅವನು ಧರಿಸಿದ್ದ ಸೈನಿಕ ಸಮವಸ್ತ್ರವು ಮುಖಕ್ಕಿಂತ ಎಷ್ಟೋ ಲಕ್ಷಣವಾಗಿತ್ತು.

ನಸು ಬೆಳಕಿನಲ್ಲಿ ಆತ ಕದ್ದು ನೋಡುತ್ತಿದ್ದ ಹೆಂಗಸಾದರೋ ಕಳೆಯಿಂದ ಕೂಡಿದ್ದಳು. ತುಸು ಕಪ್ಪು ಛಾಯೆಯಿದ್ದರೂ ಮಾಟವಾದ ಮುಖ. ನೀಟಾದ ಮೂಗು, ಬಿಲ್ಲಿನಂತಿದ್ದ ತುಟಿಗಳು. ಆದರೆ ಎಲ್ಲದಕ್ಕಿಂತ ತುಂಬಾ ಕಳೆಯಿಂದ ಕೂಡಿದ್ದುದು ಅವಳ ಕಣ್ಣುಗಳು. ಚೆಲುವಾಗಿದ್ದ ಆಕೆಯ ಬೊಗಸೆಕಣ್ಣುಗಳಲ್ಲಿ ಸೆರೆ ಹಿಡಿಯುವ ಕಾಂತಶಕ್ತಿಯಿತ್ತು. ಒಮ್ಮೆ ಅವಳ ದೃಷ್ಟಿಯೊಂದಿಗೆ ತಮ್ಮ ದೃಷ್ಟಿಯನ್ನು ಕೊಂಡಿ ಹಾಕಿದವರು ಸುಲಭವಾಗಿ ದೃಷ್ಟಿಯನ್ನು ಕಳಚಲಾಗುತ್ತಿರಲಿಲ್ಲ. ಬಾಗಿ ರಂಗೋಲಿಯನ್ನು ಇಡುತ್ತಿದ್ದ ಆಕೆಯ ಭಂಗಿಯು ಸೈನಿಕನನ್ನು ಪೂರ್ಣವಾಗಿ ಸೆರೆ ಹಿಡಿದಿತ್ತು. ತದೇಕ ದೃಷ್ಟಿಯಿಂದ ಆಕೆಯ ಚಲನವಲನಗಳನ್ನು ವೀಕ್ಷಿಸುತ್ತಿದ್ದ. ಸಂತಸಪಡುತ್ತಿದ್ದ.

ರಂಗೋಲಿಯ ಹಸೆಯನ್ನು ಸಂತುಷ್ಟಿಯಾಗುವಂತೆ ಇಟ್ಟ ಮೇಲೆ ಆ ಹೆಂಗಸು ಆಂಜನೇಯನ ವಿಗ್ರಹಕ್ಕೆ ತಾನು ತಂದಿದ್ದ ಹೂಗಳನ್ನು ಅರ್ಪಿಸಿದಳು. ನಂತರ ನಮಸ್ಕಾರ ಮಾಡಿದಳು. ನಮಸ್ಕಾರವನ್ನು ಹಾಕುವಾಗ ಅವಳ ತುಟಿಗಳು ಅಲ್ಲಾಡುತ್ತಿದ್ದುದನ್ನು ನೋಡಿದಾಗ, ಯಾವುದೋ ಪ್ರಾರ್ಥನೆಯನ್ನು ಮನಸ್ಸಿನಲ್ಲೇ ಮಾಡುತ್ತಿದ್ದಾಳೆ ಎಂದು ತಿಳಿಯುತ್ತಿತ್ತು. ನಂತರ ಆಕೆಯು ಪಕ್ಕದಲ್ಲಿರಿಸಿದ್ದ ಸಗಣಿ ಗೂಡೆಯನ್ನು ಹಿಡಿದು ತನ್ನ ಮನೆಯ ಕಡೆಗೆ ಹಿಂತಿರುಗಲು ಹೆಜ್ಜೆ ಹಾಕಿದಳು.

ಆಗ ಸೈನಿಕನು ಮರದ ಮರೆಯಿಂದ ಸರಸರ ನಡೆದು ಬಂದ. ಹೆಂಗಸಿನ ಬಳಿಗೆ ಬಂದು, "ಅವ್ವಾ! ಈ ಕೇರಿಯಲ್ಲಿ ಬಿಡ್ಡಣ್ಣನ ಮನೆಯವರು ಎಲ್ಲಿದ್ದಾರೆ ನಿಮಗೆ ಗೊತ್ತಾ?" ಎಂದು ಕೇಳಿದ. ಅಪಸ್ಮಾರೆಯಂತಿದ್ದ ಅವನ ಮುಖವನ್ನು ನೋಡಿ ಹೆಂಗಸು ಜುಗುಪ್ಸೆಗೊಂಡಳು. ಅವನ ಸೈನಿಕನ ಸಮವಸ್ತ್ರವನ್ನು ಕಂಡು, ಎಂಥವನೋ ಇಲ್ಲಿಗೆ ಈ ಹೊತ್ತಿನಲ್ಲಿ, ಯಾರೂ ಇಲ್ಲದೆ ಇರುವಾಗ ಏಕೆ ಬಂದ? ಎಂದು ಸ್ವಲ್ಪ ಗಾಬರಿಯೂ ಆದಳು. ಆದರೂ ಬಂದಿದ್ದ ಆಗುಂತಕ ಬಿಡ್ಡಣ್ಣನ ಪರಿಚಯವನ್ನು ಹೊಂದಿರಬೇಕು,

Scanned by CamScanner

ಇಲ್ಲದೆ ಇದ್ದರೆ ಅವನ ಮನೆಯವರು ಎಲ್ಲಿದ್ದಾರೆ ಎಂದು ಏಕೆ ಕೇಳುತ್ತಿದ್ದ ಎಂಬ ಆಸೆಯೂ ಹೊರಹೊಮ್ಮುತ್ತಿತ್ತು.

ಎರಡು ಮೂರು ತಿಂಗಳುಗಳ ಹಿಂದೆ ಒಂದು ಸಂಜೆಯಲ್ಲಿ ಬಿಡ್ಡಣ್ಣ ಮನೆಗೆ ಬಂದಿದ್ದ. "ಸೈನ್ಯಕ್ಕೆ ಸೇರಿಕೊಳ್ಳಬೇಕು. ಅದೂ ಬಲು ತುರ್ತಾಗಿ. ಏಕೆ ಎತ್ತ ಎಂದು ಈಗ ಹೇಳಲು ನನಗೂ ಗೊತ್ತಿಲ್ಲ. ರಾಮೋಜಪ್ಪನವರು ಹೇಳಿದರು. ಅಂದ ಮೇಲೆ ತೀರ್ಮಾನ ಆದ ಹಾಗೇನೇ! ತಗೋ. ಈ ಹಣವನ್ನು ಖರ್ಚಿಗೆ ಇಟ್ಟುಕೊಂಡಿರು" ಎಂದು ಹಣದ ಚೀಲವನ್ನು ಆಕೆಯ ಮಡಿಲಲ್ಲಿ ಹಾಕಿದ್ದ. "ಬೇಗ ಎದ್ದು ಹೋಗಬೇಕು, ಆದ್ದರಿಂದ ತುಂಬಾ ಅಡಿಗೆ ಗಿಡಿಗೆ ಮಾಡಬೇಡ" ಎಂದಿದ್ದ. ಒಂದಿಷ್ಟು ಬಾಳೆಕಾಯಿ ಬೋಂಡಾ, ಅನ್ನ, ಬೇಳೆಹುಳಿಯನ್ನು ಬೇಗಲೇ ಆಕೆ ಮಾಡಿ ಬಡಿಸಿದ್ದಳು. ಸೈನ್ಯಕ್ಕೆ ಸೇರಿಕೊಳ್ಳುವವನ ಗತಿ ಮುಂದೇನೋ ಯಾರು ಹೇಳಬಲ್ಲರು? ಅವಳಿಗೂ ಕಾತರವಾಗಿತ್ತು. ಆದರೆ ಬಿಡ್ಡಣ್ಣ ವಿವರಗಳನ್ನೇನೂ ಹೇಳಲೊಲ್ಲ. ತಿಳಿಯದು ಅಂತಾನೆ. ಅವಳ ಮನಸ್ಸನ್ನು ಹರ್ಷಗೊಳಿಸಲು ಬಿಡ್ಡಣ್ಣ ಏನೇನನ್ನೆಲ್ಲಾ ಹೇಳಿದ್ದ. ತುಂಬಾ ಹೊತ್ತಾದ ಮೇಲೆ ಆಕೆಗೆ ನಿದ್ದೆ ಬಂದಿತ್ತು. ಬೇಗಲೇ ಎದ್ದಿದ್ದಳು. ಆದರೂ ಆ ವೇಳೆಗೆ ಹಾಸಿಗೆಯ ಆ ಅರ್ಧ ಖಾಲಿಯಾಗಿತ್ತು. ಯಾವ ಸರುಹೊತ್ತಿನಲ್ಲೋ ಬಿಡ್ಡಣ್ಣ ಹೊರಟುಹೋಗಿದ್ದ. ಹೋಗಿ ಬರ್ತೀನಿ ಅಂತ ಹೇಳಿ ಹೋಗಬಾರದಾಗಿತ್ತೇ? ಎಂದು ಸ್ವಲ್ಪ ಕೋಪವೂ ಬಂದಿತ್ತು. ಸೈನ್ಯಕ್ಕೆ ಹೋಗುವವನನ್ನು ಬೀಳ್ಕೊಡುವಾಗ ಸ್ವಾಭಾವಿಕವಾಗಿ ಹೆಣ್ಣಿಗೆ ಕಣ್ಣೀರು ಬಂದೇ ಬರುತ್ತದೆ. ಪ್ರಯಾಣ ಮಾಡುವಾಗ ಕಣ್ಣೀರಿಡುವುದು ಸರಿಯಲ್ಲ. ಅದನ್ನು ಬಿಡ್ಡಣ್ಣ, ಹೀಗೆ ಹೊರಟುಹೋಗಿ, ತಪ್ಪಿಸಿದನಲ್ಲ ಎಂದು ಸಮಾಧಾನವನ್ನೂ ತಂದುಕೊಂಡಿದ್ದಳು. ಆಮೇಲಿಂದ ಇಂದು ಬೆಳಗಿನ ತನಕ ಬಿಡ್ಡಣ್ಣನ ಸುದ್ದಿಯೇ ಇಲ್ಲ. ಮದುವೆಯಾದ ಹೆಂಡತಿ ತಾನಲ್ಲ ಅಂದ ಮೇಲೆ ಯಾರಲ್ಲಿ ಹೋಗಿ ಸುದ್ದಿ ತಿಳಿಯಲು ಸಾಧ್ಯ! ಹೀಗಾಗಿ ಕೊರಗುತ್ತಿದ್ದಳು. ಆರೋಗ್ಯವಾಗಿ ಬೇಗ ಬಿಡ್ಡಣ್ಣ ಹಿಂತಿರುಗಲಿ ಎಂದು ಮನೆದೇವರು ಆಂಜನೇಯನಿಗೆ ದಿನಾಲೂ ಸೇವೆ ಮಾಡಿ ಬೇಡುತ್ತಿದ್ದಳು.

"ನೀನು ಯಾರಪ್ಪ! ಬಿಡ್ಡಣ್ಣನನ್ನು ಕಂಡಿದ್ದೆಯಾ? ಈಗ ಎಲ್ಲಿದ್ದಾನೆ? ಚೆಂದಾಗಿದ್ದಾನಾ? ಏನಾರ ಹೇಳಿ ಕಳಿಸಾನ?" ಎಂದು ಆಕೆ ಕೇಳಿದಳು.

"ಬಿಡ್ಡಣ್ಣನನ್ನು ಕಂಡಿದ್ದೆ. ಅವನ ಮನೆಯವರಿಗೆ ಅವನ ವಿಷಯ ತಿಳಿಸಬೇಕು ಎಂದೇ ನಾ ಬಂದಿರೋದು. ಆದರೆ ಈ ವಿಷಯವನ್ನೆಲ್ಲಾ ಕಂಡ

ಕಂಡವರಿಗೆ ಹೇಳಬಾರದು. ನಿಮಗೆ ಬಿಡ್ಡಣ್ಣನವರ ಮನೆಯವರ ಪರಿಚಯ ವಿರಬೇಕು. ಆದುದರಿಂದಲೇ ಹೀಗೆ ಕೇಳುತ್ತಿದ್ದೀರಿ. ಆದರೆ, ತಾಯಿ! ಇತರರಿಗೆ ಆ ಸುದ್ದಿ ತಿಳಿಸಬಾರದು. ದಯವಿಟ್ಟು ಅವನ ಮನೆಯನ್ನು ತೋರಿಸುತ್ತೀರಾ?" ಎಂದು ವಿನಯದಿಂದ ಸೈನಿಕನು ಕೇಳಿದ.

"ಬಿಡ್ಡಣ್ಣನ ಮನೆ ಹತ್ತಿರವೇ ಇದೆ. ಅದೇ ಕಡೆ ನಾನೂ ಹೋಗ್ತಾ ಇದೀನಿ. ನನ್ನ ಜತೆ ಬಾ. ತೋರಿಸ್ತೀನಿ" ಎಂದಳು ಆಕೆ.

"ಬಿಡ್ಡಣ್ಣನ ಮನೆಯವಳು ನಾನೇ, ಅಲ್ಲಿ ಇನ್ನು ಯಾರೂ ಇಲ್ಲ. ಏನಿದ್ದರೂ ಇಲ್ಲೇ ಹೇಳಿಬಿಡು. ಮನೆಯೊಳಕ್ಕೆ ನೀ ಬರುವುದು ನನಗೆ ಚೆಂದ ಕಾಣಿಸುಲ್ಲ" ಎಂದು ಹೇಳಿಬಿಡಬೇಕೆಂದು ಅವಳಿಗೆ ತತ್‌ಕ್ಷಣ ಅನ್ನಿಸಿತು. ಆದರೆ ಅವ ಹೇಳಿದ–ಮನೆಯವರಿಗೆ ಮಾತ್ರ ಹೇಳಬೇಕು ಎಂದು. ಅಂದರೆ ಅವನಿಗೇನಾದರೂ ಪ್ರಾಣಾಪಾಯ ಸಂಭವಿಸಿದೆಯೇ? ಅಥವಾ ಅಪಘಾತವಾಗಿ ಕೈಕಾಲು ಊನವಾಗಿದೆಯೇ? ಅಂಥದ್ದೇ ಏನಾದರೂ ಕೆಟ್ಟ ಸುದ್ದಿ ಇರಬೇಕು ಎಂದವಳಿಗೆ ತೋಚಿತು. ತತ್‌ಕ್ಷಣ ಬೆದರಿ ಬೆಂಡಾದಳು. ಹಾಗಾದಾಗ ಮನಸ್ಸು ವಿಚಾರ ಮಾಡಲು ಪ್ರಯತ್ನಿಸುವುದಿಲ್ಲ. ಆಳಮನಸ್ಸಿನ ಆತಂಕಗಳಿಗೆ ಉತ್ತರವನ್ನು ನೇರವಾಗಿ ಬಯಸುತ್ತದೆ. ಈ ಯೋಚನೆಯು ಹೊಳೆದ ಕೂಡಲೆ ಕುಸಿದು ಕೂತಳು. ಕಣ್ಣಲ್ಲಿ ಎರಡು ಹನಿ ನೀರು ತುಂಬಿಕೊಂಡಿತು.

"ಬಿಡ್ಡಣ್ಣನ ವಿಚಾರದಲ್ಲಿ ಏನಾರ ಕೆಟ್ಟ ಸುದ್ದಿ ತಂದಿದ್ದೀಯೇನಪ್ಪ! ಮನೆಯವರಿಗೆ ಮಾತ್ರ ಹೇಳ್ತೀನಿ ಅಂತೀಯಲ್ಲ! ಕೈಕಾಲು ಮುರಕೊಂಡನೇನಪ್ಪಾ! ಅಥವಾ ಹೋಗೇಬಿಟ್ಟನೇನಪ್ಪ! ಅಯ್ಯಯ್ಯೋ! ಹೋಗಿ ಬರ್ತೀನಿ ಅಂತಲೂ ಹೇಳದೆ ಹೋದನಲ್ಲಪ್ಪಾ! ಮೂರು ತಿಂಗಳಿಂದಲೂ ದಿನಾಗಲೂ ಆಂಜನೇಯನ ಸೇವೆ ಮಾಡಿದೆನಲ್ಲಪ್ಪಾ! ಅವನಿಗಾದರೂ ಕರುಣೆ ಬೇಡವೇ!" ಎಂದು ಹಲುಬಲು ಪ್ರಾರಂಭಿಸಿದಳು.

"ಇದು ಯಾಕೆ ಹೀಗಳ್ತಿ! ಕೆಟ್ಟ ಸುದ್ದಿ ಅಂತ ನಾನು ಅನ್ನಿಲ್ವಲ್ಲ! ಬಿಡ್ಡಣ್ಣ ಕಲ್ಲು ಗುಂಡಾಗಿದಾನೆ. ನಿನ್ನೆ ಸಂಜೆ ಕಂಡಿದ್ದೆ. ನಮ್ಮ ಪಟಾಲಂನಲ್ಲೇ ಇದ್ದಾನೆ. ನಮ್ಮೂರಿಗೆ ರಜ ಮೇಲೆ ಹೋಗ್ತೀನಿ ಅಂದಾಗ 'ಹಂಗಾರೆ! ನಮ್ಮ ಕೇರಿತಾವ ಹೋಗು. ನಮ್ಮನೆಗೆ ಹೋಗು, ಈ ಬುತ್ತೀನ ನಮ್ಮ ಮನೆಯವರಿಗೆ ಕೊಡು' ಅಂದಾ. 'ಏನ್ಲಾ ಅದು, ಎಂದು ಕೇಳಿದೆ. 'ನಾಲ್ಕು ಪರೋಟ ಇದೆ. ಪಸಂದ್ ಬೆಳ್ಳುಳ್ಳಿ ಚಟ್ನಿ ಇದೆ. ಎರಡನ್ನೂ ನಾನೇ

Scanned by CamScanner

ಮಾಡಿಟ್ಟೆ. ನಾಲ್ಕು ದಿನ ಇಟ್ಟರೂ ಕೆಡುಲ್ಲ' ಅಂತ ಹೇಳಿ ನನ್ನ ಕೈಯಾಗ ಇಟ್ಟ. ಅದಕ್ಕೇ ಅವನ ಮನೆಯುವರಿಗೇ ಹೇಳಬೇಕು ಅಂತ ನಾನಂದರೆ, ನೀನು ಯಾಕೆ ಹೀಗೆ ಬಿದ್ದು ಬಿದ್ದು ಅಳ್ತಿ. ಅಲ್ಲ ನೀನೇ ಏನಾರ ಬಿಡ್ಡಣ್ಣನ ಮನೆಯುವಳಾ?" ಎಂದು ಸೈನಿಕ ಕೇಳಿದ.

"ಅಷ್ಟೇನಾ ಸುದ್ದಿ ! ನಾನೆಂತ ಪೆಚ್ಚು ಮುರುವಿ. ಒಳ್ಳೆ ಸುದ್ದಿ ತಂದಿದ್ದೀ ಬಾ ಮನೆತಾಕ. ನಿನ್ನ ಬಾಯ್ಗೆ ಅಷ್ಟು ಸೀ ಮಾಡಿ ಹಾಕ್ತೀನಿ" ಎಂದು ಹೇಳುತ್ತಾ ಆಕೆ ಎದ್ದು ಹೊರಟಳು.

ಮನೆಯನ್ನು ತಲುಪಿದ ಮೇಲೆ ಸೈನಿಕನನ್ನು ಹಜಾರದಲ್ಲಿ ಕೂರಿಸಿ, ಅವನು ಕೊಟ್ಟ ಬುತ್ತಿಯನ್ನು ಇಸುಕೊಂಡು ಆಕೆ ಅಡಿಗೆಯ ಮನೆಯತ್ತ ನಡೆದಳು. ಹಿಂದಿನ ದಿನ ಆಂಜನೇಯನ ನೈವೇದ್ಯಕ್ಕೆ ಎಂದು ಕಡಲೆಕಾಯಿ ಉಂಡೆಗಳನ್ನು ಮಾಡಿದ್ದಳು. ಒಳ್ಳೆಯ ಸುದ್ದಿಯನ್ನು ತಂದ ಸೈನಿಕನ ಬಾಯನ್ನು ಸಿಹಿ ಮಾಡಲು ನೈವೇದ್ಯವು ಒದಗಿಬಂದಿತ್ತು. ಒಂದು ತಟ್ಟೆಯಲ್ಲಿ ಎರಡು ಉಂಡೆ, ಸ್ವಲ್ಪ ಹುರಿಗಾಳು, ಒಂದು ಬಟ್ಟಲು ನೀರು ; ಎಲ್ಲವನ್ನೂ ಅಣಿ ಮಾಡಿಕೊಂಡು ಅಡಿಗೆಯ ಮನೆಯಿಂದ ಹೊರ ಬಂದಳು. ಸೈನಿಕನತ್ತ ನೋಡಿದಳು.

"ಬಿಡ್ಡಣ್ಣ !" ಎಂದು ಚೀರಿದಳು.

"ನೀ ಯಾವ ಮಾಯದಲ್ಲಿ ಬಂದಿ! ಆ ಸೈನಿಕ ಬಂದಿದ್ನಲ್ಲ. ಅವ ಎಲ್ಲಿ" ಎಂದು ಬೆದರುತ್ತ ಕೇಳಿದಳು. "ಇದೇನು ಕನಸಾ ! ಅಥವಾ ಭೂತ ಚೇಷ್ಟೆಯಾ" ಎಂದು ಕಿರುಲಿದಳು.

ಬೇಗ ಹೋಗಿ ಅವಳನ್ನು ತಬ್ಬಿ ಹಿಡಿದುಕೊಂಡ ಬಿಡ್ಡಣ್ಣ. "ಏಯ್ ಇದೇನಿದು, ನಿನ್ನ ಕೂಗಾಟ. ನನ್ನ ಕಂಡ ಮೇಲೂ ಹಿಂಗ್ಯಾಕ ಹೆದರ್ತಿ. ಕನಸೆಲ್ಲಿ ಬಂತೇ ಬೆಳಗಾದ ಮ್ಯಾಗ! ನಾನೇನು ಭೂತದ ಹಂಗಿದೀನಾ?"ಎಂದು ಅವಳ ಗಲ್ಲವನ್ನು ಚಿವುಟಿದ.

ಆ ವೇಳೆಗೆ ಅವಳಿಗೂ ಸ್ವಲ್ಪ ಧೈರ್ಯಮೂಡಿತ್ತು. ಎಡಗೈಯಲ್ಲಿ ಇಡೀ ಕಡಲೆಕಾಯಿ ಉಂಡೇನ ಹಿಡಿದು, ಬಿಡ್ಡಣ್ಣ ಬಾಯಲ್ಲಿಟ್ಟು ಕಟಕಾರಿಸಿದ್ದನ್ನು ಕಂಡ ಮೇಲೆ "ಇದು ಬಿಡ್ಡಣ್ಣನೇ? ಇನ್ನು ಯಾರು ತಾನೇ ಹೀಗೆ ಕಡಲೆ ಕಾಯಿ ಉಂಡೇನ ಕಡೀತಾರೆ" ಎಂದು ಆಕೆಗೆ ಅನಿಸಿತ್ತು. ಬಿಡ್ಡಣ್ಣನ ತೋಳ ತೆಕ್ಕೆಯೂ "ಅವನೇ ಇವನು" ಎಂದವಳಿಗೆ ಸ್ಪಷ್ಟಪಡಿಸಿತ್ತು. ಒಬ್ಬರಂತೊ

ಬ್ಬರು ತೋಳತೆಕ್ಕೆಯನ್ನು ಹಾಕುವುದಿಲ್ಲ ಎಂಬುದು ಬಲ್ಲವರಿಗೇ ತಿಳಿದ ಸಂಗತಿ!

"ನೀ ಭೂತದ ಹಾಂಗಿಲ್ಲ. ಆದರೆ ಮೊದಲು ಇಲ್ಲಿಗೆ ಬಂದಿತ್ತಲ್ಲಾ ! ಒಳ್ಳೆ ಸುದ್ದೀನ ತರ್ತಾ, ಅದೇನಾಯಿತು? ಅದರ ಜತೆಯಾಗೇ ಬಂದಿದ್ದಾ" ಎಂದು ಆಕೆ ಕೇಳಿದಳು.

"ಅಲ್ಲಿ ನೋಡು, ಆ ಭೂತ ಅಲ್ಲಿ ಮಲಗಿದೆ" ಎಂದು ಬಿಡ್ಡಣ್ಣ ಸೈನಿಕನ ಸಮವಸ್ತ್ರವನ್ನು ಗುಡ್ಡೆ ಹಾಕಿದ್ದ ಮೂಲೆಯನ್ನು ತೋರಿಸಿದ.

ಆ ವೇಳೆಗೆ ಒಂದು ಉಂಡೆಯನ್ನು ಮುಕ್ಕಿ ಮುಗಿಸಿದ್ದ. ಒಂದು ಗುಟುಕು ನೀರು ಕುಡಿದ. ಬಾಯನ್ನೆಲ್ಲ ಗಲಬರಿಸಿದಂತೆ ಇನ್ನೊಂದು ಗುಟುಕು ನೀರನ್ನು ಬಾಯಲ್ಲಿಟ್ಟು ಮುಕ್ಕಳಿಸಿ, ನಂತರ ನುಂಗಿದ. ಆಮೇಲೆ ಆಕೆಯನ್ನು ಸ್ವಲ್ಪ ಒತ್ತರಿಸಿ, "ಈಗ ಇಂದ್ರಜಾಲ ಮಾಡ್ತೀನಿ ನೋಡು"ಎಂದ. ವಸಡ ಪಟ್ಟಿಯೊಂದನ್ನು ತೆಗೆದು ಮೇಲ್ದುಟಿಯ ಒಳಗೆ ಹಲ್ಲುಗಳ ಮೇಲೆ ಸಿಕ್ಕಿಸಿದ. ಹೊರವಾಗಿದ್ದ ಮೀಸೆಯನ್ನು ತೆಗೆದಿರಿಸಿದ. ಉಂಗುರಗಳಂತಿದ್ದ ಎರಡು ಪ್ಲಾಸ್ಟಿಕ್ ಚೂರುಗಳನ್ನು ಮೂಗಿನ ಹೊಳ್ಳೆಗಳ ಒಳಗೆ ಸಿಕ್ಕಿಸಿದ. ಥೇಟ್ ಅವಲಕ್ಷಣ ಸೈನಿಕನ ಮುಖ.

"ರಾಮೋಜಪ್ಪನವರು ಹಲ್ಲು ಡಾಕ್ಟರರ ಬಳಿಗೆ ಕರೆದುಕೊಂಡು ಹೋಗಿ ಮೂರು ತಿಂಗಳ ಹಿಂದೆ ಇವನ್ನೆಲ್ಲ ಮಾಡಿಸಿಕೊಟ್ಟರು. ಸೈನ್ಯದಾಗ ಸೇರೋವಾಗ ನೀ ಬಿಡ್ಡಣ್ಣ ಅಂತ ಯಾರಿಗೂ ತಿಳೀಬಾರದು. ಅದರಿಂದ ಈ ವೇಷ ಹಾಕ್ಕೊ ಅಂದರು. ಸೈನ್ಯದಾಗ ಸೇರಿಕೊಂಡಾಗ ಏನು ಕೆಲಸ ಕೊಟ್ಟರು ಗೊತ್ತಾ?ಅಡಿಗೆಮನೆ ಮತ್ತು ಉಗ್ರಾಣದಲ್ಲಿ ಕೆಲಸ ಮಾಡು ಅಂತ ಹೇಳಿದರು. ಅಲ್ಲಿ ನಾ ಕಲಿತೆ, ಪರೋಟಾ ಮತ್ತು ಚಟ್ನಿ ಮಾಡೋದನ್ನ. ಶೀಲೂ ನಾಯ್ಕನ ಚಟ್ನಿ ಅಂದರೆ ಈಗ ಸೈನ್ಯದಲ್ಲಿ ಪ್ರಸಿದ್ಧಿ ತಿಳೀತಾ" ಎಂದು ಬಿಡ್ಡಣ್ಣ ಹೇಳಿದ.

"ಸೈನ್ಯದಲ್ಲಿ ಅಡಿಗೆ ಕಲಿಯುಕ್ಕೆ ಅಥವಾ ಉಗ್ರಾಣ ನೋಡಿಕೊಳ್ಳುಕ್ಕೆ ಅಂತ ರಾಮೋಜಪ್ಪನವರು ನಿನ್ನ ಅಲ್ಲಿ ಮೆಹನತ್ತು ಮಾಡಿ ಸೇರಿಸಿದರು ಅಂದ್ರೆ ನಾ ನಂಬೋಳಲ್ಲ. ಇನ್ನೇನೋ ಮರ್ಮ ಇರಬೇಕು. ಯಾಕೆ ಹೇಳವಲ್ಲೆ" ಎಂದು ಬಿಡ್ಡಣ್ಣನ ಉಬ್ಬಿದ ಮೇಲ್ದುಟಿಯನ್ನು ನೇವರಿಸುತ್ತಾ ಆಕೆ ಕೇಳಿದಳು. ಅವಲಕ್ಷಣ, ಅಪಸ್ಮಾರೆ ಎಂದವಳು ಮೊದಲು ಅಂದುಕೊಂಡಿದ್ದ

Scanned by CamScanner

ಪೋಲ್ದುಟಿಯು ಈಗವಳಿಗೆ ಮುದ್ದಾಗಿತ್ತು. ಮನಸ್ಸು ಒಲಿದರೆ ಮೈ ಹೇಗಿದ್ದರೂ ಮುದ್ದೇ ಅಲ್ಲವೇ!?

"ಹಂಗೆಲ್ಲ ಕೇಳಬಾರದು. ಗಂಡುಗಂಡಸರ ವ್ಯವಹಾರಾನಾ ಹೆಣ್ಣು ಮಕ್ಕಳ ಮುಂದೆ ಹೇಳಬಾರದು. ನಮಗ್ಯಾಕ ದೊಡ್ಡೋರ ವಿಚಾರ. ಅವರು ಹೇಳಿದಂತೆ ಮಾಡಿದರೆ ನಮ್ಮ ಕೆಲಸ ಮುಗೀತು. ಏಕೆ ಎಲ್ಲಿ ಹೇಗೆ ಅಂತ ಕೇಳಿದರೆ ತಪರಾಕ್ ಹೊಡೆದು ಬೇರೆಯವರನ್ನ ಮಡಕ್ಕೊಂತಾರೆ" ಎಂದ ಬಿಡ್ಡಣ್ಣ, ತುಸು ಬಿರುಸಾಗಿ.

"ಸೈ ಹಂಗಾರೆ. ಆದರೆ ಉಗ್ರಾಣದಲ್ಲಿ ಹೆಗ್ಗಣ ಇಲಿ ಸೇರಿಕೊಂಡಿರ್ತವೆ. ಮಸಲ ಅವು ಕಚ್ಚಿದರೆ ವಿಷ ಹತ್ತುತ್ತೆ ಅಂತಾರ. ಹಂಗೇನಾದರೂ ಆಯಿತ ನಿಂಗೆ" ಎಂದು ಆಕೆ ಮುಗುಮ್ಮಾಗಿ ಕೇಳಿದಳು. ಅವಳ ಮುಖವನ್ನೇ ದುರು ಗುಟ್ಟಿಕೊಂಡು ನೋಡಿ, ಬಿಡ್ಡಣ್ಣ, "ಹೆಗ್ಗಣದ ಕೈಲಿ ಕಚ್ಚಿಸಿಕೋತೀನಾ, ನಾ ಅಷ್ಟು ಬೇಹುಷಾರ್ ಗಂಡಾನಾ" ಎಂದ.

*

ಮಹೇಂದ್ರ ಭವನದ ಹುಲ್ಲುಗಾವಲಿನಲ್ಲಿ ಪಕ್ಷದ ಅಧ್ಯಕ್ಷರು ಒಂದು ಚಹಾಕೂಟವನ್ನು ತಮ್ಮ ಹುಟ್ಟಿದ ಹಬ್ಬದ ನಿಮಿತ್ತ ಏರ್ಪಡಿಸಿದ್ದರು. ಸಂಜೆಯ ಸರಳ ಕೂಟಕ್ಕೆ ಸಚಿವರುಗಳು, ಸಂಸ್ಥೆಯ ಹಿರಿಯ ಸದಸ್ಯರು ಮತ್ತು ಕೆಲವರು ವ್ಯಾಪಾರೀ ಮುಖಂಡರು ಹಾಗೂ ಉದ್ಯಮಶ್ರೇಷ್ಠರೂ ಆಹ್ವಾನಿಸಲ್ಪಟ್ಟಿದ್ದರು. ನಾಲ್ಕು ಗೇರುಪೊಪ್ಪು, ಒಂದು ಲೋಟಾ ಚಹಾ, ಅಭ್ಯಾಸವಿದ್ದವರಿಗೆ ಸಿಗರೇಟ್, ಇಷ್ಟೇ ಉಪಚಾರದ ತಪಸೀಲು. ಆದರೂ ಸುಮಾರು ಎರಡು ತಾಸು ಹೊತ್ತು ಕೂಟವು ನಡೆದಿತ್ತು. ಕಾರಣ ಆ ಅವಕಾಶ ವನ್ನೇ ನೆಪ ಮಾಡಿಕೊಂಡು, ಉದ್ಯಮಗಾರರು, ಸಚಿವರ ಕಿವಿಯನ್ನು ಕಚ್ಚು ತ್ತಿದ್ದರು. ಕಚೇರಿಯಲ್ಲಿ ತಿಂಗಳುಗಟ್ಟಲೆ ಕೊಳೆಯುತ್ತಿರುವ ಎಷ್ಟೋ ವಿಷಯ ಗಳನ್ನು ಇಂತಹ ಕೂಟಗಳಲ್ಲಿ ತೀರ್ಮಾನಿಸಲು ಅವಕಾಶವಿತ್ತು. ಸಂಸ್ಥೆಯ ಹಿರಿಯ ಸದಸ್ಯರು, ಆಹ್ವಾನಿತರಾಗಿ ಬಂದಿದ್ದ ವ್ಯಾಪಾರಸ್ಥರನ್ನು ಬಲು ಆದರದಿಂದ ಕಂಡು, ತಮ್ಮ ಸಂಸ್ಥೆಯ ಉದಾತ್ತ ಕಾರ್ಯಗಳಿಗೆ ಅವರುಗಳಿಂದ ಸಾಕಷ್ಟು ಹಣವನ್ನು ಪಡೆಯಲು ಗಾಳ ಹಾಕುತ್ತಿದ್ದರು. ಆ ಕಾರಣದಿಂದಲೇ ಕಂಟ್ರಾಕ್ಟರ್ ಸೇನಪ್ಪನವರು ಕೂಟಕ್ಕೆ ಬಂದಾಗ, ಮಾಲತೀಜೀಯೇ ಹೋಗಿ, ತನ್ನ ಮೃದು ಹಸ್ತದಿಂದ ಅವರಿಗೆ ಹಸ್ತಲಾಘವವನ್ನು ಕೊಟ್ಟು ಸ್ವಾಗತಿಸಿ ದಳು. ಪರಸ್ತ್ರೀಯರ ಅಂಗೈಯನ್ನು ಬಹಿರಂಗವಾಗಿ ಎಂದೂ ಮುಟ್ಟದ

ಸೇನಪ್ಪನವರಿಗೆ ಸ್ವಲ್ಪ ನಾಚಿಕೆಯಾಯಿತು. ಹಿತವಾಗಲಿಲ್ಲವೆಂದು ಹೇಳಬರು ತ್ತಿರಲಿಲ್ಲ. ಅವನನ್ನು ಪಕ್ಷದ ಅಧ್ಯಕ್ಷರ ಬಳಿಗೆ ತಾನೇ ಕರೆದುಕೊಂಡುಹೋಗಿ ಸ್ವತಃ ಪರಿಚಯ ಮಾಡಿಸಿದಳು. ಸೇನಪ್ಪನವರನ್ನು ತಮ್ಮ ಬಳಿಯಲ್ಲಿಯೇ ಕೂರಿಸಿಕೊಂಡು ತಾವೇ ಚಹಾವನ್ನು ಅವರಿಗೆ ಕೊಟ್ಟು ಬಲು ಆತ್ಮೀಯವಾಗಿ ಮಾತನಾಡಿಸಿದರು.

ತಮ್ಮ ಬಳಿಗೆ ಅಭಿನಂದಿಸಲು ಬಂದ ಮಾನ್ಯ ಅತಿಥಿಗಳನ್ನೂ ಸೇನಪ್ಪ ನವರಿಗೆ ಪರಿಚಯ ಮಾಡಿಕೊಟ್ಟರು. ದೂರದಲ್ಲಿ ಯಾರಾದರೂ ಗಣ್ಯರನ್ನು ಕಂಡರೆ ಅವರನ್ನು ಕರೆದು ಸೇನಪ್ಪನವರಿಗೆ ಪರಿಚಯಿಸುತ್ತಿದ್ದರು. ಅಂದ ಮೇಲೆ ಸೇನಪ್ಪನವರು ಅಧ್ಯಕ್ಷರ ಗಣ್ಯಮಿತ್ರರು ಎಂದು ಉಳಿದವರಿಗೆ ಸುಲಭ ವಾಗಿ ತಿಳಿಯುತ್ತಿತ್ತು. ಸಂಸ್ಥೆಯ ಕಾರಭಾರಕ್ಕೆ ಸೇನಪ್ಪನವರು ಬಿಡುಗೈ ಸಹಾಯ ಮಾಡುವರೆಂದೂ ತಿಳಿಯುತ್ತಿತ್ತು.

"ಮೆಹ್ತಾ! ಸ್ವಲ್ಪ ಇಲ್ಲಿ ಬನ್ನಿ. ನನ್ನ ಮಾನ್ಯ ಸ್ನೇಹಿತರ ಪರಿಚಯ ನಿಮಗಿದೆಯೆ?" ಎಂದು ಕೇಳುತ್ತಾ, ಅನತಿ ದೂರದಲ್ಲಿ ಯಾರ ಬಳಿಯೋ ಮಾತನಾಡುತ್ತಿದ್ದ ಮೆಹ್ತಾ ಅವರನ್ನು ಅಧ್ಯಕ್ಷರು ಕರೆದರು. ಮೆಹ್ತಾ ಅವರು ಹತ್ತಿರ ಬಂದರು. ಭವ್ಯ ಮೂರ್ತಿ.

"ಇವರು ಸೇನಪ್ಪನವರು, ಮಿ॥ ಮೆಹ್ತಾ! ನಮ್ಮ ಗಣ್ಯರಲ್ಲಿ ಒಬ್ಬರು. ಇವರು ಮಿ॥ ಮೆಹ್ತಾ ಅಂತ, ಸೇನಪ್ಪನವರೇ. ದಿಲ್ಲಿಯಲ್ಲಿ ಸಿ. ಬಿ. ಐ. ನಲ್ಲಿ ಬಹಳ ಪ್ರಮುಖರಾದ ಅಧಿಕಾರಿಗಳು" ಎಂದು ಪರಸ್ಪರ ಪರಿಚಯವನ್ನು ಮಾಡಿಕೊಟ್ಟರು.

"ನನ್ನ ಅಜ್ಞಾನವನ್ನು ಮನ್ನಿಸಬೇಕು. ಸಿ. ಬಿ. ಐ. ಅಂದರೆ ಏನು? ಈ ಊರು ಬಿಟ್ಟು ಹೊರಗೆ ಹೋದವನಲ್ಲ ನಾನು" ಎಂದು ಮೆಹ್ತಾರವರ ಕೈಯನ್ನು ಬಲವಾಗಿ ಕುಲುಕುತ್ತಾ ಸೇನಪ್ಪನವರು ಕೇಳಿದರು.

"ಸಿ. ಬಿ. ಐ. ಅಂದರೆ ಸೆಂಟ್ರಲ್ ಬ್ಯೂರೋ ಆಫ್ ಇನ್‌ಟೆಲಿಜೆನ್ಸ್ ಅಂತ. ಸರಕಾರದ ಹಿರಿಯ ಅಧಿಕಾರಿಗಳು ಯಾವುದಾದರೂ ಮೋಸವನ್ನು ಮಾಡಿದರೆ, ರಹಸ್ಯವಾಗಿ ಅದನ್ನು ತನಿಖೆ ಮಾಡುವ ಇಲಾಖೆ ಅದು. ಅಲ್ಲಿನ ಅಧಿಕಾರಿಗಳು ಅಂದರೆ ಸರಕಾರದ ಎಲ್ಲ ಅಧಿಕಾರಿಗಳೂ ಹಾಗೂ ಸಚಿವರು ಗಳೂ ಕೂಡ ನಡುಗುತ್ತಾರೆ. ಅದರಲ್ಲೂ ಮಿ॥ ಮೆಹ್ತಾ ಎಂದರೆ ಸಿಂಹಸ್ವಪ್ನ. ಪ್ರಧಾನ ಮಂತ್ರಿಗಳ ಬಲಗೈ ಅಂತಿದ್ದಾರೆ ಅವರು. ಬಲು ಜಾಣರು ಮತ್ತು ದಕ್ಷರು" ಎಂದು ಅಧ್ಯಕ್ಷರೇ ಸೇನಪ್ಪನವರ ಪ್ರಶ್ನೆಗೆ ಉತ್ತರವನ್ನು ಕೊಟ್ಟರು.

Scanned by CamScanner

ಅನಂತರ ಸೇನಪ್ಪನವರೂ ಮಿ॥ ಮೆಹ್ತಾ ಅವರು ಲೋಕಾಭಿರಾಮವಾಗಿ ಸ್ವಲ್ಪ ಹೊತ್ತು ಮಾತನಾಡಿ ನಂತರ ಇತರ ಸ್ನೇಹಿತರನ್ನು ಮಾತನಾಡಿಸಲು ಅತ್ತ ಇತ್ತ ನಡೆದರು.

* * *

"ಆಫೀಸಿನಿಂದ ಮಧ್ಯಾಹ್ನ ಹಿಂತಿರುಗಿದಾಗ ಮಲ್ಲಣ್ಣನ ಅಂಗಡೀಲಿ ಚಿಗುರು ವೀಳ್ಯೆದೆಲೆ ಕೊಂಡುಕೊಂಡು ಬನ್ನಿ ಅಂದ್ರೆ, ನಿನ್ನೇನೂ ತರೋದು ಮರೆತುಬಿಟ್ರಿ. ಆಮೇಲೆ ಎಲಡಿಕೆಯನ್ನು ಹಾಕಿಕೊಳ್ಳುವಾಗ ಮುಖ ಸಿಂಡರಿಸಿಕೊಳ್ಳುತ್ತೀರಿ" ಎಂದು ಹೆಂಡತಿಯು ಸೇನಪ್ಪನನ್ನು ಬೆಳಿಗ್ಗೆ ಹೊರಡುವಾಗ ಜ್ಞಾಪಿಸಿದಳು. "ಕರ್ಚೀಫಿನಲ್ಲಿ ಗಂಟು ಹಾಕಿದ್ದೀನಿ ನೋಡು. ಇದಾದರೂ ನೆನಪು ಮಾಡಿಕೊಡಬಹುದು. ತಂದೇ ತರ್ತೀನಿ" ಎಂದು ಸೇನಪ್ಪನವರು ಹೇಳಿ ತಮ್ಮ ಮೋಟಾರಿನತ್ತ ನಡೆದರು.

ಆಫೀಸಿನ ಬಳಿಗೆ ಹೋದಾಗ ಅವರ ಹಿರಿಯ ನೌಕರ ಹೊರ ಬಾಗಿಲಲ್ಲೇ ಕಾದಿದ್ದ. ಸೇನಪ್ಪನವರ ಮೋಟಾರನ್ನು ಕಂಡ ಕೂಡಲೇ ಅದರ ಹತ್ತಿರಕ್ಕೆ ಓಡಿಹೋಗಿ "ಸಾಹುಕಾರ್ರೇ ಪೋಲೀಸ್ ಡೆಪ್ಯುಟಿ ಐ. ಜಿ.ಯವರು ತಮ್ಮನ್ನು ಜರೂರು ನೋಡಬೇಕೆಂದು ಬಂದಿದ್ದಾರೆ. ನಾಲ್ಕೈದು ಜನ ಸಿಬ್ಬಂದಿಯನ್ನೂ ಕರೆದುಕೊಂಡು ಬಂದಿದ್ದಾರೆ. ಏನು ಬೇಕಾಗಿತ್ತು ಎಂದು ನಾನು ಕೇಳಿದೆ. ಸಾಹುಕಾರರನ್ನು ನೋಡುಕ್ಕೆ ಬಂದೀನಿ, ನಿನ್ನನ್ನಲ್ಲ, ಎಂದು ಬಿರುಸಾಗಿ ನುಡಿದು ನನ್ನ ಬಾಯಿ ಮುಚ್ಚಿಸಿದರು ಎಂದು ಕಾತರದಿಂದ ಹೇಳಿದ. "ಹಾಗೇನು ? ಭಯಪಡಬೇಕಾದ ಪ್ರಸಂಗವೇನೂ ಇರಲಾರದು. ಆದರೂ ನಮ್ಮ ಹುಷಾರಿನಲ್ಲಿ ನಾವಿರುವುದು ಜಾಣತನ. ನಾನು ಆಫೀಸಿನೊಳಗೆ ಹೋಗ್ತಿದ್ದ ಹಾಗೇ ನೀನು ಕೆಂಪು ಪುಸ್ತಕವನ್ನು ರಹಸ್ಯವಾಗಿ ತೆಗೆದುಕೊಂಡು ಇದೇ ಮೋಟಾರಿನಲ್ಲಿ ಮನೆಗೆ ಹೋಗು. ಅಲ್ಲಿ ಅಮ್ಮಾವರ ಕೈಲಿ ಕೊಟ್ಟು ಹುಷಾರಾಗಿಟ್ಟುಕೊಂಡಿರಿ, ಸಾಯಂಕಾಲ ಸಾಹುಕಾರರು ಹಿಂತಿರುಗಿದ ಮೇಲೆ ಅವರ ಕೈಲಿಡಿ ಎಂದು ಹೇಳಿಬಿಟ್ಟು, ಬಂದುಬಿಡು" ಎಂದು ಹೇಳಿದರು. ನಂತರ ಆಫೀಸಿನೊಳಕ್ಕೆ ಕಾಲಿರಿಸಿದರು.

ಕಂಟ್ರಾಕ್ಟರುಗಳ ಆಫೀಸು ಎಂದರೆ ಸರ್ಕಾರಿ ಆಫೀಸುಗಳಿದ್ದ ಹಾಗಲ್ಲ. ಸಾಹುಕಾರರ ಸಣ್ಣ ಕೊಠಡಿಯಲ್ಲಿ ಪತ್ರವ್ಯವಹಾರ, ವ್ಯಾಪಾರ ಎಲ್ಲವೂ ನಡೆಯುತ್ತದೆ. ಅದಕ್ಕೆ ಲಗತ್ತಾಗಿರುವ ಬೈಠಕ್ ಕೊಠಡಿಯು ಭವ್ಯವಾಗಿರುತ್ತದೆ. ಬಂದ ವ್ಯಾಪಾರಸ್ಥರ ಉಪಚಾರಗಳಿಗೂ ಅನುಕೂಲವಾಗಿರುತ್ತದೆ.

ಕಂಟ್ರಾಕ್ಟರುಗಳ ನಂಬಿಕೆಯ ನೌಕರರು, ಗುಪ್ತ ವ್ಯವಹಾರಗಳನ್ನು ಮಾಡ ಬಂದಿರುವ ಶ್ರೀಮಂತ ವ್ಯಾಪಾರಸ್ಥರು ಮಾತ್ರ ಸಾಹುಕಾರರ ಸಣ್ಣ ಕೊಠಡಿಯನ್ನು ಪ್ರವೇಶಿಸುತ್ತಾರೆ. ಮಿಕ್ಕವರೆಲ್ಲ ಬೈಠಕ್ ಕೊಠಡಿಯಲ್ಲೇ ಕೂರುವುದು.

ಬೈಠಕ್ ಕೊಠಡಿಗೆ ಸೇನಪ್ಪನವರು ಹೋದರು. ಆದರೆ ಪೋಲೀಸ್ ಡಿ. ಐ. ಜಿ. ಅಲ್ಲಿರಲಿಲ್ಲ. ಎಲ್ಲಿಗೆ ಆತ ಹೋಗಿರಬಹುದು ಎಂದು ಅನುಮಾನ ಬಂತು. ತಮ್ಮ ಸ್ವಂತ ಕೊಠಡಿಗೆ ಹೋದರು. ಅಲ್ಲಿ ಡಿ. ಐ. ಜಿ. ಕುಳಿತಿದ್ದಾರೆ! ಪರಸ್ಪರ ವಂದನೆಗಳಾದವು.

"ನಿಮ್ಮನ್ನು ಈ ಕೆಲಸದ ಕೊಠಡಿಯಲ್ಲಿ ಕೂರಿಸಿಬಿಟ್ಟರೇ! ಏನನ್ಯಾಯ ! ಗಣ್ಯರನ್ನು ಸ್ವಾಗತಿಸುವ ಬೈಠಕ್ ಕೊಠಡಿಯಲ್ಲಿ ಕೂರಿಸಬೇಕಾಗಿತ್ತು" ಎಂದು ಸೇನಪ್ಪನವರು ಕ್ಷಮೆ ಬೇಡಿದರು. "ಛೇ ಛೇ. ಹಾಗೇನಿಲ್ಲ ಅಲ್ಲಿಯೇ ಕೂರಿಸಿದ್ದರು. ಕೂತು ಕೂತು ಬೇಜಾರಾಗಿ ನಾನೇ ಇಲ್ಲಿಗೆ ಬಂದೆ. ಹೇಗೂ ಅಗತ್ಯ ಬಿದ್ದರೆ ಇವೆಲ್ಲವನ್ನೂ ಶೋಧನೆ ಮಾಡಬೇಕಾಗಬಹುದು. ಸ್ಥಳದ ಪರಿಚಯ ವಿದ್ದರೆ ಅನುಕೂಲ ಅಲ್ಲವೇ!" ಎಂದಂದ ಡಿ. ಐ. ಜಿ. ಮಾತಿನ ಧಾಟಿಯೇ ಸೇನಪ್ಪನವರನ್ನು ರೇಗಿಸಿತು. ಆದರೆ ಅನುಭವಸ್ಥ ಸಾಹುಕಾರರು ಪೋಲೀಸಿನವರ ಮೇಲೆ ರೇಗಿದರೆ ತಮಗೇ ತಾಪತ್ರಯ. ಅಂದಿದ್ದನ್ನು ಅನ್ನಿಸಿಕೊಂಡು ಸುಲಭವಾಗಿ ನುಣುಚಿಕೊಂಡು, ಆಮೇಲೆ ಸಚಿವರನ್ನು ಹಿಡಿದು ಪೋಲೀಸ್ ಅಧಿಕಾರಿಯನ್ನು ಕೆಟ್ಟ ಊರಿಗೆ ವರ್ಗ ಮಾಡಿಸುವುದೇ ಪೀಡೆಯನ್ನು ಪರಿಹರಿಸುವ ಮಾರ್ಗ ಎಂದವರಿಗೆ ತಿಳಿದಿತ್ತು. ಆದುದರಿಂದ ಸಾವಧಾನವಾಗಿಯೇ "ಸರ್ಚ್ ವಾರೆಂಟ್ ತಂದಿದ್ದರೆ ನಿಮ್ಮ ಕೆಲಸವನ್ನು ಶುರುಮಾಡಬಹುದು. ಕೈಲಾದ ನೆರವನ್ನು ನಾನು ಕೊಡ್ತೀನಿ" ಎಂದರು ಸಾಹುಕಾರರು.

"ಸರ್ಚ್ ವಾರೆಂಟ್ ತಂದಿಲ್ಲ. ಈಗ ಶೋಧನೆ ಮಾಡುಕ್ಕೆ ಬಂದಿಲ್ಲ. ದಿಳ್ಳಿಯಿಂದ ಬಂದವರು ನಮ್ಮ ದೊಡ್ಡ ಸಾಹೇಬರ ಜೊತೆ ಇದ್ದಾರೆ. ನಿಮ್ಮನ್ನು ಕಾಣಬೇಕು ಅಂತ ಅವರ ಇಷ್ಟ. ಅಧ್ಯಕ್ಷರ ಪಾರ್ಟಿಯಲ್ಲಿ ನಿಮ್ಮನ್ನು ಕಂಡಿದ್ದರಂತೆ. 'ನನ್ನ ವಂದನೆಗಳನ್ನು ಅವರಿಗೆ ತಿಳಿಸಿ ಅವರನ್ನು ಕರೆದುಕೊಂಡು ಬರುತ್ತೀರಾ' ಎಂದು ನನ್ನನ್ನು ಕೇಳಿದರು. ಆ ಕಾರಣದಿಂದ ಪ್ಯಾದೆಯ ಮೂಲಕ ಹೇಳಿ ಕಳುಹಿಸದೆ ನಾನೇ ಖುದ್ದಾಗಿ ಬಂದೆ" ಎಂದು ಡಿ. ಐ. ಜಿ. ಹೇಳಿದರು.

ಸಾಹುಕಾರರಿಗೆ ತುಸು ಸಮಾಧಾನವಾಯಿತು. ದಿಳ್ಳಿಯಿಂದ ಬಂದ ಹಿರಿಯ ಅಧಿಕಾರಿಗಳು ತಮ್ಮನ್ನು ಕಾಣಬಯಸುವುದು ಅವರಿಗೆ ಅಪರೂಪ ವಾಗಿರಲಿಲ್ಲ. ಸ್ಕಾಟ್ಲೆಂಡಿನ ಉತ್ತಮ ವ್ಹಿಸ್ಕಿಗಳು ಬೇಕಾದರೆ ಸೇನಪ್ಪನವರನ್ನೇ ಕರೆಯಬೇಕಾಗಿತ್ತು. ಯಾವ ಮಾಯದಿಂದಲೋ ಆತ ಎಲ್ಲಿಂದಲೋ ತರಿಸುತ್ತಿದ್ದ. ಅದಕ್ಕೇ ಇರಬೇಕು ಎಂದುಕೊಂಡರು ಸಾಹುಕಾರರು. ದಿಳ್ಳಿಯಿಂದ ಬಂದ ಪ್ರಮುಖ ಅಧಿಕಾರಿಗಳಿಗೆಲ್ಲ ಗಂಟಲು ಸದಾಕಾಲವೂ ಒಣಗುತ್ತಲೇ ಇರುತ್ತೆ ಎಂದವರು ಅನುಭವದಿಂದ ಕಲಿತಿದ್ದರು. "ಬನ್ನಿ ಹೋಗೋಣ, ಆದರೆ ಒಂದು ಹತ್ತು ನಿಮಿಷದ ಕೆಲಸ ಆಫೀಸಿನಲ್ಲಿದೆ. ಅದನ್ನು ವ್ಯವಸ್ಥೆ ಮಾಡಿ ಬಂದುಬಿಡುತ್ತೇನೆ" ಎಂದು ಸೇನಪ್ಪನವರೆಂದರು. ಮನೆಗೆ ಹೋಗಿದ್ದ ಕಾರು ಹಿಂತಿರುಗಿ ಬರಬೇಕಲ್ಲ! ತಮ್ಮ ಆಫೀಸಿನ ಒಳ ಕೊಠಡಿಗಳತ್ತ ನಡೆದರು.

ಸೇನಪ್ಪ ಸಾಹುಕಾರರು ಮಂಡೀ ವ್ಯಾಪಾರಿಗಳ ತರಹ, ಹೋಲ್‌ಸೇಲ್ ಕೊಳ್ಳುವುದು, ಆದರೆ ಮಾರುವುದಕ್ಕಲ್ಲ. ಸೈನ್ಯಕ್ಕೆ, ಮತ್ತಿತರ ಭಾರೀ ಸಂಸ್ಥೆಗಳಿಗೆ ಅಗತ್ಯವಾದವುಗಳನ್ನು ಕೊಂಡು ಸರಬರಾಜಿಸುತ್ತಿದ್ದರು. ಒಳಕೊಠಡಿಗಳಲ್ಲಿ ಬೆಣ್ಣೆ ತುಪ್ಪದ ಶಾಖೆ; ತರಕಾರಿ ಶಾಖೆ; ಮಾಂಸ ಪೊಟ್ಟಣಗಳ ಶಾಖೆ ಹೀಗೆ ಎಂಟು ಹತ್ತು ಶಾಖೆಗಳಿದ್ದವು. ಅವುಗಳೆಲ್ಲದರ ಬಳಿ ಹೋಗಿ ಸೂಕ್ತ ಆಣತಿಗಳನ್ನು ಇತ್ತು ಹಿಂದಿರುಗುವ ವೇಳೆಗೆ ತಮ್ಮ ಮೋಟಾರು ಹಿಂತಿರುಗಿ ಬಂದಿತ್ತೆಂದು ತಿಳಿಯಿತು, ಅದರ ಹಾರನ್ ಸದ್ದು ಕೇಳಿ.

"ನಿಮ್ಮನ್ನು ಕಾಯಿಸಿಬಿಟ್ಟೆನೇನೋ?" ಎಂದು ಕ್ಷಮಾ ಬೇಡುವ ಮಾತುಗಳನ್ನಾಡುತ್ತಾ ಸೇನಪ್ಪನವರು, ಡಿ. ಐ. ಜಿ.ಯ ಜತೆಗೆ ದೊಡ್ಡ ಸಾಹೇಬರಲ್ಲಿಗೆ ಹೋದರು. ಡಿ. ಐ. ಜಿ.ಯ ಜತೆಗೆ ಬಂದಿದ್ದ ಸಿಬ್ಬಂದಿಯು ಸೇನಪ್ಪನವರ ದುಕಾನಿನಲ್ಲಿಯೇ ಉಳಿದುಕೊಂಡಿತ್ತು.

* * *

ಮಿ॥ ಮೆಹ್ತಾ ಅವರನ್ನು ಐ. ಜಿ. ಸಾಹೇಬರೊಂದಿಗೆ ಇರುವಾಗ ಭೇಟಿ ಮಾಡಲು ಸೇನಪ್ಪನವರು ಡಿ. ಐ. ಜಿ.ಯ ಜತೆಯಲ್ಲಿ ಕೊಠಡಿಯೊಳಕ್ಕೆ ಕಾಲಿರಿಸುವಾಗ, ಆ ಕೊಠಡಿಯಿಂದ ಒಬ್ಬಾತ ಹೊರಬರುತ್ತಿದ್ದ. "ಎಲ್ಲಿಯೋ ನೋಡಿದ ಮುಖ. ಅವಲಕ್ಷಣದ ಮುಖ, ಮರೆಯಲು ಸುಲಭವಲ್ಲ" ಎಂದು

ಜ್ಞಾಪಿಸಿಕೊಳ್ಳಲು ಚಡಪಡಿಸಿದರು. ತಟ್ಟಂತ ನೆನಪಾಯಿತು. ಮೇಜರ್ ಕನ್ನ ಅವರ ಪಟಾಲಮ್ಮಿನ ಉಗ್ರಾಣದಲ್ಲಿದ್ದ ನೌಕರ! ಸಮವಸ್ತ್ರವನ್ನು ಈಗ ಧರಿಸುತ್ತಿಲ್ಲವಾದುದರಿಂದ ಸ್ಮರಣೆಗೆ ಬರಲು ಸ್ವಲ್ಪ ಕಷ್ಟವಾಗಿತ್ತು! ಅವನು ಯಾಕೆ ಇಲ್ಲಿಗೆ ಬಂದ? ಎಂದು ತಲೆಯನ್ನು ಕೆದರುತ್ತಲೇ ಸೇನಪ್ಪನವರು ಮಿ॥ ಮೆಹ್ತಾ ಅವರಿಗೆ ವಂದನೆ ಮಾಡಿದರು.

ಪ್ರತಿವಂದನೆಯನ್ನು ಮಾಡಿದಾಗ ಮೆಹ್ತಾ ಅವರು ಆತ್ಮೀಯ ಆದರವನ್ನು ತೋರಿಸಲಿಲ್ಲ. ಬದಲು ನೇರ ಪ್ರಸ್ತಾಪಕ್ಕೇಬಂತೆ ನುಡಿಯಲಾರಂಭಿಸಿದರು.

"ಸಾಹುಕಾರರೇ! ನೀವು ಈ ಊರಿನಲ್ಲಿ ಗಣ್ಯರು ಎಂಬುದನ್ನು ಬಲ್ಲೆ. ರಾಜಕಾರಣಿಗಳ ಬೆಂಬಲವಿದೆಯೆಂದೂ ತಿಳಿದಿದೆ. ಇದೆಲ್ಲವನ್ನೂ ತಿಳಿದು ಜವಾಬ್ದಾರಿಯುತವಾಗಿ ಮಾತನಾಡುತ್ತಿದ್ದೇನೆ. ಗಮನಿಸಿ ಕೇಳಿ.

ಸೈನ್ಯದಲ್ಲಿ ಮೇಜರ್ ಕನ್ನ ಅವರು ತುಂಬಾ ಆಸ್ತಿಪಾಸ್ತಿಗಳನ್ನು" ಮಾಡಿಕೊಂಡಿದ್ದಾರೆ. ತುಂಬಾ ಶ್ರೀಮಂತರ ತೆರನಾದ ಸಂಸಾರವನ್ನು ನಿಭಾಯಿಸುತ್ತಿದ್ದಾರೆ ಎಂದು ಸುದ್ದಿ ತಿಳಿಯಿತು. ತನಿಖೆ ನಡೆಸಲು ನನ್ನನ್ನು ನೇಮಿಸಿದರು. ನಮ್ಮವನೊಬ್ಬನನ್ನು ಮೂರು ತಿಂಗಳ ಹಿಂದೆ ಸೈನ್ಯದ ಅಡಿಗೆ ಉಗ್ರಾಣಗಳಲ್ಲಿ ಕೆಲಸಕ್ಕೆ ಸೇರಿಸಿದೆ. ಉಗ್ರಾಣಕ್ಕೆ ಬಂದ ಸಾಮಾನುಗಳ ಲೆಕ್ಕವನ್ನು ಅವ ತನ್ನ ಡೈರಿಯಲ್ಲಿ ಬರೆದಿಟ್ಟುಕೊಂಡಿದ್ದಾನೆ. ಕಂಟ್ರಾಕ್ಟರು ನೀವು; ನೀವು ಕಳಿಸಿದ ಬಿಲ್‌ಗಳನ್ನು ಮೇಜರ್ ಕನ್ನ ಅವರು ಪರಿಶೀಲಿಸಿ, ವಸ್ತುಗಳು ಕರಾರುವಾಕ್ಕಾಗಿ ಸಂದಿವೆ. ಬಿಲ್ ಹಣವನ್ನು ಪಾವತಿ ಮಾಡಿ ಎಂದು ಬರೆದು ಸಹಿ ಹಾಕಿದ್ದಾರೆ. ನಮ್ಮ ನೌಕರನ ಡೈರಿಯಲ್ಲಿ ನಲವತ್ತು ಡಬ್ಬ ತುಪ್ಪ ಬಂದಿದೆ ಎಂದಾಗ, ನಾಲ್ಕು ಸಾವಿರ ಡಬ್ಬ ತುಪ್ಪಕ್ಕೆ ಬಿಲ್ ಮಾಡಿ ಹಣ ಪಡೆದಿದ್ದೀರಿ. ಕನ್ನ ಅವರ ಸಹಿ ಆದ ಮೇಲೆ ನಿಮ್ಮ ಹೊಣೆ ಮುಗಿಯಿತು. ದಿಟ, ಆದರೆ ಎರಡು ತಿಂಗಳ ಹಿಂದೆ ಮೇ॥ ಕನ್ನ ಅವರನ್ನು ಹಠಾತ್ತನೆ ವರ್ಗಮಾಡಿ ದಿಳ್ಳಿಗೆ ಕರೆಸಿಕೊಳ್ಳಲಾಯಿತು. ನಿಮಗದು ತಿಳಿದೇ ಇದೆ. ಸ್ವಲ್ಪ ಶ್ರಮ ವಹಿಸಿ ಆತನನ್ನು ವಿಚಾರಿಸಿದೆ. ನೀವು ಆತನಿಗೆ ಇಷ್ಟಿಷ್ಟು ಹಣವನ್ನೂ ಇತರ ಸೌಕರ್ಯಗಳನ್ನು ಮಾಡಿಕೊಟ್ಟಿರೆಂದೂ, ಆ ಕಾರಣದಿಂದ ನಿಮ್ಮ ಬಿಲ್‌ಗಳಿಗೆಲ್ಲಾ ಅವ ಸಹಿ ಹಾಕಿದನೆಂದೂ ತಪ್ಪೊಪ್ಪಿಗೆ ಕೊಟ್ಟಿದ್ದಾನೆ. ಈಗವನು ಸೈನ್ಯದ ಜೈಲಿನಲ್ಲಿದ್ದಾನೆ. ತೂಕದ ಪ್ರಕಾರ ಸರಕಾರಿ ಸರಬರಾಜು ಮಾಡ್ತೀನಿ

Scanned by CamScanner

ಅಂತ ಕಂಟ್ರಾಕ್ಟ್ ಪಡೆದ ನೀವು, ಬರೀ ಹಲಸಿನಕಾಯಿ, ಪರಂಗಿಕಾಯಿ, ಇನ್ನೂ ತಿನ್ನಲಾಗದಂತಹ ಭಾರೀ ಕಾಯಿಸೊಪ್ಪುಗಳನ್ನು ಒದಗಿಸಿದ್ದೀರಿ.

"ನೀವು ಇಲ್ಲಿಗೆ ಬಂದ ಮೇಲೆ ನಿಮ್ಮ ಆಫೀಸನ್ನು ತನಿಖೆ ಮಾಡಿ ಎಂದು ಸಿಬ್ಬಂದಿಯನ್ನು ಅಲ್ಲಿ ಬಿಟ್ಟಿದ್ದೇನೆ. ಸೈನ್ಯದ ಉಗ್ರಾಣದ ನೌಕರ, ಸಾಕ್ಷಿ ನೀಡಲು ಸಿದ್ಧನಾಗಿದ್ದಾನೆ. ಅವ ನಮ್ಮ ನೌಕರ, ಆಸೆ ತೋರಿಸಿ ಅವನ ಬಾಯನ್ನು ಕಟ್ಟುವ ಹಾಗಿಲ್ಲ.

"ಈಗ ದೊರಕಿರುವ ಲೆಕ್ಕದ ಪ್ರಕಾರ ಮೇ॥ ಕನ್ನ ಅವರಿಗೆ ಏನಿಲ್ಲ ಅಂದರೂ ಹತ್ತಿರ ಹತ್ತಿರ ಒಂದು ಲಕ್ಷದಷ್ಟು ಲಂಚ ಕೊಟ್ಟಿದ್ದೀರಿ. ಹತ್ತು ಬಂದವರು ಒಂದನ್ನು ಲಂಚಕ್ಕೆ ಮೀಸಲಿಡುತ್ತಾರೆ. ಅಂದರೆ ಕನಿಷ್ಟಪಕ್ಷ ಹತ್ತು ಲಕ್ಷ ಲಾಭ ಸಂಪಾದಿಸಿದ್ದೀರಿ. ನಿಮ್ಮ ವಹಿವಾಟೆಲ್ಲ ಹದಿನೈದೇ ಲಕ್ಷ. ಅಂದ ಮೇಲೆ ಶತಾಂಶ ಅರವತ್ತು ಚಿಲ್ಲರೆಯಷ್ಟು ನುಂಗಿ ಮೂವತ್ತು ಚಿಲ್ಲರೆ ಅಷ್ಟು ಸರಬರಾಜು ಮಾಡಿದ್ದೀರಿ.

"ತನ್ನ ತಲೆಯನ್ನು ಉಳಿಸಿಕೊಳ್ಳಲು ಮೇ॥ ಕನ್ನ ಈಗ ಸಾಕ್ಷ ನೀಡಲೂ ಮುಂದೆ ಬಂದಿದ್ದಾನೆ."

ಕೊಠಡಿಯ ಬಾಗಿಲನ್ನು ಯಾರೋ ತಟ್ಟಿದಂತಾಯಿತು. ಮಿ॥ ಮೆಹ್ತಾ ಮಾತು ನಿಲ್ಲಿಸಿದರು. ಡಿ. ಐ. ಜಿ.ಯವರೇ ಹೋಗಿ ಬಾಗಿಲು ತೆಗೆದರು. ಪೋಲೀಸ್ ಇನ್‌ಸ್ಪೆಕ್ಟರ್ ಒಬ್ಬ ಅಲ್ಲಿ ನಿಂತಿದ್ದ. "ನೀವು ಸೂಚಿಸಿದಂತೆ ಸೇನಪ್ಪನವರ ಮನೆಗೆ ಅವರ ನೌಕರ ಕಾರಿನಲ್ಲಿ ಹೋದಾಗ ನಾನೂ ಮೋಟಾರು ಬೈಸಿಕಲ್ಲಿನ ಮೇಲೆ ಹಿಂಬಾಲಿಸಿದೆ. ಆತ ಮನೆಯೊಳಕ್ಕೆ ಹೋಗಿ ಮಾತನಾಡಿ ಹಿಂತಿರುಗಿದ. ಸ್ವಲ್ಪ ಹೊತ್ತು ಬಿಟ್ಟು ನಾನು ಹೋಗಿ 'ಅಮ್ಮಾವರೇ! ಸಾಹುಕಾರರು ವಸ್ತುವೊಂದನ್ನು ಕಳಿಸಿದ್ದಾರಂತೆ. ಜರೂರಾಗಿ ಇಸುಕೊಂಡು ಬಾ. ದುಕಾನಿನಲ್ಲಿ ಕಳ್ಳತನವಾಗಿದೆ. ವಿವರಗಳನ್ನು ತಿಳಿಯಲು ಪೋಲೀಸಿಗೆ ಕಂಪ್ಲೇಂಟ್ ಕೊಡಲು ಅದು ಬೇಕು' ಅಂದೆ. ಆಕೆ ಅದನ್ನು ಕೊಟ್ಟು ತುಂಬಾ ಕಳವಾಗಿದೆಯೇನಪ್ಪ ಎಂದು ಕೇಳಿದಳು. 'ಹೆದರಬೇಡೀಮ್ಮಾ ಹಿಡಿದು ಹಾಕ್ತೀವಿ' ಎಂದು ಧೈರ್ಯ ಹೇಳಿ ಬಂದೆ" ಎಂದು ಪೋಲೀಸ್ ಇನ್ಸ್‌ಪೆಕ್ಟರು ಹೇಳಿ ಕೆಂಪು ಪುಸ್ತಕವನ್ನು ಕೊಟ್ಟ.

ಅದನ್ನು ಕಂಡಾಗ ಸೇನಪ್ಪನವರು ಸ್ವಲ್ಪ ಅಸ್ವಸ್ಥರಾದಂತೆ ಕಾಣಿಸಿದರು; ಅವರೂ ಪಾಕಡಾ ಆದ್ಮಿ: ಅನುಭವಸ್ಥ, ಎಷ್ಟೋ ಬಾರಿ ತೇಲಿ ಮುಳುಗಿದವ: ಚೇತರಿಸಿಕೊಂಡು, "ಮಿ॥ ಮೆಹ್ತಾ! ನಿಮಗೆ ಸಿಕ್ಕಿದ ಸಾಕ್ಷ್ಯದ ಮೇಲೆ ನೀವು

ಮೊಕದ್ದಮೆ ಹೂಡಿ. ಈ ವಿಷಯದಲ್ಲಿ ನನ್ನ ಹೇಳಿಕೆಯೇನೂ ಈಗಿಲ್ಲ. ಏನಿದ್ದರೂ ಅದು ಕೋರ್ಟಿನಲ್ಲಿ. ನನ್ನ ಆಫೀಸನ್ನು ಶೋಧಿಸುತ್ತಿದ್ದೀರಿ. ಅಂದ ಮೇಲೆ ಸರ್ಚ್ ವಾರೆಂಟ್ ತೆಗೆದುಕೊಂಡಿರಬೇಕು. ನ್ಯಾಯ, ಕಾನೂನು ತಿಳಿದವರು ನೀವು. ಅದರ ಜತೆಗೆ ನನ್ನ ದಸ್ತಗಿರಿಯ ವಾರೆಂಟೂ ಇದೆಯೇ? ಅಥವಾ ನಾನು ಹಿಂತಿರುಗಬಹುದೇ? ಆಫೀಸಿನಲ್ಲಿ ತುಂಬಾ ಕೆಲಸಕಾರ್ಯಗಳಿವೆ" ಎಂದು ಸಮಚಿತ್ತದಿಂದಲೇ ಉತ್ತರಿಸಿದರು.

"ದಸ್ತಗಿರಿ ಮಾಡಲು ಅಗತ್ಯವಿಲ್ಲ. ಈ ಮುಚ್ಚಳಿಕೆಗೆ ಸಹಿ ಹಾಕಿ, ನ್ಯಾಯಾಲಯವು ಅಥವಾ ನಾವು ಕರೆದಾಗ ಹಾಜರಾಗುತ್ತೇನೆ ಎಂದು ಒಪ್ಪಿಕೊಂಡರೆ, ದಸ್ತಗಿರಿಯ ಅಗತ್ಯವಿಲ್ಲ. ನಮ್ಮ ಸಮಾಜದಲ್ಲಿ ನೀವು ಗಣ್ಯರು. ನಿಮ್ಮನ್ನು ಸಬ್ಜಿ ಸುಲ್ತಾನ್ ಎಂದೇ ಎಲ್ಲರು ಗೌರವಿಸುತ್ತಾರೆ" ಎಂದರು ಮಿ॥ ಮೆಹ್ತಾ. ಸೇನಪ್ಪನವರ ಧೈರ್ಯವನ್ನು ಕಂಡು ಅವರಿಗೂ ಸೈ ಅನ್ನಿಸಿತ್ತು. ಸಬ್ಜಿ ಸುಲ್ತಾನ್ ಸೇನಪ್ಪನವರು ಆಫೀಸಿಗೆ ಹಿಂತಿರುಗಲಿಲ್ಲ. ನೇರವಾಗಿ ಅಧ್ಯಕ್ಷರ ಮನೆಗೆ ಅವಸರವಸರವಾಗಿ ಹೋದರು. ಬಾಲವೇನಾದರೂ ಅಲ್ಲಾಡುತ್ತ ಇದ್ದರೆ, ಆಗ ಆ ನಾಯಿಯ ಬಾಯನ್ನು ಹಿಡಿದು ಭದ್ರಮಾಡಿದರೆ, ನಾಯಿ ಬಾಲವು ಕಾಲುಗಳ ಮಧ್ಯೆ ಮುದುಡಿಕೊಂಡು ಬಿಡುತ್ತೆ ಎನ್ನುವ ಬಾಳನೀತಿಯು ಅವರಿಗೆ ಚೆನ್ನಾಗಿ ಗೊತ್ತಿತ್ತು!

"ಸಂಪಾದಕರೇ!

ಬರುವ ಸಂಬಳಕ್ಕಿಂತ ಹೆಚ್ಚು ಖರ್ಚು ಮಾಡುತ್ತಿದ್ದರೂ, ಮೇಜರ್ ಕನ್ನ ಅವರು ಹೆಂಡತಿಯ ಮೇಲೆ ಭಾರಿ ಜವಾಬ್ದಾರಿಯನ್ನು ಹಾಕುತ್ತಿದ್ದಾರೆ ಎಂದು ಮಾಲತೀಜೀಯು ಸುದ್ದಿ ತಿಳಿಸಿದಳು. ರಾಮೋಜಪ್ಪನಿಗೆ ಹೇಳಿ ಬಿಡ್ಡಣ್ಣನನ್ನು ಸೈನ್ಯದ ಉಗ್ರಾಣ ಮತ್ತು ಅಡಿಗೆ ಮನೆಗಳಲ್ಲಿ ನೌಕರಿಗೆ ನೇಮಿಸಿದೆ. ಹೆಚ್ಚು ವಿದ್ಯೆ ಇಲ್ಲದಿದ್ದರೂ ತುಂಬಾ ಚುರುಕು ಹುಡುಗ. ಪಕ್ಕಾ ಡೈರಿಯನ್ನು ಬರೆದಿಟ್ಟ. ಬಂದಿದ್ದಕ್ಕೂ ಬಿಲ್ಲಿಗೂ ಎಷ್ಟು ಅಂತರ ಎಂದು ವಿಶದೀಕರಿಸಿದ.

ರಾಮೋಜಪ್ಪನೇ ಮಿ॥ ಮೆಹ್ತಾ ಆಗಿ ವೇಷ ಕಟ್ಟಿದ. ಮೇಜರ್ ಕನ್ನ ದಿಳ್ಳಿಗೆ ವರ್ಗವಾಗಿದ್ದು ದಿಟ. ಆದರೆ ಅಲ್ಲಿ ಸುಖವಾಗಿ ಕೆಲಸದಲ್ಲೇ ಇದ್ದಾನೆ. ಅನ್ಯಾಯವನ್ನು ಮಾಡಿದವರು ಈ ಲೋಕದಲ್ಲಿ ಮಜ ಮಾಡಿಯೇ ಮಾಡ್ತಾರೆ. ಪರಲೋಕದಲ್ಲಿ ಸಂಕಟಪಡಬಹುದು. ಪೋಲೀಸ್ ಐ. ಜಿ.ಗೂ ರಾಮೋಜಪ್ಪನ ಗುರ್ತು ಸಿಗಲೇ ಇಲ್ಲ. ನಮ್ಮ ಹಳೇ ಶಿಷ್ಯ ಮುಕುಂದ

Scanned by CamScanner

ಸಿ. ಬಿ. ಐ.ನಲ್ಲಿ ಕೆಲಸಕ್ಕಿರುವುದರಿಂದ ತುಂಬಾ ಸಹಾಯವಾಯಿತು. ಹಾಗಾಗಿ ಪೋಲೀಸ್ ನೆರವೂ ಸಂಪೂರ್ಣವಾಗಿ ದೊರೆಯಿತು.

ಕೆಂಪು ಪುಸ್ತಕ, ದಿಟವಾದ ಲೆಕ್ಕವನ್ನು ಬರೆದಿಟ್ಟಿದ್ದ ಸೇನಪ್ಪನ ಸ್ವಂತ ಪುಸ್ತಕವು ನಮಗೆ ಸಿಕ್ಕಿದಾಗ, ಸೇನಪ್ಪ ಯಾವ ಸಬೂಬನ್ನು ಕೊಡಲೂ ತೊಡಗಲೇ ಇಲ್ಲ. ನೇರವಾಗಿ ಅಧ್ಯಕ್ಷರ ಮನೆಗೆ ಹೋಗಿ "ನಿಮಗೆ ಅಷ್ಟೆಲ್ಲಾ ಹಣ ತೆತ್ತೆ. ಈಗ ನಾನು ಹೀಗೆ ಸಿಕ್ಕಿಬಿದ್ದಿದ್ದೇನೆ. ದಿಳ್ಳಿಯಲ್ಲಿ ನೀವು ವಶೀಲಿ ಹಾಕಿ ಮಿ॥ ಮೆಹ್ತಾ ಅವರ ವರ್ಗ ಮಾಡಿಸಬೇಕು" ಎಂದು ಒತ್ತಾಯಪಡಿಸಿದ.ಸಿ.ಬಿ.ಐ .ನ ಮೆಹ್ತಾರನ್ನು ಯಾರೂ ಮುಟ್ಟುಕ್ಕಾಗುಲ್ಲ. ಅವರು ಪ್ರಧಾನ ಸಚಿವರ ಬೆಂಬಲ ಪಡೆದವರು. ಮೆಹ್ತಾ ಕರಾಚೂರಿ ಮನುಷ್ಯ ಅಂತ ಪ್ರತೀತಿ. ಅದರೂ ಎಂತೆಂತಹ ಮನುಷ್ಯರನ್ನೂ ಸಾಕಷ್ಟು ತೆತ್ತು ಬುಟ್ಟಿಗೆ ಹಾಕಿಕೊಳ್ಳಬಹುದು. ದಿಳ್ಳಿಗೆ ಹೋಗಿದ್ದಾಗ ಮಾಲತೀಜೀ ಮೆಹ್ತಾ ಅವರ ಪರಿಚಯವನ್ನು ಮಾಡಿಕೊಂಡಿದ್ದಳು. 'ಅವಳನ್ನು ಹಿಡಿ' ಎಂದು ಅಧ್ಯಕ್ಷರು ತಮ್ಮ ಕೈಕೊಡವಿಕೊಂಡರು.

ಮಾಲತೀಜೀಯನ್ನು ಸೇನಪ್ಪ ಭೇಟಿ ಮಾಡಿದ. ಮಾಲತೀಜೀಯು ಮಿ॥ ಮೆಹ್ತಾ ಅವರನ್ನು ಮಜೇಂದ್ರ ಭವನದಲ್ಲಿ ಭೇಟಿಯಾದಳು. ನಂತರ ಬಂದು ಮುಗುಮ್ಮಾಗಿ ಹೇಳಿದಳು, "ಒಟ್ಟು ಹದಿನೈದಾದರೂ ಬಂದಿರಬೇಕು. ಅವರಲ್ಲಿ ಅರ್ಧ ಕೊಟ್ಟರೆ, ಮೊಕದ್ದಮೆಯ ಫೈಲನ್ನು ಅದಬ್ ಮಾಡಿಬಿಡ್ತೀನಿ. ಕೆಂಪು ಪುಸ್ತಕವನ್ನು ಹಿಂತಿರುಗಿ ಕೊಡ್ತೀನಿ ಎಂದರು ಮೆಹ್ತಾ", ಎಂದು ಸೂಚನೆ ಕೊಟ್ಟಳು. ನಗದು ಏಳೂವರೆ ಕೊಟ್ಟು ಕೆಂಪು ಪುಸ್ತಕವನ್ನು ಪಡೆದು ಮಾರನೆ ರಾತ್ರಿ ಸೇನಪ್ಪ ಮಜೇಂದ್ರ ಭವನದಿಂದ ಮನೆಗೆ ಹಸನ್ಮುಖನಾಗಿ ಹಿಂತಿರುಗಿದ.

ಒಟ್ಟು ಬಂದಿದ್ದು ಏಳೂವರೆ ಲಕ್ಷ. ಪೋಲೀಸ್ ಐ. ಜಿ. ಇತ್ಯಾದಿಗಳಿಗೆ ರಾಮೋಜಪ್ಪ ಮಿ॥ ಮೆಹ್ತಾ ಆಗಿ ಆತಿಥ್ಯ ನಡೆಸಿದ್ದೂ ಸೇರಿ, ಮಜೇಂದ್ರ ಭವನದಲ್ಲಿ ರಾಮೋಜಪ್ಪನವರ ಖರ್ಚು 5,000. ಬಿಡ್ಡಣ್ಣನ ಹೆಂಗಸು ಆಂಜನೇಯನ ಗುಡಿಯ ಸುಫರ್ದು ಮಾಡಬೇಕು ಅಂತಿದ್ದಳು; ಅದಕ್ಕೆ 2,000ರೂ. ಬಿಡ್ಡಣ್ಣನಿಗೆ 5,000ರೂ. ಕೊಟ್ಟು ಆ ಮನೆಯನ್ನು ಸ್ವಂತ ಮಾಡಿಕೋ ಅನ್ನಬೇಕು. ಮಾಲತೀಜೀ 3,000 ಖರ್ಚಾಯಿತು ಅಂದಳು. ಅದರಲ್ಲಿ ನಾ ಕೊಂಡ ಹೊಸ ಸೀರೆಗಳ ಖರ್ಚು ಸೇರಿದೆ ಎಂದು ವಾಮಾನಿಕೆ

ಯಿಂದ ಹೇಳಿದಳು. ಅದೆಲ್ಲಾ ಈ ಕೆಲಸಕ್ಕೆ ತಾನೆ ಎಂದು ನಾನು ಸಮಾಧಾನ ಮಾಡಬೇಕಾಯಿತು.

ಮಿಕ್ಕ ಏಳು ಲಕ್ಷ ಮೂವತ್ತೈದು ಸಾವಿರವನ್ನು ಪೂಜಾರಪ್ಪನವರ ಕಾಲ ಮೇಲೆ ಹಾಕಿ, ಈ ಪ್ರಸಂಗದ ಕಾಣಿಕೆ ಎಂದು ಅವರ ಕಾಲಿಗೆ ನನ್ನ ತಲೆಯನ್ನು ತಾಕಿಸುತ್ತೇನೆ. ಅವರಿಗೆ ಕೊಟ್ಟ ವಚನದಂತೆ ಪ್ರಕಟಣೆಯ ಕೃಪೆಗಾಗಿ ಕಳಿಸುತ್ತಿದ್ದೇನೆ."

"ಬುದ್ಧೋಜಿ"

Scanned by CamScanner

ಜೊಟ್ಟೋರ್ಜಿ ಹಿಡಿದ ಡೈರಿ

ಕೆಂಪು ತ್ರಿಕೋಣದ ಲಾಂಛನವನ್ನು ಹೊಂದಿದ್ದ ಜೀಪು ಹೊಳ್ಳಂಗಡಿಯ ಸರಕಾರೀ ದವಾಖಾನೆಯ ಮುಂದೆ ಬಂದು ನಿಂತಾಗ ಬೆಳಿಗ್ಗೆ ಹತ್ತರ ಸಮಯ ವಾಗಿತ್ತು. ಜೀಪು ಬಂದು ನಿಂತ ಶಬ್ದವನ್ನು ಕೇಳಿ ದವಾಖಾನೆಯ ಒಳಗಿನಿಂದ ಡಾಕ್ಟರು ಹೊರಬಂದು ಜೀಪಿನ ಬಳಿಗೆ ನಡೆದರು. ಆ ವೇಳೆಗೆ ಜೀಪಿನಲ್ಲಿ ಕುಳಿತಿದ್ದ ಮಹಿಳೆಯು ಇಳಿದಿದ್ದಳು.

"ಸುಮನ್ ನಿಮಗಾಗಿ ಬೆಳಿಗ್ಗೆ ಎಂಟರಿಂದ ಒಂಭತ್ತರ ತನಕ ಕಾದಿದ್ದಳು. ಯಾವ ಕಾರಣದಿಂದಲೋ ನೀವು ಬರುವುದು ಹೊತ್ತಾಗಬಹುದು ಎಂದು ಮನೆಗೆ ಹೋದಳು. ಬಂದ ಕೂಡಲೇ ಮನೆಗೆ ಕಳಿಸಿ ಎಂದು ಹೇಳಿದ್ದಾಳೆ. ಎಲ್ಲಾ ಅಣಿಯನ್ನೂ ಮನೆಯಲ್ಲಿ ಮಾಡಲಾಗಿದೆ. ಆಸ್ಪತ್ರೆ ದಾದಿಯನ್ನು ಮನೆ ತೋರಿಸಲು ಕಳಿಸುತ್ತೀನಿ" ಎಂದರು ಡಾಕ್ಟ್ರು.

ಆಸ್ಪತ್ರೆಯ ದಾದಿಯನ್ನು ಜೀಪಿನಲ್ಲಿ ಕೂರಿಸಿಕೊಂಡು ಡಾಕ್ಟರಿಗೆ ಸಾಂಪ್ರದಾಯಿಕ ವಂದನೆಯನ್ನು ಅರ್ಪಿಸಿ ಮಹಿಳೆಯು ಡಾಕ್ಟರ ಮನೆಗೆ ಹೋದಳು.

ಬಲು ಆದರದಿಂದ ಸುಮನ್ ಕಾಲೇಜ್ ಗೆಳತಿಯನ್ನು ಸ್ವಾಗತಿಸಿದಳು.

"ನಾನನಕ ಸಾಂಪ್ರದಾಯಿಕವಾಗಿ ಮದುವೆಯಾಗಿ ಗಂಡ ಹೇಳಿದ ಹಾಗೆ ಕೇಳಿಕೊಂಡು ಬಿದ್ದಿದ್ದೀನಿ. ನೀನಾದರೂ ಸ್ವತಂತ್ರ ಜೀವನ ನಡೆಸುತ್ತಾ ಇನ್ನೊಬ್ಬರ ಅಂಕೆ ಶಿಕ್ಷೆಗೆ ಸಿಗದೇ ಸುಖವಾಗಿದ್ದೀ, ಮಾಲತೀ! ನಿನ್ನ ವಿಷಯ ವನ್ನು ಮತ್ತು ಕಾರುಬಾರನ್ನು ಪತ್ರಿಕೆಗಳಲ್ಲಿ ಓದಿ ತಿಳಿದುಕೊಂಡಿದ್ದೀನಿ" ಎಂದು ಅನ್ನುತ್ತಾ ಮಾಲತೀಜೀಯನ್ನು, ಅವಳಿಗೆಂದು ಸಿದ್ಧಪಡಿಸಲಾಗಿದ್ದ ಕೊಠಡಿಗೆ ಕರೆದುಕೊಂಡು ಹೋದಳು.

"ನಿನಗನಕ ತಂದೆ ತಾಯಿ ಇದ್ದರು. ಪತ್ತೆ ತರದೂದು ಮಾಡಿ ವರನನ್ನು

ಹುಡುಕಿ ಮದುವೆ ಮಾಡಿದರು. ನನಗ್ಯಾರಿದ್ದಾರೆ. ಸುಮನ್ ! ತಬ್ಬಲಿ, ತನ್ನ ಪಾಡು ತಾನು ನೋಡಿಕೊಳ್ಳದಿದ್ದರೆ ಬಾಳುವುದು ಹೇಗೆ? ಅದಕ್ಕೇ ಸಾರ್ವ ಜನಿಕ ಸೇವೆ ಅಂತ ಆಟ ಕಟ್ಟಿದೆ. ಅದೂ ಒಂದು ತರಹಾ ಸುಖದ ಬಾಳೇ ಅನ್ನು. ಆದರೆ ನಿನಗೆ ಸಿಕ್ಕಿದ ಹಾಗೆ ನನಗೂ ಒಂದು ಸಾಧು ಗಂಡ ಸಿಕ್ಕಿದರೆ, ಚೆನ್ನೇನೋ ಅನಿಸುತ್ತೆ" ಎಂದಳು ಮಾಲತಿ.

"ನನ್ನ ಗಂಡ ಸಾಧು ಅಂತ ಯಾರು ಹೇಳಿದರೆ?" ಎಂದು ಸುಮನ್ ಕೇಳಿದಳು.

"ಮಿತ ಸಂತಾನದ ಪ್ರಚಾರ ಕಾರ್ಯಕ್ಕೆ ಕೈ ಹಾಕಿದ ಮೇಲೆ ವೈದ್ಯ ಇಲಾಖೆಯವರ ಪರಿಚಯವು ಸಾಕಷ್ಟು ಆಗಿದೆ. ನಿನ್ನ ಗಂಡ ಬಹಳ ಸಾಧು; ಮೃದು ಸ್ವಭಾವ. ಯಾರಾದರೂ ಅತ್ತರೆ ತಾನು ಕರಗಿಹೋಗುತ್ತಾನೆ ಎಂಬ ಪ್ರಸಿದ್ಧಿಯನ್ನು ಪಡೆದಿದ್ದಾನೆ. ನಿನ್ನದೂ ಅದೇ ಸ್ವಭಾವ. ಕಾಲೇಜಿನಲ್ಲಿ ಪ್ರೊಫೆಸರು ಒಮ್ಮೆ ನನ್ನ ಬೈದರು ಅಂತ ನೀನು ಹನಿಗಣ್ಣಾಗಲಿಲ್ಲವೇ? ದೇವರು ಸರಿಯಾಗಿ ಗಂಟು ಹಾಕಿದ್ದಾನೆ. ಆದರೂ ಈಗಿನ ನಾಜೂಕು ಕಾಲ ದಲ್ಲಿ ಮೋಸ ತಟವಟ ತಾಂಡವವಾಡುವ ಕಾಲದಲ್ಲಿ ಬಾಳಬೇಕಾದರೆ ನಿಮ್ಮಂತಹವರಿಗೆ ತುಂಬಾ ಕಷ್ಟವಾಗಿರಬೇಕು ಅನ್ನಿಸುತ್ತೆ" ಎಂದಳು ಮಾಲತಿ.

ಹೀಗೆಯೇ ಮಾತನಾಡುತ್ತಾ ಕಾಲೇಜು ದಿನಗಳನ್ನು ಜ್ಞಾಪಿಸಿ ಕೊಳ್ಳುತ್ತಾ, ಒಮ್ಮೊಮ್ಮೆ ಕೆಂಪೇರುತ್ತಾ, ಸ್ನಾನ, ತಿಂಡಿ ತೀರ್ಥ ಎಲ್ಲವನ್ನೂ ಮುಗಿಸಿದರು. ಮಧ್ಯಾಹ್ನ ಒಂದರ ಸಮಯಕ್ಕೆ ದವಾಖಾನೆಯಿಂದ ಡಾಕ್ಟರು ಊಟಕ್ಕೆ ಬರುವತನಕ ಇಬ್ಬರೂ ಅಡಿಗೆ ಮನೆಯಲ್ಲಿ ಹರಟೆ ಕೊಚ್ಚುತ್ತಿದ್ದರು. ನೆನಪಿನ ತುರುಬನ್ನು ತುರಿಸಿಕೊಂಡರು.

ಡಾಕ್ಟರು ಒಬ್ಬರೇ ಊಟಕ್ಕೆ ಕುಳಿತರು. "ಸಂಕೋಚ ಪ್ರಕೃತಿ ಕಣೇ ಅವರಿಗೆ, ಯಾರಾದರೂ ಅಪರಿಚಿತ ಹೆಂಗಸರು ಇದ್ದರೆ ಸರಿಯಾಗಿ ಊಟ ವನ್ನೇ ಮಾಡುವುದಿಲ್ಲ. ನಾವಿಬ್ಬರೂ ಆಮೇಲೆ ಉಂಡರಾಯಿತು" ಎಂದು ಸುಮನ್ ಹೇಳಿದ್ದಳು. ಆದರೂ ತಾನು ಬಂದ ಕೆಲಸಕ್ಕೆ ಡಾಕ್ಟರ ಸಹಾಯವು ಅಗತ್ಯವಿದ್ದುದರಿಂದ, ಮಾಲತಿ ಬಾಗಿಲ ಬಳಿ ನಿಂತು ಮಾತನಾಡಿದಳು.

"ಈ ಗ್ರಾಮದ ಮಹಿಳೆಯರನ್ನು ಸಭೆ ಸೇರಿಸಿ, ಮಿತಸಂತಾನದ ವಿಷಯವನ್ನು ತಿಳಿಸಬೇಕು. ಅವರುಗಳು ಉತ್ಸಾಹಭರಿತರಾಗುವಂತೆ ಮಾಡ

Scanned by CamScanner

ಬೇಕು. ಕಳೆದ 2 ವರ್ಷಗಳಿಂದ ನೀವು ಇಲ್ಲಿ ಇದ್ದೀರಿ. ಕಾರಣ ನಿಮಗೆ ವಿವರಗಳು ಗೊತ್ತಿರಬೇಕು" ಎಂದಳು.

"ನಮ್ಮ ಗ್ರಾಮದಲ್ಲಿ ಮತ್ತು ಸುತ್ತಮುತ್ತಲಿನ ಗ್ರಾಮಗಳ ಪರಿಚಯವನ್ನು ಶ್ರೀ ನಾಯ್ಡು ಅವರು ಚೆನ್ನಾಗಿ ಮಾಡಿಕೊಂಡಿದ್ದಾರೆ. ದವಾಖಾನೆಗೆ ಅವರನ್ನು ಸಂಜೆ ನಾಲ್ಕಕ್ಕೆ ಬರಹೇಳಿದ್ದೇನೆ. ಅವರು ನಿಮಗೆ ನೆರವಾಗುತ್ತಾರೆ. ದವಾಖಾನೆಗೆ ಬಂದ ಹೆಂಗಸರನ್ನೂ ನೀವು ಮಾತನಾಡಿಸಿ, ಪ್ರಚಾರ ಮಾಡಬಹುದು. ಆಸ್ಪತ್ರೆ ದಾದಿಯು ತುಂಬಾ ಹುಷಾರು. ಆಕೆಯೂ ಸಹಾಯ ಮಾಡುತ್ತಾಳೆ" ಎಂದು ಡಾಕ್ಟರ್ ಹೇಳಿದರು. ಇಷ್ಟು ಹೇಳಿದುದಕ್ಕೆ ಆತ ಬೆವೆತುಹೋಗಿದ್ದ. ನಾಲ್ವತ್ತರ ಪ್ರಾಯದ ಡಾಕ್ಟರಾಗಿದ್ದರೂ ಸಾರನ್ನದ ತುತ್ತನ್ನು ನೋಡುತ್ತಾ ಮಾತನಾಡಿದ್ದ. ತುಂಬಾ ಮೃದು ಸ್ವಭಾವ. ಬಲು ನಾಚಿಕೆ.

ಅಡಿಗೆಯ ಮನೆಯಲ್ಲಿ ಊಟ ಮಾಡುತ್ತಿದ್ದಾಗ ಸುಮನ್ ಹೇಳಿದ್ದಳು: "ಈ ಪ್ರಾಂತದಲ್ಲೆಲ್ಲಾ ನಾಯ್ಡು ಅವರು ತುಂಬಾ ಜನಪ್ರಿಯರಾಗಿದ್ದಾರೆ. ತುಂಬಾ ಉದಾರಿಗಳು. ಶ್ರೀಮಂತರೂ ಹೌದು. ಬಡವರ ಮನೆಗಳಲ್ಲಿ ಕಾಯಿಲೆ ಕಸಾಲೆ ಆದರೆ ಅಂತಹ ಸುದ್ದಿಯನ್ನು ಡಾಕ್ಟರಿಂದ ಕೇಳಿಸಿಕೊಂಡಾಗ, ತಾವೇ ಖುದ್ದು ಅವರ ಮನೆಗಳಿಗೆ ಹೋಗಿ ಪಥ್ಯದ ಏರ್ಪಾಡು, ಇತರ ಸಹಾಯಗಳನ್ನು ಮಾಡಿಕೊಡುತ್ತಾರೆ. ಬಡವರ ಪಾಲಿಗೆ ಅವರೇ ದೇವರು ಅಂತ ಜನ ಅನ್ನುತ್ತಾರೆ. ಅವರ ಮಾತು ಎಂದರೆ ಬಹಳ ಜನಕ್ಕೆ ಸುಗ್ರೀವಾಜ್ಞೆ ಇದ್ದ ಹಾಗೆ. ಅವರನ್ನು ನೀನು ಬುಟ್ಟಿಗೆ ಹಾಕಿಕೊಂಡರೆ ನಿನ್ನ ಕೆಲಸ ಬಲು ಸುಲಭ" ಎಂದು.

ಊಟವಾದ ಮೇಲೆ ಒಂದು ಅರ್ಧ ತಾಸು ಇಬ್ಬರೂ ಮಲಗಿದರು.

* * *

ನಾಲ್ಕು ಗಂಟೆಯ ವೇಳೆಗೆ ಮಾಲತೀಜೀ ದವಾಖಾನೆಗೆ ಹೋದಳು. ಆ ಮೊದಲೇ ಡಾಕ್ಟರು ನಾಯ್ಡು ಅವರ ಮನೆಗೆ ಹೋಗಿ, ಅವರನ್ನೂ ಕರೆದುಕೊಂಡು ದವಾಖಾನೆಯನ್ನು ಸೇರಿದ್ದರು. ಮಾಲತೀಜಿಯವರ ಪರಿಚಯವನ್ನು ಮಾಡಿಕೊಟ್ಟ ಮೇಲೆ, ನೀವು ಅಗತ್ಯವಾಗಿ ಸಹಕರಿಸಬೇಕು ಎಂದು ನಾಯ್ಡು ಅವರಿಗೆ ಹೇಳಿ, ರೋಗಿಗಳನ್ನು ನೋಡಲು ಹೊರಕೋಣೆಗೆ ಡಾಕ್ಟರು ಹೋದರು.

ನಾಯ್ಡು ಅವರು ಸುಮಾರು ವಾಚಾಳಿಗಳು. ಸಂತಾನ ನಿಯಂತ್ರಣದ ಆತ್ಯಗತ್ಯವನ್ನು ಕುರಿತು ಅವರೇ ಪುಟ್ಟ ಭಾಷಣವನ್ನು ಮಾಡಿ ಆ ಕಾರ್ಯಕ್ಕಾಗಿಯೇ ಬಂದಿದ್ದ ಮಾಲತೀಜೀಗೇ ಅಚ್ಚರಿಯನ್ನು ಉಂಟುಮಾಡಿದರು. ನಾಯ್ಡು ಅವರ ಸಹಕಾರವು ಪೂರ್ಣವಾಗಿ ದೊರೆಯುತ್ತದೆ ಎಂಬ ಧೈರ್ಯ ಬಂದಿತ್ತು, ಮಾಲತೀಜೀಗೆ.

ಎರಡು ದಿನಗಳು ಬೆಳಿಗ್ಗೆ, ಮಧ್ಯಾಹ್ನ, ಸಾಯಂಕಾಲಗಳಲ್ಲಿ ಕೆಂಪು ತ್ರಿಕೋಣದ ಪ್ರಚಾರಕಾರ್ಯವು ಯಶಸ್ವಿಯಾಗಿ ನಡೆಯಿತು. ಮಧ್ಯ ವಯಸ್ಸಿನ ಹೆಂಗಸರು ಅಷ್ಟು ಮುತುವರ್ಜಿ ವಹಿಸದಿದ್ದರೂ, ತರುಣಿಯರು ಮತ್ತು ಮುದುಕಿಯರು ಬಲು ಶ್ರದ್ಧೆಯನ್ನು ತೋರಿಸಿದರು.

ಮೂರನೆಯ ಸಂಜೆ ಮಾಲತೀಜೀ ತನ್ನ ಊರಿಗೆ ಹಿಂತಿರುಗಬೇಕು. ನಾಯ್ಡು ಅವರ ಒತ್ತಾಯದ ಮೇಲೆ, ಆ ಮಧ್ಯಾಹ್ನ ಮಾಲತೀಜೀ ಮತ್ತು ಡಾಕ್ಟರ ದಂಪತಿಗಳು ನಾಯ್ಡು ಅವರ ಮನೆಯಲ್ಲಿ ಔತಣಕ್ಕೆ ಒಪ್ಪಿಕೊಂಡರು.

ಮಾಲತೀಜೀ ಮತ್ತು ಸುಮನ್ ಮಧ್ಯಾಹ್ನ ಹನ್ನೆರಡು ಹನ್ನೆರಡೂವರೆಯ ಹೊತ್ತಿಗೆ ನಾಯ್ಡು ಅವರ ಮನೆಗೆ ಹೋದರು. ಆ ಮನೆಯ ಹೆಂಗಸರ ಪರಿಚಯವನ್ನು ಮಾಡಿಕೊಳ್ಳಲು ಅನುಕೂಲವೆಂದು ಸ್ವಲ್ಪ ಮುಂಚೆಯೇ ಹೋದರು.

ಒಂದು ಗಂಟೆಯಾಯಿತು. ಊಟಕ್ಕೆ ಡಾಕ್ಟರು ಇನ್ನೂ ಬಂದಿರಲಿಲ್ಲ. "ಬೇಗ ಬರುತ್ತೀನಿ" ಎಂದು ಹೇಳಿದ್ದರು. ಆದರೂ ಯಾಕೆ ಇನ್ನೂ ಡಾಕ್ಟರು ಬರಲಿಲ್ಲ? "ದವಾಖಾನೆಗೆ ಹೋಗಿ ಕರೆದುಕೊಂಡೇ ಬರುತ್ತೀನಿ" ಎಂದನ್ನುತ್ತಾ ನಾಯ್ಡು ಅವರು ಹೊರಹೊರಟರು. ಸ್ವಲ್ಪ ಹೊತ್ತಿನಲ್ಲೇ ಒಂಟಿಯಾಗಿ ಹಿಂತಿರುಗಿದರು.

"ದವಾಖಾನೆಗೆ ಬಂದಿದ್ದವರೊಂದಿಗೆ, ತುಂಬಾ ಕಠಿಣ ಸ್ಥಿತಿಯಲ್ಲಿರುವ ರೋಗಿಯೊಬ್ಬನನ್ನು ನೋಡಲು ತುರ್ತಾಗಿ ಡಾಕ್ಟರು, ಬ್ಯಾಟರಾಯನ ಪಾಳ್ಯಕ್ಕೆ ಹೋದರಂತೆ. ಆರು ಮೈಲಿ ದೂರ ಅದು. ರಸ್ತೆ ಚೆನ್ನಾಗಿಲ್ಲ. ಜೋಡೆತ್ತಿನ ಗಾಡಿಯಲ್ಲಿ ಹೋಗಿದ್ದಾರೆ. ಅವರು ಬರುವುದಕ್ಕೆ ಕಾಯುವುದು ಬೇಡ ಎಂದು ಸುದ್ದಿ ತಿಳಿಸು ಎಂದು ಕಾಂಪೌಂಡರಿಗೆ ಹೇಳಿ ಹೋದರಂತೆ. ಇನ್ನು ಸಂಜೆಗೋ ರಾತ್ರಿಗೋ ಪ್ರಾಣಿ ಹಿಂತಿರುಗುತ್ತದೆ. ನಾವು ಊಟವನ್ನು ಮಾಡಿ ಬಿಡೋಣ" ಎಂದು ಹೇಳಿ ಇದ್ದವರನ್ನು ಊಟಕ್ಕೆ ಎಬ್ಬಿಸಿದರು.

Scanned by CamScanner

ಊಟ ಮಾಡುತ್ತಿರುವಾಗ ಡಾಕ್ಟರರನ್ನು ಬಹಳವಾಗಿ ಪ್ರಶಂಸೆಮಾಡಿದರು ನಾಯ್ಡು ಅವರು. "ರೋಗಿಗಳ ಉಪಚಾರಕ್ಕೆ ಮತ್ತು ಶುಶ್ರೂಷೆಗೆ ನೀವು ತುಂಬಾ ನೆರವಾಗುತ್ತೀರಿ; ಹಳ್ಳಿಗಳಲ್ಲಿ ಕೆಲಸದ ಮೇಲೆ ಸುತ್ತಾಡುವಾಗ ಕಾಯಿಲೆ ಬಿದ್ದವರನ್ನು ಕಂಡರೆ ಅಥವಾ ಅವರ ಸುದ್ದಿ ತಿಳಿದರೆ ಅವರ ಮನೆಗಳಿಗೆ ಹೋಗಿ ಸಹಾಯ ಮಾಡುತ್ತೀರಿ ಎಂದು ಜನರೆಲ್ಲರೂ ನಿಮ್ಮನ್ನೂ ಹೊಗಳುತ್ತಾರೆ"ಎಂದು ಮಾಲತೀಜೀಯು ಆತಿಥೇಯನನ್ನು ಹೊಗಳಿದರು.

"ತಾಲ್ಲೂಕು, ಹಳ್ಳಿಗಳಲ್ಲಿ ವಾಸ ಮಾಡುವವರು ಒಬ್ಬರಿಗೊಬ್ಬರು ನೆರವಾಗುವುದು ಅಗತ್ಯ. ಅಂತಹ ಹೇಳಿಕೊಳ್ಳುವ ಸೇವೆಯನ್ನು ನಾನೇನೂ ಮಾಡಿಲ್ಲ. ರೋಗಿ ನರಳುತ್ತಾನೆ. ಡಾಕ್ಟರು ಚಿಕಿತ್ಸೆ ಮಾಡುತ್ತಾರೆ. ಈ ಮಧ್ಯೆ ಎರಡು ಒಳ್ಳೇ ಮಾತುಗಳನ್ನು ನಾನು ಆಡುತ್ತೀನಿ. ಅಷ್ಟೇ !"

"ಆದರೆ ನೀವು ಷಹರಿನ ವಿದ್ಯಾವಂತರು. ಈ ಗ್ರಾಮಗಳಿಗೆಲ್ಲಾ ಬಂದು ಬಡ ಸೋದರಿಯರ ಒಳಿತಿಗಾಗಿ, ಎಷ್ಟು ಕಷ್ಟಪಡುತ್ತೀರಿ ! ನಿಮ್ಮದು ಅಂದರೆ ದಿಟವಾದ ಸೇವೆ" ಎಂದು ಮಾಲತೀಜೀಯನ್ನು ನಾಯ್ಡು ಅವರು ಹೊಗಳಿದರು.

ಊಟ ಮುಗಿಯಿತು. ಹಜಾರದಲ್ಲಿ ಎಲಡಿಕೆಗಾಗಿ ಎಲ್ಲರೂ ಕುಳಿತಿದ್ದರು. ನಾಯ್ಡು ಅವರ ಹೆಂಡತಿಯು ಸೊಗಸು ಕಾಣುತ್ತಿದ್ದ ಪರಂಗಿ ಹಣ್ಣನ್ನು ಹೆಚ್ಚಿ ತಂದಿಟ್ಟರು. "ಹಳ್ಳಿಗಳ ಕಡೆಯಲ್ಲಿ ಸಿಗುವ ಪರಮಾಯಿಶಿ ಹಣ್ಣು ಅಂದರೆ ಇದು ಅಥವಾ ಬಾಳೆಯ ಹಣ್ಣು. ಈ ಕೊಂಪೆಯಲ್ಲಿ ಇನ್ನು ಯಾವುದೂ ಸಿಗುವುದಿಲ್ಲ. ಆದರೂ ನಮ್ಮ ಹಿತ್ತಲಿನ ಪರಂಗಿ ಹಣ್ಣು ಬಲು ರುಚಿಯಾಗಿರುತ್ತದೆ" ಎಂದು ಹೇಳುತ್ತಾ ಮಾಲತೀಜೀಯ ಎದುರಿಗೆ ಹಣ್ಣಿನ ತಟ್ಟೆಯನ್ನು ಇಟ್ಟರು.

ಎರಡು ಹೋಳುಗಳನ್ನು ಮಾಲತೀಜೀ ತಿಂದಿದ್ದಳು.

ಅಷ್ಟರಲ್ಲೇ ಡಾಕ್ಟರು ಬಂದರು. ಲೊಟಗುಟ್ಟುತ್ತಲೇ ಬಂದರು.

"ನೋಡಪ್ಪಾ ನಾಯ್ಡು ! ಬ್ಯಾಟರಾಯನ ಪಾಳ್ಯದಲ್ಲಿ ನರಸಿಂಹಯ್ಯ ಇರಲಿಲ್ಲವೇ ! ಅವನಿಗೆ ಡಯಾಬಿಟೀಸ್ ಇತ್ತು. ಕ್ಷಯ ಬಡಿದಿತ್ತು. ಎಷ್ಟು ಹೇಳಿದರೂ ಚಿಕಿತ್ಸೆಯನ್ನು ಮುಂದುವರಿಸಲಿಲ್ಲ. ಒಂದು ತಿಂಗಳು ಚಿಕಿತ್ಸೆ ಪಡೆದ. ಅನಂತರ ಇತ್ತ ಬರಲೇ ಇಲ್ಲ. ಯಾವುದೋ ನಾಟಿ ಮದ್ದು ಮಾಡಿಕೊಳ್ಳುತ್ತಿದ್ದಾನೆ ಅಂತ ಪಾಳ್ಯದಿಂದ ಬಂದಿದ್ದ ಇತರರು ಹೇಳಿದರು. ಈವತ್ತು ಊಟಕ್ಕೆ ನಿಮ್ಮನೆಗೆಂದು ಹೊರಡುವಾಗ, ಅವನ ಮಗ ಬಂದು ಸುಸ್ತಾಗಿದ್ದಾರೆ,

ನೀವು ಬರಲೇಬೇಕು ಎಂದು ಅತ್ತ. ಕೈಲಾದದ್ದನ್ನು ಮಾಡೋಣ, ತಿಳಿಯದೇ ಇದ್ದ ಜನ, ಅವರ ಮೇಲೆ ರೇಗಿ ಏನು ಪ್ರಯೋಜನ ಎಂದು ಅವ ತಂದಿದ್ದ ಜೋಡೆತ್ತಿನ ಗಾಡಿಯಲ್ಲಿ ಹೊರಟೆ. ಒಂದು ಮೂರು ಮೈಲು ಹೋಗಿರಬಹುದು, ಬೈಸಿಕಲ್ಲಿನ ಮೇಲೆ ಒಬ್ಬ ಹುಡುಗ ಬಂದು "ಅಜ್ಜ ತೀರಿಕೊಂಡರು" ಎಂದು ನರಸಿಂಹಯ್ಯನ ಮಗನಿಗೆ ಹೇಳುತ್ತಾ ಬೊಬ್ಬೆ ಹೊಡೆದ. ಸತ್ತಮೇಲೆ ನಾನು ಹೋಗಿ ಏನು ಮಾಡುವುದು ಅಂತ, ಹಿಂತಿರುಗಿ ಬಂದೆ. ಡಬ್ಬಲ್ ರೈಡ್ ಮಾಡುತ್ತ ಮಗನೊಂದಿಗೆ ನರಸಿಂಹಯ್ಯನ ಮಗ ಪಾಳ್ಯದ ಕಡೆಗೆ ಹೋದ. ಜೋಡೆತ್ತಿನ ಗಾಡಿಯ ಕುಲುಕಾಟದಿಂದ ಮೈ ಜಗ್ಗಿಹೋಯ್ತು. ಊಟವೇನಾದರೂ ಮಿಕ್ಕಿದ್ದರೆ ಉಂಡು ಹೋಗೋಣ ಅಂತ ಬಂದೆ. ಈ ದರಿದ್ರ ಕೆಲಸಕ್ಕೆ ಯಾಕೆ ಸೇರಿಕೊಂಡೆನೋ ?" ಎಂದು ಹಳಿದುಕೊಳ್ಳುತ್ತಾ ಹಣೆಯೊರೆಸಿಕೊಂಡರು.

ನಾಯ್ಡು ಅವರ ಹೆಂಡತಿ ಬೇಗ ಒಳಕ್ಕೆ ಹೋಗಿ ಡಾಕ್ಟರ ಊಟಕ್ಕೆ ಅಣಿಮಾಡಲು ಪ್ರಾರಂಭಿಸಿದರು. ಡಾಕ್ಟರೂ ಕೆಲವು ನಿಮಿಷಗಳಲ್ಲಿ ಊಟಕ್ಕೆ ಹೋದರು.

* * *

ಮನೆಯ ಗೇಟಿಗೆ ಎರಡು ಭರ್ಜರಿ ಬಾಳೆಕಂಬಗಳನ್ನು ಕಟ್ಟಿದ್ದರು. ಮಧ್ಯಾಹ್ನ ಹತ್ತು ಗಂಟೆಯ ಮೇಲೆ ತಂಡೋಪತಂಡವಾಗಿ ಬ್ರಾಹ್ಮಣರು, ಮುತ್ತೈದೆಯರು, ಮನೆಯನ್ನು ಪ್ರವೇಶಿಸುತ್ತಿದ್ದರು. ಮನೆಯ ಹೊರಗಡೆ ಕಂಗಾಳಿ ಹುಡುಗರು ಎಂಜಲೆಲೆಗಳನ್ನು ಎಷ್ಟು ಹೊತ್ತಿಗೆ ರಸ್ತೆಯಲ್ಲಿನ ತೊಟ್ಟಿಗೆ ಬಿಸಾಡುತ್ತಾರೋ ಎಂದು ಕಾದಿದ್ದರು. ಅವರನ್ನು ಕಂಡ ಕಂತ್ರಿ ನಾಯಿಗಳು ಕೂಡ ಎಂಜಲ ತೊಟ್ಟಿಯ ಬಳಿ, ಯಾವುದೋ ಅವ್ಯಕ್ತ ಆಸೆಯಿಂದ ಕೂಡಿ ಬಿದ್ದುಕೊಂಡಿದ್ದುವು.

ಮಧ್ಯಾಹ್ನ ಒಂದು ಗಂಟೆಯಿಂದ ಎಂಜಲೆಲೆಗಳನ್ನು ಪರಿಚಾರಕರು ತಂದು ತೊಟ್ಟಿಗೆ ಹಾಕಲಾರಂಭಿಸಿದರು. ಕಂಗಾಳಿಗಳು ನಾಯಿಗಳೊಂದಿಗೆ ಜಗಳವಾಡಲು ಶುರುಮಾಡಿದುದನ್ನು ಕಂಡು, ಪರಿಚಾರಕರು ತಮ್ಮತಮ್ಮಲ್ಲೇ ನಗೆಯಾಡಲಾರಂಭಿಸಿದರು.

ಮೊದಲ ತಂಡದಲ್ಲಿ ಉಂಡ ಬ್ರಾಹ್ಮಣ ಮುತ್ತೈದೆಯರು, ಎಲಡಿಕೆಯನ್ನು ಜಗಿಯುತ್ತಾ, ಅಡ್ಡಗಾಲುಗಳನ್ನು ಹಾಕುತ್ತಾ ಹೊರಬಂದರು. ಹಲವರು ಅಶ್ವತ್ಥಕಟ್ಟೆಯ ಮೇಲೆ ಕುಳಿತರು.

"ಮಹಾರಾಯ್ತಿ ಭಾಗೀರಥಮ್ಮ, ಎಂಭತ್ತರ ಪ್ರಾಯದಲ್ಲಿ ಕಾಶೀಯಾತ್ರೆ

Scanned by CamScanner

ಮಾಡಿ, ಅದೂ ಅಲ್ಲದೆ ಬದರಿ ಕ್ಷೇತ್ರಕ್ಕೂ ಹೋಗಿ, ನಾರಾಯಣನ ದರ್ಶನ ಮಾಡಿಕೊಂಡು ಬಂದರಲ್ಲಾ ಪುಣ್ಯವಂತೆ" ಎಂದು ಒಬ್ಬ ಮುತ್ತೈದೆ ಹೇಳಿದಳು.

"ಅಂತಹಾ ಕಷ್ಟಕರವಾದ ಯಾತ್ರೆಗೆ ಎಲ್ಲ ಅನುಕೂಲಗಳನ್ನೂ ಮಾಡಿ ಕೊಟ್ಟರಲ್ಲ ಅವರ ಮಗ, ಪುರುಷೋತ್ತಮರಾಯರು! ಅವರಂತಹ ಮಗ ನನ್ನು ಹೆತ್ತ ಭಾಗೀರಥಿಬಾಯಿ ಬಲು ಪುಣ್ಯವಂತೆ ಅಲ್ಲದೆ ಮತ್ತೇನು?" ಎಂದ ಆಕೆಯ ಜತೆಯಲ್ಲಿದ್ದ ಬ್ರಾಹ್ಮಣ.

"ಮಾತೃಭಕ್ತಿ ಅಂದರೆ ಹೀಗಿರಬೇಕಪ್ಪ. ತಾಯಿ ಅಂದಳಂತೆ, 'ಯಾತ್ರೆಯನ್ನೇನೋ ಮಾಡಿಸಿದೀಪ್ಪ, ದಿವನಾಗಿ ಗಂಗಾ ಸಮಾರಾಧನೆಯನ್ನು ಮಾಡಿಸಿದರೆ ಪುಣ್ಯ ಬರುತ್ತೆ' ಎಂದು. ತಾಯಿಯ ಆಸೆಯೇ, ಕಟ್ಟಪ್ಪಣೆ ಎಂದುಕೊಂಡು ಪುರುಷೋತ್ತಮರಾಯರು ಇಷ್ಟು ಭರ್ಜರಿಯಾಗಿ ಬಂದ ಬ್ರಾಹ್ಮಣರಿಗೆಲ್ಲ ಪುಷ್ಕಳ ಭೋಜನವನ್ನು ಹಾಕಿ, ನಂತರ ತಲೆಗೆ ಒಂದು ರೂಪಾಯಿನಂತೆ ದಕ್ಷಿಣೆಯನ್ನೂ ಕೊಟ್ಟರಲ್ಲ! ಮಹಾ ಧಾರಾಳಿಯಪ್ಪ. ಮಹಾದೈವಭಕ್ತ ನಮ್ಮ ಪುರುಷೋತ್ತಮರಾಯರು" ಎಂದು ಜತೆಯಲ್ಲಿದ್ದ ಬ್ರಾಹ್ಮಣನೊಬ್ಬ ಹೇಳುತ್ತಾ ಸೊಂಟದ ಉಡಿಯಲ್ಲಿ ರೂಪಾಯಿಯನ್ನು ಭದ್ರವಾಗಿ ಸಿಕ್ಕಿಸಿದ.

"ನಮ್ಮ ಪಂಕ್ತಿಯಲ್ಲಿ ಕಡೇ ಪಕ್ಷ ಅಂದರೆ ನೂರು ಜನ ಕುಳಿತಿದ್ದೆವು. ಇನ್ನೂ ಹೊರಗೆ ಇನ್ನೂರು ಮುನ್ನೂರು ಜನ ಕಾದಿದ್ದರು. ಅಂದಮೇಲೆ ಕಡೆಯಪಂಕ್ತಿ ಊಟಕ್ಕೆ ಸಂಜೆ ಐದಾಗಬಹುದು. ಆ ತನಕ ರಾಯರು ಊಟ ಮಾಡುವುದಿಲ್ಲವಂತೆ. ಎಂತಹ ನಿಷ್ಠೆಯಪ್ಪ ಅವರದು! ಸಂಪಾದಿಸುವುದು ಹೆಚ್ಚಲ್ಲ. ಕಲಿಗಾಲದಲ್ಲಿ ಅದನ್ನು ಸದ್ವಿನಿಯೋಗ ಮಾಡುವುದು ಹೆಚ್ಚು. ಅದೆಲ್ಲ ಹರಿಕೃಪೆ" ಎಂದರು ಇನ್ನೊಬ್ಬರು.

"ನನ್ನ ಜತೆಯಲ್ಲಿ ಪ್ರಾಣದೇವರ ದೇವಸ್ಥಾನದಲ್ಲಿ ಗಂಟೆ ಬಾರಿಸುತ್ತಿದ್ದ ಪುರುಷೋತ್ತಮ. ನಾನು ಓದಿ ಮೆಟ್ರಿಕ್ ಮಾಡಿ ಮಾಸ್ತರಾದೆ. ಅವ ಓದದೆ ಅಡ್ಡಾಡಿಕೊಂಡಿದ್ದ. ಬೇರೆ ಉದ್ಯೋಗವಾವುದೂ ಸಿಗಲಿಲ್ಲ. ಆದರೂ ಬಲು ವಾಚಾಳಿ. ಅಸಾಧ್ಯ ಜಾಣತನ ಇತ್ತು. ಇಲ್ಲದೆ ಇದ್ದರೆ ಇನ್ಸೂರೆನ್ಸ್ ಏಜಂಟಾಗಿ ಇಷ್ಟು ಭಾರಿ ಸಂಪಾದನೆ ಮಾಡಲು ಸಾಧ್ಯವಾಗುತ್ತಿತ್ತೆ. ಗಂಗಾ ಸಮಾರಾಧನೆಗೆ ಅವ ಇವತ್ತು ಖರ್ಚು ಮಾಡಿರುವ ಹಣವನ್ನು ಮೂರು ವರ್ಷಗಳಲ್ಲಿ ನಾನು ಸಂಪಾದಿಸಲಾರೆ. ಅದೃಷ್ಟವಂತ ಪುರುಷೋತ್ತಮ"

ಎಂದ ಅವನ ಬಾಲ್ಯದ ಗೆಳೆಯ. ಸ್ವಲ್ಪವೂ ಮತ್ಸರವಿರಲಿಲ್ಲ ಮಾಸ್ತರ ನುಡಿಯಲ್ಲಿ. ಮತ್ಸರಪಡುವಷ್ಟು ಅಭಿಮಾನವನ್ನೂ ಮಾಸ್ತರು ಉಳಿಸಿಕೊಂಡಿರಲಿಲ್ಲ. ಬಡತನದ ಶಿಕ್ಷೆ ಅಂತಹುದು.

"ಮಜೇಂದ್ರ ಭವನದಲ್ಲಿ ಭಕ್ಷಗಳನ್ನು ತಯಾರಿಸುವ ಆಚಾರ್‍ರನ್ನೆ ರಾಯರು ಇವತ್ತಿನ ಅಡಿಗೆಗೆ ಕರೆಸಿದ್ದರಂತೆ. ಅದಕ್ಕೇ ಭಕ್ಷ್ಯಗಳು ಅಷ್ಟು ರುಚಿಯಾಗಿತ್ತು. ಹಲ್ಲಿಲ್ಲದ ಬಾಯಿ, ಆದರೂ ನಾನು ಎರಡು ಚಿರೋಟಿಯನ್ನು ಮತ್ತು ಒಂದು ಲಾಡುವನ್ನೂ ತಿಂದೆ" ಎಂದಳು ಬೊಚ್ಚುಬಾಯಿನ ಹಿರಿಯ ಮುತ್ತೈದೆಯೊಬ್ಬಳು.

ಎಲ್ಲರೂ ಪುರುಷೋತ್ತಮರಾಯರ ಧಾರಾಳತನವನ್ನೂ, ಮಾತೃಭಕ್ತಿಯನ್ನೂ, ದೈವಭಕ್ತಿಯನ್ನೂ ಕೊಂಡಾಡಿದರು. ಗಿಡಿದು ಉಂಡಿದ್ದು ಸ್ವಲ್ಪ ಹದಕ್ಕೆ ಬಂದಾಗ ಎರಡು ಭಾರಿ ತೇಗುಗಳು ಕಾರ್ಖಾನೆಯ ಶಿಳ್ಳಿನಂತೆ ಹೊರಬಂದ ಮೇಲೆ, ಎಲ್ಲರೂ ಅಶ್ವತ್ಥಕಟ್ಟೆಯಿಂದ ಇಳಿದು, ದೂರವಿದ್ದ ತಮ್ಮ ಮನೆಗಳತ್ತ ಕಾಲು ಹಾಕಿದರು.

* * *

ಬ್ರಾಹ್ಮಣ ಮುತ್ತೈದೆಯರ ಭೋಜನವಾಗುವ ವೇಳೆಗೆ ಸಂಜೆ ಐದರ ಸಮಯವಾಗಿತ್ತು. ಮಗನನ್ನು ಕರೆದು, ತಾಯಿ "ಇನ್ನು ನಾವಿಬ್ಬರೂ ಊಟ ಮಾಡೋಣ. ಮುಪ್ಪಿನ ಮುದುಕಿಯ ಉಳಿದಿದ್ದ ಒಂದು ಆಸೆಯನ್ನು ದಿವ್ಯವಾಗಿ ನೆರವೇರಿಸಿ ಕೊಟ್ಟೆಯಪ್ಪಾ! ದೇವರು ನಿನ್ನನ್ನು ತಣ್ಣಗಿಟ್ಟಿರಲಿ" ಎಂದು ಹರಸುತ್ತ ಅಂದರು.

"ನೀನು ಊಟ ಮಾಡಿಬಿಡಮ್ಮ. ಆಪ್ತಸ್ನೇಹಿತರು ಕೆಲವರನ್ನು ಊಟಕ್ಕೆ ಕರೆದಿದ್ದೆ. ಅವರು ರಾತ್ರಿಯ ಭೋಜನಕ್ಕೆ ಬರುತ್ತಾರೆ. ಅವರ ಜತೆ ಊಟ ಮಾಡಬೇಕು ಈಗ ಉಂಡರೆ ರಾತ್ರಿಯ ಊಟ ಮಾಡುವ ಹಾಗಿರುಲ್ಲ. ಈಗಷ್ಟು ಕಾಫಿ ಕುಡಿದುಬಿಡ್ತೀನಿ" ಎಂದರು ಪುರುಷೋತ್ತಮರಾಯರು.

"ಯಾವು ಯಾವುದೋ ಜಾತಿಯವರು ಊಟಕ್ಕೆ ಬರುತ್ತಾರೇನೋ? ಅವರನ್ನೆಲ್ಲಾ ಊಟದ ಮನೆಯಲ್ಲಿ ಕೂರಿಸುತ್ತೀಯೇನೋ" ಎಂದರು ತಾಯಿ.

"ಜಾತಿಯನ್ನು ನೋಡಿ ಸ್ನೇಹವನ್ನು ಬೆಳೆಸುತ್ತಾರೇನಮ್ಮ! ನನಗೆ ತುಂಬಾ ಆಪ್ತರು. ನನ್ನ ಅಭಿವೃದ್ಧಿಯೇ ಅವರ ಗುರಿ. ಅವರನ್ನೆಲ್ಲಾ

Scanned by CamScanner

ಮಹಡಿಯ ಮೇಲೆ ಊಟಕ್ಕೆ ಕೂರಿಸುತ್ತೇನೆ. ದೇವರ ಮನೆಯ ಹತ್ತಿರವಾಗಲೀ, ಊಟದ ಮನೆಯ ಬಳಿಗಾಗಲೀ ಅವರು ಕಾಲಿಡುವುದಿಲ್ಲ" ಎಂದರು ರಾಯರು.

"ಆ ನಾಯ್ಡುನೂ ಬರುತ್ತಾನೆ ಅಂತ ಕಾಣುತ್ತೆ. ಅವನನ್ನು ಕಂಡರೆ ನನಗೇಕೋ ಅನುಮಾನವಪ್ಪ. ಬೆಣ್ಣೆಯಲ್ಲಿ ಕೂದಲು ತೆಗೆದ ಹಾಗೆ ಮಾತನಾಡುತ್ತಾನೆ. ಅತಿ ವಿನಯ. ಯಾರಿಗೆ ಯಾವಾಗ ಕತ್ತಿ ಇಡುತ್ತಾನೋ ಎಂಬ ಭಯ" ಎಂದರು ತಾಯಿ.

"ಮಸಲಾ ನಾಯ್ಡು ಕತ್ತಿ ಇಡುಕ್ಕೆ ಬಂದರೆ, ಇಡಿಸಿಕೊಳ್ಳುವವರು ಬಲು ಎಚ್ಚರದಿಂದಿದ್ದರಾಯಿತಲ್ಲ! ಅಲ್ಲದೆ ಹೊಳ್ತಂಗಡಿಯ ಆಜೂಬಾಜೂ ಅವನ ವಶೀಲಿ ಹೆಚ್ಚಾಗಿದೆ. ನನ್ನ ಇನ್ಷೂರೆನ್ಸ್ ಕೆಲಸಕ್ಕೆ ಅವನಿಂದ ತುಂಬಾ ಸಹಾಯವಿದೆ. ನನ್ನ ಹುಷಾರಿನಲ್ಲಿ ನಾನಿದ್ದರೆ, ಅವನೇನು ಮಾಡಾಂವ. ಆದರೂ ನನಗೆ ತಿಳಿದ ಮಟ್ಟಿಗೆ ಅವ ಒಳ್ಳೆಯವನೇ" ಎಂದರು ಪುರುಷೋತ್ತಮರಾಯರು.

"ಮುಪ್ಪಿನ ಮುದುಕಿ, ಅರಳು ಮರಳು, ಏನೋ ಅಂದೆ ಅಂತ ನೀನು ಮನಸ್ಸಿಗೆ ಹಾಕಿಕೋಬೇಡಪ್ಪ" ಎಂದು ಹೇಳಿ ತಾಯಿ ಊಟಕ್ಕೆ ಹೋದರು.

* * *

ಹೊಳ್ತಂಗಡಿಯ ದವಾಖಾನೆಯ ಹೊರಗೆ, ಹೊಟ್ಟೆಶೂಲೆಯಿಂದ ತೀವ್ರವಾಗಿ ನರಳುತ್ತಿದ್ದವನೊಬ್ಬ ಬೆಳಿಗ್ಗೆಯಿಂದಲೂ ಅಲ್ಲೇ ಒದ್ದಾಡುತ್ತಿದ್ದ. ಎಂಟರ ಹೊತ್ತಿಗೆ ಡಾಕ್ಟರು ಬಂದರು. ಬಿದ್ದಿದ್ದವನ ಸಂಕಟವನ್ನು ನೋಡಿ ತಕ್ಷಣ ಚಿಕಿತ್ಸೆಗಾಗಿ ಒಳಕ್ಕೆ ಕರೆದೊಯ್ದರು. ಜರೂರು ಚಿಕಿತ್ಸೆಯನ್ನೂ ಮಾಡಿದರು. ಒಂದೈದು ನಿಮಿಷಗಳಲ್ಲಿ ಅವ ಗುಣಮುಖನಾದ. ನಗುಮುಖನಾದ.

"ನಿನ್ನ ಹೆಸರೇನಪ್ಪ! ಯಾವ ಊರಿನವನು? ಎಷ್ಟು ದಿನಗಳಿಂದ ಈ ತರಹ ಶೂಲೆಯು ಬರುತ್ತಿದೆ" ಎಂದು ಡಾಕ್ಟರು ವಿಚಾರಿಸಿದರು.

"ಬೋಡ ಅಂತ ನನ್ನ ಹೆಸರು. ದಿಕ್ಕಿಲ್ಲ ದಿವಾಣಿ ಇಲ್ಲ. ಕೂಲಿ ನಾಲಿ ಮಾಡಿಕೊಂಡು ಹೊಟ್ಟೆ ಹೊರಕೋತೀನಿ. ಪಾಳ್ಯದ ತಾವ ಹೇಳಿದರು: ಇಲ್ಲಿ ಯಾರೋ ನಾಯ್ಡು ಅಂತ ಧರ್ಮಾತ್ಮರಿದ್ದಾರೆ. ಅವರ ಕಾಲಿಗೆ ಬೀಳು. ಯಾವುದಾದರೂ ಕೆಲಸ ಕೊಡಿಸುತ್ತಾರೆ ಅಂತ. ಅದಕ್ಕೆ ಇಲ್ಲಿಗೆ ಬಂದೆ.

ಸಂಜೆ ಮುಂದೆ ನಿನ್ನೆ ಬಂದೆ. ಅಷ್ಟು ಹೊತ್ತಿಗೆ ಈ ನನ್ಮಗನ್ನು ನೋವು ಅಮರಿಕೊಂಡಿತು. ನೀವು ದೇವರ ಹಾಗೆ ಬಂದಿರಿ. ನನ್ನ ಕಾಪಾಡಿದಿರಿ" ಎಂದು ಡಾಕ್ಟರ ಕಾಲನ್ನು ಹಿಡಿಯಲು ಹೋದ.

"ಏನು ಕೆಲಸ ಕಲ್ತಿದ್ದೀಯೋ? ನಾಯ್ಡು ಅವರು ನನಗೂ ಗೊತ್ತು. ಬೇಕಾದರೆ ಅವರ ಹತ್ತಿರ ನಾನೂ ಹೇಳ್ತೀನಿ" ಎಂದರು ಡಾಕ್ಟರು, ಕಾಲುಗಳನ್ನು ದೂರ ಸೆಳೆಯುತ್ತ.

"ಏನೂ ಕೆಲಸ ಕಲ್ತಿಲ್ಲ ನನ್ನೊಡೆಯಾ? ಯಾರು ಏನು ಕೆಲಸ ಹೇಳಿದರೆ ಅದನ್ನು ಮಾಡ್ತೀನಿ. ಎರಡು ಹೊತ್ತು ಮುದ್ದೆಕೊಟ್ಟರೆ ತೀರಿತು. ಬೇರೆ ಏನೂ ಬೇಡ" ಎಂದ ಅವ.

"ಹಾಗಾದರೆ ದವಾಖಾನೆಯಲ್ಲೇ ಸಹಾಯ ಮಾಡಿಕೊಂಡಿರು. ನಮ್ಮನೆಯಲ್ಲಿ ಎರಡು ಹೊತ್ತು ಊಟ ಹಾಕ್ತೀನಿ. ಸಂಬಳ ಗಿಂಬಳ ಸಿಗುಲ್ಲ. ಅದಕ್ಕಿಲ್ಲ ಸರ್ಕಾರಕ್ಕೆ ಬರೆದು, ನಿನ್ನ ಕೆಲಸಕ್ಕೆ ಸೇರಿಸಬೇಕು. ಅದು ಆಗಲಿಲ್ಲ, ಹೋಗಲಿಲ್ಲ. ನರಳುವವರ ಸೇವೆ ಮಾಡಿದರೆ ನಿನಗೂ ಪುಣ್ಯ ಬರುತ್ತೆ!" ಎಂದರು ಡಾಕ್ಟರು. ಬಡವರು ಅಂದರೆ ಅವರಿಗೆ ಬಲು ಹೆಂಗರುಳು.

"ಎರಡು ಹೊತ್ತು ಉಣಲು ಸಿಕ್ಕರೆ, ನೀವು ಹೇಳಿದ್ದು ಮಾಡ್ತೀನಿ, ನನ್ನೊಡೆಯಾ" ಎಂದ ಅವ.

ಹೊಳ್ತಂಗಡಿಯ ದವಾಖಾನೆಯಲ್ಲಿ ಜವಾನನ ಕೆಲಸ ಮಾಡಲು ಈ ರೀತಿ ಬೋಡ ಸೇರಿಕೊಂಡ. ಕೆಲವೇ ತಿಂಗಳುಗಳಲ್ಲಿ ಡಾಕ್ಟರ ಬಲಗೈ ಅಂತಾದ. ಸ್ಟೌವ್ ಹಚ್ಚುವುದು, ಸಿರಿಂಜುಗಳನ್ನು ಬೇಯಿಸಿಡುವುದು, ಸಣ್ಣ ಪುಟ್ಟ ಗಾಯಗಳಿಗೆ ಮದ್ದು ಕಟ್ಟಿ ಬ್ಯಾಂಡೇಜ್ ಮಾಡುವುದು ಎಲ್ಲವನ್ನೂ ಕಲಿತುಕೊಂಡ. ಜಾಣನಿದ್ದಿರಬೇಕು. ಬೇಗ ಕಲಿತಿದ್ದ. ಕಲಿಯಲು ಅವಕಾಶವು ದೊರಕದೆ, ಕೂಲಿ ನಾಲಿ ಮಾಡಿಕೊಂಡಿದ್ದನೆಂಬುದು ಸುಲಭವಾಗಿ ತಿಳಿಯುತ್ತಿತ್ತು, ಈಗ ಅವನನ್ನು ನೋಡಿದವರಿಗೆ.

ಹೊಳ್ತಂಗಡಿ ದವಾಖಾನೆಯಲ್ಲಿದ್ದವನು ನಾಯ್ಡು ಅವರ ಗುರುತನ್ನು ಬೇಗ ಹಿಡಿಯಲೇಬೇಕು. ಡಾಕ್ಟರು ಮತ್ತು ನಾಯ್ಡು ಅಷ್ಟು ದೋಸ್ತು. ಹೀಗಾಗಿ ನಾಯ್ಡು ಅವರು ಕೆಲ ಸಮಯದಲ್ಲೇ ಬೋಡನನ್ನು, ದೂರದ ಹಳ್ಳಿಗಳಲ್ಲಿದ್ದ ರೋಗಿಗಳ ಶುಶ್ರೂಷೆಗೆ ಕಳಿಸಲಾರಂಭಿಸಿದರು. ಸೇವೆಗೆ ಅವಕಾಶ ಸಿಕ್ಕಿತಲ್ಲ ಎಂದು ಬೋಡನೂ ನಗುನಗುತ್ತ ಹೋಗಿ ರೋಗಿಗಳ ಆರೈಕೆ

Scanned by CamScanner

ಯನ್ನೂ ಮಾಡುತ್ತಿದ್ದ. ಐದಾರು ತಿಂಗಳುಗಳಲ್ಲಿ ಬೋಡ ಅಲ್ಪ ಸ್ವಲ್ಪ ಇಂಗ್ಲಿಷ್ ಓದುವುದನ್ನೂ ಕಲಿತ. ಡಾಕ್ಟರಿಗೆ ಬಂದ ಸರಕಾರಿ ಕಾಗದಗಳನ್ನು ಅವರ ಮುಂದಿಡುವುದು, ಅವರು ಬರೆದ ಉತ್ತರಗಳನ್ನು ಲಕ್ಕೋಟೆಗೆ ಹಾಕಿ, ಅಂಚೆಗೆ ತಲುಪಿಸುವುದು ಇಂತಹ ಕೆಲಸವನ್ನೂ ಅಚ್ಚುಕಟ್ಟಾಗಿ ಮಾಡಲು ಕಲಿತ.

ಆಗೊಮ್ಮೆ ಈಗೊಮ್ಮೆ ಪಹರಿನಿಂದ ಬಂದ ಇನ್ಶೂರೆನ್ಸ್ ಏಜಂಟರು, ವಿಮಾ ಮಾಡಬಯಸಿದವರನ್ನು, ವೈದ್ಯ ಪರಿಕ್ಷೆಗೆಂದು ಡಾಕ್ಟರರಲ್ಲಿಗೆ ಕರೆತರುತ್ತಿದ್ದರು. ಸಾಮಾನ್ಯವಾಗಿ ಇನ್ಶೂರೆನ್ಸ್ ಏಜಂಟರು, ನಾಯ್ಡು ಅವರ ಸಹಕಾರವನ್ನು ಪಡೆದೇ ತಮ್ಮ ಬೇಟೆಯನ್ನು ಆಡುತ್ತಿದ್ದರು. ಅಂತಹವರು ದವಾಖಾನೆಗೆ ಬಂದಾಗ, ವಿಮಾಕಾರರ ಎತ್ತರ, ತೂಕ, ಎದೆಯಳತೆ ಇತ್ಯಾದಿಗಳನ್ನೆಲ್ಲ ಬೋಡನೇ ತೆಗೆದುಕೊಳ್ಳುವಷ್ಟು ಪರಿಶ್ರಮವನ್ನು ಗಳಿಸಿಕೊಂಡಿದ್ದ. ಮೂತ್ರ ಪರೀಕ್ಷೆಯನ್ನೂ ಮಾಡಿಡುತ್ತಿದ್ದ. ಹೀಗಾಗಿ ಡಾಕ್ಟರಿಗೆ ತುಂಬಾ ಸಹಾಯವಾಗುತ್ತಿತ್ತು.

"ಇನ್ನೊಂದೆರಡು ವರ್ಷಗಳು ನಿಮ್ಮ ಸೇವೆ ಮಾಡಿಕೊಂಡಿದ್ದರೆ ಬೋಡಾ ಕೂಡ ಡಾಕ್ಟರಾಗಿ ಬಿಡುತ್ತಾನೆ" ಎಂದು ನಾಯ್ಡು ಅವರೂ ಪ್ರಶಂಸೆಯನ್ನು ಮಾಡಿದ್ದರು.

"ಡಾಕ್ಟರಾಗಬಹುದು ಸ್ವಾಮಿ. ಆದರೆ "ಈ" ಡಾಕ್ಟರ ತರಹ ಆಗುಕ್ಕೆ ಸಾಧ್ಯವಿಲ್ಲ. ಇವರು ದೇವರು ಸ್ವಾಮಿ. ಈಗ ತಕ್ಕಮಟ್ಟಿಗೆ ಇಂಗ್ಲಿಷ್ ಕಲಿತಿದ್ದೀನಿ. ಓದಿ ಬರೆಯಲು ಸಾಧ್ಯ. ಇನ್ಶೂರೆನ್ಸ್ ಫಾರಂ ಅನ್ನು ನಾನೇ ತುಂಬಬಲ್ಲೆ. ಆದರೂ ಈ ಡಾಕ್ಟರ ಗುಣ ! ಅದು ಹೇಗೆ ಬಂದಾತು? ಹುಟ್ಟು ಗುಣ ಅದು, ನನ್ನಂತಹ ಅಡ್ಡಕಸಬೀಗೆ ಹೇಗೆ ಸಾಧ್ಯ?" ಎಂದು ಹೇಳುತ್ತಾ ಬೋಡ ಡಾಕ್ಟರನ್ನು ಪ್ರಶಂಸಿಸಿದ್ದ.

ಡಾಕ್ಟರ ಜೊತೆಗೆ ಬೋಡನೂ ಆ ಪ್ರಾಂತ್ಯದಲ್ಲಿ ಜನಪ್ರಿಯನಾಗಿಬಿಟ್ಟ.

ಒಮ್ಮೆ ಡಾಕ್ಟರಿಗೆ ಹೇಳಿದ: "ಒಡೆಯಾ ! ನೀವು ಕಳಿಸಿದ ಮನೆಗಳಿಗೆ ಹೋಗಿ ನೀವು ಹೇಳಿದ ಸೇವೆಯನ್ನು ಮಾಡುತ್ತೇನೆ. ಅದೂ ಇದೂ ಕೊಡಲು ಅವರು ಮುಂದೆ ಬರುತ್ತಾರೆ. ನನಗೇನೂ ಬೇಡ ಎಂದರೆ ಮುಖ ಚಿಕ್ಕದು ಮಾಡಿಕೊಳ್ಳುತ್ತಾರೆ. ಒಳ್ಳೆ ಧರ್ಮಸಂಕಟಕ್ಕೆ ಸಿಕ್ಕಿದ್ದೇನೆ. ಏನು ಮಾಡಲಿ" ಎಂದು.

"ನೀನಾಗಿ ಏನನ್ನೂ ಕೇಳಬೇಡ. ಅವರೇ ಸಂತೋಷದಿಂದ ಕೊಟ್ಟರೆ

ಬೇಡ ಅನ್ನಬೇಡ. ಅವರು ಕೊಟ್ಟಿದ್ದು ಕಡಿಮೆ ಹೆಚ್ಚು ಎಂದು ಲೆಕ್ಕ ಹಾಕಬೇಡ" ಎಂದು ಡಾಕ್ಟರು ಪರವಾನಿಗಿ ಕೊಟ್ಟರು.

ಅಷ್ಟರ ಮಟ್ಟಿಗೆ ಡಾಕ್ಟರ ನಂಬಿಕೆಯನ್ನು ಬೋಡ ಸಂಪಾದಿಸಿಕೊಂಡಿದ್ದ.

* * *

ಎಂಟು–ಹತ್ತು ತಿಂಗಳುಗಳಾಗಿರಬೇಕು. ಒಂದು ದಿನ ಬೆಳಿಗ್ಗೆ ಎಳರ ಹೊತ್ತಿಗೆ ಬೋಡ, ಡಾಕ್ಟರ ಮನೆಗೆ ತಾನಿರುತ್ತಿದ್ದ ದವಾಖಾನೆಯಿಂದ ಹೋದ. ಡಾಕ್ಟರ ಹೆಂಡತಿಯು ತಿಂಡಿ ಕಾಫಿಯನ್ನು ಕೊಡಬಂದರು.

"ಅಮ್ಮಾ ! ಡಾಕ್ಟರ ಸ್ನಾನ ಆಯಿತಾ ? ಅವರನ್ನು ಕಂಡು ಆಮೇಲೆ ತಿಂಡಿ ತಿಂತೀನಿ" ಎಂದ.

"ಆರೂವರೆಗೆ ಅವರು ಸಿದ್ಧವಾಗ್ತಾರಲ್ಲೋ ಕರೀಲಾ" ಎಂದು ಅನ್ನುತ್ತ ಡಾಕ್ಟರ ಹೆಂಡತಿ ಒಳಕ್ಕೆ ಹೋಗಿ ಡಾಕ್ಟರನ್ನು ಕರೆದುಕೊಂಡು ಬಂದರು.

ತನ್ನ ಕೈಚೀಲದಲ್ಲಿದ್ದ ಜರತಾರಿ ಸೀರೆಯೊಂದನ್ನು ತೆಗೆದು, ಡಾಕ್ಟರ ಹೆಂಡತಿಯ ಕಾಲ ಬಳಿ ಇರಿಸಿ ನಮಸ್ಕಾರ ಮಾಡಿ, "ಅಮ್ಮಾ ಏಳೆಂಟು ತಿಂಗಳುಗಳಿಂದ, ಬೇವಾರ್ಸಿಯಾಗಿ ಬಂದಿದ್ದ ನನಗೆ ಆದರದಿಂದ ಅನ್ನ ಹಾಕಿದಿರಿ. ಒಂದು ದಿನವಾದರೂ ತಂಗಳನ್ನವನ್ನು ಹಾಕಲಿಲ್ಲ. ಬೇಡದೇ ಇದ್ದರೂ ನನಗೆ ಬಂದ ಹಣದಿಂದ ಈ ಸೀರೆಯನ್ನು ಕೊಂಡು ತಂದಿದ್ದೀನಿ. ತಾವು ದಯತೋರಿ ಒಪ್ಪಿಸಿಕೊಳ್ಳಬೇಕು" ಎಂದು ಹೇಳಿದ.

ನಂತರ ಸರಿಗೆ ಪಂಚೆಯನ್ನು ಕೈಚೀಲದಿಂದ ತೆಗೆದು ಡಾಕ್ಟರ ಕಾಲ ಬಳಿ ಇರಿಸಿ, "ಒಡೆಯಾ ! ನಿಮ್ಮಲ್ಲಿಗೆ ನರಳುತ್ತಾ ಬಂದೆ. ಭಿಕಾರಿಯಾಗಿ ಬಂದಿದ್ದೆ. ಆದರೂ ತುಂಬಾ ಪ್ರೀತಿಯಿಂದ ನನ್ನ ನೋಡಿಕೊಂಡಿರಿ. ಅದೂ ಇದೂ ಒಂದಿಷ್ಟು ಕಲಿತೆ ಇಲ್ಲಿ. ಈ ಕಲಿಕೆಯಿಂದ ನನಗೆ ತುಂಬಾ ಪ್ರಯೋಜನವಾಗುತ್ತೆ.

"ಕಾರಣಾಂತರದಿಂದ, ಈ ದಿನ ನಾನು ಪಹರಿಗೆ ಹೋಗಬೇಕಾಗಿದೆ. ತಿರುಗಿ ಯಾವಾಗ ಬಂದು ನಿಮ್ಮ ಆಶೀರ್ವಾದವನ್ನು ಪಡೆಯುವುದು ಸಾಧ್ಯವೋ ಅದನ್ನು ಶಿವನೇ ಬಲ್ಲ. ಈ ಕಾಣಿಕೆಯನ್ನು ಒಪ್ಪಿಸಿಕೊಳ್ಳಬೇಕು" ಎಂದು ಹೇಳಿ ಅಡ್ಡಬಿದ್ದ. ಏನೋ ಬಂದು ಅವನ ಗಂಟಲನ್ನು ಒತ್ತಿದಂತಾಗಿತ್ತು. ಆದಕಾರಣ ಕೊನೆಕೊನೆಯ ಮಾತುಗಳು ಅಸ್ಪಷ್ಟವಾಗಿದ್ದುವು.

ಉತ್ತರ ಹೇಳಲು ಡಾಕ್ಟರಿಗಾಗಲೀ, ಅವರ ಹೆಂಡತಿಗಾಗಲೀ ಸುಲಭ

Scanned by CamScanner

ವಾಗಲಿಲ್ಲ. ಬೋಡನಂತಹವನನ್ನು, ಬೇಸರವಿಲ್ಲದೆ ದುಡಿಯುವವನನ್ನು ಅವರು ಕಂಡಿತ್ತಿಲ್ಲ.

"ಷಹರಿಗೆ ಹೋಗುವ ನಿರ್ಧಾರವನ್ನು ಮಾಡಿದ್ದರೆ ಆಯಿತು. ತಿಂಡಿ ಕಾಫಿಯನ್ನು ತೆಗೆದುಕೊಂಡು ಹೋಗಬಹುದಲ್ಲ" ಎಂದರು ಡಾಕ್ಟರ ಹೆಂಡತಿ. ಒಳಗೆ ಹೋದರು.

ತಿಂಡಿ ತಿನ್ನುತ್ತಿದ್ದ ಬೋಡನನ್ನೇ ಡಾಕ್ಟರು ಎವೆಯಿಕ್ಕದೆ ನೋಡುತ್ತಿದ್ದರು. ಡಾಕ್ಟರ ಹೆಂಡತಿಯು ಒಳಗಿನಿಂದ ಬಂದು, "ಬೋಡ ! ನಾನೂ ಒಂದು ಸೀರೆಯನ್ನು ನಿನಗೆ ಕೊಡುತ್ತೇನೆ. ಇದನ್ನು ನನ್ನ ಅಣ್ಣ ಹೋದ ವರ್ಷ ಉಡುಗೊರೆಯಾಗಿ ಕೊಟ್ಟಿದ್ದ. ನೀನು ಒಬ್ಬಂಟಿಗ ಅನ್ನುವುದು ನನಗೂ ಗೊತ್ತು. ಆದರೂ ಯಾವಾಗಲಾದರೂ ಮದುವೆ ಗಿದುವೆ ಆದರೆ, ಅಕ್ಕನ ಉಡುಗೊರೆ ಅಂತ ನಿನ್ನ ಹೆಂಡತಿಗೆ ಇದನ್ನು ಕೊಡು" ಎಂದು ಹೇಳಿ, ಕಣ್ಣಂಚನ್ನು ಒರೆಸಿಕೊಂಡರು.

ತಿಂಡಿ ಮುಗಿಸಿ ಕಾಫಿ ಕುಡಿದು ಇನ್ನೊಮ್ಮೆ ಇಬ್ಬರಿಗೂ ಅಡ್ಡಬಿದ್ದು ಕೈ ಚೀಲದಲ್ಲಿ ಸೀರೆಯನ್ನು ಹಾಕಿಕೊಂಡು ಬೋಡ ಅಲ್ಲಿಂದ ಹೊರಬಿದ್ದ. ಕಲಕಿ ಹೋಗಿತ್ತು ಅವನ ಮನಸ್ಸು.

* * *

ಮಜೇಂದ್ರ ಭವನದ ಪಾರ್ಟಿಯಲ್ಲಿ ಪುರುಷೋತ್ತಮರಾಯರು ಎಲ್ಲರ ಕಣ್ಣನ್ನೂ ಸೆಳೆಯುತ್ತಿದ್ದರು. ಭರ್ಜರಿ ಸೂಟನ್ನು ಧರಿಸಿ, ಲಕ್ಷಣವಾದ ಸರಿಗೆ ರುಮಾಲನ್ನು ಕಟ್ಟಿದ್ದವರು ಅಲ್ಲಿ, ಅವರೊಬ್ಬರೇ ! ಹಾಲು ಬೆಳದಿಂಗಳಿನಂತಹ ದುಂಡು ಮುಖ, ಲಕ್ಷಣವಾಗಿ ಅಂಗಾರ–ಅಕ್ಷತೆ. ಎರಡೂ ಕಿವಿಗಳಲ್ಲಿ ವಜ್ರದ ಹತ್ತಕಡಕು. ಸನಾತನ ಸಂಪ್ರದಾಯಸ್ಥರ ಕಳೆ ಅವರ ಮುಖದಲ್ಲಿ ನಲಿದಾಡುತ್ತಿತ್ತು.

ಬಂಗಾಳದಿಂದ ಸ್ವಂತ ಕಾರ್ಯಕ್ಕಾಗಿ ಬಂದು, ಮಜೇಂದ್ರ ಭವನದಲ್ಲಿ ಇಳಿದುಕೊಂಡಿದ್ದ "ಚಟೋರ್ಜಿ" ಅವರೂ ಆಹ್ವಾನಿತರಾಗಿದ್ದರು. ಅವರಿಗನಕ ಪುರುಷೋತ್ತಮರಾಯರ ಪರಿಚಯವನ್ನು ಮಾಡಿಕೊಳ್ಳಬೇಕೆಂಬ ಉತ್ಕಟೇಚ್ಛೆ ಇತ್ತು. ಪರಸ್ಪರ ಪರಿಚಯವನ್ನು ಮಾಡಿಸಲು ಯಾರೂ ಸಿಗಲಿಲ್ಲ. ಕೊನೆಗೆ ತಡೆಯಲಾರದೆ ಅವರೇ ಮುನ್ನುಗ್ಗಿ ರಾಯರಿಗೆ"ನೊಮೋಸ್ತೆ" ಮಾಡಿ "ಚಟೋರ್ಜಿ ಅಂತ ನನ್ನ ಹೆಸರು. ಕಲ್ಕತ್ತಾದಿಂದ ಬಂದವ.

ಎರಡು ಮೂರು ದಿನಗಳಿಂದಲೂ ಈ ಹೋಟಲಿನಲ್ಲಿ ನನ್ನ ಜತೆ ಊಟಕ್ಕೆ ಕೂತವರು ನಿಮ್ಮ ಮಾತನ್ನು ತುಂಬಾ ಆಡಿಕೊಳ್ಳುತ್ತಿದ್ದರು. ದಿಳ್ಳಿಯಲ್ಲಿ ಅವರು ತನಿಖಾ ಇಲಾಖೆಯಲ್ಲಿ ಅಧಿಕಾರಿಗಳು. ಅವರಿಗೂ ನಿಮಗೂ ಪರಿಚಯವಿರಲು ಕಾರಣವಿಲ್ಲ. ಆದರೂ ಅವರಲ್ಲಿಯೇ ನಿಮ್ಮವರ ಮಾತುಗಳನ್ನು ಆಡಿಕೊಳ್ಳುತ್ತಿದ್ದರು. ಮೊನ್ನೆ ಊಟವಾದ ಮೇಲೆ ಅವರು ಹೊರಟು ಹೋದರು. ಆದರೆ ಡೈರಿಯೊಂದನ್ನು ಮರೆತುಹೋಗಿದ್ದರು. ಆ ಡೈರಿಯನ್ನು ತೆಗೆದುಕೊಂಡು ಅವರಿಗೆ ತಲುಪಿಸುವ ಎಂದು ಹೊರಟೆ. ಆದರೆ ಅವರು ಆಗತಾನೇ ತಿರುಗಿ ದಿಳ್ಳಿಗೆ ತುರ್ತಾಗಿ ವಾಪಸಾದರೆಂದು ತಿಳಿಯಿತು.

"ಡೈರಿಯಲ್ಲಿ ಅವರ ವಿಳಾಸವನ್ನು ನೋಡಿ, ನಂತರ ಅವರಿಗೆ ಕಳಿಸೋಣ ಎಂದುಕೊಂಡು ನನ್ನ ಕೊಠಡಿಗೆ ಹೋದೆ. ಅಲ್ಲಿ ಅವರ ವಿಳಾಸವು ಇರಲಿಲ್ಲ. ಯಾವುದೋ ಸಂಖ್ಯೆ ಮಾತ್ರ ಇತ್ತು. ಕುತೂಹಲವನ್ನು ತಡೆಯಲಾರದೆ ಡೈರಿಯ ಹಾಳೆಗಳನ್ನು ತಿರುವಿ ಹಾಕಿದೆ.

"ಮನಸ್ಸು ಪಿಚ್ ಅನ್ನಿಸಿತು. ಇವತ್ತು ನಿಮ್ಮನ್ನು ಕಂಡಾಗ, ನಿಮಗೆ ಈ ಸುದ್ದಿಯನ್ನು ಹೇಳೋಣ ಅನ್ನಿಸಿತು. ಪಾರ್ಟಿ ಮುಗಿದ ಮೇಲಾಗಲೀ ಅಥವಾ ಯಾವಾಗಲಾದರೂ ನನ್ನ ಕೊಠಡಿಗೆ ಬಂದರೆ ಡೈರಿಯನ್ನು ತೋರಿಸುತ್ತೇನೆ. ನಿಮಗೆ ಪ್ರಯೋಜನವಾಗಬಹುದು"ಎಂದು ದೀರ್ಘ ಪರಿಚಯವನ್ನು ಮಾಡಿಕೊಂಡರು.

"ಈ ಪಾರ್ಟಿಗಳ ಜೀವಾಳ ಗೊತ್ತಿಲ್ಲ. 'ಹಲೋ ಹಲೋ' ಅಂತ ಹಲ್ಕಿರಿದು, ಇತ್ತ ಅತ್ತ ಪರದಾಡುವುದು. ಹಾಳು ಮೂಳು ತಿಂದು ಕುಡಿಯುವುದು. ನಂತರ ಬೇಸರ ತುಂಬಿ ಹಿಂತಿರುಗುವುದು. ಒಬ್ಬರ ಹತ್ತಿರ ಕುಳಿತು ಐದು ನಿಮಿಷ ಆರಾಮವಾಗಿ ಮಾತನಾಡುವಂತಿಲ್ಲ. ಆತಿಥೇಯರಿಗಾದರೂ, ಕರೆದವರು ಮುಖ ತೋರಿಸದರಲ್ಲ ; ಅವರ ಪಾರ್ಟಿಗೆ ನಾನು ಹೋಗಿದ್ದೆ. ನನ್ನ ಪಾರ್ಟಿಗೆ ಅವರು ಬಂದರು ಪೀಟಿ ಪೀಟಿ ಆಯಿತು ಎನ್ನುವ ಸಂತಸ.

ಆದುದರಿಂದ ಈಗಲೇ ನಿಮ್ಮ ಕೊಠಡಿಗೆ ಹೋಗೋಣ. ನನಗೂ ಡೈರಿಯನ್ನು ನೋಡಲು ಕಾತರ" ಎಂದರು, ರಾಯರು. ಚಟೋರ್ಜಿಯವರ ಕೊಠಡಿಗೆ ಇಬ್ಬರೂ ಹೋದರು.

*

Scanned by CamScanner

ಸಂಪಾದಕರಲ್ಲಿ ಸಪ್ರೇಮ ಬಿನ್ನಹ.

ಮಾಲತೀಜೀಯವರು ವರದಿ ಸಲ್ಲಿಸಿದಾಗ, ಹೊಳ್ತಂಗಡಿಯ ಡಾಕ್ಟರ ಮೃದು ಸ್ವಭಾವವನ್ನೂ, ನಾಯ್ಡು ಅವರ ಕರುಣಾಪೂರಿತ ನಡವಳಿಕೆಯನ್ನೂ ವಿವರಿಸಿದ್ದಳು. ಈ ಕಲಿಯುಗದಲ್ಲಿ, ಅದೂ ಈಗಿನ ಕಾಲದಲ್ಲಿ ಯಾವನಾದರೂ ರೋಗಿಗಳ ಮನೆಗೆ ಹೋಗಿ, ಅದೂ ಬಡ ರೋಗಿಗಳ ಮನೆಗೆ ಹೋಗಿ, ಅವರ ಆರೈಕೆ ಶುಶ್ರೂಷೆಯನ್ನು ಮಾಡುತ್ತಾನೆ ಎಂದರೆ ಇದರಲ್ಲಿ ಯಾವುದೋ ಮೋಸವಿದೆ ಏನೋ ಮರ್ಮವು ಅಡಗಿದೆ ಎಂದು ಅನುಮಾನ ಪಡಲೇಬೇಕು.

ಹಾಗಾಗಿ ಬಿಡ್ಡಣ್ಣನನ್ನು ಹೊಳ್ತಂಗಡಿಗೆ ಕಳಿಸಿದೆ. ಡಾಕ್ಟರ ಹತ್ತಿರ ಯಾವುದಾದರೂ ನೆಪ ಹೂಡಿ ಕೆಲಸಕ್ಕೆ ಸೇರಿಕೋ. ಅಲ್ಲಿ ನಡೆಯುವ ವಿದ್ಯಮಾನಗಳ ಮೇಲೆ ಕಣ್ಣಿಟ್ಟಿರು ಅಂತ ಹೇಳಿ ಕಳಿಸಿದೆ. ಬೋಡನ ವೇಷ ಹಾಕಿ ಅವ ಅಲ್ಲಿ ಕೆಲವು ತಿಂಗಳುಗಳಿದ್ದ. ಬಡ ರೋಗಿಗಳ ಮನೆಗೆ ನಾಯ್ಡು ಹೋಗಿ ನೆರವಾಗುವುದನ್ನು ಅವನು ಕಂಡುಕೊಂಡ. ಅಲ್ಲದೆ ಷಹರಿಗೆ ಹೋಗುತ್ತಿದ್ದ ಪುರುಷೋತ್ತಮರಾಯರಿಗೆ, ಸಹಕಾರ ನೀಡಿ, ಅವರಿಗೆ ಇನ್ಶೂರೆನ್ಸ್ ಕೇಸುಗಳನ್ನು ಕೊಡಿಸುತ್ತಿದ್ದ. ಆದರೆ ಚಿಕ್ಕತಿಮ್ಮಯ್ಯ ಎಂಬ ಯುವಕ, ಹಳ್ಳಿಯ ಹುಡುಗ, ಗುಡಿಸಲೊಂದೇ ಇದ್ದವ, ಐದು ಸಾವಿರಕ್ಕೆ ವಿಮೆ ಎತ್ತಿದ ಎನ್ನುವುದನ್ನು ಬಿಡ್ಡಣ್ಣ ಕಂಡಾಗ ಮೈಯನ್ನೆಲ್ಲಾ ಕಣ್ಣು ಕಿವಿ ಮಾಡಿಕೊಂಡ. ಯಾವುದಾದರೂ ಹಳ್ಳಿಯಲ್ಲಿ ಬೇನೆಬಿದ್ದು ನರಳಿ ಸತ್ತರೆ ನಾಯ್ಡು ಅವರಿಗೆ ಸುಲಭವಾಗಿ ತಿಳಿಯುತ್ತಿತ್ತು. ಹಾಗಾಗಿ ಸತ್ತವರ ಡೆತ್ ಸರ್ಟಿಫಿಕೇಟ್ ಅನ್ನು ಡಾಕ್ಟರು ಕೊಡಲು ಯಾವ ಅಭ್ಯಂತರವೂ ಇರುತ್ತಿರಲಿಲ್ಲ. ಆದರೆ ಸತ್ತವನ ಹೆಸರೂ ಚಿಕ್ಕತಿಮ್ಮಯ್ಯನೇ ಆಗಿರಬೇಕೇ ? ಡೆತ್ ಸರ್ಟಿಫಿಕೇಟ್‌ನಲ್ಲಿ ವಿಮೆ ಮಾಡಿದ ಚಿಕ್ಕತಿಮ್ಮಯ್ಯನ ವಯಸ್ಸು ಮತ್ತು ಗುರುತುಗಳೂ ಇರುವಂತೆ ನಾಯ್ಡು ಅವರು ತಂತ್ರ ನಡೆಸುತ್ತಿದ್ದರೆಂಬುದನ್ನು ಬಿಡ್ಡಣ್ಣ ಕಂಡುಕೊಂಡ.

ಸತ್ತವನ ಡೆತ್ ಸರ್ಟಿಫಿಕೇಟ್ ಹಾಜರ್ ಮಾಡಿ, ವಿಮೆ ಹಣವನ್ನು ಪಡೆಯಲು ನಾಯ್ಡು ಸಂಚು ಹಾಕುತ್ತಿದ್ದ. ಸತ್ತವನ ವಾರಸುದಾರಳು ಎಂದೂ, ನಿರಕ್ಷರಕುಕ್ಷಿಯಾದ ಬಡ ಹೆಂಗಸೊಂದು ನಾಯ್ಡು ಅವರು ಹೇಳಿದಂತೆ ಕೇಳುತ್ತಿದ್ದಳು. ಅವಳ ಕಷ್ಟ ಕಾಲದಲ್ಲಿ ನೆರವಾಗಿದ್ದ ನಾಯ್ಡು ಅವರು "ಇಲ್ಲಿ ಹೆಬ್ಬೆರಳೊತ್ತು" ಎಂದರೆ ಆಕೆ ಬೇಡವೆನ್ನುತ್ತಿರಲಿಲ್ಲ. ಹೀಗೆ ಆಕೆಯ ಹೆಸರಿಗೆ

ಬಂದ ವಿಮಾ ಹಣವನ್ನು ನಾಯ್ಡು ಅವರೂ, ಪುರುಷೋತ್ತಮರಾಯರೂ ಹಂಚಿ ಕೊಳ್ಳುತ್ತಿದ್ದರು.

ಹೊಳ್ತಂಗಡಿಯ ಆಜೂಬಾಜೂ ಹಳ್ಳಿಗಳು ಮತ್ತು ಗ್ರಾಮಗಳಲ್ಲಿ ಈ ಸಂಚು ಕೆಲವು ವರ್ಷಗಳಿಂದ ಯಶಸ್ವಿಯಾಗಿ ನಡೆಯುತ್ತಿತ್ತು. ಇಬ್ಬರೂ ಲಕ್ಷಾಂತರ ವಿಮಾ ಹಣವನ್ನು ಲಪಟಾಯಿಸಿದ್ದಾರೆ ಎಂದೂ ತಿಳಿಯಿತು. ಬಿಡ್ಡಣ್ಣ ಇವರ ವಿವರಗಳನ್ನ ಒಂದು ಡೈರಿಯಲ್ಲಿ ಬರೆದಿಟ್ಟುಕೊಂಡ. ನನಗೆ ತಂದೂ ಕೊಟ್ಟ.

ಬಿಡ್ಡಣ್ಣನು ಕಳಿಸಿದ ಸುದ್ದಿಯನ್ನು ರಾಮೋಜಿಗೆ ಹೇಳಿದೆ. ಪುರುಷೋತ್ತಮರಾಯರ ಮೇಲೆ ನಿಗಾ ಇರಲಿ ಎಂದೆ. ತಾಯಿಯ ಗಂಗಾಸಮಾರಾಧನೆಗೆ ಎಂದು ಪುರುಷೋತ್ತಮರಾಯರು ಸಾವಿರಾರು ರೂಪಾಯಿ ಖರ್ಚು ಮಾಡಿದುದನ್ನು ರಾಮೋಜಿ ಬಂದು ತಿಳಿಸಿದ. ಬಿಡ್ಡಣ್ಣನ ಡೈರಿ ಕೈಗೆ ಬಂದ ಮೇಲೆ ರಾಮೋಜಿಗೆ ಅದನ್ನು ಕೊಟ್ಟೆ. ಈ ಡೈರಿ ಹಿಡಿದು ರಾಯರಿಗೆ ಗಾಳ ಹಾಕು ಎಂದೆ. ಎಂತಹ ಮೀನು ದೊರಕುತ್ತೋ ನೋಡೋಣ ಎಂದೆ.

ಮಹೇಂದ್ರ ಭವನದಲ್ಲಿ ರಾಮೋಜಿ ಉಳಿದುಕೊಂಡ, ಚೊಟೋರ್ಜಿ ಆಗಿ. ಟಾಗೂರರ ಶಾಂತಿನಿಕೇತನದಲ್ಲಿ ಮೂರು ವರ್ಷ ರಾಮೋಜಿ ಪ್ರಾಯದಲ್ಲಿ ವ್ಯಾಸಂಗವನ್ನು ಮಾಡಿದುದು ಚೊಟೋರ್ಜಿಯ ಹಾಗೆ ಮಾತನಾಡಲು ಬಲು ಸಹಾಯಕವಾಗಿತ್ತು.

ದಿಳ್ಳಿಯ ಎಫ್. ಬಿ. ಐ. ಯವರ ನೆಪ ಹೇಳಿ ಪುರುಷೋತ್ತಮರಾಯನಿಗೆ ಡೈರಿ ತೋರಿಸಿ, ಈ ಡೈರಿಯ ಪ್ರಕಾರ 46 ವಿಮಾ ಪ್ರಕರಣಗಳಲ್ಲಿ ವಿಮಾ ಮಾಡಿದ 2–3 ವರ್ಷಗಳಲ್ಲಿ, ಐದು, ಹತ್ತು, ಹದಿನೈದು ಸಾವಿರಗಳಂತೆ ವಿಮಾ ಹಣವನ್ನು ಪಡೆಯಲಾಗಿದೆ. 46 ಜನ ಸತ್ತವರು ಮುದುಕರು. ವಿಮಾ ಹಣವನ್ನು ಪಡೆಯಬೇಕಾದ 46 ಜನರೂ 20–22ರ ಯುವಕರು. ಡೆತ್ ಸರ್ಟಿಫಿಕೇಟ್‌ನಲ್ಲಿ ಮುದುಕರ ವಯಸ್ಸನ್ನು 20–22ರ ಯುವಕರ ವಯಸ್ಸು ಎಂದು ಬರೆಸಲಾಗಿದೆ. ಹೊಳ್ತಂಗಡಿಯ ಡಾಕ್ಟರು ಬಲು ಸಾಧು. ನಾಯ್ಡು ಅವರ ಬಾಯಿಗೆ ಮೊಸರನ್ನವನ್ನು ವರಸಿದ್ದಾನೆ. ಅಂದರೆ ನಾಯ್ಡು ಮತ್ತು ಪುರುಷೋತ್ತಮರಾಯರು ಒಟ್ಟು ಐದು ಲಕ್ಷ ಎಂಬತ್ತು ಸಾವಿರ ರೂಪಾಯಿಗಳನ್ನು, ವಿಮಾ ಕಂಪನಿಯಿಂದ ನಾಲ್ಕು ವರ್ಷಗಳಲ್ಲಿ ಲಪಟಾಯಿಸಿದ್ದಾರೆ ಎಂದು ರಾಮೋಜಿ ವಿವರಿಸಿದ.

Scanned by CamScanner

ಪುರುಷೋತ್ತಮರಾಯರ ಹಣೆಯ ಮೇಲಿದ್ದ ಅಂಗಾರ ಕರಗಿ ನೀರಾಗಿ ಹರಿಯಿತು. ಆಗ ರಾಮೋಜಿ ತನ್ನ ಮಾತನ್ನು ಮುಂದುವರೆಸಿದ.

"ರಾಯರೇ ! ವಿಮಾ ಕಂಪನಿಯು ರಾಷ್ಟ್ರೀಕರಣವಾದ ಮೇಲೆ, ಅಲ್ಲಿನ ಜನರಿಗೆ ಸೇವಾ ಮನೋಭಾವವು ಶೂನ್ಯವಾಯಿತು. ನಮ್ಮ ನಮ್ಮ ಪಾಡು ನೋಡಿಕೊಳ್ಳೋಣ. ಸತ್ತವರ ಹಣ ಇದ್ದವರಿಗೆ ಬರಲು ಅಡ್ಡಿಯಾದರೆ ನಮಗೇನು ಗುನುಗು ಎಂಬ ಅಭಿಪ್ರಾಯ ಮೂಡಿದೆ. ವಿಮಾ ಮಾಡಿದವರ ಕೃಪೆಯಿಂದ ತಮ್ಮ ಸಂಬಳವು ಸಿಗುತ್ತದೆ ಎನ್ನುವುದನ್ನು ಅವರು ಪೂರ್ತಿ ಯಾಗಿ ಮರೆತಿದ್ದಾರೆ. ತದ್ವಿರುದ್ಧ ನಾವೇ ಅವರಿಗೆ ಅನುಕೂಲ ಮಾಡಿ ಕೊಡುತ್ತೇವೆ ಎಂದು ಜಂಭಪಡುತ್ತಿದ್ದಾರೆ.

ಅಂದಮೇಲೆ ರಾಷ್ಟ್ರೀಕರಣವಾದ ವಿಮಾ ಕಂಪನಿಯ ತಲೆಯನ್ನು ನೀವಿಬ್ಬರೂ ನುಣ್ಣಗೆ ಬೋಳಿಸಿದರೆ ನನ್ನ ಅಭ್ಯಂತರವೇನೂ ಇಲ್ಲ.

ಆದರೆ ನೀವು ಗಿಟ್ಟಿಸಿದ ಮೂರು ಲಕ್ಷದಲ್ಲಿ, ನನಗೆ ಎರಡು ಲಕ್ಷ ಕೊಡಿ. ಈ ಡೈರಿಯನ್ನು ನಿಮಗೆ ಕೊಡುತ್ತೇನೆ. ನಂತರ ನೀವು ಸುಖವಾಗಿರಬಹುದು. ಇಲ್ಲದೆ ಹೋದರೆ ಡೈರಿಯನ್ನು ದಿಳ್ಳಿಗೆ ಕಳಿಸುತ್ತೇನೆ" ಎಂದ ರಾಮೋಜಿ.

ಒಂದೆರಡು ನಿಮಿಷ ಪುರುಷೋತ್ತಮರಾಯರು ಯೋಚಿಸಿದರು. ತಮ್ಮ ಮತ್ತು ನಾಯ್ಡುವಿನ ಸಂಚೆಲ್ಲವೂ ಚೋಟೋರ್ಜಿಗೆ ಗೊತ್ತಾಗಿದೆ ಎಂದು ಮನವರಿಕೆಯಾದ ಕೂಡಲೇ "ಎರಡು ದಿನ ಅವಕಾಶ ಕೊಡಿ. ಎರಡು ಲಕ್ಷ ನಗದು ತಂದು ನಿಮಗೆ ಕೊಟ್ಟು ಡೈರಿಯನ್ನು ಪಡೆಯುತ್ತೇನೆ" ಎಂದು ಹೇಳಿದ.

ಎರಡು ದಿನಗಳಾದ ಮೇಲೆ 2 ಲಕ್ಷ ತಂದು ಕೊಟ್ಟು ರಾಯರು ಡೈರಿ ಯನ್ನು ಪಡೆದರು.

ನಾಯ್ಡು ಅವರು ತಮ್ಮ ಸಂಚಿನ ಪ್ರಯುಕ್ತ ರೋಗಿಗಳ ಶುಶ್ರೂಷೆ ಮಾಡಿದರು. ಆ ವಿವರಗಳನ್ನು ತಿಳಿದುಕೊಂಡು, ಆ ಹೆಸರನ್ನೇ ಕೊಟ್ಟು ಬೇರೆಯವರ ಕೈಲಿ ವಿಮಾ ಮಾಡಿಸುತ್ತಿದ್ದರು. ಆದರೂ ಆ ನೆಪದಿಂದ ನರಳುವವರ ಕೊರಗನ್ನು ಕಡಿಮೆ ಮಾಡಿದುದರಿಂದ ಅವರಿಗೆ ಗಿಟ್ಟಿದ ಹಣ ವನ್ನು ಅವರೇ ಅನುಭವಿಸಲಿ ಎಂದು ತೀರ್ಮಾನಿಸಿದೆ.

ಒಟ್ಟು ಗಿಟ್ಟಿದ್ದು ಎರಡು ಲಕ್ಷ ರೂಪಾಯಿಗಳು.

ಬಿಡ್ಡಣ್ಣ ಹೇಳಿದ. ಈ ವ್ಯವಹಾರದಲ್ಲಿ ನನಗೆ ಏನೂ ಹಣಬೇಡ. ಮಹರಾಯ್ತಿ ಡಾಕ್ಟರ ಹೆಂಡತಿ ತುಂಬು ಹರಕೆಯಿಂದ ತಮಗೆ ಅಣ್ಣ ಕೊಟ್ಟ

ಉಡುಗೊರೆಯನ್ನು ನನಗೆ ಸಿಗಬಹುದಾದ ಹೆಂಡತಿಗೆಂದು ಕೊಟ್ಟರು. ಹೊಳ್ಳಂಗಡಿಯಲ್ಲಿ 8 ತಿಂಗಳು ನಾನು ಬಾಳಿದ ರೀತಿಯನ್ನು ಹೇಳಿ, ಆ ಸೀರೆ ಯನ್ನು ಕೊಟ್ಟೆ. ಆಕೆ ಕಣ್ಣಿಗೆ ಸೀರೆಯನ್ನು ಒತ್ತಿಕೊಂಡು, ನನ್ನೆದುರಿಗೇ ಉಟ್ಟುಕೊಂಡಳು. ಅಷ್ಟೇ ಖುಷಿ ಸಾಕು ನನಗೆ" ಎಂದ.

ರಾಮೋಜಿಯ ಖರ್ಚು ಮುನ್ನೂರು ರೂಪಾಯಿ. ಮಜೇಂದ್ರ ಭವನದ ಖರ್ಚು. ನಿಮ್ಮದೇ ಹೋಟಲು, ಆ ಲೆಕ್ಕಕ್ಕೆ ಅದನ್ನು ಹಾಕಿ, ನನಗೇನೂ ಹಣಬೇಡ ಎಂದ ರಾಮೋಜಿ.

ಕೇಂದ್ರ ಸರಕಾರದ ಕೆಂಪು ತ್ರಿಕೋಣದ ಪ್ರಚಾರ ಶಾಖೆಯು ಮಾಲತಿಯ ಖರ್ಚನ್ನು ವಹಿಸಿಕೊಂಡಿದೆ. ಆಕೆಯೂ ನನಗೇನೂ ಬೇಡ ಎಂದಳು.

ಆದಕಾರಣ ಎರಡು ಲಕ್ಷ ರೂಪಾಯಿಗಳನ್ನು ಕೊಂಡೆನಕಪಲ್ಲಿಯ ಪೂಜಾರಪ್ಪನವರ ಕಾಲ ಬಳಿ ಹಾಕಿ, ಈ ವರ್ಷದ ಕಾಣಿಕೆ ಎಂದು ಅವರ ಕಾಲು ಹಿಡಿದು ಅಡ್ಡ ಬೀಳುತ್ತೇನೆ.

ಅವರ ಆಣತಿಯ ಪ್ರಕಾರ, ಇದನ್ನು ಪ್ರಕಟಣೆಗೆಂದು ನಿಮಗೆ ಕಳುಹಿಸು ತ್ತಿದ್ದೇನೆ.

ನಿಮ್ಮವ,
"ಬುದ್ಧೋಜಿ"

Scanned by CamScanner

ಅಮ್ಮದ್ ಬ್ಯಾರಿ ಅಡಿಚೊಂಡೋ ....

ಈ ಕರೆಯ ಹಿಂದೆ ಅಡಗಿದೆ ಒಂದು ರಹಸ್ಯ ಕತೆ

ತಟ್ಟೆಯ ಮೇಲೆ ಬಡಿಸಿದ್ದ ಎರಡು ತುಣುಕುಗಳನ್ನು ಬಿಡ್ಡಣ್ಣ ಎವೆಯಿಕ್ಕದೆ ನೋಡಿದ. ಒಂದು ಚೂರನ್ನು ತೆಗೆದು ಬಾಯಿಗಿಟ್ಟುಕೊಂಡ. ರುಚಿಯಾಗಿದೆ. ಆದರೂ ಯಾವುದೋ ವಾಸನೆ ಬಡಿಯುತ್ತಲ್ಲ ಎಂದು ಯೋಚಿಸಿದ. ಆದರೂ ಕರೆದಿಟ್ಟಿದ್ದ ಉಪ್ಪು ಮೆಣಸಿನಕಾಯಿಗಳು ಇದ್ದುದರಿಂದ ಅವನ್ನು ನಂಚಿಕೊಳ್ಳುತ್ತಾ, ಮೀನಿನ ಸಾರನ್ನು ಅನ್ನದೊಂದಿಗೆ ಕಲಸಿಕೊಂಡು ಊಟ ಮಾಡಿದ. ಮೊಸರನ್ನವನ್ನು ಕಲಸಿಕೊಳ್ಳಬೇಕು ಎಂದಾಗ ಅದು ಇದ್ದೇ ಇರುತ್ತೆ, ಮಿಡಿಗಾಯಿ ರಸದಲ್ಲಿ ಅನ್ನ ಕಲಸಿಕೊಂಡು ಮೊಸರು ಕುಡಿದು ಬಿಡೋದು ಎಂದು ನಿರ್ಧರಿಸಿದ. ಮಿಡಿಗಾಯಿ ರಸದಲ್ಲಿ ಅನ್ನ ಕಲಸಿ, ತುಸು ಧಾರಾಳವಾಗಿ ತುಪ್ಪ ಹಾಕಿಕೊಂಡು, ಒಂದು ತುತ್ತು ಅನ್ನ, ಒಂದು ಚಮಚ ಮೊಸರು, ಹೀಗೆ ತಿನ್ನಲು ಶುರುಮಾಡಿದ. ಸಾವಧಾನವಾಗಿ ಅಗಿಯುತ್ತಿದ್ದುದನ್ನು ಕಂಡರೆ, ಬಲು ರುಚಿಯನ್ನು ಬಯಸುವ ಆಸಾಮಿ ಎಂಬುದು ಸುಲಭವಾಗಿ ತಿಳಿಯುತ್ತಿತ್ತು.

ಅವನ ಬಲ ಪಕ್ಕದಲ್ಲಿ ಹಾಗೂ ಸ್ವಲ್ಪ ಮುಂದೆ ಇನ್ನೊಂದು ತಟ್ಟೆಯನ್ನು ಹಾಕಲಾಗಿತ್ತು. ಆದರೆ ಆ ತಟ್ಟೆಯ ಮುಂದೆ ಯಾರೂ ಊಟಕ್ಕೆ ಕುಳಿತಿರಲಿಲ್ಲ. ಆಗಿಂದಾಗ್ಗೆ ಬಿಡ್ಡಣ್ಣ ಖಾಲಿ ತಟ್ಟೆಯನ್ನು ನೋಡಿ, ಜತೆ ಊಟ ಬಲು ಮಜ, ಎಂದಂದುಕೊಳ್ಳುತ್ತಿದ್ದ. ಸಾಮಾನ್ಯವಾಗಿ ಬಿಡ್ಡಣ್ಣನ ಹೆಣ್ಣು ಅಡಿಗೆಯನ್ನೆಲ್ಲಾ ಸುತ್ತಲೂ ಇಟ್ಟುಕೊಂಡು, ಜತೆ ಊಟಕ್ಕೆ ಕೂರುತ್ತಿದ್ದಳು. ಎಡಗೈನಿಂದ ಬಿಡ್ಡಣ್ಣನಿಗೂ ತನಗೂ ಬಡಿಸಿಕೊಂಡು ಲಲ್ಲೆಯಾಡುತ್ತ ಉಣ್ಣುವ ಅಭ್ಯಾಸ. ಆದರೆ ಇಂದು ಊಟಕ್ಕೆ ಕುಳಿತಿದ್ದವಳು ಏನನ್ನೋ ಸ್ಮರಿಸಿಕೊಂಡು, ತಟ್ಟಂತ ಎದ್ದಿದ್ದಳು. ಒಂದು ಡಬರಿಯ ತುಂಬ ತಾನು ಮಾಡಿದ್ದ ಮೀನಿನ ಹುಳಿಯನ್ನು ಹಾಕಿ, ಎಲೆಯನ್ನು ಅದರ ಮೇಲೆ ಮುಚ್ಚಿ, ಮನೆಯನ್ನು ಬಿಟ್ಟು ಹೊರಕ್ಕೆ ಕಾಲಿಟ್ಟಿದ್ದಳು. "ಬಿಡ್ಡಣ್ಣ ! ನೀನು ಉಣ್ಣಕ್ಕೆ ಶುರು ಮಾಡು, ಎಲೆ ಮುಂದೆ ತೂಕಡಿಸಬಾರದು. ಬೇಗ ಬಂದು ಬಿಡ್ತೀನಿ. ಆಮೇಲೆ ನಾನು ಉಣ್ಣುತೀನಿ" ಎಂದು ಹೇಳಿ ನಡೆದೇ ಬಿಟ್ಟಿದ್ದಳು.

"ಊಟದ ವೇಳೆಯಲ್ಲಿ ಎಲ್ಲಿಗೆ ಹೋಗ್ತಿ ?" ಎಂದು ಬಿಡ್ಡಣ್ಣ ಕೇಳಬೇಕಾಗಿತ್ತು. ಆದರೆ ಅವನಿಗೂ, ಆ ಹೆಣ್ಣಿಗೂ ಒಂದು ರೀತಿಯ ಅಪ್ರಕಟಿತ ಕರಾರು ಇತ್ತು. ಒಬ್ಬರನ್ನೊಬ್ಬರು ಎಲ್ಲಿ ಹೋಗ್ತಿ ಏನು ಮಾಡ್ತಿ ಎಂದು ಕೇಳುತ್ತಿರಲಿಲ್ಲ. ಜತೆಗೂಡಿದಾಗ ನಲಿಯುತ್ತಾ ಇರುವುದು, ಪರಸ್ಪರವಾಗಿ ಪೂರ್ಣನಂಬುಗೆಯನ್ನು ಇಟ್ಟುಕೊಂಡಿರುವುದು, ಒಬ್ಬರ ಅಧೀನದಲ್ಲಿ ಇನ್ನೊಬ್ಬರು ಇರುವುದು ಬೇಡ, ಸ್ವತಂತ್ರವಾಗಿದ್ದು, ಸ್ವಚ್ಛಂದವಾಗಿ ಚಕ್ಕಂದವಾಡಿದರೆ ಬಲು ಮೋಜು, ಹೀಗೆಲ್ಲಾ ಮಾತುಕತೆಗಳಲ್ಲಿ ಏಕಾಭಿಪ್ರಾಯವನ್ನು ಇಬ್ಬರೂ ಸೂಚಿಸಿದ್ದರು. ಹಾಗೆಯೇ ನಡೆದುಕೊಂಡೂ ಇದ್ದರು.

ಆದಕಾರಣ ಊಟಕ್ಕೆ ಕುಳಿತಿದ್ದ ಹೆಣ್ಣು ಜಟ್ಟಂತ ಎದ್ದುಹೋದಾಗ, ಮನಸ್ಸಿಗೆ ಸ್ವಲ್ಪ ಕಸಿವಿಸಿಯಾದರೂ ಬಿಡ್ಡಣ್ಣ ತನ್ನ ಊಟವನ್ನು ಮುಂದುವರೆಸುತ್ತಿದ್ದ.

ಆದರೂ ಅವನ ಮನಸ್ಸು ಹೊಯ್ದಾಡಹೊತ್ತಿತು. ಹೆಣ್ಣಿಗೇನೋ ಮೂವತ್ತರ ಪ್ರಾಯ. ಆದರೆ ಹದಿನೆಂಟರ ಹದಮೀರಿದ ಆಕರ್ಷಣೆಯು ಇನ್ನೂ ಹಸಿರಾಗಿತ್ತು.

ಅನುಭವದಿಂದ ಸಾಧಿಸಿಕೊಂಡಿದ್ದ ಒಂದು ತೆರನ ಕಣ್ಣನೋಟದಿಂದ ಹಾಗೂ ಆಕಸ್ಮಿಕವಾಗಿ ಆದಂತಿದ್ದ ಒಂದು ಸಣ್ಣ ಜಿಗುಟುವಿಕೆಯಿಂದ ಆ ಹೆಣ್ಣು ಬಿಡ್ಡಣ್ಣನನ್ನು ಹುಚ್ಚೆಬ್ಬಿಸುತ್ತಿದ್ದಳು. ಸ್ವಚ್ಛಂದ ಪ್ರಕೃತಿಯ ಹೆಣ್ಣು. ಚೆಂದ ಕಂಡುದನ್ನು ತನ್ನದಾಗಿಸ ಬಯಸುವ ಹೆಣ್ಣು, ಏನಾದರೂ ಕಂಡುದನ್ನೇ ಕಂಡು ಬೇಸರ ಬಂದು ಹೊಸದನ್ನು ಬಯಸಿದೆಯೋ ಎಂದು ಬಿಡ್ಡಣ್ಣನಿಗೆ ಅನಿಸಿತು.

ಛೇ ! ಛೇ ! ಇರಲಾರದು. ಕಳೆದ ಹತ್ತು ಹನ್ನೆರಡು ವರ್ಷಗಳಿಂದ ಸ್ವತಂತ್ರ ಜೀವನ ಮಾಡಿಕೊಂಡಿದ್ದರೂ ನನ್ನ ಮೇಲಿನ ಆದರದಲ್ಲಿ ಸ್ವಲ್ಪವೂ ಕಮ್ಮಿಯಾದಂತೆ ನಡೆದುಕೊಂಡಿಲ್ಲ. ಅಡ್ಡಾದಿಡ್ಡಿ ಕೆಲಸವನ್ನು ಮಾಡುತ್ತಿರುವ

Scanned by CamScanner

ವರ್ಷಕ್ಕೆ ಎರಡು ತಿಂಗಳೋ, ಮೂರು ತಿಂಗಳೋ ಅವಳೊಡನೆ ಇರುವ ನನ್ನನ್ನು ಎಂದೋ ಅವಳು ಅಟ್ಟಿಬಿಡಬಹುದಾಗಿತ್ತು. ಆದರೂ ಹಾಗೆ ಮಾಡದೆ ದಿನದಿನಕ್ಕೆ ಅಧಿಕವಾಗಿ ಪ್ರೇಮಿಸುತ್ತಿದ್ದಾಳೆ. ಅಪನಂಬಿಕೆಯನ್ನು ಹೊಂದಬಾರದು, ಎಂದು ಬಿಡ್ಡಣ್ಣ ತನಗೆ ತಾನೇ ಬುದ್ಧಿ ಹೇಳಿಕೊಂಡ.

ಮಿಡಿಗಾಯಿ ರಸದಲ್ಲಿ ಕಲಸಿದ ಅನ್ನ ಇನ್ನೂ ಎರಡು ತುತ್ತುಗಳಿದ್ದುವು. ಮೂರು ಚಮಚದಷ್ಟು ಮೊಸರು ಉಳಿದಿತ್ತು.

ಆ ವೇಳೆಗೆ ಸರ ಸರ ಅಂತ ಆ ಹೆಣ್ಣು ಹಿಂತಿರುಗಿ ಬಂದಿತು. ಹಣೆಯನ್ನು ಸೆರಗಿನಿಂದ ಒರೆಸಿಕೊಂಡು ಉಣಲು ಕುಳಿತಿತು.

"ಕಲ್ಯಾಣಿಬಾಯಿಯ ಮನೆಗೆ ಹೋಗಿದ್ದೆ, ಬಿಡ್ಡಣ್ಣ. ಮೀನಿನ ಸಾರನ್ನು ಹೇಗೆ ಮಾಡುವುದು ಎಂಬುದನ್ನು ಅವಳೇ ಕಲಿಸಿದ್ದು ನನಗೆ. ನೀನು ಅಂದಿದ್ದೆಯಲ್ಲಾ, ಅವತ್ತು, ಕಡಲ ತೀರದ ಹಳ್ಳಿಗಳಿಗೆ ಹೋಗಿ ಕೆಲವು ವಾರಗಳಿರಬೇಕು ಎಂದು. ಪಶ್ಚಿಮದ ಕಡಲ ತೀರದವರು ಮೀನಿನ ಸಾರನ್ನು ಬಹಳವಾಗಿ ಉಪಯೋಗಿಸುತ್ತಾರೆ. ಅದರ ರುಚಿಯನ್ನು ನಿನಗೆ ಮಾಡಿಕೊಡೋಣ ಎಂದುಕೊಂಡೆ. ಸಂಪಿಗೆ ಮರದ ಮನೆಯಲ್ಲಿ ಕಲ್ಯಾಣಿಬಾಯಿ ಇದ್ದಾಳಲ್ಲ, ಅವಳು ಕಡಲತೀರದ ಹೆಣ್ಣು. ಮೀನಿನ ಸಾರನ್ನು ಹೀಗೆ ಹೀಗೆ ಮಾಡಬೇಕು ಎಂದು ಅವಳೇ ಕಲಿಸಿದಳು. ಈ ದಿನ ಮಾ ಡಿ ದ ಸಾರು ಘಮ ಘಮ ಅಂತಿತ್ತು. ಅವಳಿಗೂ ಕೊಟ್ಟು ಬರೋಣ, ಅವಳೂ ಉಣ್ಣುವ ಹೊತ್ತು, ಎಂದು ನೆನಪಾಯ್ತು. ಅದಕ್ಕೆ ಜಟ್ಟಂತ ಓಡಿಹೋದೆ ಎಂದು ವರದಿ ಸಲ್ಲಿಸಿ, ತುತ್ತು ಕಲಸಲಾರಂಭಿಸಿದಳು.

"ಯಾರೇ ಕಲ್ಯಾಣಿಬಾಯಿ ! ನನಗೆ ನೆನಪಿಲ್ಲವಲ್ಲ" ಎಂದ ಬಿಡ್ಡಣ್ಣ.

"ಮಂಗಳೂರು ಮಲ್ಲಿಗೆ ದಂಡೇನ, ತುರುಬಿಗೆ ಮುಡಿದುಕೊಂಡಿರುವಾಕೆ" ಎಂದಳು ಆ ಹೆಣ್ಣು. ಅಂದು ನಗಲಾರಂಭಿಸಿದಳು.

ಬಿಡ್ಡಣ್ಣನೂ ನಗಲಾರಂಭಿಸಿದ.

ಕೆಲವು ಕಾಲದ ಹಿಂದೆ ಸಂತೆಗೆ ಹೋಗುತ್ತಿದ್ದ ಹೆಣ್ಣೊಂದನ್ನು ಬಿಡ್ಡಣ್ಣ ದೂರದಿಂದ ನೋಡಿದ್ದ. ಮಲ್ಲಿಗೆ ದಂಡೆಯನ್ನು ಆ ಹೆಣ್ಣು ಬಲು ಅಂದವಾಗಿ ತುರುಬಿಗೆ ಮುಡಿಸಿತ್ತು. ಮುಂದೆ ಮುಂದಕ್ಕೆ ಅದು ನಡೆದು ಹೋಗುತ್ತಿತ್ತು. ಜಿಂಕೆಯ ನಡಿಗೆಯಂತೆ ಆ ಹೆಣ್ಣು ಚಿಮ್ಮಿ ನಡೆದಂತಿತ್ತು. "ವಾರೇ ಪೇರ್"ಎಂದು ಬಿಡ್ಡಣ್ಣ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದ. ಅವನೂ ಸಂತೆಗೆ ಹೋಗುತ್ತಿದ್ದ. ಮಲ್ಲಿಗೆ ದಂಡೆಯನ್ನು ನೋಡಿದ ಮೇಲೆ ಅವನ ನಡಿಗೆ ಸ್ವಲ್ಪ ಬಿರುಸಾಯಿತು.

ಸಂತೆಕಟ್ಟೆಯಲ್ಲಿ ಮಲ್ಲಿಗೆ ದಂಡೆಯ ಹೆಣ್ಣು ಇನ್ನೊಂದು ಹೆಣ್ಣಿನೊಂದಿಗೆ ಮಾತನಾಡುತ್ತಿತ್ತು. ಹತ್ತಿರ ಹೋದಾಗ ಬಿಡ್ಡಣ್ಣನಿಗೆ ಕಂಡಿತು, ತನ್ನ ಹೆಣ್ಣು! ಅದೇ ಮಲ್ಲಿಗೆ ದಂಡೆಯ ಹೆಣ್ಣಿನ ಹತ್ತಿರ ಮಾತನಾಡುತ್ತಿದ್ದುದು. "ಬಿಡ್ಡಣ್ಣ, ಬಿಡ್ಡಣ್ಣ, ಆ ಅಂಗಡಿಯಲ್ಲಿ ತಾಳೆ ಬೊಂತೆಗಳಿವೆ. ಒಂದೆರಡು ಕೊಂಡು ತಾ, ನಾ ಹೋದರೆ ದುಬಾರಿ ಬೆಲೆ ಹೇಳುತ್ತಾಳೆ" ಎಂದು ಬಿಡ್ಡಣ್ಣನ ಹೆಣ್ಣು ಕೂಗಿತು. ಆಗ ಮಲ್ಲಿಗೆ ದಂಡೆಯ ಹೆಣ್ಣು ಹಿಂತಿರುಗಿ ನೋಡಿತು. ಅಸಾಧ್ಯ ಕಪ್ಪು ಮುಖ. ಅವಲಕ್ಷಣವಾದ ಮುಖ. ಮುಂದೆ ನೋಡಿದಾಗ ಒಂದು ಹೆಣ್ಣು ಈ ರೀತಿ ಅವಲಕ್ಷಣವಾಗಿದ್ದು, ಹಿಂದಿನಿಂದ ನೋಡಿದಾಗ ಅಯಸ್ಕಾಂತದಂತೆ ಸೆಳೆಯುವ ಶಕ್ತಿಯನ್ನು ಹೊಂದಿರುತ್ತದಲ್ಲ ಎಂದು ಬಿಡ್ಡಣ್ಣ ಆಗ ಅಚ್ಚರಿಗೊಂಡಿದ್ದ. ಅದನ್ನು ಕಂಡ ಬಿಡ್ಡಣ್ಣನ ಹೆಣ್ಣು "ಇವರು ಕಲ್ಯಾಣಿಬಾಯಿ, ನನಗೆ ತುಂಬಾ ದೋಸ್ತು, ಮಲ್ಪೆ ಕಡೆಯವರು. ಬಲು ಚೆನ್ನಾಗಿ ಅಡಿಗೆ ಮಾಡುತ್ತಾರೆ. ಮಜೇಂದ್ರ ಭವನದ ಅಡಿಗೆ ಶಾಖೆಯಲ್ಲಿ ಕೆಲಸ ಮಾಡುತ್ತಾರೆ" ಎಂದು ಪರಿಚಯ ಮಾಡಿಕೊಟ್ಟಿದ್ದಳು.

ಆ ಘಟನೆಯ ಸ್ಮರಣೆಯೇ ಇಬ್ಬರಿಗೂ ನಗುವನ್ನು ತಂದಿತ್ತು. "ಆದರೂ ಸಾರು ಎಂತದೋ ವಾಸನೆ ಹೊಡೆಯುತ್ತಲ್ಲ! ಮೀನಿನ ವಾಸನೆಯಂತೂ ಅಲ್ಲ" ಎಂದು ಬಿಡ್ಡಣ್ಣ ಕೇಳಿದ.

"ಕೊಬ್ಬರಿ ಎಣ್ಣೆಯಲ್ಲಿ ಒಗ್ಗರಣೆ ಮಾಡಿ ಹಾಕಿದೆ. ಅದರ ವಾಸನೆ ಹಾಗಿದೆ. ಅದನ್ನು ನೀನು ಅಭ್ಯಾಸ ಮಾಡಿಕೋಬೇಕು. ಕಡಲ ತೀರದ ಹಳ್ಳಿಗಳಲ್ಲಿ ಇಂತದೇ ಅಡಿಗೆ. ಅದನ್ನೇ ನೀನು ಉಣಬೇಕು. ಒಮ್ಮೆ ಹೋದರೆ ಹಿಂತಿರುಗುವುದಕ್ಕೆ ಎಷ್ಟು ದಿನಗಳಾಗುತ್ತೋ ನಿನಗೂ ಗೊತ್ತಿಲ್ಲ. ಅಂದಮೇಲೆ ಅಭ್ಯಾಸ ಮಾಡಿಕೊಂಡರೆ ಚೆಂದ. ಹಾಗಂತಲೇ ಈ ಅಡಿಗೆಯನ್ನು ಕಲಿತು, ನಿನಗೆ ಮಾಡಿ ಬಡಿಸಿದೆ" ಎಂದಳು.

ಉಳಿದಿದ್ದ ಮೂರು ತುತ್ತುಗಳನ್ನು ಬಿಡ್ಡಣ್ಣ ಮುಗಿಸುವ ವೇಳೆಗೆ ಬಿಡ್ಡಣ್ಣನ ಹೆಣ್ಣು ತನ್ನ ಊಟವನ್ನು ಮುಗಿಸಿದ್ದಳು. ಕೈ ತೊಳೆಯಲು ಬಚ್ಚಲ ಕಡೆಗೆ ಇಬ್ಬರೂ ತಟ್ಟೆಗಳನ್ನು ಎತ್ತಿಕೊಂಡು ಹೋದರು. ಕೈತೊಳೆದುಕೊಂಡು,ಹಿಂತಿರುಗಿ ಹಜಾರಕ್ಕೆ ಬರುವಾಗ, ಬಿಡ್ಡಣ್ಣನ ತೊಡೆಯನ್ನು ಹೆಣ್ಣು ಹಗೂರಾಗಿ ಜಿಗುಟಿತು.

* * *

ದಾಮೋದರ ಶಹಣೈ ಅವರು ಬ್ಯಾಂಕೊಂದರ ಹಿರಿಯ ಅಧಿಕಾರಿಗಳು. ಬಲು ಚೂಟಿ ಮನುಷ್ಯ. ಶ್ರೀಮಂತರನ್ನು ಮಾತ್ರ ಅನುಸರಿಸಿಕೊಂಡು ತಮ್ಮ

ಬ್ಯಾಂಕಿನ ಪುರೋಭಿವೃದ್ಧಿಯನ್ನು ಸಾಗಿಸಿರಲಿಲ್ಲ. ಮಧ್ಯಮ ವರ್ಗದವರು, ಬಡವರು, ಇಂತಹವರನ್ನು ಕೂಡಿಕೊಂಡು ಬ್ಯಾಂಕಿನ ವಹಿವಾಟನ್ನು ಅಭಿವೃದ್ಧಿಗೊಳಿಸಿದ್ದರು. ಮನುಷ್ಯನ ಗುಣವನ್ನು ನೋಡಿ ಸಾಲವನ್ನು ಕೊಡಬೇಕು. ಅವನ ಆಸ್ತಿಯನ್ನು ಆಧಾರಮಾಡಿಕೊಂಡು ಸಾಲ ಕೊಡುವುದು ಹಿರಿಮೆಯಲ್ಲ ಎಂದವರು ಹೇಳುತ್ತಿದ್ದರು. ಹೇಳಿದಂತೆಯೇ ನಡೆದುಕೊಂಡೂ ಇದ್ದರು. ಸೆಕ್ಯೂರಿಟಿ ಇಲ್ಲದೆ ಸಾಲವನ್ನು ಕೊಟ್ಟರೆ ನಿನ್ನ ಬ್ಯಾಂಕು ಮೂರು ದಿನಗಳಲ್ಲಿ ದಿವಾಳಿ ಏಳುತ್ತದೆ ಎಂದು ಸ್ನೇಹಿತರು ಹೆದರಿಸಿದ್ದರು. ಆದರೆ ಮೂರು ವರ್ಷಗಳಲ್ಲಿ ಬ್ಯಾಂಕು ಹಳ್ಳಿಗರಲ್ಲಿಯೂ ಜನಪ್ರಿಯವಾಯಿತು. ವಾರ್ಷಿಕ ವಹಿವಾಟು ನೂರ್ಮಡಿ ಹೆಚ್ಚಿತ್ತು. ಮೂರು ವರ್ಷಗಳಲ್ಲಿ ಶಹಣ್ಯೆ ಅವರ ಹೆಸರು ಆ ಪ್ರಾಂತದಲ್ಲೆಲ್ಲಾ ಹರಡಿತು.

ಶಹಣ್ಯೆ ಅವರು ತಮ್ಮ ಮನೆಯಲ್ಲೂ ಲೇವಾದೇವಿಯನ್ನು ಸ್ವಂತವಾಗಿರಿಸಿಕೊಂಡಿದ್ದರು. ಆದರೆ ಈ ವಹಿವಾಟು ಕೇವಲ ಕೆಲವರಿಗೆ ಮಾತ್ರ ಮೀಸಲಾಗಿತ್ತು. ಅದೂ ಬಹಳ ಗುಟ್ಟಿನಲ್ಲಿ. ಹಳ್ಳಿಗಳ ಕಡೆಯಿಂದ ಕೆಲವರು ಬಂದು ಶಹಣ್ಯೆ ಅವರನ್ನು ಕಾಣುತ್ತಿದ್ದರು. ಹಣವನ್ನು ನಗದು ಪಡೆದು ಹೋಗುತ್ತಿದ್ದರು. ಈ ಲೆಕ್ಕವನ್ನೆಲ್ಲ ಶಹಣ್ಯೆ ಅವರೇ ಗುರುತಿಡುತ್ತಿದ್ದರು. ಆದರೆ ಒಂದೆರಡು ವರ್ಷಗಳಿಂದ ಸರೋಜಾಬಾಯಿ ಅಕ್ಕನ ಮನೆಯಲ್ಲಿರಲು ಬಂದಮೇಲೆ ಶಹಣ್ಯೆ ಅವರು ಆಕೆಗೂ ಈ ವಹಿವಾಟಿನ ಪರಿಚಯವನ್ನು ಮಾಡಿಕೊಟ್ಟಿದ್ದರು. ಎಷ್ಟೋ ಬಾರಿ ಇತ್ತೀಚೆಗೆ ಸರೋಜಾಬಾಯಿಯೇ ಬಂದ ಪರಿಚಯಸ್ಥರಿಗೆ ನಗದು ಕೊಟ್ಟು ಕಳಿಸುತ್ತಿದ್ದಳು.

ಒಮ್ಮೆ ಶಹಣ್ಯೆ ಅವರು ನಾಲ್ಕು ದಿನಗಳ ಮದ್ರಾಸ್ ಪ್ರವಾಸವನ್ನು ಕೈಗೊಂಡಿದ್ದರು. ಕಡಲ ತೀರದ ಗ್ರಾಮದ ಪರಿಚಯಸ್ಥನೊಬ್ಬ ಆ ಸಮಯದಲ್ಲೇ ಬಂದಿದ್ದ. "ಧಣಿಗಳು ಊರಿನಲ್ಲಿಲ್ಲವಲ್ಲ. ನನಗೆ ಹಣದ ಅಗತ್ಯ ಬಹಳವಿತ್ತು. ಒಂದು ಸಾವಿರವಾದರೂ ತುರ್ತಾಗಿ ಬೇಕಿತ್ತು" ಎಂದು ಸರೋಜಾಬಾಯಿಯವರಿಗೆ ಹೇಳಿದ್ದ. ಬಂದಿದ್ದವನ ಪರಿಚಯವು ಬಾಯಿಯವರಿಗೆ ಇತ್ತು. ಶಹಣ್ಯೆ ಅವರೇ ಅವನನ್ನು ಹೊಗಳಿದ್ದುದನ್ನು ಕೇಳಿದ್ದಳು. ಆದಕಾರಣ, ಸ್ವಂತ ಜವಾಬ್ದಾರಿಯಿಂದಲೇ ಆಕೆ ಅಹ್ಮದ್ ಬ್ಯಾರಿಗೆ ಸಾವಿರ ರೂಪಾಯಿಗಳನ್ನು ಕೊಟ್ಟು ಕಳುಹಿಸಿದ್ದಳು.

ಊರಿಗೆ ಹಿಂತಿರುಗಿದ ಮೇಲೆ ಶಹಣ್ಯೆ ಅವರಿಗೆ ತಾನು ಮಾಡಿದುದನ್ನು

ಸರೋಜಾಬಾಯಿ ಹೇಳಿದಳು. "ಬಲು ಜಾಣೆ ಕಣೆ! ಒಳ್ಳೆಯ ಕೆಲಸವನ್ನು ಮಾಡಿದೆ. ಅಹ್ಮದ್ ಬ್ಯಾರಿ ಬಲು ನಂಬಿಕಸ್ಥ. ಅವನಿಗೆ ಕೊಟ್ಟ ಹಣ ಎಂದೂ ಪೋಲಾಗುವುದಿಲ್ಲ. ವ್ಯಕ್ತಿಯನ್ನು ನೋಡಿ ತೂಕ ಕಂಡುಹಿಡಿಯುವುದರಲ್ಲಿ ಪ್ರವೀಣೆಯಾಗಿಬಿಟ್ಟಿದ್ದಿ" ಎಂದು ಹೊಗಳುತ್ತಾ ಶಹಣ್ಯೆ ಅವರು ಆಕೆಯ ಸೊಂಟವನ್ನು ಬಳಸಿದ್ದರು. "ಅಕ್ಕ ಎಲ್ಲಾದರೂ ಬಂದುಬಿಟ್ಟಾರು ಬಾಗಿಲು ಚಿಲಕ ಹಾಕ್ತೀನಿ, ನಡೀರಿ" ಎಂದಿದ್ದಳು ಸರೋಜಾಬಾಯಿ.

* * *

ಬೆಳಗಿನ ಝಾಮ ಐದು ಗಂಟೆಗೆ ಎದ್ದು, ಹಸುಗಳಿಂದ ಹಾಲನ್ನು ಹಿಂಡಿ ಪುಟ್ಟಕ್ಕ ಗತ್ತೂರು ಪಾಳ್ಯದಿಂದ ಮಂಗಳೂರಿಗೆ ಹೋಗುತ್ತಿದ್ದಳು. ಒಂದು ಮೈಲು ದೂರ ನಡೆದು ಹೋಗಬೇಕಾದರೆ, ಬಿರುನಡುಗೆಯ ಆಕೆಗೆ ಹದಿನೈದು ನಿಮಿಷಗಳಾಗುತ್ತಿದ್ದುವು. ಮಂಗಳೂರಿನಲ್ಲಿ ಆಕೆ ಒಂದೇ ಮನೆಗೆ ಹಾಲನ್ನು ಕೊಡುತ್ತಿದ್ದಳು. ತಾನು ತರುತ್ತಿದ್ದ ಎಂಟು ಸೇರು ಹಾಲನ್ನೂ ದಾಮೋದರ ಶಹಣ್ಯೆ ಅವರ ಮನೆಗೆ ಕೊಡುವ ವರ್ತನೆ. ತಾಯಿಯ ಕಾಲದಿಂದ ಈ ವರ್ತನೆಯು ಸಾಂಗವಾಗಿ ನಡೆಯುತ್ತಿತ್ತು. ಕಾಲಕ್ಕೆ ತಕ್ಕಂತೆ ದರಗಳು ಏರಿದಾಗಲೂ, ದಾಮೋದರ ಶಹಣ್ಯೆ ಮನೆಯವರು ಚಾಚೂ ತಕರಾರನ್ನು ಎತ್ತಲಿಲ್ಲ. ಪುಟ್ಟಕ್ಕ ಹೇಳಿದ ಬೆಲೆಯನ್ನು ಕೊಡುತ್ತಿದ್ದರು.

ಗತ್ತೂರು ಪಾಳ್ಯದ ಪುಟ್ಟಕ್ಕ ಆ ಪ್ರಾಂತ್ಯದಲ್ಲೆಲ್ಲಾ ಹೆಸರಾಗಿದ್ದವಳು. ಅಂದರೆ ಗಂಡಸರಲ್ಲಲ್ಲ; ಹೆಂಗಸರಲ್ಲಿ. ಯಾವ ಹೆಂಗಸಿಗೆ, ಹೆಂಗಸಿನ ತಾಪತ್ರಯಗಳು ಬಂದರೂ, ಪುಟ್ಟಕ್ಕನ ನೆರವನ್ನು ಕೋರುತ್ತಿದ್ದರೆ ವಿನಹಾ ಆಸ್ಪತ್ರೆಗೆ ಹೋಗುತ್ತಿರಲಿಲ್ಲ. ಹಸಿರು ಔಷಧಿಗಳನ್ನು ಮಾಡುವುದರಲ್ಲಿ ಪುಟ್ಟಕ್ಕನದು ಎತ್ತಿದ ಕೈ ಎಂದು ಪ್ರಸಿದ್ಧಿ. ಅವಳ ಅಜ್ಜಿಗೆ ಬೈರಾಗಿಯೊಬ್ಬ ಈ ಚಿಕಿತ್ಸೆಯನ್ನು ಕಲಿಸಿದ್ದನೆಂಬ ಪ್ರತೀತಿಯೂ ಇತ್ತು. ಹಿಮಾಲಯದಿಂದ ಬಂದಿಳಿದ ಬೈರಾಗಿಗೆ ತಿಳಿಯದೆ ಇರುವ ವಿಷಯಗಳೇನಾದರೂ ಇರಲು ಸಾಧ್ಯವೇ ಇಲ್ಲ ಎಂದು ಹಳ್ಳಿಗಾಡಿನ ಜನರ ನಂಬಿಕೆ.

ಒಂದು ಬೆಳಗಿನ ಝಾಮ ಪುಟ್ಟಕ್ಕ ಹಾಲನ್ನು ಕೊಡಲು ಶಹಣ್ಯೆ ಅವರ ಮನೆಗೆ ಹೋದಾಗ ಸರೋಜಾಬಾಯಿಯವರೇ ಪಾತ್ರೆ ಹಿಡಿದು ಬಂದರು. ಹಾಲನ್ನು ಪಾತ್ರೆಗೆ ಹಾಕಿಸಿಕೊಂಡಮೇಲೆ ಸರೋಜಾಬಾಯಿ "ಇಲ್ಲೇ ಇರು ಪುಟ್ಟಕ್ಕ, ಹಾಲನ್ನು ಅಡಿಗೆಮನೆಯಲ್ಲಿಟ್ಟು ಬರುತ್ತೇನೆ. ಸ್ವಲ್ಪ ಮಾತ

ನಾಣುವುದಿದೆ" ಎಂದು ಹೇಳಿ ಒಳಕ್ಕೆ ಹೋದರು. ತುಸು ಹೊತ್ತಿನಲ್ಲೇ ಹಿಂತಿರುಗಿ "ಬಾ" ಎಂದು ಪುಟ್ಟಕ್ಕನನ್ನು ಕರೆದರು.

ಸರೋಜಾಬಾಯಿಯವರು ಶಹಣ್ಯೆ ಅವರ ನಾದಿನಿ. ಆಕೆಯ ಗಂಡ ವಿಲಾಯಿತಿಗೆ ಹೋಗಿ ಅಭ್ಯಾಸ ಮಾಡುತ್ತಿದ್ದಾನೆಂದೂ, ಹಿಂತಿರುಗಲು ಕೆಲವು ಕಾಲವಾಗಬಹುದೆಂದೂ ವದಂತಿ ಇತ್ತು. ಆದಕಾರಣ ತಂದೆಯಿಲ್ಲದ ಆಕೆ ತನ್ನ ಅಕ್ಕನ ಮನೆಯಲ್ಲೇ ಇರುತ್ತಿದ್ದಳು. ಚಿಂದುಳ್ಳಿ ಹೆಣ್ಣು ಸರೋಜಾಬಾಯಿ. ಜಾಣ ಹೆಣ್ಣು. ಕಲಿತಾಕೆ. ಅವಳ ಅಕ್ಕ ಸ್ವಲ್ಪ ಪೆದ್ದು, ಹೆಚ್ಚು ಪೊದ್ದು. ಆದಕಾರಣ ಸ್ವಾಭಾವಿಕವಾಗಿ ಸರೋಜಾಬಾಯಿಯೇ ದೊಡ್ಡ ಸಂಸಾರದ ನಿರ್ವಹಣೆಯನ್ನು ಹೊತ್ತಿದ್ದಳು. ಅಧಿಕಾರವಿದ್ದ ಹೆಣ್ಣು, ಅದೂ ತುಂಬು ಪ್ರಾಯದ ಹೆಣ್ಣು ಜಂಭ ಪಡದೇ ಇರಲು ಸಾಧ್ಯವೇ ? ಅಂತಹ ಜಂಭಗಾರ್ತಿ ತಾನೇ ಹಾಲನ್ನು ಹಾಕಿಸಿಕೊಳ್ಳಲು ಬರುವುದೆಂದರೆ ಸೋಜಿಗವೇ ಸೈ.

ಆದರೂ ಪುಟ್ಟಕ್ಕ ಸೋಜಿಗ ಪಡಲಿಲ್ಲ. ಅಚ್ಚರಿಪಡಲಿಲ್ಲ. ಇಂತಹ ಅನುಭವಗಳು ಆಕೆಗೆ ಹೊಸದೇನೂ ಅಲ್ಲ. ಇಂತಹ ಸಂದರ್ಭಗಳು ಆಕೆಗೆ ಸರ್ವೇಸಾಮಾನ್ಯ. ಆದಕಾರಣ ಚಕಾರವನ್ನೆತ್ತದೆ ಪುಟ್ಟಕ್ಕ ಸರೋಜಾಬಾಯಿಯ ಹಿಂದೆ ಮನೆಯೊಳಕ್ಕೆ ಹೋದಳು. ತನಗೆಂದು ಮೀಸಲು ಮಾಡಿ ಕೊಂಡಿದ್ದ ಅಂತಃಪುರಕ್ಕೆ ಸರೋಜಾಬಾಯಿ ನಡೆದಳು. ಕೊಠಡಿಯೊಳಕ್ಕೆ ಪುಟ್ಟಕ್ಕ ಹೋದ ಮೇಲೆ ಬಾಗಿಲನ್ನು ಭದ್ರವಾಗಿ ಹಾಕಿದಳು. ಇಬ್ಬರೂ ಗುಸು ಗುಸು ಪಿಸು ಪಿಸು ಮಾತನಾಡಿದರು.

"ಏನೂ ಹೆದರಬೇಡಿ ಸರೋಜಾಬಾಯಿ. ಗತ್ತೂರು ಪಾಳ್ಯಕ್ಕೆ ಒಂದೆರಡು ಸರ್ತಿ ಬಂದು ನಮ್ಮ ಗುಡಿಸಲನ್ನೂ ನೋಡಿಕೊಂಡು ಹೋಗಿ. ಶಿವ ಒಳ್ಳೆಯದನ್ನು ಮಾಡುತ್ತಾನೆ" ಎಂದು ಹೇಳುತ್ತ ಪುಟ್ಟಕ್ಕ ಹೊರ ಬಂದಳು.

* * *

ಮೂರು ವರ್ಷಗಳ ಹಿಂದೆ ವಿಲಾಯಿತಿಗೆ ಹೋಗಿದ್ದ ಗಂಡನು ಆರೋಗ್ಯವಂತನಾಗಿ ಕೀರ್ತಿವಂತನಾಗಿ ಬೇಗ ಹಿಂತಿರುಗಲಿ ಎಂದು ಪ್ರಾರ್ಥನೆ ಸಲ್ಲಿಸಲು ಸರೋಜಾಬಾಯಿಯು ಮೂಕಾಂಬಿಕಾ ದೇವಸ್ಥಾನಕ್ಕೆ ಹೊರಡುವುದೆಂದು ಗೊತ್ತಾಯಿತು. ಮೂರು ವರ್ಷಗಳ ಹಿಂದೆ ತನ್ನ ನಡವಳಿಕೆಯನ್ನು ಅಕಸ್ಮಾತ್ ಕಂಡಿದ್ದ ಪತಿದೇವನು ಆ ಕಾರಣದಿಂದಲೇ ದೂರ ದೇಶಕ್ಕೆ

ಹೋದನೆಂಬ ಸಂಶಯವು ಸರೋಜಾಬಾಯಿಗಿತ್ತು. ವಿಲಾಯಿತಿಯಲ್ಲಿ ಅವ ಬಿಳಿಯ ಹೆಣ್ಣೊಂದನ್ನು ಮದುವೆಯಾಗಿ ಅಲ್ಲಿಯೇ ತಳವೂರಿದನೆಂಬ ಸುದ್ದಿಯೂ ಆಕೆಗೆ ಗೊತ್ತಿತ್ತು. ಆದರೂ ಆ ಪತಿದೇವನೇ ಈಗ ಸರೋಜಾಬಾಯಿಗೆ ನೆನಪಾಗಿಯೂ ನೆರವಾಗಿಯೂ ಬಂದಿದ್ದ. ಆತನ ಸೌಭಾಗ್ಯದ ಹಿಂತಿರುಗುವಿಕೆಗಾಗಿ ಮೂಕಾಂಬಿಕೆಯನ್ನು ಸೇವಿಸಲು ಸರೋಜಾಬಾಯಿಗೆ ಅನುಕೂಲವಾಗಿತ್ತು.

ಮೂಕಾಂಬಿಕಾ ದೇವಸ್ಥಾನಕ್ಕೆ ಹೋದ ಮೇಲೆ ಶಹಣ್ಯೆ ಅವರ ಮೋಟಾರುಕಾರು ದೇವಸ್ಥಾನದ ಮುಂದೆ ನಿಂತಿರುತ್ತಿತ್ತು. ಪೂಜೆ ಮಾಡಲು ಒಳಕ್ಕೆ ಹೋದ ಸರೋಜಾಬಾಯಿಯು ದೇವಾಲಯದ ಹಿಂದಿನ ಬಾಗಿಲಿನಿಂದ ಕೇವಲ ಒಂದೇ ಫರ್ಲಾಂಗ್ ದೂರವಿದ್ದ ಗತ್ತೂರು ಪಾಳ್ಯಕ್ಕೆ ನಡೆದು ಹೋಗುತ್ತಿದ್ದಳು. ಕುರುಚಲು ಪೊದೆಗಳಿದ್ದ ಆ ಕಾಲು ಹಾದಿಯಲ್ಲಿ ಪುಟ್ಟಕ್ಕ ಸರೋಜಾಬಾಯಿಯನ್ನು ಭೇಟಿ ಆಗುತ್ತಿದ್ದಳು. ಗತ್ತೂರು ಪಾಳ್ಯಕ್ಕೆ ಹೋದಾಗ ಇಬ್ಬರು ಹಳ್ಳಿ ಹೆಂಗಸರು, ಒಬ್ಬಳು ಪುಟ್ಟಕ್ಕ, ಇನ್ನೊಬ್ಬಳು ಮಾಸಿದ ಬುರ್ಕಾ ಹಾಕಿಕೊಂಡಿದ್ದ ಸರೋಜಾಬಾಯಿ ಕಾಣಿಸುತ್ತಿದ್ದರು. ಹೀಗಾಗಿ ಸರೋಜಾಬಾಯಿ ಪುಟ್ಟಕ್ಕನ ಗುಡಿಸಲಿಗೆ ಹೋದುದು ಯಾರಿಗೂ ತಿಳಿಯುತ್ತಿರಲಿಲ್ಲ. ಪುಟ್ಟಕ್ಕನ ಆದರ ಆತಿಥ್ಯವನ್ನು ಸ್ವೀಕರಿಸಿದ ಮೇಲೆ ಹಸಿರಿನ ಚಿಕಿತ್ಸೆಯು ಮುಗಿದನಂತರ ಸರೋಜಾಬಾಯಿಯು ಮೂಕಾಂಬಿಕಾ ದೇವಸ್ಥಾನದಲ್ಲಿ ಕಾಣಿಸಿಕೊಳ್ಳುತ್ತಿದ್ದಳು. ಪೂಜೆಯ ನೆಪವನ್ನು ಮುಗಿಸಿ, ಆಕೆ ಹೊರ ಬಾಗಿಲಿನಿಂದ ಹೊರ ಬಿದ್ದು ಮೋಟಾರು ಕಾರಿನಲ್ಲಿ ಕುಳಿತು ಷಹರಿಗೆ ನೆಮ್ಮದಿಯಿಂದ ವಾಪಸಾಗುತ್ತಿದ್ದಳು.

ಮೂಕಾಂಬಿಕೆಯ ವರ ! ಎಲ್ಲರೂ ಮೂಕರಾಗಿಯೇ ಇರುತ್ತಿದ್ದರು.

* * *

ರಾತ್ರಿ ಕತ್ತಲು. ಸುತ್ತಲೂ ಕಗ್ಗತ್ತಲು. ಕಡಲ ತೀರದ ಹಳ್ಳಿಯ ಗುಡಿಸಲಿನಲ್ಲಿ ಕುಳಿತಿದ್ದ ಒಬ್ಬ ವ್ಯಕ್ತಿಯು "ಎಷ್ಟು ಹೊತ್ತು ಕಾಯಬೇಕೋ ಏನೋ ? ಈ ಕತ್ತಲಿನಲ್ಲಿ. ಬಂದು ಬುಡ್ಡಿ ಬಗ್ಗಿಸೋಣ" ಎಂದು ಪಿಸು ನುಡಿಯಲ್ಲಿ ಹೇಳಿದ. ಹತ್ತಿರದಲ್ಲೇ ಕಡಲು ಭೋರ್ಗರೆಯುತ್ತಿತ್ತು. ಆದರೂ ಅವ ಪಿಸುಮಾತಿನಲ್ಲೇ ಮಾತನಾಡುತ್ತಿದ್ದ. ಆ ಹಳ್ಳಿಯಲ್ಲಿ ಇದ್ದುದೇ

Scanned by CamScanner

ಮೂರು ಗುಡಿಸಲುಗಳು. ಎರಡು ಗುಡಿಸಲುಗಳ ಜನ ಬೊಂಬಾಯಿಗೆ ಹೋಗಿ ಹೊಟ್ಟೆಹೊರೆದುಕೊಳ್ಳುತ್ತಿದ್ದರು. ಹಾಗಾಗಿ ಈ ಗುಡಿಸಲೊಂದರಲ್ಲೇ ಜನ ಇನ್ನೂ ಇದ್ದರು. ಹಾಗಿದ್ದರೂ ಪಿಸುಮಾತಿನ ಅಭ್ಯಾಸ ತಪ್ಪಿದ್ದಿಲ್ಲ.

"ಬುಡ್ಡಿಯ ಸುದ್ದಿ ಎತ್ತಬೇಡ ಈಗ. ಯಾವ ಹೊತ್ತಿನಲ್ಲಿ ಬೆಳಕು ಕಾಣುತ್ತೋ ಹೇಳಬರುವುದಿಲ್ಲ. ಸರ್ಪಗಾವಲು ಕಾದಿರಬೇಕು. ಅಹ್ಮದ್ ಬ್ಯಾರಿ ಮೊನ್ನೆಯೇ ಬಂದು ಹೇಳಿ ಹೋಗಿದ್ದಾನೆ. ಏನಾದರೂ ನಾವು ತಪ್ಪಿದರೆ ಥಮ್ಮ ಸುಲಿದುಬಿಡ್ತಾನೆ ಅವ. ಹಿಂತಿರುಗಿ ಬಂದಮೇಲೆ ಕೆಲಸವನ್ನು ಪೂರೈಸಿದ ಮೇಲೆ ಎರಡೆರಡು ಬುಡ್ಡಿ ಎತ್ತಿ ಬಗ್ಗಿಸೋಣ" ಎಂದಂದ ಮೊದಲ ವ್ಯಕ್ತಿ.

ಗುಡಿಸಲ ಬಾಗಿಲಿಂದ ಇಬ್ಬರೂ ಸಮುದ್ರದತ್ತ ನೋಡುತ್ತಿದ್ದರು. ದೂರದಲ್ಲಿ ಎಲ್ಲೋ ನಾಯಿಗಳು ಬೊಗಳುತ್ತಿದ್ದುವು. ಗೂಬೆಗಳು ಹತ್ತಿರದಲ್ಲಿ ಎಲ್ಲೋ ಘುಗ್ಘೂ ಅಂತ ಕೂಗುತ್ತಿದ್ದುವು. ಕರಾಳ ಆಕಾಶದಲ್ಲಿ ನಕ್ಷತ್ರಗಳು ಝಿಳಿಮಿಳಿಸುತ್ತಿದ್ದುವು. ಅಲೆಗಳು ದಡವನ್ನು ಅಪ್ಪಳಿಸುವ ಧ್ವನಿಯು ಕೇಳಿಸುತ್ತಿತ್ತು.

"ಅಲ್ಲಿ ನೋಡು" ಎಂದು ಹಠಾತ್ತನೆ ಒಬ್ಬ ನುಡಿದ. ಬೆಚ್ಚಿ ಎಚ್ಚೆತ್ತ ಎರಡನೆಯ ವ್ಯಕ್ತಿಯು ದಿಟ್ಟಿಸಿ ನೋಡಿತು.

ಕಡಲ ಮೇಲೆ ದೂರದಲ್ಲಿ ಮಿನುಮಿನುಗುವ ಬೆಳಕು ಕಾಣಿಸಿತು. ನಿಮಿಷಕ್ಕೊಮ್ಮೆ ಮಿನುಗುತ್ತಿದ್ದ ಆ ಬೆಳಕು, ಐದು ನಿಮಿಷಗಳ ಕಾಲ ಹೊಳೆದಿತ್ತು. ನಂತರ ಸುತ್ತಲೂ ಕತ್ತಲು.

ಇಬ್ಬರೂ ಬೇಗ ಎದ್ದರು. ಕಡಲ ತೀರಕ್ಕೆ ಓಡಿದರು. ದಡದ ಮೇಲಿದ್ದ ನಾಡುದೋಣಿಯೊಂದನ್ನು ಕಡಲಿನತ್ತ ಎಳೆದರು. ನೀರಿನ ಮೇಲೆ ಅದು ತೇಲಲಾರಂಭಿಸಿದಾಗ, ಇಬ್ಬರೂ ಛಂಗಿ ದೋಣಿಯೊಳಗೆ ಕುಳಿತರು. ಹುಟ್ಟು ಹಾಕಲು ಪ್ರಾರಂಭಿಸಿದರು. ಒಂದು ರಾಗವಿಲ್ಲ, ಒಂದು ಹಾಡಿಲ್ಲ. ಆದರೂ ಜತೆ ಜತೆಯಲ್ಲಿ ಹುಟ್ಟುಹಾಕಿದುದನ್ನು ಕಂಡಾಗ, ಅನುಭವವಿದ್ದ ಆಸಾಮಿಗಳು ಎಂದು ಸ್ಪಷ್ಟವಾಗುತ್ತಿತ್ತು.

ಸುಮಾರು ಒಂದು ತಾಸು ಹೀಗೆ ಹುಟ್ಟುಹಾಕಿರಬಹುದು. ನಾಡುದೋಣಿಯು ಕಡಲ ಮೇಲೆ ಈಗ ಸರಾಗವಾಗಿ ಸಾಗುತ್ತಿತ್ತು. ಅರ್ಧ ತಾಸಿಗೊಮ್ಮೆ ಐದು ನಿಮಿಷ ಮಿನುಗುತ್ತಿದ್ದ ಬೆಳಕಿನತ್ತ ನಾಡುದೋಣಿಯು ಸಾಗುತ್ತಿತ್ತು.

ಆಗ ಕಡಲ ಮೇಲೆ ಲಂಗರು ಹಾಕಿ ನಿಂತಿದ್ದ ಪುಟ್ಟ ಹಡಗು ಕಾಣಿಸಿತು. ಹಡಗಿನ ಬಳಿಗೆ ನಾಡುದೋಣಿಯು ನಿಶ್ಶಬ್ದವಾಗಿ ಸಾಗಿತು. ಪಕ್ಕಕ್ಕೆ ಬಂದ ಕೂಡಲೇ ಹಡಗಿನಲ್ಲಿದ್ದವ ಹಗ್ಗವೊಂದನ್ನು ಇಳಿಯಬಿಟ್ಟ. ನಾಡುದೋಣಿಯಲ್ಲಿದ್ದವರು ಹಗ್ಗವನ್ನು ಭದ್ರವಾಗಿ ತಮ್ಮ ದೋಣಿಯ ಮುಂಕೊನೆಗೆ ಕಟ್ಟಿದರು. ನಂತರ ಹಡಗಿನಿಂದ ಪೆಟ್ಟಿಗೆಯೊಂದನ್ನು ನಾಡುದೋಣಿಗೆ ಇಳಿಸಿದರು.

"ಅಮ್ಮದ್ ಬ್ಯಾರಿ ಅಡಿಚೊಂಡೋ" ಎಂದು ಹಡಗಿನವ ನುಡಿದ.

"ಅಡಿಚೊಂಡೋ ಅಡಿಚೊಂಡೋ" ಎಂದ ದೋಣಿಯಲ್ಲಿದ್ದವ.

ನಾಡುದೋಣಿಯು ಕಡಲ ತೀರದತ್ತ ಸಾಗಿತು. ಹಡಗು ಸಮುದ್ರದತ್ತ ಹೊರಟಿತು.

ತೀರವನ್ನು ಸೇರಿದ ಕೂಡಲೇ, ಇಬ್ಬರೂ ಪ್ರಯಾಸಪಟ್ಟು, ದೋಣಿಯನ್ನು ಮರಳ ಮೇಲಕ್ಕೆ ಎಳೆದರು. ನಂತರ ಒಳಗಿದ್ದ ಪೆಟ್ಟಿಗೆಯನ್ನು ಹೊತ್ತು ಹೊರಟರು. ಗುಡಿಸಲುಗಳ ಸಾಲಿನಲ್ಲೇ ಹತ್ತು ನಿಮಿಷ ನಡೆದರು. ಆ ವೇಳೆಗೆ ಅಲ್ಲಿದ್ದ ಸುಣ್ಣ ಬಳಿದಿದ್ದ ಬಂಡೆಯೊಂದು ಕಾಣಿಸಿತು. ಅದರ ಹತ್ತಿರ ಹೋದಾಗ ಬಂಡೆಯ ಪಕ್ಕದಲ್ಲಿ ತೋಡಿದ್ದ ಹಳ್ಳವು ಕಾಣಿಸಿತು. ಪೆಟ್ಟಿಗೆಯನ್ನು ಅದರಲ್ಲಿ ಹುದುಗಿಸಿಟ್ಟರು. ಮೇಲೆ ಮರಳನ್ನು ಹಾಕಿ ನೆಲ ಸಮವಾದಂತೆ ಮಾಡಿದರು.

"ಯಾವಾಗ ಬೇಕಾದರೂ ಅಮ್ಮದ್ ಬ್ಯಾರಿ ಬಂದು ಪೆಟ್ಟಿಗೆಯನ್ನು 'ಅಡಿಚೊಳ್ಳಲಿ.' ನಮ್ಮ ಕೆಲಸ ಮುಗಿಯಿತು" ಎಂದೆನ್ನುತ್ತಾ ಇಬ್ಬರೂ ಗುಡಿಸಲಿನ ಬಳಿಗೆ ಬಂದರು.

ಬೆವರು ಸುರಿಯುತ್ತಿದ್ದ ಮೈಯನ್ನು ಒರೆಸಿಕೊಂಡು, ನಂತರ ಆರಾಮ ಕುಳಿತು ಬುಡ್ಡಿಗಳನ್ನು ಎತ್ತಿದರು.

"ಅಮ್ಮದ್ ಬ್ಯಾರಿ ಅಡಿಚೊಂಡೋ" ಎಂದ ಒಬ್ಬ.

"ಗಮ್ಮದ್ ಬ್ಯಾರಿ ಕುಡಿಚೊಂಡೋ" ಎಂದು ಮಾರುಲಿದ ಇನ್ನೊಬ್ಬ.

ಸೂರ್ಯನ ಬೆಳಕು ಗುಡಿಸಿಲೊಳಕ್ಕೆ ಬೆಳಿಗ್ಗೆ ಹರಿದಾಗ ಬುಡ್ಡಿಗಳನ್ನು ತಬ್ಬಿಕೊಂಡು ಮಲಗಿ ಗೊರಕೆ ಹೊಡೆಯುತ್ತಿದ್ದ ಇಬ್ಬರು ಕಾಣಿಸಿದರು.

Scanned by CamScanner

ಬೆಳಕಿನಿಂದ ಅವರಿಗೆ ಯಾವ ತೊಂದರೆಯೂ ಆಗಲಿಲ್ಲ. ಗಾಢನಿದ್ರೆಯು ಅಮಲಿನಂತಿತ್ತು.

ಬೆಳಿಗ್ಗೆ ಹತ್ತು ಗಂಟೆಯ ಸಮಯದಲ್ಲಿ ಆ ಬಳಿಯಲ್ಲಿ ಬಂದ ಜೀಪಿನ ಸದ್ದು ಕೂಡ ಅವರಿಬ್ಬರನ್ನೂ ಎಚ್ಚರಿಸಲಿಲ್ಲ. ಸುಣ್ಣ ಬಳಿದ ಬಂಡೆಯ ಬಳಿಗೆ ಹೋಗಿ ಹಿಂತಿರುಗಿದಾಗಲೂ ಎಚ್ಚರವಾಗಿರಲಿಲ್ಲ.

"ಎಷ್ಟು ಹಾಯಾಗಿ ಮಲಗಿದ್ದಾರೆ" ಎಂದ ಜೀಪನ್ನು ನಡೆಸುತ್ತಿದ್ದವ.

"ಪಾಪ, ರಾತ್ರಿಯೆಲ್ಲಾ ದುಡಿದು ದಣಿದಿದ್ದಾರೆ. ನಂಬಿಕಸ್ಥ ಮಕ್ಕಳು. ಮಲಗಲಿ ಬಿಡು" ಎಂದು ಅಮ್ಮದ್ ಬ್ಯಾರಿ ಉತ್ತರಿಸಿದ.

ಜೀಪು ಕರಾವಳಿಯತ್ತ ಸಾಗಿತು. ಗುಡಿಸಿಲಿನಲ್ಲಿ ಮಲಗಿದ್ದವರ ಪೈಕಿ ಒಬ್ಬ ಕಣ್ಣು ಕಣ್ಣು ಮಿಟಿಕಿಸಿದ.

* * *

ಮಂಗಳೂರಿನ ವನಿತಾ ಸಮಾಜದಲ್ಲಿ ಆ ಸಂಜೆ ಸಂಭ್ರಮವೋ ಸಂಭ್ರಮ. ಯಾವ ಯಾವ ತೆರನಾದ, ವಿಧ ವಿಧ ಅಂಚಿರುವ ಸೀರೆಗಳನ್ನು ನೋಡಬೇಕಾಗಿದ್ದವರು ಆ ಸಂಜೆ ಅಲ್ಲಿ ಅವೆಲ್ಲವನ್ನೂ ಕಾಣಬಹುದಾಗಿತ್ತು. ಸದನದ ವಾರ್ಷಿಕೋತ್ಸವ ಅಂದು. ದಿಳ್ಳಿಯಿಂದ ಗೌರವಾನ್ವಿತ ಮಾಲತೀಜೀಯವರು ಮುಖ್ಯ ಅತಿಥಿಗಳಾಗಿ ಆಗಮಿಸುವವರಿದ್ದರು. ಮೇಲ್ಮನೆಗೆ ನಾಮಕರಣ ಸದಸ್ಯೆಯಾದ ನಂತರ ಮಹಿಳಾ ಭಾರತದಲ್ಲಿ ಮಾಲತೀಜೀಯವರು ಪ್ರಸಿದ್ಧರಾಗಿದ್ದರು. ಆಕೆಯ ಮಾತು ಎಷ್ಟು ಹಿತಕರ ! ಆಕೆಯ ವಿಚಾರಧಾರೆ ಎಷ್ಟು ಸಮಂಜಸ ! ಎಂದು ಆಕೆಯ ವಿಷಯವನ್ನೆತ್ತಿದವರೆಲ್ಲ ಉದ್ಗಾರ ತೆಗೆಯುತ್ತಿದ್ದರು. ಅಂತಹ ನಾಯಿಕೆಯು ಬರುವುದೆಂದರೆ ಮಂಗಳೂರಿಗೇ ಹೆಮ್ಮೆ. ಮಂಗಳೂರಿನ ಮಾನಿನಿಯರಿಗೆ ಅದೊಂದು ಹಬ್ಬ. ಆದಕಾರಣ ವಾರ್ಷಿಕೋತ್ಸವವನ್ನು ಅತಿ ವಿಜೃಂಭಣೆಯಿಂದ ಏರ್ಪಡಿಸಲಾಗಿತ್ತು.

ಸರೋಜಾಬಾಯಿಗನಕ ಸಡಗರವೋ ಸಡಗರ. ವನಿತಾ ಸದನದ ಕಾರ್ಯದರ್ಶಿ ಅಂದಮೇಲೆ ಆಕೆಗೆ ವ್ಯವಧಾನವಾದರೂ ಎಲ್ಲಿ ಸಿಗಬೇಕು ? ನಾಂದಿಯಿಂದ ವಂದನಾರ್ಪಣೆಯ ತನಕ ಎಲ್ಲ ಕಾರ್ಯಕ್ರಮಗಳ ಜವಾಬ್ದಾರಿಯೂ ಆಕೆಯದೇ ! ಅದೂ ಅಲ್ಲದೆ ಮುಖ್ಯ ಅತಿಥಿಗಳು ಆ ರಾತ್ರಿ ತನ್ನ ಮನೆಯಲ್ಲಿ ತಂಗುವ ಏರ್ಪಾಡೂ ಆಗಿತ್ತು. ಹಾಗಾಗಿ ಮಾಲತೀಜೀಯು ತನ್ನ ಸ್ವಂತ ಆಸ್ತಿ ಎನ್ನುವ ಮನೋಭಾವವು ಸರೋಜಾಬಾಯಿಯ ನಡವಳಿಕೆಯಲ್ಲಿ

ಎದ್ದು ಕಾಣುತ್ತಿತ್ತು. ಸಾಸಿವೆ ಸಿಡಿದಂತೆ ಆಕೆ ಇಲ್ಲೂ ಅಲ್ಲೂ ಎಲ್ಲೆಲ್ಲೂ ಪರದಾಡುತ್ತಿದ್ದಳು.

ವನಿತಾ ಸದನದ ಉಪಾಹಾರ ಎಂದಮೇಲೆ ಶುಚಿರುಚಿಯನ್ನು ಕೇಳಬೇಕೆ ? ಮಂಗಳೂರಿನ ವನಿತಾ ಸದನ ಎಂದ ಮೇಲೆ ತಿಂಡಿಗಳ ಅಲಂಕಾರ ಮತ್ತು ವೈವಿಧ್ಯತೆಯನ್ನು ವಿವರಿಸಬೇಕೆ? ಹೆಣ್ಣುಮಕ್ಕಳೊಂದಿಗೆ ಸೌಂದರ್ಯದ ಸ್ಪರ್ಧೆಯನ್ನು ನಡೆಸಿ, ಜಯಗಳಿಸಿದ ಮಾಣಿಗಳು ಸರಬರಾಜು ಮಾಡಿವರು ಎಂದರೆ ಸೌಖ್ಯ ಸೌಭಾಗ್ಯವನ್ನು ಒತ್ತಿ ಹೇಳಬೇಕೆ?

'ಉಪಾಹಾರದಿಂದ ಆರಂಭವಾದ ವಾರ್ಷಿಕೋತ್ಸವವು ಮಂಗಳೂರು ಮಲ್ಲಿಗೆಯ ಮಾಲೆಯನ್ನೆತ್ತಿದಂತೆ ಹಗೂರಾಗಿ, ಹಿತವಾಗಿ ನಡೆಯಿತು. ಕಾರ್ಯಕ್ರಮದ ಪಟ್ಟಿಯಂತೆ ಕಾಲಕ್ಕೆ ಸರಿಯಾಗಿ ಎಲ್ಲವೂ ನಡೆಯಿತು. ಮಾಲತೀಜೀಯವರ ಭಾಷಣವನಕ ಎಲ್ಲರನ್ನೂ ಹೊಡೆದೆಬ್ಬಿಸಿತು. "ಹೆಣ್ಣು ಮಕ್ಕಳು ಇನ್ನು ಮುಂದೆ ಮುಂದಾಗಬೇಕು" ಎಂದಾಗ ಮುತ್ತಿನ ಕಿವಿ ಬಾವಲಿ ಹಾಕಿಕೊಂಡು ಹಿಂದೆ ಕುಳಿತಿದ್ದ ಹಿರಿಯ ಮುತ್ತೈದೆಯರು, ಈಗಿನ ಕಾಲದ ಹೆಂಗಸರು ಹೀಗೆಲ್ಲಾ ಧೈರ್ಯವಾಗಿ ಹೇಳಬಹುದು. ನಮ್ಮ ಕಾಲದಲ್ಲಿ ನಮಗೆ ಅವಕಾಶವೆಲ್ಲಿತ್ತು ಎಂದು ತಮ್ಮ ಬಾಳನ್ನು ಹಳಿದುಕೊಂಡರು.

ರಷ್ಯಾದ ಅದ್ಭುತ ಪ್ರಗತಿಗೆ ಆ ದೇಶದ ಹೆಂಗಸರು, ಗಂಡಸಿನ ಜತೆಗೂ ಸಮಸಮ ನಡೆದುದೇ ಕಾರಣ. ನಾವೂ ಹಾಗೆ ಮಾಡಿ ದೇಶವನ್ನು ಉನ್ನತ ಮಟ್ಟಕ್ಕೆ ಎತ್ತಬೇಕು ಎಂದು ಮಾಲತೀಜೀ ನುಡಿದಾಗ, "ಸೈ, ಹಾಗೆ ಮಾಡಬೇಕು" ಎಂದು ಯುವತಿಯರು ದನಿಗೂಡಿಸಿದರು.

ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯಾದ ಬಳಿಕ ಮಾಲತೀಜೀಯನ್ನು ಸರೋಜಾಬಾಯಿಯು ಮನೆಗೆ ಕರೆತಂದಳು. ದಾಮೋದರ ಶಹಣೈ ಅವರು ಆದರದ ಸ್ವಾಗತವನ್ನು ಕೋರಿದರು. ಮನೆಯವರೊಂದಿಗೆ ಮಾಲತೀಜಿಯು ಕುಳಿತು ರಾತ್ರಿಯ ಭೋಜನವನ್ನು ಸ್ವೀಕರಿಸಿದಳು. ಭೋಜನ ಕೂಟಕ್ಕೆ ಆಹ್ವಾನಿಸಲ್ಪಟ್ಟಿದ್ದ ಮೂವತ್ತು ಶ್ರೀಮಂತ ಕುಟುಂಬಗಳು ಊಟವಾದ ನಂತರ ಮಾತನಾಡಬಹುದು ಎಂದು ಎಣಿಸಿದ್ದರು. ಆದರೆ ದಣಿದಿದ್ದರಿಂದ ಮಾಲತೀಜೀಯು ವಿಶ್ರಮಿಸಿಕೊಳ್ಳಲು ಕಾತರತೆಯನ್ನು ಆಕಳಿಸುತ್ತ ತೋರಿದಳು. ಆದಕಾರಣ ಭೋಜನ ಕೂಟವು ರಾತ್ರಿ ಹತ್ತು, ಹತ್ತೂವರೆಯೊಳಗೆ ಮುಕ್ತಾಯಗೊಂಡಿತು.

Scanned by CamScanner

ಸರೋಜಾಬಾಯಿಯ ಸ್ವಂತ ಕೊಠಡಿಯಲ್ಲೇ ಮಾಲತೀಜೀಯ ಬಿಡಾರ ವನ್ನೂ ಏರ್ಪಡಿಸಲಾಗಿತ್ತು. ಇಬ್ಬರೂ ಹರಟೆ ಹೊಡೆಯುತ್ತ ಮಲಗಿಕೊಂಡರು.

"ನಾಳೆ ಬೆಳಗ್ಗೆ ಮಂಗಳೂರಿನಿಂದ ಬೊಂಬಾಯಿಗೆ ಹೋಗಬೇಕು. ಅಲ್ಲಿಂದ ದಿಳ್ಳಿಗೆ ಹೋಗಬೇಕು. ಸುಮಾರು ಎಂಟು ಹತ್ತು ತಾಸುಗಳು ಪ್ರಯಾಣ ಮಾಡಬೇಕು. ವಿಮಾನ ನಿಲ್ದಾಣದ ಲೌಂಜುಗಳಲ್ಲಿ ಕೂತಿರಬೇಕು. ಬೋರ್ ಹೊಡೆದುಹೋಗುತ್ತೆ" ಎಂದಳು ಮಾಲತೀಜೀ ಆಕಳಿಸುತ್ತ.

"ಇಲ್ಲಿಗೆ ಬರುವಾಗಲೂ ಹಾಗೆಯೇ ಆಗಿರಬೇಕಲ್ಲವೇ ? ಆದರೂ ಮಧ್ಯಾಹ್ನ ವಿಮಾನದಿಂದ ಇಳಿವಾಗ, ಹಸನ್ಮುಖರಾಗಿದ್ದಿರಿ. ನಿಗಿನಿಗಿ ಅಂತ ನಗುತ್ತಿದ್ದಿರಿ. ಬೋರ್ ಆದವರಂತೆ ಕಾಣಿಸಲೇ ಇಲ್ಲ" ಎಂದಳು ಸರೋಜಾಬಾಯಿ.

"ಇಲ್ಲಿಗೆ ಬರುವಾಗ ದಿಳ್ಳಿಯಿಂದ ನನ್ನ ಜತೆಗೆ ರಾಜೇಂದ್ರಪಾಲ್ ಅವರು ಬಂದಿದ್ದರು. ಸಿ. ಬಿ. ಐ. ನ ಹಿರಿಯ ಅಧಿಕಾರಿ ಆತ. ಬಲು ಜಾಲೂಕಾಗಿ ಮಾತನಾಡುತ್ತಾನೆ. ನಗಿಸುತ್ತಾನೆ. ಹಿಂತಿರುಗುವಾಗ ಅವ ನನ್ನ ಜತೆ ಬರುವಂತಿಲ್ಲ. ಇಲ್ಲಿ ಏನೋ ಕೆಲಸವಂತೆ. ಮೂರೋ ನಾಲ್ಕೋ ದಿನ ಗಳಿರಬೇಕು ಎಂದಿದ್ದ. ಯಾರೋ ಪುಟ್ಟಕ್ಕ ಅಂತ ಹಳ್ಳಿ ಹೆಣ್ಣದೆಯಂತೆ. ಅದರ ಬಳಿ ಕುವಾಯತ್‌ನಿಂದ ಕಳ್ಳ ಸಾಗಾಣಿಕೆಯಲ್ಲಿ ಬಂದ ಚಿನ್ನದ ತುಣುಕುಗಳು ಸಿಕ್ಕಿತಂತೆ. ಇಲ್ಲೆಲ್ಲೋ ಕಳ್ಳಸಾಗಾಣಿಕೆಗಾರರ ತಂಡವಿರಬೇಕು. ಅದನ್ನು ಪತ್ತೆಹಚ್ಚಲು ಬಂದಿದ್ದಾನಂತೆ. ನೀವೂ ಮಂಗಳೂರಿನಲ್ಲಿ ಮೂರು ದಿನ ಇದ್ದುಬಿಡಿ, ಜತೆಯಲ್ಲಿ ಹೋಗೋಣ ಎಂದ. ದಿಳ್ಳಿಯಲ್ಲಿ ತುಂಬಾ ಕೆಲಸವಿರುವುದರಿಂದ ನಾನು ತುರ್ತು ಹೋಗಲೇಬೇಕು" ಎಂದು ಮಾಲತೀಜೀ ಹೇಳಿದಳು, ಹೇಳುತ್ತಾ ಮಲಗಿ ನಿದ್ರೆ ಮಾಡಿದಳು.

ಸರೋಜಾಬಾಯಿಯ ಮೈಯೆಲ್ಲಾ ಬೆವತಿತು. ಆ ರಾತ್ರಿಯೆಲ್ಲ ನಿದ್ರೆ ಬರಲಿಲ್ಲ. ಮಾಲತೀಜೀಯನ್ನು ವಿಮಾನ ನಿಲ್ದಾಣಕ್ಕೆ ಕರೆದುಕೊಂಡು ಹೋಗಿ ಬೀಳ್ಕೊಡುವಾಗ ನಿಮ್ಮ ದಯವೊಂದಿದ್ದರೆ ಸಾಕು ಎಂದಳು. ನಂತರ ಹಿಂತಿರುಗುವಾಗ ಬೀಳ್ಕೊಡಲು ಜತೆಯಲ್ಲಿ ಬಂದಿದ್ದ ದಾಮೋದರ ಶಹಣೈ ಅವರಿಗೆ ಏನನ್ನೋ ಹೇಳಿದಳು. ಹಿಂತಿರುಗುವಾಗ ಇಬ್ಬರೂ ಮೂಕಾಂಬಿಕಾ ದೇವಸ್ಥಾನಕ್ಕೆ ಹೋದರು. ಯಾರೂ ಇರದ ಆ ದೇವಾಲಯದ ಮಂಟಪದಲ್ಲಿ

ಕುಳಿತು ಸರೋಜಾಬಾಯಿ ತಾನು ಹಿಂದಿನ ರಾತ್ರಿ ಮಾಲತೀಜೀಯಿಂದ ಕೇಳಿದುದನ್ನು ಹೇಳಿದಳು.

"ಸಂದೂಕದಲ್ಲಿದ್ದ ಚಿನ್ನದ ತುಣುಕುಗಳಲ್ಲಿ ಎರಡನ್ನು ತೆಗೆದು ಪುಟ್ಟಕ್ಕನಿಗೆ ಕೊಟ್ಟಿದ್ದೆ. ಮೂರು ತಿಂಗಳ ಸರದಿ ತಪ್ಪಿತ್ತು. ಅದನ್ನು ಆಕೆ ಬಲು ರಹಸ್ಯವಾಗಿ ಸರಿಮಾಡಿದಳು. ಮೆಚ್ಚುಗೆಯನ್ನು ತೋರಲು ಹಾಗೆಮಾಡಿದೆ. ಒಂದೆಳೆಸರ ಮಾಡಿಸಿಕೋ ಎಂದಂದಿದ್ದೆ. ಪಾಪಿಷ್ಟ ಹೆಣ್ಣು. ಅದನ್ನೆಲ್ಲೋ ಮಾರಲು ಹೋಗಿರಬೇಕು. ಈಗೇನು ಮಾಡುವುದು" ಎಂದು ಅಳಲು ಶುರು ಮಾಡಿದಳು.

"ಆದದ್ದು ಆಗಿ ಹೋಯಿತು. ಈಗ ಅತ್ತೇನು ಪ್ರಯೋಜನ ? ರಾಜೇಂದ್ರಪಾಲ್ ಎಲ್ಲಿ ಇಳಿದುಕೊಂಡಿದ್ದಾರೆ ಎನ್ನುವುದನ್ನು ಪತ್ತೆ ಹಚ್ಚು ತ್ತೀನಿ.ನನ್ನ ದೋಸ್ತು ಪೋಲೀಸ್ ಇನ್‌ಸ್ಪೆಕ್ಟರ್ ನೆರವಾಗಿಯೇ ಆಗುತ್ತಾನೆ. ಸಾಕಷ್ಟು ನನ್ನಿಂದ ಅವ ತಿಂದಿದ್ದಾನೆ. ಅವನೇ ಏನಾದರೂ ಸಹಾಯ ಮಾಡುತ್ತಾನೆ. ಇಲ್ಲದೆ ಇದ್ದರೆ ಅವನೂ ನನ್ನ ಜತೆ ಶಾಮೀಲು ಎಂದು ಹೇಳಿಬಿಡುತ್ತೇನೆ" ಎಂದು ಶಹಣೈ ಅವರು ಧೈರ್ಯ ಹೇಳಿದರು. ನಂತರ ಊರಿಗೆ ಹಿಂತಿರುಗಿದರು.

* * *

ಸ್ವಾಮೀ ಸಂಪಾದಕರೇ !

ಕಡಲ ತೀರದ ಕೆಲವು ಸಂಸಾರದವರು ಮೋಜು ಮಾಡಲು ಮಜೇಂದ್ರ ಭವನಕ್ಕೆ ಬಂದು ಇಳಿದುಕೊಂಡು ದುಬಾರಿ ಖರ್ಚು ಮಾಡಿದುದನ್ನು ನೋಡಿದೆ.

ಕಡಲ ತೀರದ ಹಳ್ಳಿಗಳಿಗೆ ಹೋಗಿ ವಿಷಯವನ್ನು ತಿಳಿದುಕೊಂಡು ಬಾ ಎಂದು ಬಿಡ್ಡಣ್ಣನನ್ನು ಕಳುಹಿಸಿದೆ.

ವೃತ್ತ ಪತ್ರಿಕೆಗಳಲ್ಲಿ "ಏಲಂ" ಹರಾಜು ಮಾಡಲಾಗುತ್ತದೆ. "ಇಂತಹ ತಾರೀಖಿನೊಳಗೆ ಹಣ ಪಾವತಿ ಮಾಡಿ, ಅಡವಿಟ್ಟಿರುವ ಚಿನ್ನದ ಒಡವೆಗಳನ್ನು ಬಿಡಿಸಿಕೊಂಡು ಹೋಗದೆ ಇದ್ದರೆ–" ಎಂಬ ಜಾಹೀರಾತನ್ನು ನೋಡುತ್ತಿದ್ದೆ. ಅವುಗಳ ಮೇಲೂ ನಿಗಾ ಇಟ್ಟಿರು ಎಂದು ಬಿಡ್ಡಣ್ಣನಿಗೆ ಹೇಳಿದ್ದೆ.

ಜಾಹೀರಾತುಗಳಲ್ಲಿ ನಮೂದಿಸಲ್ಪಟ್ಟಿದ್ದ ಇಪ್ಪತ್ತು ಮೂವತ್ತು ಹೆಸರು, ವಿಳಾಸಗಳನ್ನು ಅವ ಮುಗುಮ್ಮಾಗಿ ತನಿಖೆ ಮಾಡಿದ. ಆ ವಿಳಾಸಗಳಲ್ಲಿ

Scanned by CamScanner

ಸುಮಾರು ಸುಳ್ಳಾದುವು. ಆ ಹೆಸರಿನವರು ಅಲ್ಲಿ ಎಲ್ಲೂ ಇಲ್ಲವೇ ಇಲ್ಲ ಎಂದು ತಿಳಿಯಿತು.

ಬಿಡ್ಡಣ್ಣನಿಗೆ ಅಹ್ಮದ್ ಬ್ಯಾರಿಯ ಪರಿಚಯವು ಗತ್ತೂರ್ ಪಾಳ್ಯದಲ್ಲಿ ಆಯಿತು. ಸೌದೆ ಒಡೆಯುವ ಕೂಲಿಯಾಗಿದ್ದ ಬಿಡ್ಡಣ್ಣನ ದೇಹಸೌಷ್ಠವವನ್ನು ಕಂಡ ಬ್ಯಾರಿ ನನ್ನ ತಾವ ಕೆಲಸ ಮಾಡಿದರೆ ಇಲ್ಲಿ ದೊರಕುವ ಕೂಲಿಗಿಂತ ನಾಲ್ಕು ಪಟ್ಟು ಹೆಚ್ಚು ಕೊಡುತ್ತೇನೆ ಎಂದು ಹೇಳಿದ. ಸೈ ಅಂದ ಬಿಡ್ಡಣ್ಣ. ಕಡಲ ತೀರದ ಗುಡಿಸಲಿಗೆ ಕರೆದುಕೊಂಡು ಹೋಗಿ ಬಿಡ್ಡಣ್ಣನನ್ನು ಮೊಗವೀರನೊಬ್ಬನ ಜತೆ ಮಾಡಿದ.

ಮೊಗವೀರನ ಜತೆ ಇದ್ದು ನಾಡದೋಣಿಯ ಹುಟ್ಟು ಹಾಕುವುದನ್ನು ಬಿಡ್ಡಣ್ಣ ಕಲಿತ. ಮೊಗವೀರನ ನಂಬಿಕೆಯನ್ನೂ ಆ ವೇಳೆಗೆ ಪಡೆದಿದ್ದ. ಆದ ಕಾರಣ ಕಳ್ಳ ಹಡಗಿನಿಂದ, ನಾಡ ದೋಣಿಯಲ್ಲಿ, ಕಳ್ಳತನದಲ್ಲಿ ಅರೇಬಿಯಾ ಕಡೆಯಿಂದ ತಂದಿದ್ದ ಚಿನ್ನದ ಬಿಲ್ಲೆಗಳನ್ನು ಸಾಗಿಸುವುದನ್ನು ಬಿಡ್ಡಣ್ಣ ಅರಿತುಕೊಂಡ.

ಹುದುಗಿರಿಸಿದ ಆ ಚಿನ್ನವನ್ನು ಅಹ್ಮದ್ ಬ್ಯಾರಿ ಜೇಪಿನಲ್ಲಿ ಸಾಗಿಸುತ್ತಿದ್ದ ಎಂದೂ ತಿಳಿಯಬಂತು.

ಬ್ಯಾಂಕುಗಳಲ್ಲಿ "ಏಲಂ" ಜಾಹೀರಾತನ್ನು ಹಾಕುವುದು. ಕಳ್ಳತನದಲ್ಲಿ ತಂದಿರಿಸಿದ್ದ ಚಿನ್ನದಿಂದ ಒಡವೆಗಳನ್ನು ಮಾಡಿಸಿ, ಅವನ್ನು ಹರಾಜು ಮಾಡುವುದು. ಹೀಗೆ ಮಾಡಿ ಇಲ್ಲದವರ ಹೆಸರಿನಲ್ಲಿ ಕಳ್ಳತನದ ಚಿನ್ನವನ್ನು ಬಹಿರಂಗ ಮಾರುಕಟ್ಟೆಗೆ ತರಲು ಅನುಕೂಲವಾಗುತ್ತಿತ್ತು. ಬ್ಯಾಂಕಿಗೂ ಇದರಿಂದ ಲಾಭವಾಗುತ್ತಿತ್ತು.

ಪುಟ್ಟಕ್ಕ ಚಿನ್ನದ ತುಣುಕುಗಳನ್ನು ಸರ ಮಾಡಿಸಲು ಅಕ್ಕಸಾಲೆಯ ಬಳಿಗೆ ಹೋದಾಗ ಅಕಸ್ಮಾತ್ತಾಗಿ ಬಿಡ್ಡಣ್ಣ ಅಲ್ಲಿದ್ದ. ಅಕ್ಕಸಾಲೆಯಿಂದ ಅವ ಅದನ್ನು ಹೆಚ್ಚು ಹಣ ಕೊಟ್ಟು ಕೊಂಡುಕೊಂಡ. ಅದನ್ನೇ ನನಗೆ ಕಳಿಸಿದ.

ಆ ತುಣುಕುಗಳನ್ನು ರಾಮೋಜಿಗೆ ಕೊಟ್ಟೆ. ವಿಷಯ ತಿಳಿಸಿದೆ. ಮಂಗಳೂರಿಗೆ ಮಾಲತೀಜೀ ಹೋಗುವ ಕಾರ್ಯಕ್ರಮವಿದೆ. ನಾನೂ ಹೋಗಿ ಏನಾಗುತ್ತದೋ ನೋಡಿ ಬರುತ್ತೇನೆ ಎಂದು ದಿಳ್ಳಿಗೆ ಹೋದ.

ಪುಟ್ಟಕ್ಕನ ಮನೆಗೆ ಸರೋಜಾಬಾಯಿ ಹೋದುದನ್ನು ಬಿಡ್ಡಣ್ಣ ತಿಳಿಸಿದ್ದ. ಮಿಕ್ಕಿದುದನ್ನು ರಾಮೋಜಿ ಊಹಿಸಿದ.

ಮಾಲತೀಜೀ ಸರೋಜಾಬಾಯಿಗೆ ಗತ್ತಾಗತ್ತಾ ವಿಷಯವನ್ನು ಹೇಳಿ ಹೆದರಿಸಿದಳು.

ದಾಮೋದರ ಶಹಣೈ ಪೋಲೀಸ್ ಇನ್‌ಸ್ಪೆಕ್ಟರನ್ನು ಮುಂದೆ ಮಾಡಿ ರಾಜೇಂದ್ರಪಾಲ್‌ರನ್ನು ಭೇಟಿಯಾದರು.

"ಏಲಂ" ವಿವರಗಳನ್ನು ರಾಜೇಂದ್ರಪಾಲ್ ಮುಂದಿಟ್ಟರು. ಪುಟ್ಟಕ್ಕನಿಂದ ಬಂದಿದ್ದ ಚಿನ್ನದ ತುಣುಕುಗಳನ್ನು ತೋರಿಸಿದರು. ರಾಜೇಂದ್ರಪಾಲ್ ಅವುಗಳ ಮೇಲೆ ಕುವಾಯತ್ ಸರಕಾರದ ಮುದ್ರೆ ಇದ್ದುದನ್ನೂ ತೋರಿಸಿದರು.

ನಾವು ಪೋಲೀಸಿನವರು, ಕಳ್ಳಸಾಗಾಣಿಕೆಯನ್ನು ಕಂಡುಹಿಡಿಯುವುದು ಸುಂಕದವರ ಕೆಲಸ. ನಮ್ಮದಲ್ಲ. ಆದರೆ ಊರಿನಲ್ಲೇ ಮೋಸವಾಗದಂತೆ ನಾವು ಹುಷಾರಿರಬೇಕು ಎಂದು ರಾಜೇಂದ್ರಪಾಲ್ ಮುಗುಮ್ಮಾಗಿ ನುಡಿದರು.

ಕಾರಣ ಆ ರಾತ್ರಿ ಆರು ಲಕ್ಷ ರೂಪಾಯಿಗಳನ್ನು ದಾಮೋದರ ಶಹಣೈ ಅವರು ಪೋಲೀಸ್ ಇನ್‌ಸ್ಪೆಕ್ಟರ ಸಲಹೆಯ ಮೇರೆಗೆ ರಾಜೇಂದ್ರಪಾಲ್ ಅವರಿಗೆ ಕಾಣಿಕೆಯನ್ನಾಗಿ ಅರ್ಪಿಸಿದರು.

ರಾಮೋಜಪ್ಪನೇ ರಾಜೇಂದ್ರಪಾಲ್ ಎಂದು ಹೇಳಬೇಕಿಲ್ಲವಲ್ಲ !

ಒಟ್ಟು ಗಳಿಸಿದ್ದು ಆರು ಲಕ್ಷ ರೂಪಾಯಿಗಳು. ಮಾಲತೀಜೀಗೆ ಐದು ಸಾವಿರ ರೂಪಾಯಿಗಳನ್ನು ಕೊಡಬೇಕು. ನಾಮಕರಣ ಸದಸ್ಯೆಯಾಗಲು ಆಕೆ ತುಂಬಾ ಖರ್ಚು ಮಾಡಬೇಕಾಯಿತು.

ರಾಮೋಜಪ್ಪನ ಖರ್ಚು ಐದು ಸಾವಿರ ಆಗಿದೆ.

ಬಿಡ್ಡಣ್ಣ ತುಂಬಾ ಶ್ರಮ ವಹಿಸಿದ್ದಾನೆ. ತುಂಬಾ ದುಡಿದಿದ್ದಾನೆ. ಅವನ ಹೆಣ್ಣಿಗೆ ಬೆಳ್ಳಿ ಕಡಗದ ಮೇಲೆ ಮೋಹ. ಆದಕಾರಣ ಬೆಳ್ಳಿ ಮುಲಾಮು ಮಾಡಿಸಿದ ಚಿನ್ನದ ಕಡಗವನ್ನು ಆಕೆಗೆ ಬಿಡ್ಡಣ್ಣ ಕೊಡಿಸುವಂತೆ ಮಾಡಬೇಕು. ಹೆಣ್ಣಿನ ಮೇಲೆ ಚಿನ್ನ ಇದ್ದರೆ, ಕಷ್ಟ ಕಾಲದಲ್ಲಿ ತಲೆ ಕಾಯುತ್ತೆ. ಬಿಡ್ಡಣ್ಣನ ಖರ್ಚೂ ಸೇರಿ ಅವನಿಗೆ ಹದಿನೈದು ಸಾವಿರ ಕೊಡುವುದು.

ಮಿಕ್ಕಿದ್ದು ಐದೂಮುಕ್ಕಾಲು ಲಕ್ಷ ರೂಪಾಯಿಗಳು.

ಅದನ್ನು ಕೊಂಡೆನಕವಲ್ಲಿಯ ಪೂಜಾರಪ್ಪನವರ ಕಾಲ ಬಳಿ ಹಾಕಿ ಅಡ್ಡ ಬಿದ್ದು ಇದು ಈ ವರ್ಷದ ಕಾಣಿಕೆ ಎಂದು ಹೇಳುತ್ತೇನೆ.

ಪೂಜಾರಪ್ಪನವರ ಆಣತಿಯಂತೆ ಈ ವಿಷಯವನ್ನು ಪತ್ರಿಕಾ ಪ್ರಕಟಣೆಗೆ ಕಳಿಸಿದ್ದೇನೆ.

ತಮ್ಮವ,
"ಬುದ್ಧೋಜಿ"

Scanned by CamScanner

ಮಂತ್ರವಾದಿ: ಮಲ್ಲಿಕಾ

ಕತ್ತಲು ಅಂದರೆ ಕತ್ತಲು. ಆಷಾಢಮಾಸದ ಅಮಾವಾಸ್ಯೆ. ಹೆಪ್ಪುಗಟ್ಟಿದ್ದ ಕಾರ್ಮೋಡಗಳು ನಕ್ಷತ್ರಗಳನ್ನು ಕವಿದಿದ್ದುವು. ಕರಿ ಕಂಬಳಿಯನ್ನು ಹೊದ್ದಿದ್ದ ವ್ಯಕ್ತಿ ಭಾರೀ ಬಂಗಲೆಯ ಬಳಿಗೆ ನಿಶಿ ರಾತ್ರಿಯಲ್ಲಿ ಬಂದಿದ್ದ. ಕಾವಲು ನಾಯಿಯು ಬೊಗಳಲಾರಂಭಿಸಿತು. ಗೇಟಿನ ಬಳಿಯ ಕಾವಲು ಕೊಠಡಿಯಲ್ಲಿದ್ದವ ಯಾರಪ್ಪಾ ಅದು ಎಂದು ಕೂಗಿದ. ಮಳೆ ಹನಿಹಾಕಲಾರಂಭಿಸಿತು. ಬಂದಿದ್ದ ವ್ಯಕ್ತಿಯು "ಅಪ್ಪಾ, ತಿರುಕ ನಾನು, ಪಾರ್ಕಿನಲ್ಲಿ ಮಲಗಿದ್ದೆ. ಬೀಟ್ ಪೋಲೀಸಿನವನು ಬಂದು ಲಟ್ಟಾದಲ್ಲಿ ಮೊಣಕಾಲನ್ನು ಒಡಿದು ಎಬ್ಬಿಸಿ ಇಲ್ಲಿ ಯಾಕೋ ಮಲಗಿದ್ದಿ ! ರಾತ್ರಿ ಏಳಕ್ಕೆ ಪಾರ್ಕ್ ಬಂದ್ ಅಂತ ಗೊತ್ತಿಲ್ಲವಾ ಎಂದು ಓಡಿಸಿದ. ಕೆರೆಕಟ್ಟೆಯ ಬಳಿ ಇರುವ ಮಂಟಪದಲ್ಲಿ ಮಲಗೋಣ ಅಂತ ನಡುಗುತ್ತಾ ಹೊರಟೆ. ನಿಮ್ಮ ನಾಯಿ ಬೊಗಳಿತು. ಮುಂದೆ ನಡೆದರೆ ಬಂದು ಕಚ್ಚುತ್ತೇನೋ ಎಂದು ಹೆದರಿ ನಿಂತಲ್ಲೇ ಗಡಗಡ ನಡುಗಿದೆ. ನೀವು ಕೂಗಿದಾಗ ಸ್ವಲ್ಪ ಧೈರ್ಯ ಬಂತು. ಮಳೆಯೂ ಬಂತು" ಎಂದು ಹೇಳಿದ. ನಾಯಿಯೇನೂ ಕಚ್ಚಲ್ಲ. ಮುಂದಕ್ಕೆ ಹೋಗು, ಅಂದ ಕಾವಲುಗಾರ.

ಬಂದಿದ್ದ ವ್ಯಕ್ತಿ ಮಳೆಯಲ್ಲೇ ನಡೆದ. ಮುಂದೆ ಹೋದಮೇಲೆ, ಎಂಟು ಹತ್ತು ಹೆಜ್ಜೆ ಹಾಕುವಷ್ಟರಲ್ಲಿ ಕಾಂಪೌಂಡಿನೊಳಕ್ಕೆ ಏನನ್ನೋ ಎಸೆದ. ನಾಯಿ ಓಡಿಬಂದು ಅದನ್ನು ಕಚ್ಚಿತು, ಬಾಯಲ್ಲಿ ಕಚ್ಚಿಕೊಂಡೇ ವಿಶಾಲವಾದ ಕಾಂಪೌಂಡಿನ ಇನ್ನೊಂದು ತುದಿಗೆ ಓಡಿಹೋಯಿತು. ಕತ್ತಲೆಯಲ್ಲಿ ಕಾಂಪೌಂಡ್ ಗೋಡೆಯನ್ನೇರಿ, ಬಳಿಯಿದ್ದ ಮಾವಿನ ಮರದ ಕೊಂಬೆಯನ್ನು ಹಿಡಿದುಕೊಂಡು ಮರವನ್ನೇರಿದ. ಇಳಿದ. ಮರದ ಬುಡದಲ್ಲಿ ಕೈಲಿದ್ದ ಪುಟ್ಟ ಕಠಾರಿಯಿಂದ ಸಣ್ಣ ಗುಂಡಿಯನ್ನು ಅಗೆದ. ಪುಟ್ಟ ಗಂಟೊಂದನ್ನು ಅದರಲ್ಲಿ

ಇರಿಸಿದ. ಮಣ್ಣು ಮುಚ್ಚಿದ. ತಿರುಗಿ ಮರವನ್ನೇರಿದ. ಕಾಂಪೌಂಡ್ ಗೋಡೆಯ ಮೇಲೆ ಕಾಲುಗಳನ್ನು ಇಳಿಬಿಟ್ಟು ರಸ್ತೆಗೆ ಜಿಗಿದ. ಕೆರೆಯ ಕಟ್ಟೆಯ ಮಂಟಪಕ್ಕೆ ನೆನೆಯುತ್ತಲೇ ಹೋದ. ಒದ್ದೆ ಕಂಬಳಿಯನ್ನು ಅಲ್ಲಿ ಬಚ್ಚಿಟ್ಟು, ಮಂಟಪದ ಮೂಲೆಯಲ್ಲಿದ್ದ ಗೋಣಿಚೀಲವನ್ನು ಬಿಡಿಸಿದ. ಅದರಲ್ಲಿದ್ದ ಪರಾಯಿ, ಪಟ್ಟೆಗಳನ್ನು ಹಾಕಿಕೊಂಡ. ಛತ್ರಿಯನ್ನು ಹಿಡಿದುಕೊಂಡು ಮುತ್ತ್ಯಾಲಮ್ಮನ ಬೀದಿಯಲ್ಲಿದ್ದ ತನ್ನ ಮನೆಯನ್ನು ಸೇರಿದ. "ಯಾಕೆ ಇಷ್ಟು ಹೊತ್ತಾಯಿತು, ಜಗ್ಗ?" ಎಂದು ಹೆಂಡತಿಯು ಕೇಳಿದಾಗ, ಅಮಾವಾಸ್ಯೆ ಅಲ್ಲವಾ, ಸ್ಮಶಾನದಲ್ಲಿ ಪೂಜೆ ಹಾಕಿ ಬರಬೇಕಲ್ವಾ; ನಮ್ಮ ಕಟ್ಟಳೆ ಅಲ್ವಾ" ಎಂದ. 'ಮರೆತುಹೋಗಿತ್ತು ಇವತ್ತು ಅಮಾವಾಸ್ಯೆ ಎನ್ನುವುದು. ಮಲಕ್ಕೋ' ಎಂದು ಅವಳು ಹೇಳಿದಳು.

* * *

ಸೇಟ್ ರಾಜೇಶ್ವರಯ್ಯ ಅವರು ಇಂಗ್ಲೆಂಡಿನಿಂದ ಹಿಂತಿರುಗಿದ್ದರು. ದೊಡ್ಡ ಮಗನಿಗೆ ಎಂಥದೋ ಖಾಯಿಲೆಯು ಹಿಡಿದಿತ್ತು. ಸಾವಿರಾರು ರೂಪಾಯಿಗಳನ್ನು ನೀರಿನಂತೆ ಚಿಕಿತ್ಸೆಗೆ ಖರ್ಚುಮಾಡಿದ್ದರು. ಭಾರತದ ಹೆಸರಾಂತ ಆಸ್ಪತ್ರೆಗಳಲ್ಲಿ ತಿಂಗಳಾನುಗಟ್ಟಲೆ ಇರಿಸಿ ಹಲವಾರು ವೈದ್ಯ ಪ್ರವೀಣರನ್ನು ಕರೆಸಿ ಪರೀಕ್ಷೆ ಮಾಡಿಸಿದ್ದರು. ಆದರೂ ಮಗನು ಗುಣಮುಖನಾಗಲಿಲ್ಲ. ಇಂಗ್ಲೆಂಡಿಗೆ ಕರೆದುಕೊಂಡು ಹೋಗಿದ್ದರು. ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿದ್ದರು. ಆದರೂ ರೋಗವೇನೆಂಬುದೇ ಪತ್ತೆಯಾಗಲಿಲ್ಲ. ಹಿಂತಿರುಗಿ ಬಂದಿದ್ದರು. ತುಂಬಾ ಖಿನ್ನರಾಗಿದ್ದರು. ದೊಡ್ಡ ಮಗ ಕ್ಷೀಣಿಸುತ್ತಲೇ ಇದ್ದ.

ಸೇಟ್ ರಾಜೇಶ್ವರಯ್ಯ ಅವರು ಮೂರು ನಾಲ್ಕು ಭಾರೀ ಕಾರ್ಖಾನೆಗಳನ್ನು ನಡೆಸುತ್ತಿದ್ದರು. ನೂರಾರು ಸಮಾನ ಶ್ರೀಮಂತರು ಅವರ ಸ್ನೇಹಿತರು. ಆದರೆ ಆಪ್ತಸ್ನೇಹಿತರು ಎಂದರೆ ಬಹುಶಃ ಇಬ್ಬರು ಮೂವರಿರಬಹುದು. ಅವರಲ್ಲೊಬ್ಬ ರಾಮಶೇಷಯ್ಯ. ಆಗರ್ಭ ಶ್ರೀಮಂತನಾಗಿ ಹುಟ್ಟಿದ್ದ ಅವ ವಾಮಾಚಾರಿಗಳ ಪ್ರಭಾವಕ್ಕೆ ನಡುಪ್ರಾಯದಲ್ಲಿ ಸಿಕ್ಕಿಬಿದ್ದಿದ್ದ. ಯಾವ ಲೋಹವನ್ನಾದರೂ ಚಿನ್ನವನ್ನಾಗಿ ಮಾರ್ಪಡಿಸುವ ಪ್ರಯತ್ನಕ್ಕೆ ಬೈರಾಗಿಗಳೊಂದಿಗೆ ಸೇರಿಕೊಂಡು ಸಾಕಷ್ಟು ಹಣವನ್ನು ಪೋಲುಮಾಡಿದ್ದ. ವಶೀಕರಣ ವಿದ್ಯೆಯನ್ನು ಕಲಿಯುತ್ತೇನೆ ಎಂದು ಜೋಗಿಗಳೊಂದಿಗೆ ಹಲ

Scanned by CamScanner

ವಾರು ವರ್ಷ ಒದ್ದಾಡಿ ಪಾಪರ್ ಆಗುವ ಸ್ಥಿತಿಗೆ ಬಂದಿದ್ದ. ಎಲ್ಲ ಸ್ನೇಹಿತರೂ ಅವನನ್ನು ದೂರಮಾಡಿದ್ದರು. ರಾಜೇಶ್ವರಡು ಅವರು ಮಾತ್ರ ರಾಮಶೇಷಯ್ಯ ಬಂದಾಗ ಆದರದಿಂದ ಮಾತನಾಡುತ್ತಿದ್ದರು. ಯಾವ ವ್ಯವಹಾರವನ್ನೂ ಅವನೊಂದಿಗೆ ಮಾಡದೇ ಇದ್ದರೂ, ಏನಾದರೂ ಸ್ವಲ್ಪ ಹಣಬೇಕು ಎಂದು ರಾಮಶೇಷಯ್ಯ ಕೇಳಿದರೆ ಸಂತೋಷದಿಂದಲೇ ಕೊಡುತ್ತಿದ್ದರು. ಪ್ರಯೋಜನವಿಲ್ಲ ಎಂದು ತಿಳಿದಿದ್ದರೂ, ಬುದ್ಧಿವಾದವನ್ನೂ ಹೇಳುತ್ತಿದ್ದರು. ಪರಸ್ಪರ ಆದರವು ಇಬ್ಬರ ಮಧ್ಯೆ ಹೀಗಿದ್ದರೂ ಕೂಡ, ರಾಮಶೇಷಯ್ಯನು ವರ್ಷಕ್ಕೊಮ್ಮೆಯೋ, ಎರಡು ಬಾರಿಯೋ ಸ್ನೇಹಿತನನ್ನು ಕಾಣಲು ಬರುತ್ತಿದ್ದ. ಅದೂ ಅತ್ಯಗತ್ಯವಾದಾಗ, ಅನಿವಾರ್ಯವಾದಾಗ.

ರೋಗಸ್ಥ ಮಗನೊಂದಿಗೆ ನಿರಾಶನಾಗಿ ರಾಜೇಶ್ವರಡು ಇಂಗ್ಲೆಂಡಿನಿಂದ ಹಿಂತಿರುಗಿದ್ದಾನೆ ಎಂಬುದು ತಿಳಿದಾಗ ರಾಮಶೇಷಯ್ಯ ಸ್ನೇಹಿತನ ಮನೆಗೆ ಆತುರದಿಂದ ಹೋದ. ಈ ಬಾರಿ ಸ್ವಾರ್ಥಕ್ಕಲ್ಲ. ಸ್ನೇಹಿತನಿಗೆ ನೆರವಾಗಲೋಸುಗ.

ಯೋಗಕ್ಷೇಮದ ಮಾತುಗಳನ್ನಾಡಿದ ಮೇಲೆ ರಾಮಶೇಷಯ್ಯ ಹೇಳಿದ: "ಮಾನವಸಾಧ್ಯವಾದ ಪ್ರಯತ್ನಗಳನ್ನೆಲ್ಲಾ ಮಾಡಿದ್ದೀಯಪ್ಪ; ಆದರೆ ನಮ್ಮ ಭೀಮುಡೂಗೆ ಗುಣವಾಗಲಿಲ್ಲ. ವೈಜ್ಞಾನಿಕ ವಿಧಾನಗಳನ್ನೆಲ್ಲಾ ಶ್ರದ್ಧೆಯಿಂದ ಆಚರಿಸಿದ್ದೀ. ಇನ್ನು ಉಳಿದಿರುವುದು ಪ್ರಾಚೀನ ನಂಬಿಕೆಗಳು ; ಪುರಾತನದ ಮೌಢ್ಯವೆನಿಸಿಕೊಂಡ ಭೂತ ಚಿಕಿತ್ಸೆಗಳು. ನೀನಿದನ್ನು ನಂಬುವುದಿಲ್ಲ. ಆದರೂ ಭೀಮುಡೂವಿನ ಆರೋಗ್ಯಕ್ಕಾದರೂ ಒಂದೆರಡು ಪ್ರಯತ್ನಗಳನ್ನು ಏಕೆ ಮಾಡಬಾರದು? ನಾನು ಮಂಕ ದಿಟ. ಆದರೆ ಎಲ್ಲವೂ ಕೈಮೀರಿದಾಗ ಮೌಢ್ಯನಂಬಿಕೆಗಳನ್ನು ಅಪನಂಬಿಕೆಯಿಂದ ಆಚರಿಸಿದರೂ, ಕೆಲವು ವೇಳೆ ಭಗವಂತನ ಕೃಪೆಯಿಂದ ವಾಸಿಯಾಗುವುದುಂಟು. ಅಂತಹ ಪ್ರಯತ್ನವನ್ನು ಈಗ ಏಕೆ ಮಾಡಬಾರದು?"

ರಾಜೇಶ್ವರಡು ಕೆಲವು ನಿಮಿಷ ಕಣ್ಣುಮುಚ್ಚಿಕೊಂಡು ಯೋಚಿಸಿದ. "ಆಗಲಿ, ರಾಮಶೇಷು; ಮಂತ್ರ, ಮಾಟ, ಮದ್ದು ತೆಗೆಸುವಿಕೆ, ಏನನ್ನಾದರೂ ಮಾಡಲು ನಾನೀಗ ಒಪ್ಪುತ್ತೇನೆ. ಅಗತ್ಯವಾದ ಏರ್ಪಾಡುಗಳನ್ನು ಮಾಡಿಸು. ಈ ವಿಷಯದಲ್ಲಿ ನನಗೆ ಯಾವ ನಂಬಿಕೆಯೂ ಇಲ್ಲ. ಆದರೆ ಮೊದಲಿದ್ದ ಅಪನಂಬಿಕೆಗಳು ಈ ಪರಿಸ್ಥಿತಿಯಲ್ಲಿ ಮಾಯವಾಗಿದೆ. ಭೀಮುಡುವನ್ನು ನಾನು ಪ್ರೀತಿಸುವಂತೆ ನೀನೂ ಪ್ರೀತಿಸುತ್ತೀ. ನನ್ನ ಯತ್ನಗಳು ನಿಷ್ಫಲ

ವಾದುವು. ಈ ಮುಂದೆ ಅವನು ನಿನ್ನ ಮಗ. ನಿನಗೆ ತೋಚಿದಂತೆ ಮಾಡು. ನನ್ನ ಸಲಹೆಯನ್ನು ಕೇಳಬೇಡ. ಖರ್ಚಿಪ್ಪಾಗುತ್ತೆ, ಅಥವಾ ಆಯಿತು ಎಂದು ನಾನು ಕೇಳುವುದಿಲ್ಲ. ಕೇಳಿದಷ್ಟನ್ನು ಕೊಡುತ್ತೇನೆ" ಎಂದು ಹೇಳಿದ. "ಭೀಮುಡುವಿನ ಭೂತಚಿಕಿತ್ಸೆಯ ಖರ್ಚನ್ನೆಲ್ಲಾ ನಾನು ವಹಿಸಿಕೊಳ್ಳಲು ಯತ್ನಿಸುತ್ತೇನೆ. ನನ್ನ ಕೈಲಾಗದಿದ್ದಾಗ ನಿನ್ನ ಸಹಾಯವನ್ನು ಪಡೆಯುತ್ತೇನೆ" ಎಂದ ರಾಮಶೇಷಯ್ಯ.

* * *

ತನ್ನ ಕುದುರೆಯು ಚಿನ್ನದ ಟ್ರೋಫಿಯನ್ನು ಗೆದ್ದಿತು ಎನ್ನುವ ಸಂಭ್ರಮಕ್ಕಾಗಿ, ತ್ರಿತಾರಾ ಹೋಟಲಿನಲ್ಲಿ ಲಾಲ್ವಾನೀಜೀಯವರು ಭರ್ಜರಿಯಾದ ಸಂತೋಷದೌತಣವನ್ನು ಏರ್ಪಡಿಸಿದ್ದರು. ಜೂಜಿನ ಸ್ನೇಹಿತರಲ್ಲದೆ ಹಲವಾರು ಸಚಿವರುಗಳು ಆಹ್ವಾನಿತರಾಗಿದ್ದರು. ಏನಕೇನ ಪ್ರಕಾರೇಣ ಸಚಿವರನ್ನು ಒಲಿಸಿಕೊಂಡರೆ, ತಾನು ಕುದುರೆ ಜೂಜಿನಲ್ಲಿ ಗೆದ್ದೆ ಎನ್ನುವುದು ಬಹಿರಂಗವಾಗುತ್ತದೆ. ಅನಂತರ ಕಾಳಸಂತೆಯಲ್ಲಿ, ಕಲಬೆರಕೆ ವ್ಯಾಪಾರದಲ್ಲಿ ಸಂಪಾದಿಸಿದುದನ್ನು ಜೂಜಿನ ಗಳಿಕೆ ಎಂದು ಲೆಕ್ಕ ತೋರಿಸಲು ಸುಲಭ. ಸಂತೋಷದೌತಣದಲ್ಲಿ, ಅದೂ ತ್ರಿತಾರಾ ಹೋಟಲುಗಳಲ್ಲಿ ಪ್ರಖ್ಯಾತಿಯನ್ನು ಇನ್ನೂ ಗಳಿಸದಿದ್ದ ಹರೆಯ ವಯಸ್ಸಿನ ಚಿಲ್ಲರೆ ಸಿನಿಮಾ ತಾರೆಯರೂ ವಾಲಾಡುವುದು ಸಾಮಾನ್ಯ. ಊಟದ ತಟ್ಟೆ ಬಟ್ಟಲುಗಳಿಗಿಂತ, ಅಲಂಕೃತ ಟಂಬ್ಲರ್ ಮತ್ತು ಸುರೂಪಿ ಶೀಷೆಗಳ ಲಬ್‌ಡಪ್‌ಗಳೇ ಅಂತಹ ಔತಣ ಕೂಟಗಳಲ್ಲಿ ಸಡಗರಪಡುತ್ತವೆ.

ಈಗ ಬಡವನಾಗಿದ್ದರೂ ರಾಮಶೇಷಯ್ಯ ಜೂಜಿನ ಸಂತೋಷಕೂಟಗಳಿಗೆ ಆಹ್ವಾನಿಸಲ್ಪಡುತ್ತಿದ್ದ. ಜೂಜುಗಾರರಲ್ಲಿ ಸ್ನೇಹ ಮತ್ತು ಕೆಳೆತನವು ಬಲು ಗಾಢವಾಗಿರುತ್ತದೆ. ಲಾಲ್ವಾನೀಜೀಯವರಿಗೆ ರಾಮಶೇಷಯ್ಯನು ಬಲು ದೋಸ್ತು. ಜ್ಯೋತಿಷಿಯನ್ನು ಕೇಳಿಕೊಂಡು ಬಂದು ಯಾವ ಕುದುರೆಯ ಬಾಲವನ್ನು ಜೂಜುಹಣಕ್ಕೆ ಕಟ್ಟಬೇಕು ಎಂದು ಲಾಲ್ವಾನಿಗೆ ರಾಮಶೇಷಯ್ಯನೇ ಸೂಚಿಸುತ್ತಿದ್ದುದು. ಅದರಂತೆಯೇ ನಡೆದುಕೊಂಡ ಲಾಲ್ವಾನಿಯು ಲಕ್ಷ ಲಕ್ಷ ಸಂಪಾದಿಸಿದ್ದ. ಸಲಹೆಯನ್ನು ಕೊಟ್ಟು ನನ್ನನ್ನು ಶ್ರೀಮಂತನಾಗಿ ಮಾಡಿದ್ದೀ, ಅದೇ ಸಲಹೆಯನ್ನು ಬಳಸಿಕೊಂಡು ನೀನ್ಯಾಕೆ ಹಣಗಳಿಸಿ ಉಳಿಸಿಕೊಳ್ಳಲಿಲ್ಲ, ಎಂದು ಲಾಲ್ವಾನೀಜೀ ಕೇಳಿದ್ದುಂಟು. ನಿನ್ನ ಜಾತಕದ

Scanned by CamScanner

ಫಲವೇ ಬೇರೆ; ನನ್ನದೇ ಬೇರೆ; ಆದ್ದರಿಂದ ಹೀಗೆ, ಎಂದು ರಾಮಶೇಷಯ್ಯ ಸಮಾಧಾನಚಿತ್ತದಿಂದ ಉತ್ತರಿಸಿದ್ದ. ಪರಸ್ಪರ ಕೆಳೆತನ ಅಭಿವೃದ್ಧಿಯಾಗಿತ್ತು. ಆ ಕಾರಣದಿಂದ ರಾಮಶೇಷಯ್ಯ ಎಂದೂ ವಿಶೇಷ ಆಹ್ವಾನಿತ, ಜೂಜು ಕುದುರೆಗಳವರ ಸಂತೋಷಪಾರ್ಟಿಗಳಲ್ಲಿ.

ಲಾಲ್ವಾನಿಯ ಸಂತೋಷದೌತಣದಲ್ಲಿ ರಾಮಶೇಷಯ್ಯನಿಗೆ ಉಪಸಚಿವ ಈರಾನಾಯ್ಕರನ್ನು ಮಲ್ಲಿಕಾ ಪರಿಚಯ ಮಾಡಿಕೊಟ್ಟಳು. "ಇವರೇ ಸಿನಿಮಾ ರಂಗಕ್ಕೆ ಜ್ಯೋತಿಷಿಯಿಂದ ಭವಿಷ್ಯವನ್ನು ತಿಳಿದು ನನ್ನನ್ನು ಸೇರಿಸಿದ್ದು" ಎಂದು ಬಿರಿನಗೆಯನ್ನು ಬೀರುತ್ತಾ ನುಡಿದಳು. ನಂತರ ಈರಾನಾಯ್ಕರನ್ನು ಕೊಡವಿಕೊಂಡು ರಾಮಶೇಷಯ್ಯನ ಜತೆ ಅತ್ತ ಸರಿದಳು. ಹಕ್ಕಿ ಸಿಕ್ಕಿತು ಅಂತಿದ್ದಾಗ, ಈ ಬೆಕ್ಕು ಬಂದು ಹಾರಿಸಿಕೊಂಡು ಹೋಯಿತಲ್ಲಾ ಎಂದು ಅರೆಕ್ಷಣ ಈರಾನಾಯ್ಕರಿಗೆ ಕೋಪವುಕ್ಕಿತು. ಮತ್ತೆ ಅರೆಕ್ಷಣ ದಲ್ಲೇ ಉಪಸಚಿವ ಸ್ಥಾನದಿಂದ ತನ್ನನ್ನು ಎತ್ತಿಹಾಕಲು ಹಲವರು ಯತ್ನಿಸುತ್ತಿರುವುದೂ ಸ್ಮರಣೆಗೆ ಬಂತು. ಮುಂದಿನ ಭವಿಷ್ಯ ಹೇಗಿರುತ್ತದೋ ಅದನ್ನು ತಿಳಿದುಕೊಳ್ಳಬೇಕು ! ಅದನ್ನು ರಾಮಶೇಷಯ್ಯನ ಮೂಲಕ ಸಾಧಿಸಬೇಕು. ಅವನನ್ನು ಮಿತ್ರನನ್ನಾಗಿ ಮಾಡಿಕೊಳ್ಳಬೇಕು.ನಾಳೆ ನಾಡಿದ್ದರಲ್ಲಿ ನನ್ನ ಆಪ್ತ ಅಡಿಗೆಯವನನ್ನು ಕಳಿಸಿ, ರಾತ್ರಿಯೂಟಕ್ಕೆ ಬರಮಾಡಿಕೊಳ್ಳ ಬೇಕು– ಎಂದು ಆಲೋಚಿಸಿದರು. ಗುಟುಕು ಗುಟುಕು, ಗುಟುಕುತ್ತಾ ಮಲ್ಲಿಕಾಳನ್ನು ಮರತೇಬಿಟ್ಟರು. ನನ್ನ ಬುಡಭದ್ರವಾದಾಗ, ಇಂತಹ ಮಲ್ಲಿಕಾ ಗಳನ್ನು ಹಾರ ಹಾಕಿಕೊಳ್ಳಬಹುದೆಂದು ಟಂಬ್ಲರಿನ ಬುಡವನ್ನು ಮೇಲು ಮಾಡಿದರು.

ರಾಮಶೇಷಯ್ಯನನ್ನು ಮಲ್ಲಿಕಾ ಬಹಳಷ್ಟು ಆದರಿಸಿ, ಜ್ಯೋತಿಷಿಯ ಬಳಿಗೆ ಅವ ಶುಕ್ರವಾರ ಸಂಜೆ ಹೋಗಿ ಭವಿಷ್ಯವನ್ನು ತಿಳಿದುಕೊಳ್ಳುವ ಏರ್ಪಾಡನ್ನು ಭದ್ರಮಾಡಿದಳು. ರಾಮಶೇಷಯ್ಯನು ಸ್ತ್ರೀದ್ವೇಷಿ ಎನ್ನುವುದು ತಿಳಿದಿದ್ದುದರಿಂದ, ಅವನ ನೆರವನ್ನು ಪಡೆಯುವ ಭರವಸೆಯನ್ನು ಪಡೆದಾಗ ಮಲ್ಲಿಕಾಳಿಗೆ ತುಂಬಾ ಸಂತೋಷವಾಗಿತ್ತು. ಸಿರಿವಂತಿಕೆಯ ಭವಿಷ್ಯದ ನಾಂದಿಯಿದು ಎಂದಾಕೆಗೆ ಮನವರಿಕೆಯಾಗಿತ್ತು. ರಾತ್ರಿ ಹನ್ನೊಂದೂವರೆ ಯಾಗಿರಬಹುದು, ಔತಣದೂಟಕ್ಕೆ ಎಲ್ಲರೂ ಸಿದ್ಧರಾಗುವ ಸಮಯ. ರಾಮ ಶೇಷಯ್ಯನು ಅತ್ತಿತ್ತ ಸುಳಿದಾಡುತ್ತ ಹೋಟಲಿನ ಪಕ್ಕದ ಬಾಗಿಲಿನಿಂದ ಹೊರಬಿದ್ದ. ಹಿಂಭಾಗದಲ್ಲಿನ ಕಾಲುದಾರಿಯಲ್ಲಿ ಕತ್ತಲೆಯಿದ್ದರೂ ಅನುಭವ

ಸ್ಥನಂತೆ, ಮುಗ್ಗರಿಸದೆ ನಡೆದ. ಸ್ವಲ್ಪದೂರ ನಡೆದ ಮೇಲೆ ಮೋಟಾರು ಗಳನ್ನು ರಿಪೇರಿ ಮಾಡುವ ಗ್ಯಾರೇಜ್ ಕಾಣಿಸಿತು. ಅದರತ್ತ ನಡೆದ. ತೂಕ ಡಿಸುತ್ತಿದ್ದ ಕಾವಲುಗಾರನನ್ನು ಎಬ್ಬಿಸಿದ. ಅವನಿಗೆ ಎಚ್ಚರಿಕೆಕೊಟ್ಟು, ಒಳಗೆ ಇದ್ದ ಸ್ಕೂಟರನ್ನು ಹತ್ತಿಕೊಂಡು ಹೊರಟ. ಮಧ್ಯರಾತ್ರಿಯ ವೇಳೆಗೆ ಬೇವಿನ ಮರದ ರಸ್ತೆಯಲ್ಲಿ ಮಿಣುಕುದೀಪವಿನ್ನೂ ಉರಿಯುತ್ತಿದ್ದ ಮನೆಯೊಳಕ್ಕೆ ಹೋದ. ಕಾವಲು ನಾಯಿಯು ಬಾಲವನ್ನು ಬಿರಬಿರನೆ ಆಡಿಸುತ್ತಾ ಸ್ವಾಗ ತಿಸಿತು. ಹಿತ್ತಿಲ ಬಾಗಿಲನ್ನು ತೆಗೆದು ಮನೆಯೊಳಕ್ಕೆ ಹೋದ. ಅಂಗಳದಲ್ಲಿ ಹುಕ್ಕಾವನ್ನು ಸೇದುತ್ತ ಕುಳಿತಿದ್ದವನ ಎದುರು ಕುಳಿತುಕೊಂಡ. "ರಾಂಜೀ, ನಿನ್ನಿಂದ ಒಂದು ಉಪಕಾರ ಆಗಬೇಕಾಗಿದೆ. ಈಗ ಪೂಜೆಯನ್ನು ಹಾಕಿ ಫಲಿ ತಾಂಶವನ್ನು ಹೇಳಬೇಕು" ಎಂದು ಕೇಳಿದ. ಗಾಂಜಾದ ಅಮಲಿನಿಂದ ಎಚ್ಚೆತ್ತ ರಾಂಜೀ "ಆ್ಹ" ಎಂದು ಆಕಳಿಸಿದ. ರಾಮಶೇಷಯ್ಯನ ಸ್ಕೂಟರಿನ ಹಿಂದೆ ಕುಳಿತು ಪೂಜೆ ಹಾಕಲು ಹೊರಟ. ಇಬ್ಬರಿಗೂ ಬಲುನೆಂಟು.

* * *

"ಸ್ವಾಮಿ ! ಸಾಹೇಬರು ತಮ್ಮನ್ನ ಇವತ್ತೋ ನಾಳೆಯೋ ಯಾವ ದಿನ ಅನುಕೂಲವಾದರೆ ಆ ರಾತ್ರಿ ಊಟಕ್ಕೆ ಬರಬೇಕು ಅಂತ ಹೇಳಿ ಕಳಿಸಿದ್ದಾರೆ" ಎಂದ ಬಂದಿದ್ದವ.

"ಯಾರಿಗೋ ಸಾಹೇಬರು ? ನನಗೆ ಯಾವ ಸಾಹೇಬರೂ ಇಲ್ಲ. ಊಟಕ್ಕೆ ಕರೆಯಬೇಕಾದರೆ ಸಾಹೇಬ್ರೇ ಬಂದು ಕರೆಯಬೇಕು. ಜವಾನನ ಕೈಲಿ ಹೇಳಿ ಕಳಿಸಿದರೆ, ಮಾನ ಮರ್ಯಾದೆ ಇದ್ದವರು ಕಂಗಾಳಿಗಳಂತೆ ಓಡಿಬಂದು ಬಿಡುತ್ತಾರಾ? ಹಾಗೂ ಊಟಕ್ಕೆ ಕರೆಯುವಾಗ, ಇವತ್ತು ಮಗನ ಹುಟ್ಟಿದ ಹಬ್ಬ ಅಥವಾ ಅಪ್ಪನ ಶ್ರಾದ್ಧ ಅಂತ ಕಾರಣವನ್ನೂ ತಿಳಿಸಬೇಕು. ಹೀಗಂದೆ ಅಂತ ನಿಮ್ಮ ಸಾಹೇಬರಿಗೆ ಹೇಳು" ಎಂದು ರಾಮಶೇಷಯ್ಯ ರೇಗಿದ.

"ನಮ್ಮ ಸಾಹೇಬರು ಈರಾನಾಯ್ಕರು ಸ್ವಾಮಿ; ಪುಟ್ಟ ಮಂತ್ರಿಗಳು. ಅವರ ಮನೆಯ ಅಡಿಗೆಯವನು ನಾನು. ವಿಧಾನಸೌಧದಲ್ಲಿ ಸಂಬಳ ಕೊಡ್ತಾರೆ. ಇವರ ಮನೆಯಲ್ಲಿ ಅಡಿಗೆ ಮಾಡ್ತೀನಿ. ನನ್ನ ಕಂಡರೆ ತುಂಬಾ ವಿಶ್ವಾಸ. ಯಾವ ಕೆಲಸವಾಗಲಿ ಗುಟ್ಟಿನಲ್ಲಿ ಮಾಡಬೇಕಾದರೆ, ನನ್ನನ್ನೇ ಕಳಿಸು ತ್ತಾರೆ. ತಾವು ತಪ್ಪು ತಿಳಿದುಕೋಬಾರದು. ಅವರೇ ಬಹಿರಂಗವಾಗಿ ಬಂದು ಕರೆಯುವಂತಿಲ್ಲ. ನಿಮ್ಮೊಂದಿಗೆ ಗುಪ್ತ ಮಾತುಕತೆಗಳನ್ನು ಆಡಬೇಕಾಗಿತ್ತು.

Scanned by CamScanner

ಆದಕಾರಣ ನನ್ನ ಕಳಿಸಿದರು. ತಾವು ಸಂಜೆ ಹೇಳಿದ ವೇಳೆಗೆ ಟ್ಯಾಕ್ಸಿಯನ್ನು ತರುತ್ತೇನೆ. ದೊಡ್ಡ ಮನಸ್ಸು ಮಾಡಿ ತಾವು ಬರಬೇಕು. ತಮಗಿಷ್ಟವಾದ ಅಡಿಗೆಯನ್ನು ರುಚಿಯಾಗಿ ಮಾಡುತ್ತೇನೆ. ಸ್ವಾಮಿೂ, ಬಡ ಅಡಿಗೆಯವ, ನನ್ನ ಮೇಲಾದರೂ ದಯವಿಟ್ಟು ಹ್ಞೂ ಅಂತ ಒಪ್ಪಿಕೊಳ್ಳಿ. ಕಾಲಿಗೆ ಬಿದ್ದು ಬೇಡಿಕೊಳ್ಳುತ್ತೇನೆ" ಎಂದು ಅಡಿಗೆಯವ ಗೋಗರೆದ.

"ನಾಡಿದ್ದು ಸಂಜೆ ಏಳರ ವೇಳೆಗೆ ಬಾ. ನಿನ್ನ ಜತೆ ಬರುತ್ತೇನೆ. ಆದರೆ ನಿಮ್ಮ ಸಾಹೇಬರಿಗೆ ಹೇಳು; ಇತರರನ್ನಾರನ್ನೂ ಕರೆಯಬಾರದು ಅಂತ. ಅಲ್ಲದೆ, ರಾತ್ರಿ ಒಂಬತ್ತರ ವೇಳೆಗೆ ಹಿಂತಿರುಗಿ ನನ್ನನ್ನು ಮನೆಗೆ ಮುಟ್ಟಿಸ ಬೇಕು ಅಂತ" ಎಂದ ರಾಮಶೇಷಯ್ಯ.

ಟ್ಯಾಕ್ಸಿಯಲ್ಲಿ ರಾಮಶೇಷಯ್ಯ ಸಂಜೆ ಉಪಸಚಿವರ ಮನೆಯ ಬಾಗಿಲನ್ನು ತಲಪಿದಾಗ, ಸ್ವಯಂ ಉಪಸಚಿವರೇ ಅವರನ್ನು ಸ್ವಾಗತಿಸಿದರು. ಬಂಗಲೆಯ ವರಾಂಡದಲ್ಲಿ ಹತ್ತಾರು ಸರಕಾರದ ಅಧಿಕಾರಿಗಳೂ ಎರಡು ಮೂರು ಗುಂಪು ಸಾರ್ವಜನಿಕರೂ, ಉಪಸಚಿವರ ದರ್ಶನಕ್ಕಾಗಿ ಕಾದಿದ್ದರು. ಅವರನ್ನೆಲ್ಲಾ ದಾಟಿಕೊಂಡು ಉಪಸಚಿವರು ಗಂಭೀರವಾಗಿ ನಡೆಯುತ್ತಾ, ರಾಮಶೇಷಯ್ಯನ ತೋಳಿನ ಮೇಲೆ ಕೈಹಾಕಿ, ಒಳಕೊಠಡಿಗೆ ನಡೆದರು. ರಾಮಶೇಷಯ್ಯನನ್ನು ಕೀಳಾಗಿ ನೋಡುತ್ತಿದ್ದ ಹಲವಾರು ಸಂದರ್ಶನಾಭ್ಯರ್ಥಿಗಳಿಗೆ ಹುಸಿನಗೆಯನ್ನು ಬೀರುತ್ತಾ, ನಮಸ್ತೆ ಮಾಡುತ್ತ, ಉಪಸಚಿವರೊಂದಿಗೆ ರಾಮಶೇಷಯ್ಯನವರು ನಡೆದರು.

"ದಯಮಾಡಿ ಇಲ್ಲಿ ಕೂತುಕೊಳ್ಳಿ; ಒಂದೈದು ನಿಮಿಷಗಳಲ್ಲಿ ವರಾಂಡಾದಲ್ಲಿ ನೆರೆದಿರುವವರನ್ನು ಸಾಗಿಹಾಕಿ ಬರುತ್ತೇನೆ. ಅನಂತರ ನಿಮ್ಮೊಂದಿಗೆ ಭೋಜನವನ್ನು ಮಾಡುತ್ತಾ, ತುಂಬಾ ರಹಸ್ಯವಾದ ಮಾತುಗಳನ್ನಾಡಬೇಕಾಗಿದೆ. ತಾವು ದಯಮಾಡಿ ಬಂದಿದ್ದು ನನ್ನ ಪುಣ್ಯ" ಎಂದು ಈರಾನಾಯ್ಕರು ಹೇಳಿ, ವರಾಂಡದತ್ತ ಹುಬ್ಬು ಗಂಟಿಕ್ಕಿಕೊಂಡು ಹೋದರು. ಪ್ರತಿಪಕ್ಷದ ಗುಂಪೊಂದು, ಅವರಿಂದ ವೈಯಕ್ತಿಕ ಲಾಭವನ್ನು ಪಡೆಯಲು ಕಾದಿದ್ದುದನ್ನು ಗಮನಿಸಿದ್ದರು. ಇವರಿಗೆ ವಿಷವನ್ನುಣಿಸಬೇಕು ಎಂದು ಬಹಳ ಆಸೆಯಿದ್ದರೂ ಸ್ಥಾನಗೌರವದಿಂದಾಗಿ ಮಾತನಾಡುವ ನಾಲಿಗೆಯಲ್ಲಿ ಅಮೃತದ ಜೇನನ್ನು ತೊಟ್ಟಿಕ್ಕಿಸಬೇಕಾಗಿತ್ತು. ಬಲು ಬಲು ಕಷ್ಟ, ಉಪಸಚಿವರ ಬಾಳನಡಿಗೆ ! ಅಂತೂ ಬಂದಿದ್ದವರನ್ನೆಲ್ಲಾ ಸಾಗಿಹಾಕಿ ರಾಮಶೇಷಯ್ಯನ ಬಳಿಗೆ ಬಂದರು. ಬಾಗಿಲನ್ನು ಹಾಕಿ ಅಗುಳಿ ಬಿಗಿದರು.

ಊಟವನ್ನೇನೋ ಮಾಡಿದರು. ಆಗಲೇ ಮಾತಿಗೂ ಪ್ರಾರಂಭವಾಗಿತ್ತು. "ನನ್ನ ವಿರುದ್ಧ ಮಿತ್ರರೆಂದು ತೋರಿಸಿಕೊಳ್ಳುವವರು ಹಲವರು ಒಳಸಂಚನ್ನು ಹೂಡುತ್ತಿದ್ದಾರೆ. ತಕ್ಕ ಪ್ರತಿಕ್ರಿಯೆಯನ್ನು ನಾನೂ ಹುಡುಕುತ್ತಿದ್ದೇನೆ. ಆದರೂ ಅವರ ಕೈ ಮೇಲಾಗಬಹುದು. ಆದಕಾರಣ ಜ್ಯೋತಿಷಿಯನ್ನು ಕೇಳಿ ಭವಿಷ್ಯವನ್ನು ತಿಳಿದುಕೊಳ್ಳುವ ಕಾತರ ನನಗೆ. ಭವಿಷ್ಯವು ಉತ್ತಮವಾಗಿದೆಯೆಂದರೆ ಎಲ್ಲ ಪ್ರಯತ್ನಗಳನ್ನೂ ಹುಮ್ಮಸ್ಸಿನಿಂದ ಮಾಡುತ್ತೇನೆ. ಇಲ್ಲದಿದ್ದರೆ ಬೆಂಡ ಮನೆಗೆ ಓಡಿದುದೇ ಲಾಭ ಎಂದು ಅದಷ್ಟು ಅವಸರದಲ್ಲಿ ದಕ್ಕಿಸಿಕೊಂಡು ಸಿಕ್ಕಿಹಾಕಿಕೊಳ್ಳದಂತೆ ಜಾರಿಕೊಳ್ಳಬೇಕು. ವಾಕ್ಸಿದ್ಧಿ ಇರುವ ಜ್ಯೋತಿಷಿಯ ಪರಿಚಯವೂ ತಮಗಿದೆಯಂತೆ. ನೇರವಾಗಿ ಜ್ಯೋತಿಷಿಯನ್ನು ನಾ ಕಾಣುವಂತಿಲ್ಲ. ನೀವು ಈ ಕೆಲಸವನ್ನು ಗುಟ್ಟಾಗಿ ಮಾಡಿಕೊಡಬೇಕು" ಎಂದರು ಈರಾನಾಯ್ಕರು.

"ಷಹರಿನಲ್ಲೆಲ್ಲಾ ಅಸಂಖ್ಯಾತವಾಗಿ 'ಮಾಜಿ'ಗಳಿದ್ದಂತೆ, ಜ್ಯೋತಿಷಿಗಳೂ ಇದ್ದಾರೆ. ನನಗೆ ಪರಿಚಯವಿರುವ ಜ್ಯೋತಿಷಿಗಳೂ ನೂರಾರು ಮಂದಿ ಇದ್ದಾರೆ. ಯಾವ ಜ್ಯೋತಿಷಿಯನ್ನು ಕುರಿತು ನೀವು ಆಡುತ್ತಿದ್ದೀರೋ ತಿಳಿಯದು. ಆದಕಾರಣ ಜ್ಯೋತಿಷಿಯ ಹೆಸರು ಮತ್ತು ವಿಳಾಸವನ್ನು ಕೊಟ್ಟರೆ, ಅವರ ಆತ್ಮೀಯ ಪರಿಚಯವು ನನಗಿದೆಯೋ ಇಲ್ಲವೋ ಹೇಳಬಲ್ಲೆ" ಎಂದರು ರಾಮಶೇಷಯ್ಯನವರು. "ಸೇಟ್ ರಾಜೇಶ್ವರುಡು ಅವರು ನಿಮ್ಮ ಮೂಲಕ ಒಬ್ಬ ಜ್ಯೋತಿಷಿಯ ಸಲಹೆಯನ್ನು ಪಡೆಯುತ್ತಾರಂತೆ. ಪಡೆದು ವ್ಯವಹಾರಗಳಲ್ಲಿ ಅತ್ಯುತ್ತಮ ಲಾಭವನ್ನು ಗಳಿಸುತ್ತಾರಂತೆ. ಸಿನಿಮಾದಲ್ಲಿನ ಪುಟಾಣಿ ನಟಿ ಮಲ್ಲಿಕಾ ಕೂಡ ಪ್ರಸಿದ್ಧಳಾಗಲು ಆ ಜ್ಯೋತಿಷಿಯ ಬೆಂಬಲವನ್ನು ಪಡೆಯಲು ಯತ್ನಿಸುತ್ತಿದ್ದಾಳಂತೆ. ಆ ಜ್ಯೋತಿಷಿಯ ಹೆಸರು, ವಾಸಸ್ಥಳ ಇವಾವುದೂ ನನಗೆ ತಿಳಿಯದು. ಎಲ್ಲರೂ ಜ್ಯೋತಿಷಿ ಎಂದನ್ನುತ್ತಾರೆಯೇ ಹೊರತು ಅವರ ವಿವರಗಳು ರಹಸ್ಯವಾಗಿವೆ. ಆದರೆ ಎಲ್ಲರೂ ನಿಮುಗವರು ಅಪ್ತರು ಎಂದನ್ನುತ್ತಾರೆ. ರಹಸ್ಯವಾದುದನ್ನು ಕೆಣಕುವ ಆಸೆಯು ನನಗೇನೂ ಇಲ್ಲ. ನನ್ನ ಭವಿಷ್ಯವು ಸುಗಮವಾಗುವಂತೆ ಅವರು ಪೂಜೆ ಹಾಕಿದರೆ ಸಾಕು. ಇಷ್ಟನ್ನು ನೀವು ಮಾಡಿಕೊಡಲೇಬೇಕು. ಖರ್ಚಿನ ಮುಖವನ್ನು ನೋಡಬೇಡಿ. ಮತ್ತೆ ಯಾವುದಾದರೂ ಸಹಾಯವನ್ನು ಕೇಳುವುದಾದರೆ ಮಾಡಿಸಿಕೊಡುತ್ತೇನೆ" ಎಂದರು ಈರಾನಾಯ್ಕರು.

Scanned by CamScanner

"ಪೂಜೆಹಾಕುವ ಜ್ಯೋತಿಷಿಗಳೋ ? ಅವರು ಎಲ್ಲಿ ಯಾವಾಗ ಇರು ತ್ತಾರೋ, ಯಾರಿಗೂ ತಿಳಿಯದು. ಇಂತಹ ಕಡೆಗೆ ಬಾ ಎಂದು ಹಠಾತ್ತನೆ ಹೇಳಿ ಕಳಿಸುತ್ತಾರೆ. ಆಗ ಹೋಗುತ್ತೇನೆ. ಅವರನ್ನು ನಾನು ಪ್ರಶ್ನಿಸುವುದಿಲ್ಲ, ನನ್ನ ಮನಸ್ಸಿನಲ್ಲಿರುವುದನ್ನು ಊಹಿಸಿ ಹೀಗೆ ಮಾಡು ಎಂದು ಅಪ್ಪಣೆ ಕೊಡಿಸು ತ್ತಾರೆ. ಅವರು ಹೇಳಿದಂತೆ ನಡೆದುಕೊಳ್ಳುತ್ತೇನೆ. ಇಂತಹುದಾಗಬೇಕು ಎಂದು ಏನಾದರೂ ಕೇಳಿದರೆ ಮುಖದ ಮೇಲೆ ಉಗಿದು ಒದ್ದು ಬಿಟ್ಟು ಹೊರಟುಹೋಗುತ್ತಾರೆ. ಈ ವಿಚಾರದಲ್ಲಿ ಆತ ತಿಕ್ಕಲು ಆಸಾಮಿಯಂತೆ ನಡೆದುಕೊಳ್ಳುತ್ತಾನೆ. ಆದ್ದರಿಂದ ನಿಮ್ಮ ಕೆಲಸವನ್ನು ಮಾಡಿಕೊಡುತ್ತೇನೆ ಎಂದು ಧೈರ್ಯವಾಗಿ ಹೇಳಲು ಸಾಧ್ಯವಿಲ್ಲ. ಅವಕಾಶ ದೊರೆತಾಗ ನಿಮಗೆ ಸುದ್ದಿಯನ್ನು ಮುಟ್ಟಿಸುತ್ತೇನೆ. ಆಗ ನಾ ಹೇಳಿದಷ್ಟು ಹಣವನ್ನು ಕಳಿಸಿ ಅಥವಾ ಇತರ ಬೇಡಿಕೆಯನ್ನು ನಡೆಸಿಕೊಡಿ. ನಾನು ಸ್ವಯಂ ಬಂದು ನಿಮ್ಮನ್ನು ಕಾಣುವುದು ಇಬ್ಬರಿಗೂ ಕ್ಷೇಮಕರವಲ್ಲ" ಎಂದರು ರಾಮ ಶೇಷಯ್ಯ. "ಸುದ್ದಿಯನ್ನು ನೀವು ಕಳಿಸಿದ್ದೀರಿ ಎಂದು ನನಗೆ ಖಚಿತವಾಗು ವುದು ಹೇಗೆ?" ಎಂದು ಈರಾನಾಯ್ಕರು ಕೇಳಿದರು. "ಖಚಿತವಾಗುವಂತೆ ವಿಚಿತ್ರ ರೀತಿಯಲ್ಲಿ ನಿಮಗೆ ತಿಳಿಯಪಡಿಸುತ್ತೇನೆ" ಎಂದರು ರಾಮಶೇಷಯ್ಯ ನವರು.

* * *

ಸೇಟ್ ರಾಜೇಶ್ವರುಡು ಅವರ ಮನೆಗೆ ರಾಮಶೇಷಯ್ಯ ಸುಮಾರು ಬೆಳಗಿನ ಝಾಮ ಆರು ಗಂಟೆಯ ವೇಳೆಗೆ ರಾಂಜೀಯನ್ನು ಕರೆದುಕೊಂಡು ಬಂದಿದ್ದ. ಹಿಂದಿನ ಸಂಜೆಯೇ ವ್ಯವಸ್ಥೆಯಾಗಿದ್ದಂತೆ ರಾಜೇಶ್ವರುಡು ಅವರು ಗೇಟಿನ ಬಳಿ ಸ್ವಾಗತಿಸಿದರು. ಅಪ್ಪಟ ಶ್ವೇತಾಂಬರಧಾರಿಯಾಗಿದ್ದ ರಾಂಜಿ, ತಲೆಯ ಜುಟ್ಟನ್ನು ಜೋಗಿಯಂತೆ ಎತ್ತಿಕಟ್ಟಿದ್ದ. ಸೊಂಟದ ಪಟ್ಟಿಯಲ್ಲಿ ಕಿರುಕಠಾರಿಯೊಂದು ಸಿಕ್ಕಿಸಲ್ಪಟ್ಟಿತ್ತು. ಹಣೆಯ ಮೇಲೆ ಅರ್ಧಚಂದ್ರಾಕೃತಿಯ ಕುಂಕುಮದ ಶೃಂಗಾರ. ಜೋಗಿಯನ್ನು ರಾಜೇಶ್ವರುಡು ಅವರು ಭಕ್ತಿಯಿಂದ ವಂದಿಸಿ ಮನೆಯೊಳಕ್ಕೆ ಕರೆದೊಯ್ದರು. ರೋಗಗ್ರಸ್ತನಾಗಿದ್ದ ದೊಡ್ಡ ಮಗನ ಕೋಣೆಗೆ ಹೋದರು. ಜೋಗಿಯ ಹೆಸರು ರಾಂಜಿ ಎಂಬುದು ರಾಮ ಶೇಷಯ್ಯನಿಗೊಬ್ಬನಿಗೇ ಗೊತ್ತು. ಕಾರಣ ರಾಜೇಶ್ವರುಡು ಅವರು "ಜೋಗಿ ಗಳೇ, ನಿಮ್ಮ ಆಧ್ಯಾತ್ಮಿಕ ಶಕ್ತಿಯಿಂದ ನನ್ನ ಮಗನಿಗೆ ಗುಣವಾಗಬೇಕು. ಮನುಷ್ಯ ಪ್ರಯತ್ನವನ್ನೆಲ್ಲಾ ಮಾಡಿಯಾಯಿತು. ಯಾವ ಗುಣವೂ ಕಾಣ

ಬರಲಿಲ್ಲ" ಎಂದು ಹೇಳಿ ಮಗನ ಮಂಚದ ಬಳಿ, ಹುಲಿಚರ್ಮವನ್ನು ಹಾಸಿದ್ದ ಪೀಠದಲ್ಲಿ ಕೂರಿಸಿದರು.

ಕಳೆಗುಂದಿದ್ದ ರೋಗಿಯ ಮುಖದಲ್ಲಿ ಜೋಗಿಯನ್ನು ಕಂಡಾಗ ಆಶಾ ಕಿರಣವು ಮೂಡಿದಂತೆ ಭಾಸವಾಯಿತು. ರೋಗಿಯ ಮುಖವನ್ನೇ ಜೋಗಿಯು ಕಣ್ಣಾಲಿಗಳನ್ನು ಆಡಿಸದೆ ದುರುಗುಟ್ಟಿಕೊಂಡು ನೋಡಿದ. ಮತ್ತೆ ಮತ್ತೆ ನೋಡಿದ. ಕಣ್ಣುಗಳು ಕೆಂಪೇರುವ ತನಕ ನೋಡಿದ. ನಂತರ ಕಣ್ಣುಗಳನ್ನು ಮುಚ್ಚಿ ಧ್ಯಾನಾಸಕ್ತನಾದ. ಒಂದೆರಡು ಮೂರು ನಿಮಿಷಗಳು ಧ್ಯಾನದಲ್ಲಿದ್ದ. ತುಟಿಗಳು ಮಾತ್ರ ಅಲುಗಾಡುತ್ತಿದ್ದುವು, ಅದೂ ಕಂಡೂ ಕಾಣಿಸದಷ್ಟು. ನಂತರ ಕಣ್ಣುಗಳನ್ನು ತೆರೆದ. ಜಯ್ ಭೈರವೀ ಎಂದು ಹೇಳಿದ. "ಬೇನೆಯಲ್ಲ ಈ ಹುಡುಗನಿಗೆ ಬಡಿದಿರುವುದು. ಯಾರೋ ಶತ್ರುಗಳು ಅತ್ಯಂತ ಉಪದ್ರವಿಯಾದ ಮಾಟವನ್ನು ಮಾಡಿದ್ದಾರೆ. ದುಷ್ಟಶಕ್ತಿಯ ಉಚ್ಚಾಟನೆಯನ್ನು ಮಾಡಬೇಕು. ಇಲ್ಲದಿದ್ದರೆ ಗಂಡಾಂತರ ತಪ್ಪಿದ್ದಲ್ಲ" ಎಂದು ನುಡಿದ. ಎದ್ದ. ಹೊರಕ್ಕೆ ಯಾವುದೋ ಆವೇಶದಲ್ಲಿ ಹೊರಟ. ರಾಜೇಶ್ವರುಡು ಮತ್ತು ರಾಮಶೇಷಯ್ಯನವರು ಜೋಗಿಯನ್ನು ತುಟಿಪಿಟಕ್ಕೆ ನ್ನದೆ ಹಿಂಬಾಲಿಸಿದರು. ಬಂಗಲೆಯ ದೊಡ್ಡ ಕಾಂಪೌಂಡಿನ ಮೂಲೆಯತ್ತ ಜೋಗಿಯು ಬಿರಿಬಿರಿ ನಡೆದ. ಒಂದು ಹಿಡಿ ಮಣ್ಣನ್ನು ತೆಗೆದುಕೊಂಡು ಸುತ್ತಲೂ ಎರಚಿದ. ಎರಚಲ್ಪಟ್ಟ ಮಣ್ಣು ಒಂದು ಭಾಗದಲ್ಲಿ ತೇವವಾಯಿತು. ಕೆಂಬಣ್ಣಕ್ಕೆ ತಿರುಗಿತು. ಜಯ್ ಭೈರವಿ ಎಂದೊಮ್ಮೆ ಕೇಕೆಹಾಕಿ, ಸೊಂಟ ದಿಂದ ಕಿರುಕಠಾರಿಯನ್ನು ಸೆಳೆದು, ಅಲ್ಲಿ ಅಗೆಯತೊಡಗಿದ. ರಭಸದಿಂದ ಹೂಂಕಾರವನ್ನುಚ್ಚರಿಸುತ್ತಾ ಅಗೆದ. ಹಳದಿ ಬಟ್ಟೆಯ ಗಂಟೊಂದು ಸಿಕ್ಕಿತು. ಹೂಂಕಾರವನ್ನು ಜಪಿಸುತ್ತಲೇ ಗಂಟನ್ನು ಬಿಚ್ಚಿದ. ಹಸಿ ಮೂಳೆಯ ಚೂರೊಂದು, ಸತ್ತು ಒಣಗಿದ ಹೆಂಟೆಗೊದ್ದವೊಂದು, ತುಕ್ಕುಹಿಡಿದ ಎರಡು ಮೊಳೆಗಳು ಅದರಲ್ಲಿದ್ದುವು. ಆ ವೇಳೆಗೆ ಸುಮಾರು ಆರೂವರೆಯಾಗಿತ್ತು. ಸೂರ್ಯೋದಯವಾಗಿ ಕೆಲವು ಘಳಿಗೆಗಳು ಆಗಿದ್ದುವು. ಬೆಳಕು ಸ್ಪಷ್ಟವಾಗಿ ಹರಡಿತ್ತು. ಕಾಷಾಯದ ಗೋಮುಖವೊಂದನ್ನು ಕಿಸೆಯಿಂದ ತೆಗೆದು ಬಲಗೈ ಯಿಗೆ ತೊಟ್ಟುಕೊಂಡ. ತೆರೆದ ಗಂಟಿನ ಮೇಲೆ ಅಂಗೈಯನ್ನು ಆಡಿಸಿದ, ಕರ್ಕಶ ಮಂತ್ರಗಳನ್ನು ಗರ್ಜಿಸುತ್ತ. ಅರೆಕ್ಷಣದಲ್ಲಿ ಮೊಳೆಗಳೆರಡೂ ಚಕ್ಕಂತ ಹಾರಿ ಬಂದು ಜೋಗಿಯ ಅಂಗೈಯಿಗೆ ಅಂಟಿಕೊಂಡವು. "ಕಾಡ ತುಳಸಿ ಗಿಡ ಗಳನ್ನು ಇಲ್ಲಿ ನೆಡೆಸಿ. ಅವನ್ನು ಹೊರವಾಗಿ ಬೆಳೆಸಿ. ಮಾಟದ ಮೊಳೆಗಳು ನನ್ನ

Scanned by CamScanner

ವಶವಾಗಿವೆ. ಅವನ್ನು ತೆಗೆದುಕೊಂಡು ಹೋಗುತ್ತೇನೆ. ಹಿಂತಿರುಗಿ ನಾನು ನೋಡುವುದಿಲ್ಲ. ನೀವಾರೂ ನನ್ನ ಹಿಂಬಾಲಿಸಬೇಡಿ" ಎಂದು ಹೇಳಿ ಜೋಗಿಯು ಬಂಗಲೆಯಿಂದ ಹೊರಕ್ಕೆ ಉನ್ಮಾದ ಉಂಟಾದವನಂತೆ ಥಂಗುತ್ತಾ ಥಂಗುತ್ತಾ ನಡೆದುಹೋದ.

ಮಗನಿಗೆ ಇನ್ನು ಮುಂದೆ ಗುಣವಾಗುತ್ತೆ ಎನ್ನುವ ನಂಬಿಕೆಯು ರಾಜೇಶ್ವರುಡೂಗೆ ದೃಢವಾಗಿ ಮೂಡಿತು. "ರಾಮಶೇಷು! ನೀನು ಹೇಳುತ್ತಿದ್ದುದರಲ್ಲಿ ನನಗೆ ಯಾವ ವಿಶ್ವಾಸವೂ ಇರಲಿಲ್ಲ. ಈಗ ಪ್ರತ್ಯಕ್ಷವಾಗಿ ಕಂಡಿದ್ದೀನಿ. ಜೋಗಿಯು ಅತ್ಯಂತ ಪ್ರಭಾವಶಾಲಿಯಾದ ಸಾಧಕನೇ ಇರಬೇಕು. ಆತನಿಗೆ ಎಷ್ಟು ಕಾಣಿಕೆಯನ್ನು ಯಾವ ರೀತಿಯಲ್ಲಿ ಕೊಡಬೇಕೋ ತಿಳಿಸು. ಸಂತೋಷವಾಗಿ ಭಕ್ತಿಪೂರ್ವಕವಾಗಿ ಸಲ್ಲಿಸುತ್ತೇನೆ" ಎಂದು ದೈನ್ಯದಿಂದ ನುಡಿದ.

"ಹಾಕಿದ ಪೂಜೆಗಾಗಲಿ, ಭೂತೋಚ್ಚಾಟನೆಗಾಗಲಿ ಪ್ರತಿಫಲವನ್ನು ಜೋಗಿಗಳು ಸ್ವೀಕರಿಸುವುದಿಲ್ಲ. ಹಾಗೂ ಭೂತೋಚ್ಚಾಟನೆಯಾದ ಮನೆಯವರಿಂದ ಖಂಡಿತವಾಗಿಯೂ ತೆಗೆದುಕೊಳ್ಳುವುದಿಲ್ಲ. ಆದರೆ ಇನ್ನೊಂದು ವಾರದಲ್ಲಿ ಅನಿರೀಕ್ಷಿತವಾಗಿ ನಿನಗೇನಾದರೂ ಹಣವು ಬಂದರೆ ಅದನ್ನು ನನ್ನ ಕೈಲಿಡು. ಜೋಗಿಯವರು ಹೇಳಿದಂತೆ ಅದನ್ನು ವಿನಿಯೋಗಿಸುತ್ತೇನೆ. ಅದು ಹೇಗಾದರೂ ಆಗಲಿ, ನಮ್ಮ ಹುಡುಗನಿಗೆ ರೋಗನಿವಾರಣೆಯಾದರೆ ಸಾಕಪ್ಪಾ" ಎಂದರು ರಾಮಶೇಷಯ್ಯನವರು, ತುಂಬಾ ಗಂಭೀರವಾದ ಮತ್ತು ಒಲವಿನ ದನಿಯಲ್ಲಿ.

* * *

ಕುದುರೆ ಜೂಜಿಗೆ ಶನಿವಾರ ರಾಮಶೇಷಯ್ಯ ಹೋಗಿದ್ದ. ಜೂಜಾಡಲು ಹಣವೇನೂ ಇದ್ದಿಲ್ಲ. ಆದರೂ ಸಂಸ್ಥೆಯ ಆಜೀವ ಸದಸ್ಯನಾಗಿದ್ದುದರಿಂದ ಮೋಜಿಗಾಗಿ ಹೋಗಿದ್ದ. ಮೂರನೆಯ ಪಂದ್ಯದ ವೇಳೆಗೆ ಚಹಾ ಕುಡಿಯಲು ಹೋದಾಗ ಮಲ್ಲಿಕಾಳನ್ನು ಕಂಡ. ಮುಖವೆಲ್ಲಾ ಕರಡಿಯ ಕೂದಲು ಮಾಡಿಕೊಂಡಿದ್ದ, ಬಿಗಿಪ್ಯಾಂಟನ್ನು ಏರಕಹೊಯ್ದುಕೊಂಡಿದ್ದ, ಥರ್ಮಾವರದ ರವಿಕೆಯ ಬಟ್ಟೆಯಲ್ಲಿ ಬುಷ್‌ಷರ್ಟ್ ಹೊಲಿಸಿ ಎದೆಯ ಬುಷ್ ಕಾಣುವಂತೆ ಧರಿಸಿದ್ದ ಯುವಕನೊಂದಿಗೆ ಅವಳು ತಟ್ಟೆಯಗಲದ ಕಪ್ಪು ಕನ್ನಡಕಗಳನ್ನು ಧರಿಸಿ ಮೆರೆಯುತ್ತಿದ್ದಳು. ರಾಮಶೇಷಯ್ಯನನ್ನು ಕಂಡೊಡನೆ, ಅವನತ್ತ ಹರಿದು ಬಂದಳು. "ಜ್ಯೋತಿಷಿಯು ಸಿಕ್ಕಿದ್ದನಾ? ಭವಿಷ್ಯವೇನಂತೆ ?" ಎಂದು ಕೇಳಿದಳು. "ಈಗ ಸಿಕ್ಕಿರುವ ಮಹಾಋಷಿಯೇ

ನಿನ್ನ ಭವಿಷ್ಯವನ್ನು ರೂಪಿಸುವ ಹಾಗೆ ಕಾಣುತ್ತೆ : ಅಂದಮೇಲೆ ಜ್ಯೋತಿಷಿಯಿಂದೇನಾಗಬೇಕು ?" ಎಂದ ರಾಮಶೇಷಯ್ಯ. "ಅಯ್ಯೋ ! ಅವನಪ್ಪನಿಗಿನ್ನೂ ನಲವತ್ತರ ಪ್ರಾಯ. ಭಾರೀ ಶ್ರೀಮಂತನೇನೋ ಹೌದು, ಆದರೆ ಮಗನ ಕೈಗೆ ತಿಂಗಳ ಮೋಜು ಖರ್ಚಿನ ಹಣ ಮಾತ್ರ ಸಿಗುತ್ತೆ. ಅವನಿಗೂ ನಟನಾಗಬೇಕೆಂಬ ಆಸೆ. ಆದರೆ ಅವರಪ್ಪ ಖಡಾಖಂಡಿತವಾಗಿ ಉಹ್ಞೂ ಎಂದಿದ್ದಾರೆ. ಅವನನ್ನು ತಾತ್ಕಾಲಿಕವಾಗಿ ಚಿಲ್ಲರೆ ಖರ್ಚಿಗೆ ಬಳಸಿಕೊಳ್ಳುತ್ತಿದ್ದೇನೆ. ಅಷ್ಟೇ" ಎಂದಳು ಮಲ್ಲಿಕಾ. "ನಿನಗೊಂದು ಕೆಲಸವನ್ನು ಹೇಳುತ್ತೇನೆ. ಅದನ್ನು ಯಾವ ರೀತಿಯಿಂದಲಾದರೂ ಅತಿ ರಹಸ್ಯವಾಗಿ ಮಾಡಿಕೊಂಡು ಬಂದು ನನಗೆ ತಿಳಿಸು. ಅನಂತರ ನಿನ್ನ ಭವಿಷ್ಯವನ್ನು ಜೋಗಿಯಿಂದ ಅವಕಾಶವು ಸಿಕ್ಕಿದಾಗ ತಿಳಿದುಕೊಳ್ಳುತ್ತೇನೆ. ನಿನ್ನ ಜನ್ಮ ನಕ್ಷತ್ರವು ನನಗೆ ಹೇಗೂ ಗೊತ್ತು" ಎಂದರು ರಾಮಶೇಷಯ್ಯ. "ಖಂಡಿತವಾಗಿ ಮಾಡುತ್ತೇನೆ" ಎಂದಳು ಮಲ್ಲಿಕಾ. "ಹಾಗಾದರೆ ನಾಳೆ ಬೆಳಿಗ್ಗೆ ದೊಡ್ಡಾಸ್ಪತ್ರೆಯ ಬಳಿ ಒಂಬತ್ತು ಗಂಟೆಗೆ ನನ್ನ ಕಾಣು. ಆ ಸಂತೆಯಲ್ಲಿ ರಹಸ್ಯವಾಗಿ ಮಾತನಾಡಬಹುದು" ಎಂದರು ರಾಮಶೇಷಯ್ಯ.

ಮಾರನೆಯ ಬೆಳಿಗ್ಗೆ ಒಂಬತ್ತರ ವೇಳೆಗೆ ತುಂಬಾ ನರಳುತ್ತಿದ್ದ ವ್ಯಕ್ತಿಯು ನಿಂತಿತ್ತು, ಕಂಬದ ಬಳಿ. ಮಲ್ಲಿಕಾ ಕೂಡ ಬೇನೆ ಬಿದ್ದವಳಂತೆಯೇ ಕಾಣಿಸುತ್ತಿದ್ದಳು. ವ್ಯಕ್ತಿಯ ಬಳಿಗೆ ಹೋಗಿ "ಅಣ್ಣಯ್ಯಾ ! ಇನ್ನೂ ಉದರಶೂಲೆಯು ಕಡಿಮೆಯಾಗಲಿಲ್ಲವೆ?" ಎಂದು ಕೇಳಿದಳು. "ವಯಸ್ಸಾದವ ನಾನು, ನರಳುವುದು ಸಹಜ. ನಿನ್ನ ಬೇನೆ ಹೇಗಿದೆಯಮ್ಮ?" ಎಂದು ಕೇಳಿದ. "ಶನಿಕಾಟ ಮುಗಿಯುವ ತನಕ ನನ್ನನ್ನು ಬೇನೆ ಬಿಡುಲ್ಲ" ಎಂದಳು. "ಈ ತಾಯಿತಿಯನ್ನು ಕಟ್ಟಿಕೋ. ನಿನ್ನ ಶನಿಕಾಟ ತಾಯಿತಿಗೆ ವರ್ಗಾಯಿಸಲ್ಪಡುತ್ತದೆ. ಯಾವುದಾದರೂ ಉಪಾಯವನ್ನು ಹೂಡಿ ಈರಾನಾಯ್ಕರನ್ನು ಭೇಟಿಯಾಗು. ಅವರಿಗೆ ಸ್ವಲ್ಪವೂ ಅನುಮಾನ ಬರದಂತೆ ಈ ತಾಯಿತಿಯನ್ನು ಅವರ ಒಳಜೇಬಿಗೆ ಹಾಕು. ನಂತರ ನನ್ನ ಬಂದು ಕಾಣು" ಎಂದು ಹೇಳಿ ತಾಯಿತಿಯೊಂದನ್ನು ಮಲ್ಲಿಕಾಳ ತೋಳಿಗೆ ಕಟ್ಟಿದನು. ದೊಡ್ಡಾಸ್ಪತ್ರೆಗಳಲ್ಲಿ ರೋಗನಿವಾರಣೆಗಾಗಿ ತಾಯಿತಿ ಕಟ್ಟುವವರು ನೆರೆದಿರುವುದು ಎಲ್ಲರಿಗೂ ತಿಳಿದ ವಿಷಯವೆ?

* * *

Scanned by CamScanner

ಉಪಸಚಿವ ಈರಾನಾಯ್ಕರನ್ನು ಭೇಟಿಯಾಗಲು ಅವರ ಬಂಗಲೆಯ ವರಾಂಡದಲ್ಲಿ ಬೊಂತೆ ಬೊಂತೆ ಗುಂಪುಗಳು ಯಥಾಪ್ರಕಾರ ಕಾದಿದ್ದರು. ಸಚಿವಾಲಯದಿಂದ ಆ ಹೊತ್ತಿಗೆ ಈರಾನಾಯ್ಕರು ಬಂದರು. ಸುತ್ತಲೂ ನೋಡಿ ಒಳಕ್ಕೆ ನಡೆದರು. ಆಪ್ತನೌಕರನು ಉಪಾಹಾರವನ್ನು ಬಡಿಸಲು ಬಂದಾಗ, "ಹೊರಗೆ ಮೂರುನಾಲ್ಕು ಹೆಣ್ಣುಮಕ್ಕಳು ಬಂದಿರುವ ಹಾಗಿದೆ. ಯಾವುದೋ ಸಂಘದ ಉದ್ಘಾಟನೆಗೆ ಕರೆಯಬಂದಂತಿದೆ. ಸಂಜೆಯ ವೇಳೆ ; ಅವರನ್ನು ಕಾಯಿಸಬಾರದು. ಆ ಗುಂಪಿನ ಬಳಿ ಹೋಗಿ, ಮುಖ್ಯಸ್ಥೆಯನ್ನು ಇಲ್ಲಿಗೆ ಕರೆದುಕೊಂಡು ಬಾ. ಅವರಿಗೂ ಫಲಾಹಾರವನ್ನು ಸಿದ್ಧಪಡಿಸು" ಎಂದರು. ಕರೆಸಿಕೊಂಡು ಬಂದ ಮುಖ್ಯಸ್ಥೆಯು ಶುಭ್ರಾನ್ವಿತಳಾಗಿದ್ದ ಮಲ್ಲಿಕಾ. ಉಪಾಹಾರವನ್ನು ಉಣ್ಣುತ್ತಾ "ಏನು ಬಂದಿದ್ದು ?" ಎಂದು ಕೇಳಿದರು. "ಗೃಹಸ್ಥ ಮಹಿಳೆಯರು, ಬೆಲೆ ಏರುತ್ತಿರುವುದರ ವಿರುದ್ಧ ಚಳುವಳಿಯನ್ನು ಆರಂಭಿಸಬೇಕೆಂದಿದ್ದಾರೆ. ತಾವು ಉದ್ಘಾಟಿಸಬೇಕೆಂದು ನಮ್ಮ ಆಸೆ. ನಿಮಗೆ ಅನುಕೂಲವಾದ ತಾರೀಕು, ದಿನ, ತಿಥಿ, ವೇಳೆಯನ್ನು ತಿಳಿಸಿದರೆ ನಮ್ಮ ಕಾರ್ಯಕ್ರಮವನ್ನು ತದನುಸಾರ ವ್ಯವಸ್ಥೆ ಮಾಡುತ್ತೇವೆ" ಎಂದಳು ಮಲ್ಲಿಕಾ. "ಗೃಹಸ್ಥ ಮಹಿಳೆಯರ ಗುಂಪಿಗೆ ನೀನು ಮುಖ್ಯಸ್ಥೆಯಾಗಿರುವುದೇ ಒಂದು ಪವಾಡ. ಒಳಕೋಣೆಗೆ ಬಾ. ಡೈರಿಯನ್ನು ನೋಡಿ ದಿನ, ಕಾಲವನ್ನು ನಿರ್ಧರಿಸುವ" ಎಂದು ಹೇಳಿ ಒಳಕ್ಕೆ ಕರೆದುಕೊಂಡು ಹೋದ. ಬಾಗಿಲನ್ನು ಹಾಕಿದ.

ಈ ವೇಳೆಗೆ ಓದುಗರು ನಿರೀಕ್ಷಿಸಿದಂತೆಯೇ, ಈರಾನಾಯ್ಕರು ಡೈರಿಯನ್ನೇನೂ ತೆರೆಯಲಿಲ್ಲ. ಹಾಲಿನ ಡೈರಿಯನ್ನು ಪರೀಕ್ಷಿಸಿದರು. ಅಮಲು ನಾಯಕರಿಗಿತ್ತು. ಉದ್ದೇಶವು ಮಲ್ಲಿಕಾಳಿಗಿತ್ತು. ತಾಯಿತಿಯು ಒಳಜೇಬನ್ನು ಸುಲಭವಾಗಿ ಸೇರಿತು. "ಹೆತ್ತೂರಿನ ಪ್ರವಾಸ ಮಂದಿರದಲ್ಲಿ ಶನಿವಾರ ಭಾನುವಾರ ಕಳೆಯುತ್ತೇನೆ. ವಿಶ್ರಾಂತಿಯು ಅಗತ್ಯ. ಅನುಕೂಲವಾದರೆ ಒಬ್ಬರೇ ಬನ್ನಿ" ಎಂದು ಮಲ್ಲಿಕಾ ಹೇಳಿದಾಗ, ಹಿಡಿತವೂ ಸಡಿಲವಾಯಿತು. ಭೇಟಿಗಳನ್ನು ವಿಧಿವತ್ತಾಗಿ ಉಪಸಚಿವರು ಆರಂಭಿಸಿದರು. ರಾತ್ರಿ ಒಂಬತ್ತರ ವೇಳೆಗೆ ಊಟಕ್ಕೆ ಸಿದ್ಧರಾಗಲು ಉಡುಪನ್ನು ತೆಗೆಯುವಾಗ ಜೇಬುಗಳಲ್ಲಿ ಬೆಳಗಿನಿಂದ ತುಂಬಿದುದನ್ನು ಗೋದ್ರೆಜ್ ಸೇಫಿನಲ್ಲಿ ಸುರಕ್ಷಿತ ಮಾಡುವುದು ನಾಯಕರ ಅಭ್ಯಾಸ. ಹಾಗೆ ಈರಾನಾಯ್ಕರು ಮಾಡಿದಾಗ, ತಾಯಿತಿಯೊಂದು ಸಿಕ್ಕಿತು. ಅರೆ! ಇದು ಹೇಗೆ ಬಂತು? ಯಾರೂ ಕೊಟ್ಟ ನೆನಪಿಲ್ಲ ಎಂದದನ್ನು

ಪರೀಕ್ಷಿಸತೊಡಗಿದರು. ಒಂದು ಕಡೆ ಮುಚ್ಚಳವಿತ್ತು. ಕುತೂಹಲದಿಂದದನ್ನು ಸೆಳೆದರು. ಒಳಗೆ ಕಾಗದದ ಸುರುಳಿಯಿತ್ತು. ಬಿಡಿಸಿ ಓದಿದರು. "ಧರ್ಮರತ್ನಾಕರರಿಂದ ಮೂರುಲಕ್ಷ ರೂಪಾಯಿಗಳ ಚೆಕ್ಕನ್ನು, ದೀನದಲಿತರ ನಿಧಿಗಾಗಿ ಪಡೆಯಿರಿ. ಅದನ್ನು ಕ್ಯಾಷ್ ಮಾಡಿಸಿ ಸೇಟ್ ರಾಜೇಶ್ವರುಡು ಅವರಿಗೆ ಆಪ್ತರ ಮೂಲಕ ಮೊಹರುಮಾಡಿದ ಲಕ್ಕೋಟೆಯಲ್ಲಿಟ್ಟು ಕಳಿಸಿಕೊಡಿ. ಜೋಗಿಯ ಇಚ್ಛಾ" ಅಂತಿತ್ತು. ರಾಮಶೇಷಯ್ಯ ಹೇಳಿದ್ದು ನಿಜ. ಜೋಗಿಗಳ ಮಂತ್ರಪ್ರಭಾವದಿಂದಲೇ ಈ ರೀತಿ ವಿಚಿತ್ರವಾಗಿ ಅಪ್ಪಣೆ ದೊರೆತಿದೆ. ಇದನ್ನು ಬೇಗ ಮಾಡಬೇಕು. ಇಲ್ಲದಿದ್ದರೆ ಸ್ಥಾನಪಲ್ಲಟವಾಗಬಹುದು ಎಂದು ಈರಾನಾಯ್ಕರು ಯೋಚಿಸಿದರು.

* * *

ರೋಗಿಯು ಗುಣಮುಖನಾಗುತ್ತಿದ್ದಾನೆಯೇ ಎಂದು ವಿಚಾರಿಸಲು ರಾಮಶೇಷಯ್ಯನವರು ಬಂದರು. "ಇವತ್ತು ಸ್ವಲ್ಪ ಆಹಾರವನ್ನು ಸೇವಿಸಿದ. ವಾಂತಿಯಾಗಲಿಲ್ಲ. ನೀ ಮಾಡಿದ ಉಪಕಾರವನ್ನು ಬದುಕಿರುವವರೆಗೂ ಮರೆಯುವುದಿಲ್ಲ. ಅಂದಹಾಗೆ ನಿನ್ನೆ ಮೂರು ಲಕ್ಷ ರೂಪಾಯಿಗಳನ್ನು ಯಾರೋ ಕಳಿಸಿಕೊಟ್ಟರು. ಯಾರು ಕಳಿಸಿದರು, ಏಕೆ ಕಳಿಸಿದರು, ಒಂದೂ ಗೊತ್ತಿಲ್ಲ. ಅನಿರೀಕ್ಷಿತವಾಗಿ ಬಂದುದನ್ನು ಕೊಡು, ಜೋಗಿಗೆ ತಲುಪಿಸುತ್ತೇನೆ ಎಂದು ನೀನು ಹೇಳಿದ್ದೀ. ಕಾರಣ ಲಕ್ಕೋಟೆಯಲ್ಲೇ ಹಣವನ್ನು ಇಟ್ಟಿದ್ದೇನೆ. ತೆಗೆದುಕೊಂಡು ಹೋಗಪ್ಪಾ" ಎಂದರು ರಾಜೇಶ್ವರುಡು ಅವರು.

* * *

ರಾತ್ರಿ ಒಂದು ಗಂಟೆಯ ವೇಳೆಗೆ ರಾಂಜಿಯು ಗಾಂಜಾದ ಅಮಲಿನಲ್ಲಿದ್ದಾಗ, ಆ ಲಕ್ಕೋಟೆಯನ್ನು ರಾಮಶೇಷಯ್ಯ ಅವನ ಕೈಲಿಟ್ಟ. ಇದನ್ನೇನು ಮಾಡಬೇಕೆಂದಿದ್ದೀ ಎಂದು ಕೇಳಿದ. "ನನ್ನ ಗುರುಗಳಿಗೆ ಅರ್ಪಿಸುತ್ತೇನೆ. ಅವರೇ ಹೇಳಿದ್ದು: ರಾಜೇಶ್ವರುಡು ಅವರ ಬಂಗಲೆಯ ಮೂಲೆಯಲ್ಲಿ ಇಂತಹ ಗುಟನ್ನು ಮಳೆಬಂದ ರಾತ್ರಿ ಹೂತಿಟ್ಟಿದ್ದೇನೆ. ನೀನದನ್ನು ಮಂತ್ರವಾದಿಯಂತೆ ನಟಿಸಿ ಹೊರತೆಗೆಯಬೇಕು. ಕೈಗೆ ಕಾ ಷಾ ಯ ದ ಗೋಮುಖವನ್ನು ತೊಟ್ಟುಕೊಂಡಾಗ ಅದರಲ್ಲಿ ಮ್ಯಾಗ್ನೆಟ್ ಇರುತ್ತೆ. ಮೊಳೆಗಳು ಎದ್ದು ಛಕ್ಕಂತ ಅಂಗೈಯಿಗೆ ಅಂಟಿಕೊಳ್ಳುತ್ತೆ. ಪವಾಡದಂತೆ ಎಲ್ಲರಿಗೂ ಕಾಣಿಸುತ್ತದೆ. ರಾಮಶೇಷಯ್ಯನ ಮುಖಾಂತರ ಉಪಸಚಿವರನ್ನು,

Scanned by CamScanner

ಮಲ್ಲಿಕಾಳನ್ನು ಬಳಸಿಕೋ. ಹೀಗೆ ಎಲ್ಲ ವಿವರಗಳನ್ನೂ ತಿಳಿಸಿದ್ದರು. ಈ ಹಣವನ್ನು ಅವರು ಹೇಗೆ ಬಳಸುತ್ತಾರೋ ತಿಳಿಯದು. ತಿಳಿದುಕೊಳ್ಳುವ ಇಚ್ಛೆಯೂ ನನಗಿಲ್ಲ. ಗಲ್ಲಿಗೆ ನನ್ನನ್ನು ಗುರಿಮಾಡುವ ಪ್ರಸಂಗವೊಂದು ಯುವಕನಿದ್ದಾಗ ಉಂಟಾಗಿತ್ತು. ಗುರುಗಳೇ ನನ್ನನ್ನು ರಕ್ಷಿಸಿ, ಚಂಬಾಲಿನಿಂದ ಇಲ್ಲಿಗೆ ಕರೆತಂದರು. 'ಕೃಷ್ಣಕಾಳಿಯ ತಾಂತ್ರಿಕ ಪೂಜೆಯನ್ನು ಈ ಮನೆಯಲ್ಲಿ ಮಾಡಿಕೊಂಡಿರು' ಎಂದು ಆಜ್ಞಾಪಿಸಿದರು. ಅಷ್ಟೇ ನನಗೆ ಗೊತ್ತು" ಎಂದ ರಾಂಜಿ. ಅಘೋರಾಚಾರದ ಪೂಜೆಯನ್ನು ರಾಂಜಿ ಮಾಡುವುದನ್ನು ರಾಮ ಶೇಷಯ್ಯ ನೋಡಿದ.

* * *

ತ್ರಿತಾರಾ ಹೋಟಲಿನ ಮಾಲೀಕರಾದ ಶ್ರೀಮಂತ ಬುಡ್ಡೂಮಲ್ ಉರುಫ್ ಬುದ್ಧೋಜಿಯೇ ರಾಂಜಿಯ ಗುರು ಅಂತ ರಾಂಜಿಗೆ ಕೂಡ ತಿಳಿಯದು. ಇಲ್ಲಿದ್ದಂತೆಯೇ ಭಾರತದ ಹಲವಾರು ಷಹರುಗಳಲ್ಲಿ ಅವ ತ್ರಿತಾರಾ, ಪಂಚತಾರಾ ಹೋಟೆಲುಗಳನ್ನು ನಡೆಸುತ್ತಿದ್ದಾನೆಂಬುದು ಯಾರಿಗೂ ತಿಳಿಯದು. ಹತ್ತಾರು ಹೆಸರುಗಳನ್ನು ಬುದ್ಧೋಜಿಯು ಚಲಾಯಿಸುವುದರಲ್ಲಿ ಆಶ್ಚರ್ಯವೇನು ? ಅವನು ನಂಬಿರುವ ಭಗವಂತನೂ ಸಾವಿರಾರು ಹೆಸರುಗಳನ್ನಿಟ್ಟುಕೊಂಡಿಲ್ಲವೆ ?

ಕರಿಯ ಸೊಂಡಿಲಿನಲ್ಲಿ ಪೋಟುಮಾಲಿ

ಹೊಟೇಲ್ ಮಜೇಂದರ್ ಇಂಟರ್ ಕಾಂಟಿನೆಂಟಲ್‌ನ ಪೋರ್ಟಿಕೋದಲ್ಲಿ ಭಾರೀ ಮೋಟಾರು ಒಂದು ಬಂದು ನಿಂತಿತು. ಹಳೆಯ ಕಾಲದ ಮಹಾರಾಜರಂತೆ ಉಡುಪನ್ನು ಧರಿಸಿದ್ದವ ಓಡಿಬಂದು ಕಾರಿನ ಬಾಗಿಲನ್ನು ತೆಗೆದ. ಸಲಾಂ ಆಲೀಕುಂ ಎಂದು ಬಿರುಸಿನ ಸೆಲ್ಯೂಟ್ ಹೊಡೆದ. ಅರಬ್ಬೀ ಶ್ರೀಮಂತನು ಕಾರಿನಿಂದಿಳಿದು ಒಳಕ್ಕೆ ಹೋದ. ಅಕ್ಕಪಕ್ಕ ಟೂರಿಸ್ಟ್ ಇಲಾಖೆಯವರು ಬೆಂಗಾವಲಿನವರಂತೆ ಅವನೊಡನೆ ನಡೆದರು. ಕೌಂಟರಿನಲ್ಲಿ ಇದ್ದವರು ಶ್ರೀಮಂತನಿಗೆ ದಾರಿ ಮಾಡಿಕೊಟ್ಟರು. ಬಲಗಡೆಯಿಂದ, ಪಂಕ್ತಿ ತುಂಬ ಎಡತುದಿಯವರೆಗೂ ಅವ ತನ್ನ ಸಹಿಯನ್ನು ಲಿಖಿಸಿದ. ಬೆಂಗಾವಲಿಗರೊಡನೆ **4567** ನಂಬರಿದ್ದ ರಾಯಲ್ ಸೂಟ್‌ಗೆ ಲಿಫ್ಟಿನಲ್ಲಿ ಏರಿದ. ಕೊಠಡಿಗೆ ಹೋದ ಮೇಲೆ, 'ಒಂದು ಗಂಟೆ ಬಿಟ್ಟು ಬನ್ನಿ, ಅನಂತರ ಸರ್ಕಾರೀ ಭೋಜನ ಕೂಟಕ್ಕೆ ಹೋಗುವ' ಎಂದು ಇಂಗ್ಲಿಷಿನಲ್ಲಿ ಹೇಳಿದ. ಭಾಷಾ ಪ್ರೇಮದಿಂದ ಅವ ಅರಬ್ಬೀಯಲ್ಲಿ ಸಹಿ ಹಾಕಿದ್ದುದು, ಇಂಗ್ಲಿಷ್ ಬಾರದು ಅಂತೇನಲ್ಲ. ಕೇಂಬ್ರಿಡ್ಜ್‌ನಲ್ಲಿ ಪ್ರೌಢಶಿಕ್ಷಣ ಪಡೆದವನಾದರೂ, ಸಹಿಯನ್ನು ಮಾತ್ರ ಅರಬ್ಬೀಯಲ್ಲೇ ಹಾಕುತ್ತಿದ್ದ. ನಮ್ಮ ರಾಜ್ಯದಲ್ಲಿ ನೂರಾರು ಕೋಟಿ ಬಂಡವಾಳವನ್ನು ಹೂಡಿ ಭಾರೀ ಕೈಗಾರಿಕೆಯೊಂದನ್ನು ಸ್ಥಾಪಿಸಲು, ಕೇಂದ್ರದಿಂದ ವಿಶೇಷ ಸವಲತ್ತುಗಳನ್ನು ಪಡೆದು ಬಂದಿದ್ದ. ಆದಕಾರಣ ರಾಜ್ಯ ಸರಕಾರದವರು, ಕೇಂದ್ರದ ಟೂರಿಸ್ಟ್ ಸಂಸ್ಥೆಯವರು, ಆತನನ್ನು ಬಲು ಗೌರವದಿಂದ ಉಪಚರಿಸುತ್ತಿದ್ದರು. ಹೇಗಾದರೂ ಮಾಡಿ ಅವನನ್ನು ಬುಟ್ಟಿಗೆ ಹಾಕಿಕೊಂಡರೆ, ಅವ ತನ್ನ ರಾಷ್ಟ್ರಕ್ಕೆ ಹಿಂತಿರುಗಿದ ಮೇಲೆ, ರಾಷ್ಟ್ರದ ಷೇಖ್‌ನ ಮೇಲೆ ಪ್ರಭಾವವನ್ನು ಬೀರಿ, ನಮ್ಮಲ್ಲಿ ಬಂಡವಾಳವನ್ನು ಹೂಡುವಂತೆ ಪುಸಲಾಯಿಸಬಹುದು ಎಂದು ನಮ್ಮವರ ಸಹಜವಾದ ನಂಬಿಕೆ ಮತ್ತು ಆಸೆ.

Scanned by CamScanner

ರಾಜ್ಯದ ಪ್ರೇಕ್ಷಣೀಯ ಸ್ಥಳಗಳಿಗೆಲ್ಲಾ ಆತನನ್ನು ಕರೆದೊಯ್ದರು. ಪಟ್ನಾರಾ ಹೋಟೇಲಿನ ಬಿಲ್ಲನ್ನೆಲ್ಲಾ ಸರಕಾರವೇ ವಹಿಸಿಕೊಂಡಿತ್ತು. ಸಚಿವರು, ಸಂಬಂಧಪಟ್ಟ ಅಧಿಕಾರಿಗಳು. ಇವರುಗಳೊಡನೆ ಎರಡು ದಿನ ಮಾತುಕತೆಗಳನ್ನಾಡಿದ. ನಿಮ್ಮೂರಿನ ಹವಾ ಬಲು ಉಲ್ಲಾಸಕಾರಿಯಾಗಿದೆ, ಇನ್ನೊಂದೆರಡು ದಿನ ಖಾಸಗಿಯಾಗಿದ್ದು, ನಂತರ ದಿಳ್ಳಿಗೆ ಹೋಗುತ್ತೇನೆ ಎಂದು ಸೂಚಿಸಿದ. ಸರಕಾರದವರಾಗಲಿ, ಟೂರಿಸ್ಟ್ ಸಿಬ್ಬಂದಿಯವರಾಗಲಿ ತೊಂದರೆ ತೆಗೆದುಕೊಳ್ಳುವುದು ಬೇಡ : ಏಕಾಂತವಾಗಿರುತ್ತೇನೆ ಎಂದ. ಅದರಂತೆಯೇ ಏರ್ಪಾಡು ಮಾಡಿದರು.

ಅವತ್ತು ಶುಕ್ರವಾರ. ಖಾಸಗಿಯಾಗಿ ಮಸೀದಿಗೆ ಹೋಗಿ ನಮಾಜ್ ಮಾಡಿ ಬಂದ. ಹತ್ತು-ಹನ್ನೊಂದು ಗಂಟೆಯಾಗಿರಬೇಕು. ರಿಸೆಪ್ಷನ್ ತರುಣಿ ಅವನ ಕೊಠಡಿಗೆ ಫೋನ್ ಮಾಡಿ, "ಘೋಷಾ ಹೆಂಗಸೊಬ್ಬಳು, ಜತೆಯಲ್ಲಿ ಮಿಸ್ಟರ್ ಮೋಹನ್ ಎಂಬುವರೂ ತಮ್ಮನ್ನು ತುರ್ತಾಗಿ ಕಾಣಬೇಕಂತೆ, ಕಳಿಸಲಾ?" ಎಂದು ಕೇಳಿದಳು. ಅವ ಹ್ಞೂ ಅಂದಿರಬೇಕು. ಆದ್ದರಿಂದ ಅವರಿಬ್ಬರನ್ನೂ 4567ಕ್ಕೆ ಕಳಿಸಿಕೊಟ್ಟಳು. ರೂಂ ಸರ್ವಿಸ್ಸಿಗೆ ರಿಂಗ್ ಮಾಡಿ ಇಂತಿಂತಹ ಪಾನೀಯಗಳನ್ನು ಕಳಿಸಿ ಎಂದು ಶ್ರೀಮಂತ ಹೇಳಿದ.

ಹೋಟೇಲಿನ ಅಸಿಸ್ಟೆಂಟ್ ಮ್ಯಾನೇಜರು, ಪಾನೀಯಗಳನ್ನು ಸರಬರಾಜು ಮಾಡಲು ಸರ್ವರ್ ಒಂದಿಗೆ ತಾನೇ ಖುದ್ದು ಹೋದ. ಶ್ರೀಮಂತನಿಗೆ, ಮಿಸ್ಟರ್ ಮೋಹನ್ ಅವರಿಗೆ ಡಬ್ಬಲ್ ಜಿಮ್ಲೆಟನ್ನು ಕೊಟ್ಟ. ಘೋಷಾ ಆಕೆಗೆ? ಎಂದು ಅನುಮಾನಿಸುತ್ತಿರುವಾಗ, ಶ್ರೀಮಂತನೇ ಬಿಯರ್ ಎಂದ. ಥಂಡಿ ಬಿಯರನ್ನು ದೊಡ್ಡ ಮಗ್ಗಿನಲ್ಲಿ ಹಾಕಿ ಆಕೆಯೆದುರಿಗೆ ಇರಿಸಿದ. ಕ್ಷಣಾರ್ಧದಲ್ಲಿ ಆಕೆ ಅವಕುಂಠನವನ್ನೆತ್ತಿ, ಮಗ್ಗನ್ನು ಬಾಯತ್ತ ಹಿಡಿದು ಗಳಗಳ ಗಳಗಳ ಎಂದು ಒಂದೇ ಗುಟುಕಿನಲ್ಲಿ ಖಾಲಿ ಮಾಡಿದಳು. ಅಸಿಸ್ಟೆಂಟ್ ಮ್ಯಾನೇಜರಿಗೆ ಅಪರಿಚಿತವಾದ ಮುಖವೇನಲ್ಲ, ಆಕೆಯದು. ಅರೆ ! ಯಾಸ್ಮಿನ್ ! ಎಂದುಕೊಂಡ.

* * *

ಮಲೆನಾಡಿನ ಹೆಬ್ಬಿ ಗುಬ್ಬಾಲೆಯ ಸಂತೆಯು ಜಗತ್ಪ್ರಸಿದ್ಧ. ದೂರ ದೂರದ ದೊಡ್ಡ ಪಹರುಗಳಿಂದಲೂ ಭಾರೀ ವ್ಯಾಪಾರಿಗಳು ತಿಂಗಳು ಪೂರ್ತಿ ನಡೆಯುವ ಸಂತೆಗೆ ಬರುತ್ತಿದ್ದರು. ಸಂತೆಯ ಮಾಳವು ಸುಮಾರು ಎರಡು

ಮೂರು ಮೈಲಿಗಳಷ್ಟು ವಿಶಾಲವಾಗಿತ್ತು. ಪಕ್ಕದಲ್ಲೇ ಹೊನ್ನು ಹೊಳೆಯು ಹರಿಯುತ್ತಿತ್ತು. ಆ ನದಿಯಲ್ಲಿಯೇ ಬೋರ್‌ವೆಲ್‌ಗಳನ್ನು ಹಾಕಿಸಿ ಪಂಪುಗಳ ಮೂಲಕ ನೀರನ್ನು ಸಂತೆಯ ಎಲ್ಲಾ ಕಡೆಗಳಿಗೂ ಸರಬರಾಜು ಮಾಡಲಾಗುತ್ತಿತ್ತು. ಈ ಉಪಕಾರವನ್ನು ಅರವತ್ತು ಎಪ್ಪತ್ತು ವರ್ಷಗಳ ಹಿಂದೆ ಹೆಬ್ಬಿ ಗ್ರಾಮದ ಸಾಹುಕಾರರೊಬ್ಬರು, ಸ್ವಂತ ಖರ್ಚಿನಲ್ಲಿ ಮಾಡಿದ್ದರು. ಅವರ ಮೆಚ್ಚಿನ ವಾರಾಂಗನೆಯ ಸಲಹೆಯ ಮೇಲೆ ಈ ಧರ್ಮಕಾರ್ಯವನ್ನು ಮಾಡಿಸಿದ್ದರು. "ಪುಟ್ಟಹೊನ್ನಿ ನೀರಿನ ಧರ್ಮಾರ್ಥ" ಎಂದು ಆಕೆಯ ಹೆಸರನ್ನು ಚಿರಸ್ಮರಣೀಯವಾಗಿ ಸ್ಥಾಪಿಸಿದ್ದರು ; ಹೆಬ್ಬಿ ಸಾಹುಕಾರರು.

ಪುಟ್ಟಹೊನ್ನಿಯ ಬಾಳು ಅಚ್ಚರಿ ತರಿಸುವಂತಹುದು. ಆಕೆಯು ಹುಟ್ಟಿದ ಕೂಡಲೆ ರಾತ್ರೋರಾತ್ರಿ ಅವಳ ತಾಯಿ "ಶ್ರೀಮಜ್ಜಗದಾಂಬಾ ಸಂಸ್ಥಾನದ" ಪ್ರಾಕಾರದಲ್ಲಿ ಅವಳನ್ನು ಎಲೆಗಳಿಂದ ಮುಚ್ಚಿಟ್ಟು ಕಣ್ಮರೆಯಾಗಿದ್ದಳು. ಬೆಳಿಗ್ಗೆ ಜಗದಾಂಬಾ ಮಾತೆಯು ಮಗುವಿನ ಕಿರು ಅಳುವನ್ನು ಕೇಳಿ ಪತ್ತೆ ಹಚ್ಚಿದರು. ಮಠದ ಮಗುವಾಗಿ ಅದನ್ನು ಬೆಳೆಸಿದ್ದರು. ಪುಟ್ಟಹೊನ್ನಿಯು ಬೆಳೆದು ನಿಂತಾಗ ಜಗದಾಂಬಾ ಮಾತೆಯಿಂದ, ಹೆಬ್ಬಿ ಸಾಹುಕಾರರು ಅವಳನ್ನು ಪಡೆದಿದ್ದರು. ವಾರಾಂಗನೆಯ ಸಂಗವಾದ ಮೇಲೆ ಸಾಹುಕಾರರು ಅತ್ಯಂತ ಹಿರಿಯ ಶ್ರೀಮಂತರಾದರು. ಪುಟ್ಟಹೊನ್ನಿಯ ಪುಣ್ಯದಿಂದಲೇ ತಮ್ಮ ಐಶ್ವರ್ಯವು ಅಭಿವೃದ್ಧಿ ಆಯಿತು ಎಂದು ಸಾಹುಕಾರರು ತುಂಬು ನಂಬಿದರು. ಪುಟ್ಟಹೊನ್ನಿಯು ಗೌರವಾನ್ವಿತ ಮಹಿಳೆಯಾಗಿದ್ದರೂ, ವಾರಕ್ಕೊಮ್ಮೆ ಜಗದಾಂಬಾ ಮಾತೆಯನ್ನು ಒಂದು ದಿನ ಮಠದಲ್ಲಿ ಸೇವಿಸುವ ಅಭ್ಯಾಸವನ್ನು ಇಟ್ಟುಕೊಂಡಿದ್ದಳು.

ಸಂತೆಮಾಳದಿಂದ ಹೆಬ್ಬಿ ಗ್ರಾಮವು ಸುಮಾರು ನಾಲ್ಕು ಮೈಲು ದೂರದಲ್ಲಿತ್ತು. ಆ ಗ್ರಾಮದ ಈಶಾನ್ಯಕ್ಕೆ ಹೂ. ಹಣ್ಣು ತೋಟಗಳ ಮಧ್ಯೆ ಎರಡು ಮೈಲು ನಡೆದರೆ ಶ್ರೀಮಜ್ಜಗದಾಂಬಾ ಸಂಸ್ಥಾನವು ಸಿಗುತ್ತಿತ್ತು. ವಿಶಾಲವಾದ ಹಳೆಯ ಕಾಲದ ಕಟ್ಟಡ. ಆ ಮಠಕ್ಕೆ ಹೆಬ್ಬಿಯ ಸುತ್ತುಮುತ್ತಲಿನ ಗ್ರಾಮಸ್ಥರೆಲ್ಲರೂ ಶಿಷ್ಯರು. ಅಲ್ಲದೆ ವಾಯುವ್ಯದಲ್ಲಿದ್ದ ಗುಬ್ಬಾಲೆ ಗ್ರಾಮದ ಆಜೂಬಾಜಿನ ಗ್ರಾಮಸ್ಥರೆಲ್ಲರೂ ಶಿಷ್ಯರು.

ಗುಬ್ಬಾಲೆ ಗ್ರಾಮದವರೂ ಹಣವಂತರೇ. ಮಾರಾನಾಯಕನು ಆ ಗ್ರಾಮದ ಮುಖಂಡ. ಶ್ರೀಮಜ್ಜಗದಾಂಬಾ ಸಂಸ್ಥಾನಕ್ಕೆ ಅವನೂ ಮೆಚ್ಚಿನ ಶಿಷ್ಯ. ಗುಬ್ಬಾಲೆಯಲ್ಲಿ ಕುರಿಕಾಯುತ್ತಿದ್ದ ಆ ಹುಡುಗ ಜಗದಾಂಬಾ

Scanned by CamScanner

ಮಾತೆಯ ಸಲಹೆಯಂತೆ ಉಣ್ಣೆ ವ್ಯಾಪಾರ ಮಾಡಲು ಆರಂಭಿಸಿದ್ದ. ಕುರಿ ಮಂದೆಗಳೂ ಹೆಚ್ಚಾದುವು. ಉಣ್ಣೆಯ ಉತ್ಪತ್ತಿಯೂ ಹೇರಳವಾಯಿತು. ಬೊಂಬಾಯಿ, ಉತ್ತರಭಾರತ ಇಂತಹ ಕಡೆಗಳಲ್ಲೂ ಅವ ಉಣ್ಣೆಯನ್ನು ಮಾರುತ್ತಿದ್ದ. ಅತಿ ಶ್ರೀಮಂತನೂ ಆದ. ಜಗದಾಂಬಾ ಮಾತೆಯ ಸೂಚನೆಯಂತೆ ಅವನೇ ಸಂತೆಮಾಳಕ್ಕೆ ವಿದ್ಯುತ್ ದೀಪಗಳನ್ನು ಹಾಕಿಸಿದ್ದ, ಸ್ವಂತ ಜನರೇಟರನ್ನು ತಾನೇ ಕೊಂಡು.

ಮಾರಾನಾಯಕನಿಗೂ ಹೆಬ್ಬಿ ಸಾಹುಕಾರನಿಗೂ ವೈಷಮ್ಯವೇನೂ ಇರದಿದ್ದರೂ ಸ್ನೇಹವೂ ಇರಲಿಲ್ಲ. ಕುರಿಸಾಕಿ ಉಣ್ಣೆ ಮಾರೋನು ಅಂತ ಅವ ಮೂದಲಿಸಿದರೆ ದನಕಾಯೋನು, ಹಾಲು ಬೆಣ್ಣೆ ಮಾರೋನು ಅಂತ ಅವನ ಹಂಗಿಸೋನು.

ಎರಡು ತಲೆಮಾರು ನಡೆದು ಹೋಯಿತು. ಆದರೂ ಪರಸ್ಪರ ಮೈತ್ರಿಯು ಮೊದಲಿನಂತೇ ಇತ್ತು. ಈಗ ಗುಬ್ಬಾಲೆಯ ನಾಯಕ ರಾಷ್ಟ್ರದಲ್ಲೇ ಪ್ರಭಾವೀ ಶ್ರೀಮಂತ. ರಾಷ್ಟ್ರಾಧ್ಯಕ್ಷರಿಂದ ಮನ್ನಣೆಯನ್ನೂ ಪಡೆದಿದ್ದ. ಹೆಬ್ಬಿ ಸಾಹುಕಾರನ ಮೊಮ್ಮಗನೂ ಈಗ ರಾಷ್ಟ್ರಾದ್ಯಂತ ಕೀರ್ತಿಯನ್ನು ಗಳಿಸಿದ್ದ. ಇಬ್ಬರನ್ನೂ ರಾಷ್ಟ್ರದ ಪ್ರಜೆಗಳು ಗೌರವಿಸುತ್ತಿದ್ದರು. ಇಬ್ಬರೂ ಈಗಲೂ ಜಗದಾಂಬಾ ಮಾತೆಯ ಅವಿಚ್ಛಿನ್ನ ಭಕ್ತರು.

* * *

ಬೆಳಿಗ್ಗೆ ಹನ್ನೊಂದು ಗಂಟೆಯ ಹೊತ್ತು. ಝೂಕೀರ್ ಬಡಾವಣೆಯ ದೊಡ್ಡ ರಸ್ತೆಯಲ್ಲಿದ್ದ ಮಹಡಿ ಬಂಗಲೆಯ ಎದುರಿಗೆ ಸ್ಕೂಟರ್ ನಿಂತಿತು. ಬಂಗಲೆಯ ನಂಬರು ಮತ್ತು ಬೋರ್ಡಿನ ಹೆಸರನ್ನು ಅವ ಪರೀಕ್ಷಿಸತೊಡಗಿದ. ಅಷ್ಟರಲ್ಲೇ ಬಂಗಲೆಯ ವರಾಂಡಾದಲ್ಲಿ ಮಧ್ಯವಯಸ್ಸಿನ ಹೆಂಗಸೊಬ್ಬಳು ಕಾಣಿಸಿಕೊಂಡಳು. "ಲಚ್ಚೂ ; ಲಚ್ಚೂ ; ಇಲ್ಲಿಗೇನು ಬಂದಿದ್ದೀ, ಯಾರ ಮನೆಯನ್ನು ಹುಡುಕಿಕೊಂಡು ಬಂದಿದ್ದೀ" ಎಂದು ಆಕೆ ಕೂಗಿ ಕೇಳಿದಳು. "ನಿನ್ನನ್ನೇ ಹುಡುಕಿಕೊಂಡು ಬರ್ತಾ ಇದ್ದೇನೆ. ಮಿ॥ ಮೋಹನ್ ವಿಳಾಸವನ್ನು ಕೊಟ್ಟ. ಆದರೂ ಹುಡುಕುವುದು ಕಷ್ಟವಾಯಿತು. ಇವತ್ತು ನನ್ನ ಪುಣ್ಯ; ನೀನೇ ಬಾಗಿಲಿಗೆ ಬಂದಿದ್ದೆ" ಎಂದನ್ನುತ್ತಾ ಲಚ್ಚೂರಾಯ ಬಂಗಲೆಯೊಳಕ್ಕೆ ಹೋದ.

"ಯಾಸ್ಮಿನ್ ! ಹೊಟೇಲ್ ಮಜೇಂದರ್ ಇಂಟರ್ ಕಾಂಟಿನೆಂಟಿನಲ್ಲಿ

ಅರಬ್ಬೀ ಶ್ರೀಮಂತನ ಜತೆಯಲ್ಲಿ ಕಂಡಾಗ, ನನಗೆ ತುಂಬಾ ಆಶ್ಚರ್ಯವಾಯಿತು. ಎಷ್ಟು ವರ್ಷಗಳಾಯಿತು ನಿನ್ನ ನೋಡಿ! ಸುಮಾರು ಇಪ್ಪತ್ತಕ್ಕೂ ಹೆಚ್ಚು ವರ್ಷಗಳಾಗಿರಬೇಕು! ಸುಲ್ತಾನ್‌ಪೇಟೆ ಸ್ಕೂಲಿಗೆ ಹೋಗ್ತಿದ್ದಾಗ ನಿನ್ನ ನೋಡಿದ್ದು. ಆಮೇಲೆ ನಮ್ಮಪ್ಪ ಬೊಂಬಾಯಿಗೆ ಡ್ರೈವರ್ ಆಗಿ ಹೋದ. ಅಲ್ಲೇ ಸ್ಕೂಲಿಗೆ ಸೇರಿಸಿದ. ಆಮೇಲೆ ಹೊಟೇಲಲ್ಲಿ ಕೆಲಸಕ್ಕೆ ಸೇರಿಸಿದ, ತಟ್ಟೆ ಬಟ್ಟಲುಗಳನ್ನು ತೊಳೆಯುವ ಕೆಲಸ. ಈ ಹೊಸ ಹೊಟೇಲಿಗೆ ಅಸಿಸ್ಟೆಂಟ್ ಮ್ಯಾನೇಜರ್ ಆಗಿ ನೇಮಿಸಿದರು. ಇಲ್ಲಿಗೆ ಬಂದೆ. ಈಗ ನೀನೂ ಶ್ರೀಮಂತಳಾಗಿ ಕಾಣುತ್ತಿದ್ದೀ. ಯೋಗಕ್ಷೇಮವನ್ನು ವಿಚಾರಿಸಿಕೊಂಡು ಹೋಗೋಣ ಅಂತ ಬಂದೆ" ಎಂದು ಹೇಳಿದ ಲಚ್ಚೂರಾಯ.

ತುಂಬಾ ಆದರದಿಂದ ಯಾಸ್ಮಿನ್ ಮಾತನಾಡಿದಳು, ಬಾಲ್ಯದ ವಿವರಗಳನ್ನು ಕುರಿತು. ರಜಾಕರ್ ಗಲಭೆಯಲ್ಲಿ ಹೈದ್ರಾಬಾದಿಗೆ ಹೋಗಿದ್ದು ; ಅಲ್ಲಿಂದ ಶ್ರೀಮಂತ ಖಾನನೊಡನೆ ಪಾಕಿಸ್ತಾನಕ್ಕೆ ಓಡಿ ಹೋಗಿದ್ದು ; ಅಲ್ಲಿಂದ ಕುವಾಯಿಟ್ ಶ್ರೀಮಂತನು ತನ್ನ ದೇಶಕ್ಕೆ ಹಾರಿಸಿಕೊಂಡು ಹೋಗಿದ್ದು ; ಅಲ್ಲಿ ಶ್ರೀಮಂತನ ವ್ಯಾಪಾರದಲ್ಲಿ ತನ್ನನ್ನೂ ಸೇರಿಸಿಕೊಂಡಿದ್ದು ; ಈಗ ಅವನ ಪರವಾಗಿ ಇಲ್ಲಿ ವ್ಯವಹಾರಗಳನ್ನು ಗುಟ್ಟಿನಲ್ಲಿ ನಡೆಸುತ್ತಿದ್ದುದು; ಇಲ್ಲಿಂದ ಹಾಜ್ ಪ್ರಯಾಣಿಕರಿಗೆ ಪ್ರಯಾಣದ ಅನುಕೂಲಗಳನ್ನು ಮಾಡಿಕೊಡುವ ಸಂಸ್ಥೆಯನ್ನು ನೆಪಕ್ಕಾಗಿ ನಡೆಸುತ್ತಿರುವುದು ; ಇತ್ಯಾದಿ ವಿವರಗಳನ್ನು ಹೇಳಿದಳು. ಗುಟ್ಟಾಗಿ ನಾನು ಹೇಳಿದ ಕೆಲಸವನ್ನು ಮಾಡಿದರೆ ಕೈ ತುಂಬ ಹಣವನ್ನು ಸಂಪಾದಿಸಿ ದಿಢೀರ್ ಶ್ರೀಮಂತನಾಗಬಹುದೆಂದೂ ಸೂಚಿಸಿದಳು.

ಆ ಹೊತ್ತಿಗೆ ಅವಳ ಸ್ನೇಹಿತರಿಬ್ಬರು ದೊಡ್ಡ ಮೋಟಾರಿನಲ್ಲಿ ಬಂದಿಳಿದರು. ವರಾಂಡಾದಲ್ಲಿ ಕುಳಿತಿದ್ದ ನಮಗೆ ಲಕ್ಷಣವಾಗಿ ಕಂಡಿತು. ಸಡಗರದಿಂದ ಅವರನ್ನು ಬರಮಾಡಿಕೊಂಡು : "ಇವರು ನನ್ನ ಬಾಲ್ಯದ ಗೆಳೆಯ, ಲಚ್ಚೂರಾಯ ; ಇವರು ಹೆಬ್ಬಿ ಆಗ್ರೋ ಸಂಸ್ಥೆಯ ಮಾಲೀಕರು, ಪದ್ಮಭೂಷಣ ಹೆಬ್ಬಿಕಾರ್ ಅವರು ; ಈತ ಗುಬ್ಬಾಲೆಯ ಅಖಿಲ ಭಾರತ ಉಣ್ಣೆ ಫೆಡರೇಷನ್ನಿನ ಮಾಲೀಕರು ; ಪದ್ಮಭೂಷಣ ನಾಯಕ್ ಅವರು" ಎಂದು ಪರಸ್ಪರ ಪರಿಚಯವನ್ನು ಮಾಡಿಕೊಟ್ಟಳು. "ಹೋಗಿ ಬರ್ತೀನಿ ಅಂದೆ ಅಲ್ಲವೇ ಲಚ್ಚೂರಾಯ ! ಇದು ನನ್ನ ಫೋನ್ ನಂಬರು. ಬೆಳಗಿನ ಹೊತ್ತು ಯಾವಾಗ ಬೇಕಾದರೂ ಅಗತ್ಯವಿದ್ದರೆ ಫೋನ್ ಮಾಡಿ ನಂತರ ಬಂದು ಕಾಣು" ಎಂದು ಹೇಳಿ ಲಚ್ಚೂರಾಯನನ್ನು ಬೀಳ್ಕೊಟ್ಟಳು.

Scanned by CamScanner

ಹಿಂತಿರುಗುವಾಗ ಲಚ್ಚೂರಾಯ ಯೋಚಿಸುತ್ತಿದ್ದ. ಪದ್ಮಭೂಷಣರಿಬ್ಬರ ಹೆಸರೂ ಪತ್ರಿಕೆಗಳಲ್ಲಿ ಆಗಿಂದಾಗ್ಗೆ ಚಿತ್ರಸಮೇತ ಬರುತ್ತಲೇ ಇದ್ದುವು. ರಾಜಕೀಯ ಧುರೀಣರು ಇವರಿಬ್ಬರಿಗೂ ನಿಕಟವರ್ತಿಗಳಾಗಿದ್ದರು. ಅಂತಹ ಹಿರಿಯ ಉದ್ಯಮಿಗಳು ಯಾಸ್ಮಿನ್ ಮನೆಗೆ ಬರುವುದು, ಅವಳೊಡನೆ ಅತಿ ಸದರದಿಂದ ನಡೆದುಕೊಳ್ಳುವುದು, ಇವನ್ನೆಲ್ಲಾ ನೋಡಿದ ಮೇಲೆ, ಮರೆಯಲ್ಲಿ ಎಲ್ಲರ ಮೇಲೂ ಪ್ರಭಾವ ಬೀರುವ ವ್ಯಕ್ತಿಯಾಗಿರಬೇಕು, ಯಾಸ್ಮಿನ್ ; ಕೇವಲ ಹೆಣ್ಣುತನದಿಂದಲೇ ಅವಳು ಮುಂದುಬಂದಿಲ್ಲ ; ಇದರೊಳಗೆ ಇನ್ನೂ ಯಾವುದೋ ಮರ್ಮವಿರಬೇಕು. ಯಾಸ್ಮಿನ್ನಳನ್ನು ಆಗಿಂದಾಗ್ಗೆ ಕಾಣುತ್ತಿರಬೇಕು: ನನಗೂ ಮುಂದೆ ಕೊಳ್ಳೆ ಹಣ ದೊರಕಬಹುದು ಎಂದು ತೀರ್ಮಾನಿಸಿದ.

ಒಂದು ವಾರವಾಗಿರಬಹುದು :– ಲಚ್ಚೂರಾಯನಿಗೆ ಫೋನ್ ಕರೆಯು ಬಂತು. ಮುಂದಿನ ವಾರದಲ್ಲಿ ಅರಬ್ಬೀ ಶ್ರೀಮಂತನು ಖಾಸಗಿಯಾಗಿ ಗೋಪ್ಯವಾಗಿ ಬರುತ್ತಾನೆ. ಆಬೂ ಹಸನ್ ಎಂಬ ಹೆಸರಿನಲ್ಲಿ ಸಾಮಾನ್ಯ ಕೊಠಡಿಯನ್ನು ಮೂರು ದಿನಗಳಿಗೆ ರಿಸರ್ವ್‌ಮಾಡು. ಮಿಕ್ಕ ವಿವರಗಳಿಗೆ ಯಾಸ್ಮಿನ್‌ಳನ್ನು ಕಾಣು, ಎಂಬ ವಾರ್ತೆ. ಧ್ವನಿಯು ಯಾಸ್ಮಿನ್ನಳದೇ. ಆದರೆ ಯಾರೋ ಮಾತಾಡಿದಂತೆ ಇದೆಯಲ್ಲಾ, ಎಂದು ಲಚ್ಚೂರಾಯನಿಗೆ ಸಂಶಯ ಹುಟ್ಟಿತು.

ಅಚ್ಚ ಹೊಸ ನಮೂನೆಯ ಸೂಟನ್ನು ಧರಿಸಿ, ಆಬೂ ಹಸನ್ ಹೊಟೇಲ್ ಮಜೇಂದರ್ ಇಂಟರ್ ಕಾಂಟಿನೆಂಟಿಗೆ ಟ್ಯಾಕ್ಸಿಯಲ್ಲಿ ಬಂದಿಳಿದ. ಇವನು ಅರಬ್ಬಿಯವ ಎಂದು ಯಾರೂ ಹೇಳುವಂತಿರಲಿಲ್ಲ. ಲಚ್ಚೂರಾಯನು ಮಾತ್ರ ತುಂಬಾ ವಿನಯದಿಂದ ಅವನನ್ನು ಸ್ವಾಗತಿಸಿದ. ಕೊಠಡಿಯಲ್ಲಿ ಸಾಮಾನುಗಳನ್ನು ತಂದಿಟ್ಟ ಬೇರರ್ ಸೆಲ್ಯೂಟ್ ಹೊಡೆದು ಹೊರಗೆ ಹೋದ ಮೇಲೆ ಲಚ್ಚೂರಾಯ ಹೇಳಿದ: "ಎಷ್ಟುಹೊತ್ತಿಗೆ ಹೆಬ್ಬಿಕಾರ್ ಮತ್ತು ನಾಯಕರನ್ನು ಭೇಟಿಮಾಡಲು ನಿಮಗೆ ಅನುಕೂಲ ; ತಿಳಿಸಿದರೆ ಯಾಸ್ಮಿನ್ ಬೇಗಂಗೆ ಸುದ್ದಿ ಮುಟ್ಟಿಸುತ್ತೇನೆ" ಎಂದು. "ಮಧ್ಯಾಹ್ನ ಮೂರಕ್ಕೆ ಯಾಸ್ಮಿನ್ ಜತೆಯಲ್ಲಿ ಬರಲಿ" ಎಂದು ಆಬು ಹಸನ್ ಹೇಳಿದ. ಸಲಾಂ ಹೊಡೆದು ಲಚ್ಚೂರಾಯ ಹೊರಬಿದ್ದ.

ಮಧ್ಯಾಹ್ನ ಮೂರು ಗಂಟೆಯ ಹೊತ್ತಿಗೆ ಶುದ್ಧ ಖಾದಿಸೀರೆಯನ್ನುಟ್ಟು, ಬೊಟ್ಟು ಕುಂಕುಮವನ್ನಿಟ್ಟ ಹಿಂದೂ ಗೃಹಿಣಿಯೊಬ್ಬಳು, ಖಾದಿ ಜುಬ್ಬ, ನೆಹರೂವೆಸ್ಟ್ ಧರಿಸಿದ ಇಬ್ಬರು ಮಹನೀಯರೊಂದಿಗೆ ಹೊಟೇಲಿಗೆ ಬಂದಳು.

ರಿಸೆಪ್ಷನ್ ಕೌಂಟರಿನ ಬಳಿಗೆ ಆಕೆಯು ಹೋಗಿ ಅಬುಹಸನ್ ಅವರನ್ನು ಕಾಣಬೇಕು ಎಂದು ಹೇಳುವ ಹೊತ್ತಿಗೆ ಲಚ್ಚೂರಾಯನು ಹಾಜರಾದ. "ಬನ್ನೀಮ್ಮಾ, ಬನ್ನಿ ಮಹಾಸ್ವಾಮಿಗಳೇ, ಅಬುಹಸನ್ ಅವರು ಕಾದಿದ್ದಾರೆ, ಕರೆದುಕೊಂಡು ಹೋಗಲು ಬಂದೆ. ಎರಡು ನಿಮಿಷಗಳು ಮುಂಚೆಯೇ ತಾವು ಆಗಮಿಸಿದ ಹಾಗಿದೆ" ಎಂದು ಹೇಳುತ್ತಾ ಅವರುಗಳನ್ನು ಕರೆದುಕೊಂಡು ಹೋದ.

* * *

ಯಾಸ್ಮಿನ್ ತುಂಬಾ ಆತಂಕದಿಂದಿದ್ದಳು. ಬೀದಿಯನ್ನು ನೋಡುತ್ತಾ ವರಾಂಡಾದಲ್ಲಿ ಶತಪಥ ತಿರುಗುತ್ತಿದ್ದಳು. ಸ್ಕೂಟರಿನಿಂದ ಇಳಿದು ಲಚ್ಚೂರಾಯ ಒಳಗೆ ಹೋದಾಗ, "ಫೋನ್ ಮಾಡಿ ಅರ್ಧಗಂಟೆಯಾಯಿತು. ಇಷ್ಟು ಲೇಟಾಗಿ ಯಾಕೆ ಬಂದೆ ?" ಎಂದು ಗದರುತ್ತಾ ಆಕ್ಷೇಪಿಸಿದಳು. ಟೂರಿಸ್ಟ್ ಡಿಪಾರ್ಟ್‌ಮೆಂಟಿನ ಅಧ್ಯಕ್ಷರು ದಿಳ್ಳಿಯಿಂದ ಬಂದಿದ್ದರು. ಅವರು ಹೊರಡುವ ತನಕ ನಾನಲ್ಲೇ ಇರಲೇಬೇಕಾಯಿತು, ಎಂದ ಲಚ್ಚೂರಾಯ.

"ಯಾರದು ? ಕೆ.ಕೆ. ಕೌಲ್ ಅವರೇ" ಎಂದು ಅಚ್ಚರಿಯಿಂದ ಹುಬ್ಬೆತ್ತುತ್ತಾ ಯಾಸ್ಮಿನ್ ಕೇಳಿದಳು.

"ಈ ವಿಷಯ ಯಾರಿಗೂ ಗೊತ್ತಿರಲಿಲ್ಲ ; ನಿಮಗೆ ಹೇಗೆ ತಿಳಿಯಿತು" ಎಂದು ಲಚ್ಚೂರಾಯ ಕುತೂಹಲದಿಂದ ಕೇಳಿದ. "ಅದಿರಲಿ, ಈಗ ತುರ್ತಾಗಿ ಕೆಲಸಮಾಡಬೇಕು. ಐದಾರು ದಿನ ರಜಾ ಪಡೆಯಬೇಕು ನೀನು. ಏನಾದರೂ ನೆಪ ಹೇಳಿಕೊ. ನಾಳೆ ದಿಳ್ಳಿಗೆ ಹೋಗಬೇಕು. ವಿಮಾನ ನಿಲ್ದಾಣಕ್ಕೆ ಹೋಗುವ ಮೊದಲು ಇಲ್ಲಿಗೆ ಬಾ. ಒಂದು ಹ್ಯಾಂಡ್‌ಬ್ಯಾಗ್ ಕೊಡುತ್ತೇನೆ. ಭದ್ರವಾಗಿ ಅದನ್ನು ಕೈಯಲ್ಲೇ ಹಿಡಿದುಕೊಂಡಿರು. ಹೊಟೇಲ್ ಜನಪತ್ನಿನಲ್ಲಿ ರಾಮಾನುಜಂ ಎಂಬ ಹೆಸರಿನಲ್ಲಿ ಕೊಠಡಿಯನ್ನು ರಿಸರ್ವ್ ಮಾಡಿದೆ. ರಾಮಾನುಜಂ ಹೆಸರಿನಲ್ಲೇ ದಿಲ್ಲಿಗೆ ಇಲ್ಲಿಂದ ರಿಟರ್ನ್ ಟಿಕೆಟ್ ಕೊಂಡಾಗಿದೆ. ಆ ಕೊಠಡಿಗೆ ನಾಳೆ ರಾತ್ರಿ ರಣಜೀತ್ ಚೌಧುರಿ ಎನ್ನುವವರು ಬಂದು, ಹೆಬ್ಬೀಕರ್ ನಿಮ್ಮನ್ನು ಕಳಿಸಿದ್ದಾರೆಯೇ ಅಂತ ಕೇಳುತ್ತಾರೆ. ಅವರಿಗೆ ಬ್ಯಾಗನ್ನು ಒಪ್ಪಿಸು, ಮಾರನೆಯ ಮಧ್ಯಾಹ್ನ ಆ ಬ್ಯಾಗನ್ನು ನಿನಗೆ ತಂದುಕೊಡುತ್ತಾರೆ. ಅದನ್ನು ಭದ್ರವಾಗಿ ಹಿಡಿದುಕೊಂಡು ದಿಳ್ಳಿಯಿಂದ ವಿಮಾನವನ್ನು ಹತ್ತಿ ಹಿಂತಿರುಗು. ನನಗೆ ಬ್ಯಾಗನ್ನು ಕೊಟ್ಟು ನಂತರ ಮನೆಗೆ ಹೋಗು. ಆಮೇಲೆ ಇನ್ನೊಂದು ಸಲ ಬ್ಯಾಗನ್ನು ಕೊಟ್ಟು ನಂತರ ಮನೆಗೆ ಹೋಗು. ಇದೇರೀತಿ ಆದರೆ ಮುಂದಿನ ಸಲ ಕ್ಲಾರಿಡ್ಜಸ್‌ನಲ್ಲಿ ಹೋಗಿ ಬರಬೇಕಾಗುತ್ತೆ.

Scanned by CamScanner

ಳಿದುಕೋ. ಭಜನ್‌ಲಾಲ್ ಅಂತ ಹೆಸರಿಟ್ಟುಕೋಬೇಕು ಆ ಪ್ರಯಾಣಕ್ಕೆ. ಹುಷಾರಾಗಿರು. ಈಗಲೇ ಜಟ್ಪಂತ ಹೋಗಿ ರಜ ತೆಗೆದುಕೊಂಡುಬಿಡು" ಎಂದು ಹೇಳಿ ಆತುರದಲ್ಲಿ ಅವನನ್ನು ಹೊರದಬ್ಬಿದಳು.

* * *

ಹೋಟೇಲ್ ಮಚೇಂದರ್ ಇಂಟರ್ ಕಾಂಟಿನೆಂಟಲ್ಲಿನ ಅತಿ ಎತ್ತರದ ಸೂರಿನ ಮೇಲೆ ಮೂವರು ಪಾಶ್ಚಾತ್ಯ ಉದ್ಯಮಿಗಳೊಂದಿಗೆ ನಮ್ಮ ದೇಶದ ಉನ್ನತ ಕೈಗಾರಿಕಾ ಸಂಘದ ಇಬ್ಬರು ಮಹನೀಯರು ತೀರ್ಥಸೇವೆಯನ್ನು ಆರಾಮವಾಗಿ ಮಾಡುತ್ತಿದ್ದರು. "ಅರೆ ! ಆಕಾಶದಲ್ಲಿ ಪ್ರಾಜ್ವಲ್ಯಮಾನವಾಗಿ ಚಲಿಸುತ್ತಿರುವ ಅದು ಏನು" ಎಂದೊಬ್ಬ ಉದ್ಗರಿಸಿದ. ಪರೀಕ್ಷಾರ್ಥ ಹಾರಿಸಿದ ಬೆಲೂನ್ ಇರಬಹುದು ಎಂದ ಇನ್ನೊಬ್ಬ. "ನೋ ನೋ, ಅದು ಹೊಸ ಧೂಮಕೇತು ಇರಬೇಕು" ಎಂದ ಭಾರತೀಯ.

ಈ ಸುದ್ದಿ ಪತ್ರಿಕೆಗಳಲ್ಲೂ ಬಂತು ನೋಡಿ, ಆ ದಿನವೇ ಲೋಕಸಭೆಗೆ ಸದಸ್ಯರನ್ನು ಸಾರ್ವತ್ರಿಕ ಚುನಾವಣಾ ಮೂಲಕ ಆಯ್ಕೆ ಏರ್ಪಡಿಸಿದೆ, ಇನ್ನೊಂದು ತಿಂಗಳ ಸುಮಾರಿನಲ್ಲಿ; ಎಂದು ಆಕಾಶವಾಣಿಯು ಪುನಃ ಪುನಃ ಪ್ರಸಾರವನ್ನು ಮಾಡಿತು. ಭಾರತೀಯ ಉದ್ಯಮಿ "ನಿನ್ನೆ ಕಂಡಿದ್ದು ಖಂಡಿತವಾಗಿಯೂ ಧೂಮಕೇತುವೇ. ಅದಕ್ಕೇ ಈ ಚುನಾವಣಾ ನಿರ್ಧಾರವಾಗಿದೆ" ಎಂದು ತನ್ನ ಬೆನ್ನನ್ನು ತಾನೇ ತಟ್ಟಿಕೊಂಡು ಖುಷಿಯಾದ.

ಎಂಟು ಹತ್ತು ಯುವಕರು ದೋಸೆ ಕಾಫಿಗೆ ಎಂದು ಆ ಹೋಟೇಲಿಗೆ ಹೋಗಿದ್ದರು. ಸಿಕ್ಕಾಪಟ್ಟೆ ತಲೆಹರಟುತಿದ್ದರು. "ಆ ಚಿಹ್ನೆ ನೋಡಿದೆಯಾ? ಎಂಟು ವರ್ಷಗಳಿಂದ ಕರು ಹಸುವಿನಿಂದ ಹಾಲನ್ನು ಕುಡಿಯುತ್ತಿದೆ. ಯಾರಿಗೂ ಒಂದು ತೊಟ್ಟು ಬಿಡದೆ ಕುಡಿದು ಈಗ ಭರ್ಜರಿ ಹೋರಿಯಾಗಿದೆ. ಬೆದೆಗೆ ಬಂದವರ ಹಾಗೆ ಜಿಗಿದಾಡ್ತಾ ಇದೆ" ಎಂದೊಬ್ಬ ಫೂತ್ಕರಿಸಿದ. "ಓ ಹೋಹೋಹೋ ಇವ ಭಗವದ್ಗೀತೆಯನ್ನು ಪಾರಾಯಣ ಮಾಡಲು ಶುರು ಹಚ್ಚಿದ್ದಾನೆ" ಎಂದ ಇನ್ನೊಬ್ಬ ಪೋಕರಿ. "ಹೌದು, ಹೌದು, ಆ ಗೀತೆಯಲ್ಲಿ ಸಂಜಯ ಉವಾಚ ಅಂತಲೇ ಸ್ವಾರಸ್ಯ ಇರೋದು"ಎಂದ ಹಿಪ್ಪಿಕೂದಲಿನವ. ಹೊಟೇಲಿನ ಸಿಬ್ಬಂದಿಯವರು ದುರುದುರು ನೋಡಿದರೇ ವಿನಹಾ ಧಾಂಡಿಗ ಯುವಕರ ಮೇಲೆ ಕೈಮಾಡಲಿಲ್ಲ. ಏನಾದರೂ ಗಲಭೆಯಾದರೆ, ಪೋಲಿಸರು ಬಂದರೆಗಿದರೆ ಪಾಶ್ಚಾತ್ಯ ಪ್ರವಾಸಿಗಳು ಏನಂದುಕೊಂಡಾರು ಎನ್ನುವ ಭಯದಿಂದ ತೆಪ್ಪಗಿದ್ದರು. ಬಿಲ್ಲನ್ನೂ ಪಾವತಿಮಾಡದೆ ದಾಂಢಿಗ ಯುವಕರೆಲ್ಲರೂ ನಗುತ್ತಾ ಕೇಕೆಹಾಕುತ್ತಾ ಅರಚಾಡುತ್ತಾ ಸ್ವಲ್ಪ ಹೊತ್ತಿನ ಮೇಲೆ ಹೊರಟು ಹೋದರು.

ಇದನ್ನು ಕಂಡ ಅಮೆರಿಕನ್ ಮಹಿಳೆಯೊಬ್ಬಳು "ಎಷ್ಟು ಸ್ವಾತಂತ್ರ್ಯ ಈ ದೇಶದಲ್ಲಿ" ಎಂದು ಮೆಚ್ಚಿ ಅಂದುಕೊಂಡಳು. ಮಂದಸ್ಮಿತಳಾದಳು.

* * *

ಲೋಕಸಭಾ ಸಾರ್ವತ್ರಿಕ ಚುನಾವಣೆಗೆ ಪಕ್ಷಗಳೆಲ್ಲವೂ ಬಿರುಸಿನ ಪ್ರಚಾರವನ್ನು ನಡೆಸಲಾರಂಭಿಸಿದುವು. ಆಳುವ ಪಕ್ಷಕ್ಕನಕ ಪ್ರಚಾರವು ಯಶಸ್ವಿಯೂ ಸುಲಭಸಾಧ್ಯವೂ ಆಗಿತ್ತು. ಪದ್ಮಭೂಷಣ ಹೆಬ್ಬಿಕುಮಾರರು ಗೋಪ್ಯವಾಗಿ ಪ್ರತಿರಾಜ್ಯದ ಮುಖ್ಯ ಸಮಿತಿಗೆ ಹಲವಾರು ಮಾರ್ಗಗಳಲ್ಲಿ ಹಣವನ್ನು ನೀರಿನಂತೆ ವಿನಿಯೋಗಿಸುತ್ತಿದ್ದರು ಎನ್ನುವುದು ಮುಖ್ಯಸ್ಥರಿಗೆ ಮಾತ್ರ ಗೊತ್ತು. ಪ್ರಮುಖವಾದ ಎದುರು ಪಕ್ಷಕ್ಕೆ ಪದ್ಮಭೂಷಣ ನಾಯಕರು ಅದೇ ರೀತಿ ಮರೆಯಲ್ಲಿ ಬಿಡುಗೈಯಿಂದ ಹಣವನ್ನು ಚೆಲ್ಲಿದ್ದರು ಎಂಬುದೂ ಕೆಲವು ಮುಖ್ಯಸ್ಥರಿಗೆ ಮಾತ್ರ ಗೊತ್ತು. ಆದರೂ ಅವರುಗಳು "ರಾಜಕೀಯದಲ್ಲಿ ಆಸಕ್ತಿ ಏನೂ ಇಲ್ಲ. ನಮ್ಮ ಉದ್ಯಮಗಳನ್ನು ಲಕ್ಷಣವಾಗಿ ನಡೆಸಿದರಾಯ್ತು. ಹತ್ತಾರು ಸಾವಿರ ಸಿಬ್ಬಂದಿಗೆ ಹೊಟ್ಟೆ ತುಂಬ ಊಟ, ಇರಲು ಮನೆ, ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ, ಇತ್ಯಾದಿಗಳನ್ನು ಒದಗಿಸಬಹುದು. ಬಡವರಿಗೆ ಸೌಕರ್ಯಗಳನ್ನು ನೀಡುವುದೇ, ನಮ್ಮ ಧ್ಯೇಯ" ಎಂದು ನಮ್ರರಾಗಿ ನುಡಿಯುತ್ತಿದ್ದರು. ಜನತೆಯ ಕಣ್ಣಿನಲ್ಲಿ ಅವರು ಸಾಮಾನ್ಯ ಶ್ರೀಮಂತರು ; ರಾಜಕೀಯದಲ್ಲಿ ಅನಾಸಕ್ತರು ; ಹಾಗಲ್ಲದಿದ್ದರೆ ಅವರೇ ಚುನಾವಣಾಕಣಕ್ಕೆ ಇಳಿದೇ ಇಳಿಯುತ್ತಿದ್ದರು. ಹಾಗೆಮಾಡಿ ಲಕ್ಷಾಂತರ ರೂಪಾಯಿಗಳನ್ನೂ ಕಳೆದುಕೊಂಡು, ಅತ್ಯಂತ ದೇಹ ಮತ್ತು ಮಾನಸಿಕ ಶ್ರಮವನ್ನೂ ಅನುಭವಿಸಬೇಕಾಗಿತ್ತು, ಎಂದೇ ಜನತೆಯ ಅಭಿಪ್ರಾಯ.

ಇಬ್ಬರೂ ಕೂಡಿ ಶ್ರೀಮಜ್ಜಗದಾಂಬಾ ಮಾತೆಯ ಮಠದಲ್ಲಿ ಬಲು ಸಂಭ್ರಮದಿಂದ ಒಂದು ವಾರ ಪೂರ್ತಿ ಉತ್ಸವವನ್ನು ನಡೆಸಿದರು. ದೈವಭಕ್ತಿ; ಸತ್ಯಪ್ರೇಮ; ಬಡವರ ಬಗ್ಗೆ ಅನುಕಂಪ; ಇವೆಲ್ಲವೂ ಇವರಲ್ಲಿ ತುಂಬಿ ತುಳುಕಾಡುತ್ತಿದೆ ಎಂದು ಎಲ್ಲರೂ ನಂಬಿದರು.

* * *

Scanned by CamScanner

ಪ್ರಥಮ ತರಗತಿಯ ಬಾಲಕನೊಬ್ಬ ಅಂದಿನ ಪಾಠವನ್ನು ಓದುತ್ತಿದ್ದ. ಘಟ್ಟಿಪಾಠ ಮಾಡಬೇಕಾಗಿತ್ತು, ಪರೀಕ್ಷೆಯ ವೇಳೆಗೆ.

ತಿರುಕನೋರ್ವ ನೂರಮುಂದೆ
ಮುರುಕುಧರ್ಮ ಶಾಲೆಯಲ್ಲಿ
ಯೊರಗಿರುತ್ತಲೊಂದು ಕನಸು ಕಂಡನೆಂತನೆ
ಪುರದ ರಾಜ ಸತ್ತನವಗೆ
ವರ ಕುಮಾರ ನಿಲ್ಲದಿರಲು
ಕರಿಯ ಕೈಗೆ ಕುಸುಮ ಮಾಲೆಯಿತ್ತು ಪುರದೊಳು

ಚುನಾವಣಾ ಪ್ರಣಾಳಿಕಾ ಚೀಟಿಗಳನ್ನು ಹಂಚಲು ಹೋಗುತ್ತಿದ್ದ ಯೌವನಸ್ಥನೊಬ್ಬ ಈ ಪದ್ಯವನ್ನು ಕೇಳಿದ. ಎಂ.ಎಸ್‌ಸಿ, ಪಿಎಚ್.ಡಿ ಮಾಡಿ ಮೂರು ವರ್ಷಗಳಿಂದ ಕೆಲಸ ಸಿಗದೆ ಅಲೆಯುತ್ತಿದ್ದ ಅವನಿಗೆ, ನಾನೂ ಅಂತಹ ತಿರುಕನೇ ಎನ್ನುವ ಯೋಚನೆಯು ಮೂಡಿತು. ಮನಸ್ಸು ವಕ್ರಗತಿಯಲ್ಲಿ ಓಡಿತು.

ತಿರುಕನೋರ್ವ ನೂರಿನಲ್ಲಿ
ಹರಕು ಮುರುಕು ಬಾಳಿನಲ್ಲಿ
ತೆವಳುತಿರಲು ನನಸನೊಂದು ಕಂಡನೆಂತೆನೆ
ಪುರದ ಲೋಕಸಭೆಯು ಇಲ್ಲ
ವರ ಕುಮಾರಿ ಖಚಿತವಿಲ್ಲ
ಕರಿಯ ಕೈಗೆ ವೋಟುಮಾಲೆ ಇತ್ತು ಪುರದೊಳು

ಎಂದು ಅಣಕಾಡಿಕೊಂಡ. ಹತ್ತೂ ಜನರಿಗೆ ಅಣಕವಾಡನ್ನು ಪಲುಕಿದ.

* * *

ವೋಟುಮಾಲೆಯನ್ನು ಹೊತ್ತ ಆನೆಗೆ ಹೆಬ್ಬಿಕರ್‌ರಿಂದ ಪಡೆದ ಕಬ್ಬು, ಬೆಲ್ಲದುಂಡೆ, ಎಳ್ಳಿನ ಮೊರ ಇತ್ಯಾದಿಗಳನ್ನು ಆಡಳಿತ ಪಕ್ಷದ ಸಲುವಾಗಿ ಸ್ವಯಂ ಸೇವಕರು ಸಮೃದ್ಧಿಯಾಗಿ ತಿನ್ನಿಸಿದರು. ಹುದುಗು ತುಂಬಿದ್ದ ಉದ್ದಿನಹಿಟ್ಟು, ಕಳ್ಳಭಟ್ಟಿ ಸಾರಾಯಿ, ಬೇಲದ ಹಣ್ಣು ಇತ್ಯಾದಿಗಳನ್ನು ಆ ಆನೆಗೆ ಎದುರುಪಕ್ಷದವರು ದಿನರಾತ್ರಿ ನೀಡಿದರು. ಮುಂದೆಯೂ ಹೀಗೆ ಎಂದು ಆನೆಗೆ ಆಮಿಷಗಳನ್ನು ತೋರಿಸಿದರು. ಸವಿದು ತಿಂದು ತೇಗುತ್ತಿದ್ದ ಆನೆಗೆ, ಅಮಲೇರಿದ ಆನೆಗೆ, ಭವಿಷ್ಯದ ಆಮಿಷಗಳ ಮೇಲೆ ಯಾವ ಗಮನವೂ ಇರಲಿಲ್ಲ. ಹಾಗಿರಲು ಸಾಧ್ಯವೂ ಇರಲಿಲ್ಲ.

ಮಾಲೆಯನ್ನು ಹಾಕುವ ದಿನವೂ ಬಂತು. ಭಾರೀ ಮಾಲೆಯನ್ನು ಸೊಂಡಿಲಿನಲ್ಲಿ ಆಡುತ್ತಾ ಅಮಲೇರಿದ ಆನೆಯು ತಪ್ಪುತಪ್ಪು ಹೆಜ್ಜೆ ಹಾಕುತ್ತ ಮೆರವಣಿಗೆ ಹೊರಟಿತು. ಇಕ್ಕೆಲಗಳಲ್ಲೂ ಮುಖಂಡರು ಜಯಘೋಷಮಾಡುತ್ತ ಹಸೆಯ ಮಂದಿರದತ್ತ ನಡೆಯುತ್ತಿದ್ದರು, ಕತ್ತುಗಳನ್ನು ಚಾಚಿಕೊಂಡು, ಹತ್ತಿರ ಇದ್ದ ಕತ್ತಿಗೆ ಹಾರಹಾಕಬಹುದು ಎಂಬ ಆಸೆಯಿಂದ.

ಜಗದಾಂಬಾ ಮಂದಿರದ ಎದುರಿನಲ್ಲೇ ಹಸೆಯ ಮಂಟಪವಿತ್ತು. ಅಲ್ಲಿಯೇ ಮೆಚ್ಚಿದ ವ್ಯಕ್ತಿಗೆ ಆನೆಯು ಮಾಲೆಯನ್ನು ಹಾಕಬೇಕೆಂದು ಸಂಪ್ರದಾಯ. ಅದರ ಹತ್ತಿರ ಬಂದಾಗ ಆನೆಗೆ ಅಮಲು ಸೊಂಡಿಲು ತುದಿಯ ತನಕ ಏರಿತ್ತು. ಭಯಂಕರವಾಗಿ ಘೀಳಿಟ್ಟಿತು. ಹತ್ತಿರ ಇದ್ದವರು ದೂರ ದೂರಕ್ಕೆ ಓಡಿದರು. ಭಾರೀಮಾಲೆಯನ್ನು ಆನೆಯು ತನ್ನ ತಲೆಯ ಮೇಲಕ್ಕೆ ಝಾಡಿಸಿ ಹಾಕಿತು. ಮಾಲೆಯು ಮೂರುನಾಲ್ಕು ದೊಡ್ಡ ಚಿಕ್ಕಪುಟ್ಟ ಚೂರುಗಳಾದವು. ಆನೆಯು ಮತ್ತು ಬಂದಂತೆ ಮಠದ ಎದುರಿನ ಕಲ್ಲುಬಸವನನ್ನು ಸೊಂಡಿಲಿನಿಂದ ತಬ್ಬಿಕೊಂಡು ಮಲಗಿಬಿದ್ದಿತ್ತು. ಗೊರಕೆ ಹೊಡೆಯಲಾರಂಭಿಸಿತು.

ಮಾಲೆಯ ದೊಡ್ಡ ಚೂರನ್ನು ಒಬ್ಬರು ಕಸಿದುಕೊಂಡರು. ಅಷ್ಟೇ ಉದ್ದವಿರುವಂತಿದ್ದ ಚೂರನ್ನು ಇನ್ನೊಬ್ಬರು ಕಸಿದುಕೊಂಡರು. ಮಿಕ್ಕ ಎರಡು ಚೂರುಪಾರುಗಳನ್ನು ಕೆಲವರು ಬಾಚಿಕೊಂಡರು.

ಶ್ರೀಮಜ್ಜಗದಾಂಬಾ ಮಾತೆಯು ಮಾಲೆಯ ಚೂರುಗಳನ್ನು ಅಳತೆಮಾಡಿ ಇಂತಹವರೇ ರಾಜರು, ಇಂತಹವರು ಯುವರಾಜರು ಎಂದು ತೀರ್ಮಾನವಿತ್ತಳು.

* * *

ರಾಮನವಮಿಯ ದಿನ ಗೋಕರ್ಣದ ಬಳಿ ಇರುವ ಜೋಗಿಮಂಟಪದಲ್ಲಿ ಮೂರು ಜನರು ರಾತ್ರಿ ಹನ್ನೊಂದು ಗಂಟೆಯ ಹೊತ್ತಿನಲ್ಲಿ ಮಾತನಾಡುತ್ತಾ ಕುಳಿತಿದ್ದರು. ಮೋಹನರಾವ್ ಅಧ್ಯಕ್ಷನಂತೆ ಹಿರಿಯ ಪಾತ್ರವನ್ನು ವಹಿಸಿದ್ದ. ನುಡಿದ ನಿರ್ಧಾರದ ದನಿಯಲ್ಲಿ: "ಹೆಬ್ಬಿಕರ್, ಇಪ್ಪತ್ತು ಲಕ್ಷ ಖರ್ಚು ಮಾಡಿದ್ದೀರಿ. ಆಬು ದುಬಾಯಿನಿಂದ ಸುಮಾರು ಒಂದು ಕೋಟಿ ರೂಪಾಯಿ ಬರುವ ವಸ್ತುಗಳನ್ನು ನಿಮಗೆ ತಲುಪಿಸಲಾಗಿದೆ. ಬೇರೆ ಬೇರೆ ಊರುಗಳಲ್ಲಿ ನಿಮ್ಮ ಮಳಿಗೆಗಳಿಗೆ ಕಳಿಸಿದ್ದಾಗಿದೆ. ಜಗದಾಂಬಾಮಾತೆಯವರಿಗೆ ಹತ್ತು ಲಕ್ಷ ಕಾಣಿಕೆಯನ್ನು ಕೊಡಬೇಕು. ಪೂರ್ವಜರಾದ ಪೂಜಾರಪ್ಪನವರು

ಮಾತಗ ಈ ರೀತಿ ಪ್ರೇರಣೆ ...ಡಿದ್ದಾರೆ.

ಸಿದ್ದಕ್ಕೆ. ನಡೆದ ಚುನಾವಣಾ ಫಲಿತಾಂಶವು ನವ...

"ನಾಯಕ್ ಅವರೇ, ಇಪ್ಪತ್ತೈದು ಲಕ್ಷದಷ್ಟು ನೀವು ಕೊಟ್ಟಿದ್ದೀರಿ. ದೊಡ್ಡ ಷಹರುಗಳಲ್ಲಿರುವ ಹಾಗೂ ಲಂಡನ್ನಿನಲ್ಲಿರುವ ನಿಮ್ಮ ಶಾಖಾ ಕಚೇರಿಗಳಿಗೆ ಸುಮಾರು ಒಂದು ಕೋಟಿಯಷ್ಟನ್ನು ಈಗಾಗಲೇ ಸರಕಾರದ ಗುಪ್ತ ಲೆಕ್ಕದಿಂದ ಜಮಾ ಮಾಡಲಾಗಿದೆ. ಎಲ್ಲ ಕಡೆಗೂ ಒಂದು ಬಾರಿ ಹೋಗಿ ವಿಚಾರಿಸಿಕೊಂಡು ಬನ್ನಿ. ನಂತರ ಜಗದಾಂಬಾ ಮಾತೆಗೆ ಮೂವತ್ತು ಲಕ್ಷ ರೂಪಾಯಿಗಳನ್ನು ಕಾಣಿಕೆ ಕಟ್ಟಿ, ಮಠದಲ್ಲಿರುವ ಧರ್ಮದ ಹುಂಡಿಗೆ ಹಾಕಿ. ಪೂಜಾರಪ್ಪನ ಪ್ರೇರಣೆಯಂತೆ ಜಗದಾಂಬಾ ಮಾತೆಯು ಹೇಳಿದ್ದಾರೆ.

"ನನ್ನ ಬಳಿಗೆ ಇಪ್ಪತ್ತು ಕೋಟಿ ರೂಪಾಯಿ ಬಂದಿದ್ದುವು. ಒಂದೊಂದು ಕೋಟಿ, ನಿಮಗೆ ಕೊಟ್ಟಾಯಿತು. ಆಬು ಹಸನ್ ಎರಡು ಕೋಟಿ ಸಂಪಾದಿಸಿಕೊಂಡು ಆಬು ದುಬಾಯಿನಲ್ಲಿಯೇ ಇರುತ್ತಾನೆ. ಒಂದು ಕೋಟಿ ರೂಪಾಯಿಯನ್ನು ಯಾಸ್ಮಿನ್ ಬೇಗಂನ ಊರೂರುಗಳ ವಿವಿಧ ಅಕೌಂಟುಗಳಿಗೆ ಜಮಾ ಮಾಡಲಾಗಿದೆ.

"ಮಿಕ್ಕ ಹಣವನ್ನು ಪ್ರಾರ್ಥನಾ ಮಂದಿರಗಳಿಗೆ ಹಂಚುತ್ತೇನೆ. ಅನ್ಯಾಯದಿಂದ ಸಂಪಾದಿಸಿದವರನ್ನು ನಾವೂ ಬೋಳಿಸಬೇಕು. ಆದರೆ ಆ ಹಣವನ್ನು ಸನಾತನ ಧರ್ಮದ ಪ್ರಸಾರಕ್ಕೆ ಮೀಸಲಿಡಬೇಕು ಎಂದು ಪೂಜಾರಪ್ಪನವರು ನಮ್ಮ ಮುತ್ತಾತನಿಗೆ ಉಪದೇಶ ಮಾಡಿದರಂತೆ. ಮುತ್ತಾತ ಹೇಳಿದಂತೆಯೇ ನಾನೂ ಬಾಳುತ್ತಿದ್ದೇನೆ" ಎಂದ ಮೋಹನರಾವ್. ಸಂತಸದಿಂದ ನುಡಿದಿದ್ದ.

"ಮಿ॥ ಮೋಹನರಾವ್ ! ನಿಮ್ಮ ಮುತ್ತಾತನ ಹೆಸರೇನು? ಯಾಸ್ಮಿನ್ ಬೇಗಂ ನಿಮಗೆ ಹೇಗೆ ಸಂಬಂಧ ?" ಎಂದು ಹೆಬ್ಬಿಕರ್ ಕೇಳಿದರು.

"ಮುತ್ತಾತನ ಹೆಸರು ಜಗ್ಗೋಜಿ. ಯಾಸ್ಮಿನ್ ಬೇಗಂ ನನ್ನ ಅತ್ಯಂತ ವಿಶ್ವಾಸದ ಗೆಳೆಯನ ವಿಧವೆ. ನನ್ನ ಅತ್ತಿಗೆಯಂತೆ. ಧರ್ಮಕಾರ್ಯಗಳಿಗೆ ಆಕೆಯೂ ಇದ್ದ ಹಣವನ್ನೆಲ್ಲಾ ವಿನಿಯೋಗಿಸುತ್ತಾಳೆ. ಬಾಲ್ಯ ಸ್ನೇಹಿತ ಲಚ್ಚೂರಾಮನಿಗೆ ಹತ್ತುಲಕ್ಷ ಕೊಟ್ಟು ನೀನೇ ಸ್ವಂತ ಹೋಟೇಲನ್ನು ಪ್ರಾರಂಭಿಸು, ಅನಾಥಾಲಯದ ಖರ್ಚನ್ನೆಲ್ಲ ನೀನೇ ವಹಿಸಿಕೋ ಎಂದಳು. ಅಂತಹ ಉದಾರ ಮನಸ್ಸು" ಎಂದು ಮೋಹನರಾವ್ ಉತ್ತರಿಸಿದ.

"ನಿಮ್ಮ ದಿಟವಾದ ಹೆಸರೇನು ? ಮಿ॥ ಮೋಹನರಾವ್" ಎಂದು ನಾಯಕ್ ಕೇಳಿದ.

"ಬುದ್ದೋಜಿ" ಎಂಬ ಉತ್ತರ ಬಂತು.

Scanned by CamScanner